ಪ್ರೊ. ಸೂಗಯ್ಯ ಹಿರೇಮಠ ಅವರ ಜಾನಪದ ಕೃತಿಗಳು

(ಕ.ರಾ.ಶಿ.ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ,
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು
ಹಲಬುರ್ಗೆ ಶಿವಶಂಕರ ನೀಲಕಂಠರಾವ

ಮಾರ್ಗದರ್ಶಕರು
ಡಾ. ಈಶ್ವರಯ್ಯ ಮಠ
ಕ.ರಾ.ಶಿ. ಸಂಸ್ಥೆಯ
ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ.

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
ಸೆಪ್ಟಂಬರ - ೨೦೦೯

ಪ್ರೊ. ಸೂಗಯ್ಯ ಹಿರೇಮಠ ಅವರ ಜಾನಪದ ಕೃತಿಗಳು

(ಕ.ರಾ.ಶಿ.ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ, ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು
ಹಲಬುರ್ಗೆ ಶಿವಶಂಕರ ನೀಲಕಂಠರಾವ

ಮಾರ್ಗದರ್ಶಕರು
ಡಾ. ಈಶ್ವರಯ್ಯ ಮಠ
ಕ.ರಾ.ಶಿ. ಸಂಸ್ಥೆಯ
ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ.

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
ಸೆಪ್ಟೆಂಬರ - ೨೦೦೯

ಪ್ರಮಾಣ ಪತ್ರ

ಪ್ರೊ. ಸೂಗಯ್ಯ ಹಿರೇಮಠ ಅವರ ಜಾನಪದ ಕೃತಿಗಳು ಎಂಬ ನಿಬಂಧವನ್ನು ಡಾ. ಈಶ್ವರಯ್ಯ ಮಠ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ, ಎಂ.ಫಿಲ್ ಪದವಿಗಾಗಿ ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ಹಲಬುರ್ಗೆ ಶಿವಶಂಕರ ನೀಲಕಂಠರಾವ
ಎಂ.ಫಿಲ್ ವಿದ್ಯಾರ್ಥಿ
ಕ.ರಾ.ಶಿ. ಸಂಸ್ಥೆಯ
ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ.

ಸ್ಥಳ : ಬೀದರ

ದಿನಾಂಕ : 30-9-09

ಮಾರ್ಗದರ್ಶಕರ ಪ್ರಮಾಣ ಪತ್ರ

ಪ್ರೊ. ಸೂಗಯ್ಯ ಹಿರೇಮಠ ಅವರ ಜಾನಪದ ಕೃತಿಗಳು ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಶಿವಶಂಕರ ನೀಲಕಂಠರಾವ ಹಲಬುರ್ಗೆ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಬೀದರ
ದಿನಾಂಕ : 30-9-09

ಡಾ. ಈಶ್ವರಯ್ಯ ಮಠ
ಮಾರ್ಗದರ್ಶಕರು
ಕ.ರಾ.ಶಿ. ಸಂಸ್ಥೆಯ
ಕನ್ನಡ ಸಂಶೋಧನ ಕೇಂದ್ರ,
ಕರ್ನಾಟಕ ಕಾಲೇಜು, ಬೀದರ



ಪ್ರೊ. ಹೂಗಯ್ಯ ಹಿರೇಮಠ

ಪರಿವಿಡಿ

ಅಧ್ಯಾಯ : ೬ ೯೨–೧೦೬

ಅನುಬಂಧ

- ಪ್ರೊ. ಸೂಗಯ್ಯ ಹಿರೇಮಠರ ಕೃತಿಗಳ ಕುರಿತು ವಿದ್ವಾಂಸರ ಪ್ರತಿಕ್ರಿಯೆಗಳು
- ಭಾವಚಿತ್ರಗಳು
- ಗ್ರಂಥಋಣ

ಪ್ರೊ. ಸೂಗಯ್ಯ ಹಿರೇಮಠ ಅವರ ವೈಯಕ್ತಿಕ ವಿವರ

ಅಧ್ಯಾಯ : ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ–೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಬೀದರ, ಕಲ್ಬುರ್ಗಿ, ರಾಯಚೂರು ಮೂರು ಜಿಲ್ಲೆಗಳು ಸೇರುತ್ತವೆ. ಈ ಹೈದರಾಬಾದ ಕರ್ನಾಟಕ ಪ್ರದೇಶದ ಒಟ್ಟು ಕ್ಷೇತ್ರ ವಿಸ್ತಾರ ೩೫,೬೮೬.೫೦ ಚ.ಕಿ.ಮೀ. ಮತ್ತು ಜನಸಂಖ್ಯೆ ೪೮,೪೯,೪೧೬ (೧೯೮೧) ರ ಸರ್ವೆ ಪ್ರಕಾರ ಹೊಂದಿರುತ್ತದೆ. ಜಿಲ್ಲಾವಾರು ವಿವರಣೆಯಂತೆ ಬೀದರ ಜಿಲ್ಲೆಯಲ್ಲಿ ಬೀದರ, ಹುಮನಾಬಾದ, ಔರಾದ, ಭಾಲ್ಕಿ, ಬಸವಕಲ್ಯಾಣ ಎಂದು ಐದು ತಾಲ್ಲೂಕುಗಳಿವೆ. ಕಲ್ಬುರ್ಗಿ ಜಿಲ್ಲೆಯಲ್ಲಿ ಕಲ್ಬುರ್ಗಿ, ಅಫಜಲಪೂರ, ಆಳಂದ, ಸುರಪೂರ, ಶಾಹಪೂರ, ಜೇವರ್ಗಿ, ಯಾದಗಿರಿ, ಸೇಡಂ, ಚಿಂಚೋಳಿ, ಚಿತ್ತಾಪೂರ ಎಂದು ಹತ್ತು ತಾಲ್ಲೂಕುಗಳಿವೆ. ರಾಯಚೂರು ಜಿಲ್ಲೆಯಲ್ಲಿ ರಾಯಚೂರು, ಮಾನವಿ, ಸಿಂಧನೂರು, ಗಂಗಾವತಿ, ಕೊಪ್ಪಳ, ಯಲಬುರ್ಗಾ, ಕುಷ್ಟಗಿ, ಲಿಂಗಸುಗೂರು, ದೇವದುರ್ಗ ಎಂದು ಒಂಬತ್ತು ತಾಲ್ಲೂಕುಗಳಿವೆ. ನಂತರ ಇದಕ್ಕೆ ಬಳ್ಳಾರಿ ಜಿಲ್ಲೆಯನ್ನು ಸೇರಿಸಲಾಗಿದೆ. ಇತ್ತೀಚಿಗೆ ಕೊಪ್ಪಳ ಜಿಲ್ಲೆ ರಚನೆಯಾಗಿದೆ.

ಭೌಗೋಳಿಕ ಹಿನ್ನೆಲೆಯಲ್ಲಿ ಈ ಮೂರು ಜಿಲ್ಲಾ ಪ್ರದೇಶಗಳು ತನ್ನದೇ ಆದ ವಿಶಿಷ್ಟತೆಯನ್ನು ಪಡೆದಿವೆ. ಬೀದರ ಕೆಂಪು ಮಣ್ಣಿನಿಂದ ಕೂಡಿದ ಫಲವತ್ತಾದ ಭೂಮಿಯಾಗಿದ್ದು, ಇದಕ್ಕೆ ಧರಿ ಪ್ರಾಂತವೆಂದು ಹೆಸರಿಸಲಾಗಿದೆ. ಅಲ್ಲದೆ ಕಲ್ಬುರ್ಗಿ, ರಾಯಚೂರು ಜಿಲ್ಲೆಗಳಲ್ಲಿ ಅಚ್ಚು ಕಪ್ಪಿನ ಎರೆ ಮಣ್ಣಿನ ಮಸಾರಿ ಕೆಂಪು ಮರಳು ಮಿಶ್ರಿತ ಜೇಡಿಯ ಮಣ್ಣಿನಿಂದ ಕೂಡಿದ ಒಳ್ಳೆಯ ಫಲವತ್ತಾದ ಭೂಮಿಯನ್ನು ಹೊಂದಿದೆ. ಅಲ್ಲದೆ ಕಲ್ಬುರ್ಗಿ ಜಿಲ್ಲೆ ಮಳೆ ಅಭಾವದಿಂದ ಆಗಾಗ ಬರಗಾಲಕ್ಕೆ ತುತ್ತಾಗಿ ಬಿಸಿಲು (ಶೆಕೆ) ಹೆಚ್ಚಾಗುವುದು ಸಾಮಾನ್ಯವಾಗಿದೆ. ಈ ಪ್ರದೇಶದ ಜನರ ಮುಖ್ಯ ಉದ್ಯೋಗ ವ್ಯವಸಾಯ ಒಕ್ಕಲುತನವಾಗಿದ್ದು, ರೈತರು ಹೆಚ್ಚಾಗಿ ಮಳೆಯನ್ನೇ ಅವಲಂಬಿಸಿದ್ದಾರೆ. ಉಪಜೀವನಕ್ಕಾಗಿ ಒಕ್ಕಲುತನದ ಜೊತೆಗೆ ಇತರ ಕೆಲಸಗಳನ್ನು ಮಾಡುತ್ತಾರೆ. ಹೈನುಗಾರಿಕೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ, ಕಂಬಳಿ ನೇಯುವುದು, ಹತ್ತಿ ಬಟ್ಟೆ ನೆಯುವುದ ಆಯಾ ಜನರು ಅವರವರ ಕೆಲಸವನ್ನು ಅವಲಂಬಿಸಿ ಮಾಡಿಕೊಂಡು ಜನ ಬದುಕುತ್ತಿದ್ದಾರೆ.

ಈ ಪ್ರದೇಶದಲ್ಲಿ ಕೃಷ್ಣಾ, ಭೀಮಾ, ತುಂಗಭದ್ರಾ ನದಿಗಳು ದೊಡ್ಡ ಪ್ರಮುಖ ನದಿಗಳಾಗಿವೆ. ಬೆಣ್ಣೆತೊರಾ, ಮುಲ್ಲಾಮಾರಿ, ಕಾಗಿಣಾ, ಅಮರ್ಜಾ, ಬೋರಿ, ಕಾರಂಜಾ, ಮಾಂಜ್ರಾ ಮುಂತಾದವುಗಳು ಉಪ ನದಿಗಳಾಗಿವೆ. ಕೃಷ್ಣಾ, ತುಂಗಭದ್ರಾ, ಅಮರ್ಜಾ, ಚಂದ್ರಂಪಳ್ಳಿ, ಕಾರಂಜಾ, ಹತ್ತಿಕೊಣೆ ಇನ್ನಿತರ ಮುಂತಾದ ಕಡೆಗಳಲ್ಲಿ ಆಣೆಕಟ್ಟುಗಳನ್ನು ಕಟ್ಟಿ ಭೂಮಿಗೆ ನೀರುಣಿಸುವ ಸರಕಾರದ ಯೋಜನೆಗಳು ಕಾರ್ಯರೂಪದಲ್ಲಿವೆ. ಒಕ್ಕಲುತನದ ಮುಖ್ಯ ಕಸುಬಾಗಿದ್ದು ಗೋಧಿ,

ಭತ್ತ, ಜೋಳ, ಹತ್ತಿ, ಕಡಲೆ, ಕುಸುಬಿ, ರಾಗಿ, ತೊಗರಿ, ಸಜ್ಜೆ, ಎಳ್ಳು, ಶೇಂಗಾ, ಹೆಸರು, ಕಬ್ಬು ಮುಂತಾದವುಗಳು ಈ ಭಾಗದ ಒಕ್ಕಲಿಗರ ಪ್ರಮುಖ ಬೆಳೆಗಳಾಗಿವೆ.

ಈ ಪ್ರದೇಶದಲ್ಲಿ ಎಲ್ಲಾ ಜಾತಿಯ ಜನರು ಒಟ್ಟಾಗಿ ಐಕ್ಯತೆಯಿಂದ ಬಾಳುತ್ತಿದ್ದಾರೆ. ಹಿಂದು, ಮುಸಲ್ಮಾನ, ಕ್ರಿಶ್ಚಿಯನ್, ಜೈನ್, ಸಿಖ್, ಬ್ರಾಹ್ಮಣ, ಕ್ಷತ್ರೀಯ, ಮಾರವಾಡಿ, ಕೊಮಟಿಗ, ಗುಜ್ಜರು, ತಮಿಳರು, ತೆಲುಗರು, ರಜಪೂತರು, ಗೊಂಡ, ಕಾಡುಗೊಲ್ಲ, ಕರುಬರು, ಮೊದಲಾದ ಬುಡಕಟ್ಟಿನ ಜನಾಂಗದವರು ಈ ಪ್ರದೇಶದಲ್ಲಿ ವಾಸಿಸಿದ್ದಾರೆ. ಕನ್ನಡ, ಹಿಂದಿ, ತೆಲುಗು, ತಮಿಳು, ಗುಜರಾತಿ, ಮರಾಠಿ, ಉರ್ದು ಮುಂತಾದ ಭಾಷೆಗಳನ್ನಾಡುವ ಜನರು ಹೊಂದಿರುವ ಪ್ರದೇಶವಾಗಿದೆ.

ಇಂತಹ ವೈವಿದ್ಯಮಯವಾದ ಹಿನ್ನಲೆಯನ್ನು ಹೊಂದಿರುವ ಹೈದರಾಬಾದ-ಕರ್ನಾಟಕ ಪ್ರದೇಶವು ಇಂಗ್ಲೀಷರ ದಬ್ಬಾಳಿಕೆಯಿಂದ, ನಿಜಾಮ್ ಸರಕಾರದ ರಜಾಕಾರರ ಹಾವಳಿಯಿಂದ ಜನರು ಬದುಕಿ ಸಾಹಿತ್ಯವನ್ನು ಉಳಿಸಿಕೊಂಡು ಬಂದಿರುವುದೇ ಸಾಹಸವಾಗಿದೆ. ಇಂತಹ ಗಂಡಾಂತರ ಪರಿಸ್ಥಿತಿಯಲ್ಲಿಯೂ ಈ ಭಾಗದಲ್ಲಿ ಜನಪದ ಬದುಕಿನಲ್ಲಿ ಭಾಷೆ ಮತ್ತು ಸಾಹಿತ್ಯ ಸಮೃದ್ಧವಾಗಿತ್ತು. ಈ ಭಾಗದ ಆಚರಣೆಯ ಪ್ರತಿಯೊಂದು ಹಬ್ಬ, ಜಾತ್ರೆ, ಮದುವೆ ಮುಂತಾದ ಸಂಪ್ರದಾಯಗಳಲ್ಲಿ ಕನ್ನಡವೇ ಪ್ರಧಾನವಾಗಿತ್ತು. ವಾಕ್ಸಂಪ್ರದಾಯದಲ್ಲಿದ್ದ ಜನಪದ ಕಥೆಗಳು, ಒಡಮ, ಒಗಟು, ಆಣಿಪಿಣಿ, ಹೋಳಿ, ಡೊಳ್ಳು, ಲಾವಣಿ ಹಂತಿ ಮತ್ತು ಭಜನೆ ಹಾಡುಗಳು ಸಮೃದ್ಧವಾಗಿ ರಚನೆಯಾಗಿರುವವು. ಈ ಭಾಗದ ಅನುಭಾವಿ ಕವಿಗಳಾದ ರಾಮಪೂರ ಬಕ್ಕಪ್ಪ, ಕಡಕೋಳ ಮಡಿವಾಳಪ್ಪ, ಕೊಡೇಕಲ್ ಬಸವಣ್ಣ, ತಿಂಥಣಿಯ ಮೌನಪ್ಪಯ್ಯ, ಕೊಡಲೂರು ಬಸಲಿಂಗಪ್ಪ, ಹೆಮ್ಮಡಿಗೆ ಪ್ರಭುದೇವ ಮುಂತಾದವರು ಅನುಭವದ ಹಾಡುಗಳನ್ನು ರಚಿಸಿ ಮುಸ್ಲಿಂರ ದಬ್ಬಾಳಿಕೆಯಲ್ಲಿಯೂ ಕನ್ನಡ ಸಾಹಿತ್ಯವನ್ನು ಸಮೃದ್ಧಪಡಿಸಿದವರು.

ದೇಶದ ಸ್ವತಂತ್ರ್ಯ ಚಳುವಳಿಗೆ ನಾಡಿನ ಬೇರೆ ಬೇರೆ ಕಡೆಯಲ್ಲಿ ನವೋದಯ ಸಾಹಿತ್ಯಗಳು ಚಳುವಳಿಗೆ ಬೆಂಬಲಿಸಿ ಸ್ಫೂರ್ತಿ ನೀಡಿದಂತೆ ನಮ್ಮ ಭಾಗದಲ್ಲಿ ಬ್ರಿಟೀಷ್ ಮತ್ತು ನಿಜಾಮರ ಅಧಿಕಾರ ಶಾಹಿಯಿಂದ ಬಿಡುಗಡೆಗೊಳ್ಳಲು ನಡೆದ ಹೋರಾಟಕ್ಕೆ ಬೆಂಬಲಿಸಿ ಈ ಭಾಗದಲ್ಲಿ ಸಿದ್ಧಯ್ಯ ಪುರಾಣಿಕ, ಶಾಂತರ ರಾಯಚೂರು, ಶರಣಯ್ಯ ಮಹಾಗಾಂವ, ವೈ. ನಾಗೇಶ ಶಾಸ್ತ್ರಿ ಬಳ್ಳಾರಿ, ಜಯತೀರ್ಥ ರಾಜಪುರೋಹಿತ, ಪಂಚಾಕ್ಷರಿ ಹಿರೇಮಠ, ಶೈಲಜ ಉಡಚಣ, ಶಿವಶರಣಪ್ಪ ಪಾಟೀಲ್ ಜವಳಿ, ಬಿ. ಮಹದೇವಪ್ಪ, ಚನ್ನಬಸಪ್ಪ ಬೆಟ್ಟದ, ಗೀತಾ ನಾಗಭೂಷಣ ಮುಂತಾದವರು ಪ್ರಮುಖರಾಗಿರುವರು. ನವೋದಯ ನಂತರದ ಆರವತ್ತರ ದಶಕದಲ್ಲಿ ಪ್ರಾರಂಭವಾದ ನವ್ಯ ಸಾಹಿತ್ಯದ ರಚನೆಯಲ್ಲಿ ಶ್ರೀಗುರು ಬಸಯ್ಯ ಅಮ್ಮಾಪ್ಪೂರ, ಲಿಂಗಣ್ಣ ಸತ್ಯಂಪೇಟೆ, ಚನ್ನಣ್ಣ ವಾಲಿಕಾರ ಮುಂತಾದವರು ಸಾಹಿತ್ಯ ರಚಿಸಿರುವರು. ನಂತರ ೧೯೭೦ ರ ದಶಕದಲ್ಲಿ ಪ್ರಾರಂಭವಾದ ದಲಿತ ಮತ್ತು ಬಂಡಾಯ ಸಾಹಿತ್ಯ ಚಳುವಳಿಯಲ್ಲಿ ಪ್ರಮುಖರಾದವರು ಚನ್ನಣ್ಣ ವಾಲಿಕಾರ, ಗವಿಸಿದ್ಧ

ಬಳ್ಳಾರಿ, ಎಸ್.ಎಸ್. ಹಿರೇಮಠ, ಬಸವರಾಜ ಸಬರದ, ಕುಂ. ವೀರಭದ್ರಪ್ಪಾ, ಪ್ರೋ॥ ಸೂಗಯ್ಯ ಹಿರೇಮಠ ಪ್ರಮುಖರಾಗಿರುವರು.

ಹೈದರಾಬಾದ–ಕರ್ನಾಟಕದಲ್ಲಿ ಪ್ರಮುಖವಾಗಿ ಹರಿಯುವ ಕೃಷ್ಣಾ ಮತ್ತು ಭೀಮಾ ನದಿಯ ಮಧ್ಯದ ಪ್ರದೇಶಗಳಲ್ಲಿ ಬರುವ ಜೇವರ್ಗಿ, ಶಾಹಪೂರ, ಸುರಪೂರ ತಾಲೂಕಗಳಿಗೆ ಸಗರ ನಾಡೆಂದು ಕರೆಯುವರು. ಸಗರ ಚಕ್ರವರ್ತಿಯಿಂದ ಈ ನಾಡಿಗೆ ಸಗರ ನಾಡೆಂದು ಹೆಸರು ಬಂದಿರುವುದೆಂದು ಹೇಳುವರು. ಸಗರ ನಾಡಿನ ಶಾಹಪೂರ ತಾಲ್ಲೂಕು ಕೋಟೆಕೊತ್ತಲುಗಳು ಬಂಡೆಗಲ್ಲಿನ ಗುಡ್ಡ ಬೆಟ್ಟಗಳು ಮತ್ತು ಫಲವತ್ತಾದ ಎರೆ ಕೆಂಪು ಭೂಮಿಯನ್ನು ಹೊಂದಿರುವದು. ಈಗ ಕೃಷ್ಣಾ ನದಿಗೆ ಸುರಪೂರ ತಾಲೂಕಿನ ನಾರಾಯಣಪೂರದಲ್ಲಿ ಆಣೆಕಟ್ಟು ಕಟ್ಟಿರುವುದರಿಂದ ಸಗರನಾಡು ನೀರಾವರಿ ಪ್ರದೇಶವಾಗಿದ್ದು, ಭತ್ತ, ಹತ್ತಿ, ತೊಗರಿ, ಜೋಳ, ಮೆಣಸಿನಕಾಯಿ, ಸೂರ್ಯಕಾಂತಿ, ಉದ್ದು, ಹೆಸರು ಮುಂತಾದ ಬೆಳೆಗಳಿಗೆ ಪ್ರಸಿದ್ಧವಾಗಿದೆ.

ಶಾಹಪೂರ ತಾಲೂಕಿನ ಸಿಂಗನಹಳ್ಳಿ ಗ್ರಾಮದಲ್ಲಿ ಜನಿಸಿದ ಪ್ರೊ॥ ಸೂಗಯ್ಯ ಹಿರೇಮಠ ರವರು ಸದಾ ಕ್ರೀಯಾಶೀಲರು, ಹೋರಾಟಗಾರರು, ಕನ್ನಡಪರ ಚಳುವಳಿಯಲ್ಲಿ ಭಾಗಿಯಾದವರು, ಸರಳ ಜೀವಿಗಳು, ರೈತ ಚಳುವಳಿ, ಜಯಪ್ರಕಾಶ ನಾರಾಯಣರ ಸಂಪೂರ್ಣ ಕ್ರಾಂತಿ ಮತ್ತು ಭಾಷಾ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದವರು. ಜನಪರ ಕಾರ್ಯಗಳಲ್ಲಿ ಭಾಗಿಯಾಗಿ ಸದಾ ಸಾಮಾಜಿಕ ಸಮಾನತೆಗಾಗಿ ಚಿಂತಿಸಿದವರು. ಅಲ್ಲದೆ ಹಲವಾರು ಸಂಘಟನೆಯಲ್ಲಿಯೂ ಸಕ್ರಿಯವಾಗಿ ಕಾರ್ಯ ಮಾಡಿರುವರು.

ಹೈದರಾಬಾದ–ಕರ್ನಾಟಕದಲ್ಲಿಯೇ ಅನ್ಯಾಯ, ಅತ್ಯಾಚಾರ, ದಬ್ಬಾಳಿಕೆಯನ್ನು ವಿರೋಧಿಸಿ ಹೋರಾಟ ಮಾಡಿದವರಲ್ಲಿ ಇವರು ಪ್ರಮುಖರು. ಯಾವುದೇ ಸಾಹಿತ್ಯ, ಸಾಂಸ್ಕೃತಿಕ ಸಮಾರಂಭಗಳಲ್ಲಿಯು ಯಾವತ್ತೂ ಭಾಗವಹಿಸಿದವರು. ೧೯೭೫ ರಲ್ಲಿ ದೇಶದ ಮೇಲೆ ಏರಿದ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿಯೂ ಭೂಗತರಾಗಿ ಕರಪತ್ರ ಹಾಕಿ ತುರ್ತು ಪರಿಸ್ಥಿತಿಯನ್ನು ವಿರೋಧಿಸಿದವರು.

೧೯೭೫ ರಲ್ಲಿ ಕಲ್ಬುರ್ಗಿಯ ಸ್ನಾತಕೋತ್ತರ ಕೇಂದ್ರದಲ್ಲಿ ಎಮ್.ಎ. ಓದುತ್ತಿರುವಾಗಲೆ ಕಲ್ಬುರ್ಗಿಯಲ್ಲಿ ನೃಪತುಂಗ ಬರಹಗಾರರ ಮತ್ತು ಕಲಾವಿದರ ಸಂಘ ಸ್ಥಾಪಿಸಿ ಅದರ ಕಾರ್ಯದರ್ಶಿಯಾಗಿ ಅನೇಕ ಕಾರ್ಯಕ್ರಮ, ಕವಿ ಸಮ್ಮೇಳನ, ನಾಟಕ ಪ್ರದರ್ಶನ, ವಿಚಾರ ಗೋಷ್ಠಿಯನ್ನು ಸಂಘಟಿಸಿದವರು. ವಿದ್ಯಾರ್ಥಿ ದೆಶೆಯಿಂದಲೆ ಹೋರಾಟದಲ್ಲಿದ್ದವರು. ಎಮ್.ಎ. ವಿದ್ಯಾರ್ಥಿಯಾಗಿರುವಾಗಲೇ ತಮ್ಮ ಹುಟ್ಟೂರಾದ ಸಿಂಗನಹಳ್ಳಿಯಲ್ಲಿ ಜಾಗೃತ ಯುವಕ ಸಂಘ ಸ್ಥಾಪಿಸಿ ಊರಿನ ಸಮಸ್ಯೆಗಳಿಗಾಗಿ ತಾಲ್ಲೂಕಿನ ಅಧಿಕಾರಿಗಳೊಂದಿಗೆ ಚರ್ಚಿಸಿ ಹಲವಾರು

ಸೌಲಭ್ಯಗಳನ್ನು ಪಡೆದುಕೊಂಡರು. ಯುವಕ ಸಂಘದ ಪ್ರಯತ್ನದಿಂದಲೇ ಊರಿನ ಸರಕಾರಿ ಶಾಲೆಗೆ ಕಟ್ಟಡ ಮತ್ತು ವಿದ್ಯುತ್ ಪೂರೈಕೆ ಆಗಿರುವುದು ಇವರ ಹೋರಾಟಕ್ಕೆ ಸಿಕ್ಕ ಸಾಕ್ಷಿಯಾಗಿವೆ.

೧೯೭೦ ರ ದಶಕದಲ್ಲಿ ಪ್ರಾರಂಭವಾದ ದಲಿತ ಬಂಡಾಯ ಸಾಹಿತ್ಯದಲ್ಲಿ ಸಕ್ರೀಯವಾಗಿ ತೊಡಗಿ, ಅನೇಕ ಕವಿಗೋಷ್ಠಿ ಹಾಗೂ ವಿಚಾರ, ಸಂಕಿರಣಗಳಲ್ಲಿ ಜನಪರ ಕಾಳಜಿಯ ಸಾಮಾಜಿಕ, ರಾಜಕೀಯ ವಿಡಂಬನೆ, ಧಾರ್ಮಿಕ ಶೋಷಣೆಯ ಕುರಿತು ಕವನ ವಾಚಿಸಿದವರು. ಅಷ್ಟೇ ಅಲ್ಲ, ಪ್ರಕಾರವಾದ ವಿಚಾರಗಳನ್ನು ಭಾಷಣದಲ್ಲಿ ತಿಳಿಸಿ ಹಲವು ಸಲ ಪ್ರತಿರೋಧವನ್ನು ಒಡ್ಡಿದವರು. ರೈತರ ಮೇಲೆ ಆಗುವ ಅನ್ಯಾಯ, ಆತ್ಮಹತ್ಯದ ಸಲುವಾಗಿ ಜನ ಜಾಗೃತಿಗಾಗಿ ರಚನೆಯಾದ ಪ್ರಗತಿಪರ ವಿಚಾರಧಾರೆ ಸಂಘಟನೆಯಾದ ಸಮುದಾಯ ತಂಡದಲ್ಲಿ ಸೇರಿ ೧೯೭೯ ಮತ್ತು ೧೯೮೧ ರಲ್ಲಿ ನಡೆದ ಸಾಂಸ್ಕೃತಿಕ ಜಾಥಾದಲ್ಲಿ ಭಾಗವಹಿಸಿ ಹಳ್ಳಿಗಳಲ್ಲಿ ಸುತ್ತಿ ಬೀದಿ ನಾಟಕಗಳಲ್ಲಿ ಅಭಿನಯಿಸಿ ಜನರಿಗೆ ಜಾಗೃತಿ ಮೂಡಿಸಿದವರು.

ಸಿಂಗನ ಹಳ್ಳಿಯಲ್ಲಿಯ ಹಿರೇಮಠರವರ ಮನೆತನವು ಸುಸಂಕೃತ ಮನೆತನವಾಗಿದ್ದು, ಅವರ ತಂದೆಯವರಾದ ದಿ: ಶರಣಯ್ಯ ಹಿರೇಮಠ ಅವರು ವೇದ ಶಾಸ್ತ್ರಗಳಲ್ಲಿ ಪಾರಂಗತರು. ಚಿಕ್ಕಪ್ಪ ಬಯಲಾಟದಲ್ಲಿ ಪ್ರಸಿದ್ಧ ಕಲಾವಿದರು. ಇಂತಹ ಊರಲ್ಲಿ ದೊಡ್ಡಾಟಗಳು, ಹಂತಿಯ ಪದಗಳು, ಡೊಳ್ಳಿನ ಹಾಡುಗಳು, ಹೆಣ್ಣು ಮಕ್ಕಳ ಸಂಪ್ರದಾಯದ ಹಾಡುಗಳು, ಭಜನೆಯ ಹಾಡುಗಳು, ಮೊಹರಂ ಹಾಡುಗಳು ಹಾಡುಗಾರರ ಸಂಪರ್ಕದಲ್ಲಿರುವುದರಿಂದ ಹಾಗೂ ಇವರ ಮಠಕ್ಕೆ ತಿಂಗಳಲ್ಲಿ ಒಬ್ಬಿಬ್ಬರಾದರು ಕಾಯಕದ ಸ್ವಾಮಿಗಳು ತಪ್ಪದೇ ಬರುವ ಸಾರುವ ಅಯ್ಯನವರು. ಮುಳ್ಳಾವಿಗಿಯ ಮೇಲೆ ನಿಲ್ಲುವವರು, ಸೂವಿಬಾ ಸಂಗಯ್ಯ ಹಾಡುವವರು ಮುಂತಾದವರು ಮಾಡುವ ಕಾಯಕದ ಹಾಡು ಹಾಗೂ ಜನಪದ ಕಲೆಗಳು ಚಿಕ್ಕಂದಿನಲ್ಲಿರುವಾಗಲೇ ಪ್ರೊ॥ ಹಿರೇಮಠರ ಮೇಲೆ ಪ್ರಭಾವ ಬೀರಿದವು.

೧೯೭೭ ರಲ್ಲಿ ಕಲ್ಬುರ್ಗಿ ಸ್ನಾತಕೋತ್ತರ ಕೇಂದ್ರ ಕನ್ನಡ ವಿಭಾಗದಲ್ಲಿ ಮುಖ್ಯಸ್ಥರಾಗಿದ್ದ ಡಾ. ಬಿ.ಬಿ. ಹೆಂಡಿಯವರು ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಜನಪದ ಸಾಹಿತ್ಯ ಸಂಗ್ರಹ ಸಂಪಾದನೆ ಪ್ರಕಟಣೆಗಾಗಿ ಯು.ಜಿ.ಸಿ. ನೆರವು ನೀಡಿದ ಯೋಜನೆಯಲ್ಲಿ ಸಹಾಯ ಸಂಶೋಧಕರೆಂದು ಪ್ರೊ॥ ಸೂಗಯ್ಯ ಹಿರೇಮಠರನ್ನು ನೇಮಿಸಲಾಯಿತು. ಈ ಅವಧಿಯಲ್ಲಿ ಪ್ರೊ॥ ಹಿರೇಮಠರು ಜನಪದ ಕಥೆಗಳು, ವಿವಿಧ ಹಾಡುಗಳು, ಗಾದೆ, ಒಗಟು, ಒಡಪು, ಸಾರಥಿಯ ಮಾತುಗಳು, ದೊಡ್ಡಾಟ, ಸಣ್ಣಾಟ, ಲಾವಣಿ, ಡೊಳ್ಳು, ಭಜನೆ ಮುಂತಾದ ವೈವಿಧ್ಯಮಯ ಸಾಹಿತ್ಯವನ್ನು ಸಂಗ್ರಹಿಸಿ ಶುದ್ಧ ಪ್ರತಿ ಮಾಡಿ ನೀಡಿರುವುದಲ್ಲದೇ ಜನಪದ ಸಾಹಿತಿಗಳ ಒಡನಾಟ ಹಾಗೂ ಆ ಸಾಹಿತ್ಯ ವೈವಿಧ್ಯತೆಗೆ ಮಾರುಹೋಗಿ ಅಪಾರವಾದ ಅನುಭವದಿಂದ ಅನೇಕ ಜಾನಪದ ಕೃತಿಗಳನ್ನು ರಚಿಸಿರುವರು.

ಪ್ರೊ॥ ಹಿರೇಮಠರವರು ಪ್ರತಿಭಾನ್ವಿತರು, ಕಲೆ ಅಭಿನಯ ಸಾಹಿತ್ಯ ರಚನೆಯಲ್ಲಿ ಚಿಕ್ಕಂದಿನಿಂದಲೂ ತೊಡಗಿದವರು. ನಾಲ್ಕನೇ ಓದುವಾಗಲೇ ದೊಡ್ಡಾಟದಲ್ಲಿ ಗಣಪತಿಯ ಪಾತ್ರವಹಿಸಿ ಸೈ ಎನಿಸಿಕೊಂಡವರು. ಏಳನೇ ಓದುವಾಗಲೇ ಪ್ರಬಂಧ ರಚಿಸಿ ಗುರುಗಳಿಂದ ಮೆಚ್ಚುಗೆ ಪಡೆದವರು. ಎಸ್.ಎಸ್.ಎಲ್.ಸಿ. ಓದುವಾಗಲೇ ಮನಸ್ಸಿಲ್ಲದ ಮದುವೆಯೆಂಬ ಸಾಮಾಜಿಕ ನಾಟಕವನ್ನು ರಚಿಸಿರುವರು. ಮುಂದೆ ಶರಣಬಸವೇಶ್ವರ ಕಾಲೇಜಿನಲ್ಲಿ ಓದುತ್ತಿರುವಾಗಲೇ ಪ್ರತಿ ವರ್ಷ ಪ್ರಕಟವಾಗುವ ಕಾಲೇಜ್ ಮ್ಯಾಗ್ಜಿನ್‌ನಲ್ಲಿ ಕುವೆಂಪು ಮೇಲೆ ರಚಿಸಿದ ಕವಿತೆ 'ಅರಿವೆ ಗುರು' ವೆಂಬ ಶೀರ್ಷಿಕೆಯಲ್ಲಿ ಪ್ರಕಟವಾಯಿತು. ಇದು ಅವರ ಮೊದಲನೇ ಪ್ರಕಟಿತ ಕವನ. ಹಲವಾರು ಸ್ಥಳೀಯ ಪತ್ರಿಕೆಗಳಲ್ಲಿ ಅವರ ಲೇಖನ, ಕವನಗಳು ಆಗಾಗ ಪ್ರಕಟವಾಗಿವೆ.

ಪ್ರೊ॥ ಹಿರೇಮಠರು ಕವಿಗಳಾಗಿ 'ಉಂಡು ಮಲಗಿದವರು', 'ನೀರು ನೆಲೆ' ಕವನ ಕೃತಿಗಳನ್ನು ಪ್ರಕಟಿಸಿದಂತೆಯೇ ಈ ಭಾಗದ ಗ್ರಾಮೀಣ ಹಾಗೂ ನಗರ ಸಮಸ್ಯೆಗಳನ್ನು ಕುರಿತು 'ಅಂತರ್ ಹುಳಗಳು', 'ಬೇವು ಕಚ್ಚಿದ ಬಾಯಿ', 'ಅಂತರಂಗದ ಗುಡಿಯ ಒಳಗೆ' ಮುಂತಾದ ಸಣ್ಣ ಕಥೆಯ ಸಂಕಲನಗಳಲ್ಲಿ ವಿವರಿಸಿದ್ದಾರೆ. ಇವುಗಳಲ್ಲದೆ 'ಸರಳ ಕನ್ನಡ ವ್ಯಾಕರಣ', 'ರಾಂಪೂರ ಬಕ್ಕಪ್ಪನ ಹಾಡುಗಳು', 'ಶಾಹಪೂರ ದರ್ಶನ', 'ಚಿಂತನ ಲೇಖನಗಳು', 'ವಡ್ಡರಾಧನೆಯ ಕಥೆಗಳು' ಮುಂತಾದ ಮಹತ್ವದ ಕೃತಿಗಳನ್ನು ಸಂಪಾದಿಸಿ ಸಾಹಿತ್ಯ ಲೋಕಕ್ಕೆ ಅರ್ಪಿಸಿರುವರು.

೧೯೮೧ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನಿಂದ ಕರ್ನಾಟಕ ಜನಪದ ವೈದ್ಯಕೋಶದ ಯೋಜನೆ ಹಾಕಿಕೊಂಡು ಅದಕ್ಕಾಗಿ ಮಾಹಿತಿ ಸಂಗ್ರಹಕಾರರೆಂದು ಪ್ರೊ॥ ಸೂಗಯ್ಯ ಹಿರೇಮಠ ಅವರನ್ನು ಕಲ್ಬುರ್ಗಿ ಜಿಲ್ಲೆಗೆ ಆಯ್ಕೆ ಮಾಡಲಾಗಿತ್ತು. ಅದಕ್ಕಾಗಿ ಪ್ರೊ॥ ಹಿರೇಮಠರವರು ತನ್ನ ತಾಲ್ಲೂಕಿನ ಪ್ರತಿ ಹಳ್ಳಿಯ ಜನಪದ ವೈದ್ಯರನ್ನು ಭೇಟ್ಟಿಯಾಗಿ ಜನ ಮತ್ತು ದನಗಳಿಗೆ ಬರುವ ರೋಗಗಳು, ಅವುಗಳಿಗೆ ಕೊಡುವ ಔಷಧಗಳು, ತಪ್ಪಲಗಳು ಮಾಡುವ ಔಷಧ ತಯಾರಿಸುವ ವಿಧಾನಗಳು ಮುಂತಾದವುಗಳು ಸಮಗ್ರವಾಗಿ ಸಂಗ್ರಹಿಸಿ ವೈದ್ಯಕೋಶಕ್ಕೆ ಕಳುಹಿಸಿರುವರು. ಹೀಗೆ ಜನಪದ ಆರೋಗ್ಯದ ಬಗ್ಗೆ ಅಪಾರವಾದ ಕಾಳಜಿಯಿಂದ ಮಾಡಿದ ಅವರ ಅಧ್ಯಯನವನ್ನು ಹಾಗೂ ರಚಿಸಿದ ಕೃತಿಗಳನ್ನು ಅಧ್ಯಯನ ಮಾಡುವುದು ಅವಶ್ಯವಾಗಿದೆ.

೧೯೮೩ ರಲ್ಲಿ ಹೈದರಾಬಾದ-ಕರ್ನಾಟಕ ಶಿಕ್ಷಣ ಸಂಸ್ಥೆಯಿಂದ ಚಿಂಚೋಳಿಯಲ್ಲಿ ಪ್ರಾರಂಭಿಸಿದ ಶ್ರೀಮತಿ ಚೆನ್ನಮ್ಮ ಬಸಪ್ಪ ಪಾಟೀಲ್ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ಮುಂದೆ ವಿಭಾಗದ ಮುಖ್ಯಸ್ಥರಾಗಿ, ಪ್ರಾಚಾರ್ಯರಾಗಿ ಸಲ್ಲಿಸಿದ ಸೇವೆ

ಅಮೋಘವಾದುದು. ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಾತಾವರಣ ಇಲ್ಲದ ಚಿಂಚೋಳಿಯಲ್ಲಿ ಸಾಹಿತ್ಯಿಕ ಚಟುವಟಿಕೆಗಳನ್ನು ಪ್ರಾರಂಭಿಸಿ, ಸಂಘ-ಸಂಸ್ಥೆಗಳಿಂದ ಕನ್ನಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡರಲ್ಲದೆ ಪ್ರತಿ ಹಳ್ಳಿಗೂ ಅತಿಥಿಗಳಾಗಿ ಹೋಗಿ ಕನ್ನಡ ಸಾಹಿತ್ಯ ಸಂಸ್ಕೃತಿ ಕುರಿತು ಜಾಗೃತಿ ಮೂಡಿಸಿರುವುದನ್ನು ಆ ತಾಲೂಕಿನ ಪ್ರತಿಯೊಬ್ಬ ವಿದ್ಯಾರ್ಥಿ ಹಾಗೂ ಜನರು ಇಂದಿಗೂ ಅವರ ಸೇವೆಯನ್ನು ಸ್ಮರಿಸಿರುವರು. ಅವರ ಕಾಲದಲ್ಲಿಯ ಚಿಂಚೋಳಿ ತಾಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಮಾಡಿರುವ ಸೇವೆಯನ್ನು ಅಧ್ಯಯನಕ್ಕೆ ಒಳಪಡಿಸುವುದು ಅಗತ್ಯವಾಗಿದೆ.

ಜನಪದ ಸಾಹಿತ್ಯವಲ್ಲದೆ ಶಾಸನ, ಶಿಲ್ಪಕಲೆ ಕುರಿತು ಪ್ರೊ॥ ಹಿರೇಮಠ ಅವರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಚಿಂಚೋಳಿಯಿಂದ ಬೀದರಿನ ಪ್ರತಿಷ್ಠಿತ ಮಹಾವಿದ್ಯಾಲಯವಾದ ಬಿ.ವಿ.ಬಿ. ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಅನೇಕ ಕನ್ನಡ ಕಾರ್ಯಕ್ರಮಗಳನ್ನು ನಡೆಸಿರುವುದಲ್ಲದೆ ಈ ಭಾಗದಲ್ಲಿ ಅಟ್ಟಳೆನಾಡನಾಳಿದ 'ರಂಜೋಳಿನ ಸಿಂಧರ' ಕುರಿತು ಶಾಸನಗಳ ಆಧಾರದಿಂದ ಶೋಧನೆಯ ಗ್ರಂಥವನ್ನು ಬರೆದಿರುವರು. ಅಲ್ಲದೆ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿಜ್ಞಾನ ಪರಿಷತ್ತಿನ ಸದಸ್ಯರಾಗಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಾಹಿತ್ಯ, ಸಂಸ್ಕೃತಿ, ಸಂವೃದ್ಧನೆಗೆ ಬೆಂಬಲಿಸಿದಂತೆಯೇ ಪರಿಸರ ಪ್ರಜ್ಞೆ, ಹವಾಮಾನ ವೈಪರಿತ್ಯ, ಪೌಷ್ಠಿಕ ಆಹಾರ ಮುಂತಾದ ವಿಜ್ಞಾನ ಕಾರ್ಯಕ್ರಮ ಹಾಗೂ ಸಮ್ಮೇಳನಗಳಲ್ಲಿಯೂ ಭಾಗವಹಿಸಿರುವರು. ಬೀದರ ಜಿಲ್ಲೆಯ ಜಡಿಬುಟ್ಟಿ ಮೇಳವನ್ನು ಸಂಯೋಜಿಸಿ ಅದರ ಯಶಸ್ಸಿಗೆ ಕಾರಣೀಭೂತರಾಗಿರುವರಲ್ಲದೇ ಅನೇಕ ಸ್ಮರಣ ಸಂಚಿಕೆಗಳ ಸಂಪಾದಕರಾಗಿಯೂ ಮಹತ್ವದ ಸ್ಮರಣ ಸಂಚಿಕೆಗಳನ್ನು ಸಂಪಾದಿಸಿರುವದು. ಅವರ ಪ್ರತಿಭೆ, ಪಾಂಡಿತ್ಯವನ್ನು ಅಭ್ಯಾಸಿಸುವಲ್ಲಿ ಪ್ರಮುಖವಾಗಿವೆ.

ಬೀದರ ಜಿಲ್ಲೆಯ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ಮಠ-ಮಾನ್ಯಗಳ ಸಮಾರಂಭದಲ್ಲಿ ಹಾಗೂ ಜನಪರ ಹೋರಾಟಗಳಲ್ಲಿ ಪ್ರೊ॥ ಸೂಗಯ್ಯ ಹಿರೇಮಠರ ಹೆಸರು ಪ್ರಸಿದ್ಧವಾಗಿವೆ. ಸಾಹಿತ್ಯ ಹಾಗೂ ಸಮಾಜಮುಖಿಯಾಗಿ ಚಿಂತನಶೀಲ ಬರಹಗಾರರಾಗಿ ಬಹುಮುಖ ಪ್ರತಿಭೆಯನ್ನು ಹೊಂದಿರುವ ಪ್ರೊ॥ ಸೂಗಯ್ಯ ಹಿರೇಮಠರ ಜೀವನ ಮತ್ತು ಜನಪದ ಕೃತಿಗಳ ಕುರಿತು ಅಧ್ಯಯನ ಮಾಡುವುದು ಅಗತ್ಯವೆಂದು ಭಾವಿಸಿರುವೆ.

ಅಧ್ಯಾಯ : ೨

ಪ್ರೊ. ಸೂಗಯ್ಯ ಹಿರೇಮಠ ಅವರ ಜೀವನ ಮತ್ತು ಸಾಧನೆ

- ಮನೆತನ
- ಬಾಲ್ಯ ಮತ್ತು ಶಿಕ್ಷಣ
- ಹೋರಾಟದ ಜೀವನ
    - ೧) ಸಂಪೂರ್ಣ ಕ್ರಾಂತಿ
    - ೨) ಸಮುದಾಯ ಜಾತ
    - ೩) ರೈತರ ಪರ ಹೋರಾಟ
    - ೪) ಭಾಷಾ ಚಳುವಳಿ
    - ೫) ಲಾಂಛನ ಹೋರಾಟ
- ಕುಟುಂಬ ಜೀವನ
- ವೃತ್ತಿ ಜೀವನ

ಅಧ್ಯಾಯ–೨

ಪ್ರೊ॥ ಸೂಗಯ್ಯ ಹಿರೇಮಠ ರವರ ಜೀವನ ಮತ್ತು ಸಾಧನೆ

ಮಾನವನು ಇಂದಿಗೂ ಪರಿಸರದ ಒಡನಾಡಿಯಾಗಿರುವನು. ಪರಿಸರವು ಪ್ರತಿಯೊಬ್ಬ ಮಾನವನ ಮೇಲೆ ಪ್ರಭಾವ ಬೀರುತ್ತದೆ. ಸೂರ್ಯ–ಚಂದ್ರರು, ಆಕಾಶ, ಮಳೆ, ಚುಕಿ–ಹಕ್ಕಿಗಳು, ಗುಡುಗು–ಮಿಂಚುಗಳು, ಬೆಟ್ಟ–ಗುಡ್ಡಗಳು, ಕೊಳೆ–ನದಿಗಳು ಪರಿಸರದಲ್ಲಿಯೇ ಮಾನವನು ನೆಲೆಸಿರುವುದನ್ನು ಇತಿಹಾಸ ತಿಳಿಸುತ್ತದೆ. ಆದ್ದರಿಂದ ಪ್ರೊ॥ ಸೂಗಯ್ಯ ಹಿರೇಮಠ ರವರು ಬೆಳೆದು ಬದುಕಿದ ನಾಡು ಕಲ್ಬುರ್ಗಿ ಜಿಲ್ಲೆಯ ಸಗರನಾಡು. ಸಗರನಾಡಿನಲ್ಲಿ ಹರಿಯುವ ಭೀಮಾ, ಕೃಷ್ಣಾ ನದಿಗಳು ಸುರಪೂರು, ಶಾಹಪೂರಗಳ ಹಾಸು ಬಂಡೆಯ ಗುಡ್ಡಗಳು ಅಲ್ಲಿಯ ಜನರ ಜೀವನದ ಮೇಲೆ ಸಾಕಷ್ಟು ಪ್ರಭಾವ ಬೀರುತ್ತವೆ. ಪ್ರೊ॥ ಸೂಗಯ್ಯ ಹಿರೇಮಠ ರ ಮೇಲೆಯೂ ಆ ಸಗರ ನಾಡಿನಲ್ಲಿ ನಡೆಯುವ ಜಾತ್ರೆಗಳು, ಹಬ್ಬಗಳು, ಸುಗ್ಗಿಯ ಕುಣಿತಗಳು ಗ್ರಾಮೀಣ ಪ್ರದೇಶದಲ್ಲಿ ಅಭಿನಯಿಸುವ ದೊಡ್ಡಾಟ, ಸಣ್ಣಾಟಗಳು ಊರಲ್ಲಿಯ ವಿವಿಧ ಆಯಗಾರರು ಹಳ್ಳಿಯ ಜನಪದ ಆಟಗಳು ಮುಂತಾದವು ಆ ಪರಿಸರದಲ್ಲಿ ಬೆಳೆದ ಪ್ರೊ॥ ಸೂಗಯ್ಯ ಹಿರೇಮಠರ ಮೇಲೆ ಪ್ರಭಾರ ಬೀರಿವೆ. ಒಬ್ಬ ಸೃಜನಶೀಲ ಬರಹಗಾರನ ಅಧ್ಯಯನ ಮಾಡುವಾಗ ಆತನ ಹುಟ್ಟಿದ ಊರು, ಮನೆತನ, ತಾಯಿ–ತಂದೆ ಪರಿಸರ ಹಾಗೂ ಸಾಹಿತ್ಯ ಕುರಿತು ಅಭ್ಯಾಸಿಸುವುದು ಅವಶ್ಯಕವಾಗಿದೆ. ಪ್ರೊ॥ ಸೂಗಯ್ಯ ಹಿರೇಮಠರ ಬಹುಮುಖ ವ್ಯಕ್ತಿತ್ವವನ್ನು ಅರಿತುಕೊಳ್ಳಲು ಈ ಮೇಲಿನ ಅಂಶಗಳು ಸಹಾಯಕವಾಗುತ್ತವೆ.

- ### ಮನೆತನ

ಪ್ರೊ॥ ಸೂಗಯ್ಯ ಹಿರೇಮಠರವರು ಕಲ್ಬುರ್ಗಿ ಜಿಲ್ಲೆಯ ಸಗರನಾಡೆಂದು ಕರೆಯಿಸಿಕೊಳ್ಳುವ ಶಾಹಪೂರ ತಾಲ್ಲೂಕಿನ ಸಿಂಗನಹಳ್ಳಿಯವರು. ಇದು ಚಿಕ್ಕ ಹಳ್ಳಿಯಾದರು ಊರಿನ ಆರಾಧ್ಯ ದೈವರಾದ ಯಲ್ಲಮಾಂಬೆಯ ಜಾತ್ರೆಯಿಂದ ಪ್ರಸಿದ್ಧ ಕ್ಷೇತ್ರವಾಗಿದೆ. ಸಿಂಗನಹಳ್ಳಿಯು ಬಿಟ್ಟು ಒಂದು ಕಿ.ಮೀ. ದೂರ, ಪ್ರಶಾಂತವಾದ ಸ್ಥಳದಲ್ಲಿ ಯಲ್ಲಮಾಂಬೆಯ ದೇವಾಲಯ ಇದೆ. ಪ್ರತಿವರ್ಷ ಭಾರತ ಹುಣ್ಣಿಮೆಯಲ್ಲಿ ಆಗುವ ಜಾತ್ರೆಗೆ ಬಹುದೂರದ ಊರಿಂದ ಭಕ್ತರು ಶೃದ್ಧೆ ಇಟ್ಟು ಬರುತ್ತಾರೆ. ಮೂರು ದಿನ ನಡೆಯುವ ಶ್ರೀ ಯಲ್ಲಮಾಂಬೆ ಜಾತ್ರೆಯಲ್ಲಿ ಸಿಂಗನಹಳ್ಳಿಯ ಜನರು ಉತ್ಸಾಹದಿಂದ ನೆರವೇರಿಸುವರು. ಈ ಮೂರು ದಿನಗಳ ಉತ್ಸವದಲ್ಲಿ ಸಿಂಗನಹಳ್ಳಿಯ ಕಲಾವಿದರು ಪ್ರತಿವರ್ಷ ದೇವಿಯ ಆಟ ಇಲ್ಲವೇ ಯಾವುದಾದರೂ ದೊಡ್ಡಾಟ ಆಡುವುದನ್ನು ತಪ್ಪಿಸಿದವರಲ್ಲ. ಹೀಗಾಗಿ ಸಿಂಗನಹಳ್ಳಿಯ ಪ್ರತಿ ಮನೆಯಲ್ಲಿಯೂ ದೊಡ್ಡಾಟದ ಕಲಾವಿದರು ಸಿಗುವರು. ಸಿಂಗನಹಳ್ಳಿಯ

ಸಮೀಪದ ಪೇಠ ಗೋಗಿಯಿಂದ ಉತ್ತರ ದಿಕ್ಕಿಗೆ ಸುಮಾರು ಎರಡು ಕಿ.ಮೀ. ದೂರದಲ್ಲಿರುವ ಚಿಕ್ಕ ಗ್ರಾಮದ ಸುಮಾರು ನೂರು-ನೂರಾ ಇಪ್ಪತ್ತು ಮನೆಗಳಿರುವ ಗ್ರಾಮ. ಊರಲ್ಲಿ ಹೆಚ್ಚಾಗಿರುವವರು ರಡ್ಡಿ ಲಿಂಗಾಯತರು. ಇವರಲ್ಲದೇ ಜಂಗಮರು, ಕುರುಬರು, ಕ್ಷೌರಿಕರು, ಜಾತಿಗಾರರು ಹಾಗೂ ದಲಿತರು ಮುಂತಾದ ಜನಾಂಗಗಳವರು ವಾಸಿಸುವವರು. ಊರ ಜನರ ಮುಖ್ಯ ಉದ್ಯೋಗ ಒಕ್ಕಲುತನವಾಗಿದೆ. ಇಂತಹ ಗ್ರಾಮಗಳ ಮಠದ ಕಾರ್ಯಕಲಾಪಗಳನ್ನು ಮಾಡುತ್ತ ಪ್ರೊ॥ ಸೂಗಯ್ಯ ಹಿರೇಮಠರ ಅಜ್ಜ ವಾಸಿಸುತ್ತಿದ್ದರು. ಅವರಿಗೆ ೮ ಎಕರೆ ಕಪ್ಪು ಎರೆ ಭೂಮಿ ಇದ್ದು, ಫಲವತ್ತಾದ ಕಪ್ಪು ಭೂಮಿಯಲ್ಲಿ ದುಡಿಯುವುದಲ್ಲದೆ ಊರಿನ ಧಾರ್ಮಿಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಮೊದಲು ಮನೆಯಲ್ಲಿ ಅಣ್ಣ-ತಮ್ಮಂದಿರು ಬೇರೆಯಾಗಿ ಪಡಸಾಲೆ ಅಟ್ಟದಲ್ಲಿ ಅರ್ಧಭಾಗವಾಗಿದ್ದವು. ಎತ್ತಿನ ಕೊಟ್ಟಿಗೆಯ ಮೇಲಿನ ಅಟ್ಟದಲ್ಲಿ ಮಠಕ್ಕೆ ಬರುವ ಕಾಯಕದವರು ತಮ್ಮ ಜೋಳಿಗೆಯನ್ನು ಹಾಕಿ ಮಲಗುತ್ತಿದ್ದರು. ಕಾಯಕ ಮುಗಿದ ಮೇಲೆ ಬೇರೆ ಊರಿಗೆ ಹೋಗುತ್ತಿದ್ದರು. ಊರಲ್ಲಿ ಮಠದ ಮನೆಯಾಗಲಿ, ಬೇರೆ ದೊಡ್ಡ ದೇವಾಲಯವಾಗಲಿ, ಚಾವಡಿಯಾಗಲಿ ಇರಲಿಲ್ಲ. ಊರಲ್ಲಿ ಭಕ್ತರು ಬಿನ್ನಕ್ಕೆ ಹೇಳಿದರೆ ಊಟ ಮಾಡುತ್ತಿದ್ದರು. ಒಂದು ವೇಳೆ ಹೇಳದಿದ್ದರೆ ಮಠದಲ್ಲಿಯೇ ಊಟ ಮಾಡಿ ಹೋಗುತ್ತಿದ್ದರು. ಅಜ್ಜ ಸೂಗಯ್ಯರಿಗೆ ಸಮೀಪದ ಅದೇ ತಾಲ್ಲೂಕಿನ ಚಾಮನಾಳದ ಗಂಗಮ್ಮಳೊಂದಿಗೆ ಮದುವೆಯಾಗಿತ್ತು. ಗಂಗಮ್ಮ-ಸೂಗಯ್ಯ ದಂಪತಿಗಳಿಗೆ ಶರಣಮ್ಮ, ಶರಣಯ್ಯ, ನೀಲಮ್ಮ, ಬಸಯ್ಯ ಎಂದು ನಾಲ್ಕು ಮಕ್ಕಳು ಜನಿಸಿದರು. ಸದೃಢ ಕಾಯದ ಅಜ್ಜ ಸೂಗಯ್ಯನು ನಾಲ್ಕು ಮಕ್ಕಳನ್ನು ಸಲಹುತ್ತಲೆ ಸಂಸಾರ ನಡೆಸಿದನು. ದೊಡ್ಡವಳಾದ ಶರಣಮ್ಮಳನ್ನು ಜೇವರ್ಗಿ ತಾಲೂಕಿನ ಅಂಬರಖೇಡ ಗ್ರಾಮಕ್ಕೆ ಮದುವೆ ಮಾಡಿಕೊಟ್ಟರೆ, ಎರಡನೆಯರಾದ ಶರಣಯ್ಯನು ಬುದ್ಧಿವಂತ ನಾಗಿರುವುದರಿಂದ ಚಿತಾಪೂರ ತಾಲ್ಲೂಕಿನ ಕಣಗನ ಹಳ್ಳಿಯ ಮಠದಲ್ಲಿಟ್ಟು ಶಾಲೆ ಓದಿಸಿದರು. ಮೂರನೆಯವರಾದ ನೀಲಮ್ಮಳನ್ನು ಹಳೆ ಬೀಗರಾದ ಚಾಮನಾಳದ ಶರಣಯ್ಯನಿಗೆ ಕೊಟ್ಟು ಮದುವೆ ಮಾಡಿದರು. ಚಿಕ್ಕವನಾದ ಬಸಯ್ಯ ತಂದೆಯಂತೆಯೇ ಸದೃಢನಾಗಿದ್ದು, ಒಕ್ಕಲುತನದ ಜವಾಬ್ದಾರಿ ಹೊತ್ತನು.

ಓದು ಮುಗಿಸಿದ ಹಿರಿಯ ಮಗ ಶರಣಯ್ಯನಿಗೆ ಅದೇ ತಾಲೂಕಿನ ದೊಡ್ಡ ಸಗರದ ಶಾಂತಮ್ಮಳೊಂದಿಗೆ ಮದುವೆ ಮಾಡಿದರು. ಶರಣಯ್ಯನವರು ಬುದ್ಧಿವಂತ ಪ್ರತಿಭಾನ್ವಿತರು. ಅಂದಿನ ಕಾಲದಲ್ಲಿಯೇ ತಮ್ಮೂರಿನ ಸಮೀಪದ ಕೊಡಮನ ಹಳ್ಳಿಯಲ್ಲಿ ಗಾವಂಠಿ ಶಾಲೆಯ ಶಿಕ್ಷಕರಾಗಿ ಕೆಲಸ ಮಾಡಿದರು. ತಂದೆಯ ಅಪೇಕ್ಷೆಯಂತೆಯೇ ಮಠದ ಉಸ್ತುವಾರಿಯನ್ನು ನಿರ್ವಹಿಸಿದರು. ಊರಲ್ಲಿ ನಡೆಯುವ ಹಬ್ಬ-ಹರಿದಿನಗಳು, ಜಾತ್ರೆಗಳು, ಮದುವೆ-ಮುಂಜಿಗಳು, ಹೊಸ ಮನೆಯ ಗೃಹ ಪ್ರವೇಶಗಳು ಮುಂತಾದವುಗಳಲ್ಲಿ ಶರಣಯ್ಯನವರೇ ಪ್ರಮುಖರಾಗಿ ಕಾರ್ಯನಿರ್ವಹಿಸುತ್ತಿದ್ದರು. ವೇದ, ಶಾಸ್ತ್ರ, ಪುರಾಣ, ಪ್ರವಚನದಲ್ಲಿ ಪ್ರಬುದ್ಧವಾದ ಪಾಂಡಿತ್ಯ ಪಡೆದವರು. ಅಲ್ಲದೇ ಪಂಚಾಂಗ ಹೇಳುವುದರಲ್ಲಿ, ಥಟ್ಟನೆ ಲೆಕ್ಕ ಮಾಡಿ ಉತ್ತರ ಕೊಡುವಲ್ಲಿ ಅವರನ್ನು ಮೀರಿಸುವವರು ಊರಲ್ಲಿ ಯಾರೂ ಇರಲಿಲ್ಲವೆಂದೇ ಹೇಳುವರು. ನಿತ್ಯವು ಬರುವ ಮಂಗಲಕಾರ್ಯಗಳು, ವ್ಯಾಜ್ಯಗಳು

ಮುಂತಾದವುಗಳ ವಿಷಯವನ್ನು ತಿಳಿದ ಎಲ್ಲರಿಗೂ ಸಹಮತವಾಗುವಂತೆ ನ್ಯಾಯ ನೀಡುವುದರಲ್ಲಿ ನಿಸ್ಸೀಮರಾಗಿದ್ದರು. ಊರಿನ ಹಾಗೂ ಪರ ಊರಿನ ಯಾವುದೇ ಕಾರ್ಯಗಳು, ಇಲ್ಲಿವೆ ಸಮಾರಂಭಗಳು, ಮದುವೆ, ಜಾತ್ರೆ, ಪುರಾಣ ಮುಂತಾದವುಗಳಲ್ಲಿ ಇವರು ಸಕ್ರೀಯವಾಗಿರುತ್ತಿದ್ದರು. ಮನೆಯಲ್ಲಿದ್ದರೆ ಸದಾ ನಿಜಗುಣ ಶಿವಯೋಗಿಯ ಕೃತಿಗಳು, ಭಜನೆಯ ಹಾಡುಗಳು, ಪ್ರಭುಲಿಂಗ ಲೀಲೆ, ಜೈಮಿನಿ ಭಾರತ, ರಟ್ಟಮತ, ಔಷಧಿಯ ಪುಸ್ತಕಗಳನ್ನು ಓದುವುದರಲ್ಲಿಯೇ ಮಗ್ನರಾಗಿರುತ್ತಿದ್ದರು. ಮಠಕ್ಕೆ ಬರುವ ಕಾಯಕದ ಸ್ವಾಮಿಗಳು, ಪಂಡಿತರು, ಸಾಧುಗಳೊಂದಿಗೆ ಸದಾ ಆದರ, ಆತಿಥ್ಯ ನೀಡಿ ಅವರೊಂದಿಗೆ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ವಿಷಯಗಳ ಕುರಿತು ಚರ್ಚಿಸುತ್ತಿದ್ದರು. ಯಾರ ಮುಲಾಜಿಲ್ಲದೆ ಖಡಾಖಂಡಿತವಾಗಿ ಮಾತನಾಡುವ ಸ್ವಭಾವ ಇರುವದರಿಂದ ಅನ್ಯಾಯ, ಅತ್ಯಾಚಾರ ಮಾಡಿದವರು ಹೆದರುತ್ತಿದ್ದರು. ಮಾಸ್ತರಿಕೆ ಬಿಟ್ಟು ಕೆಲ ದಿನ ಕಿರಾಣಿ ಅಂಗಡಿ ಊರಲ್ಲೇ ನಡೆಸಿದರು. ಊರಿನ ಕಾರ್ಯಗಳು, ನ್ಯಾಯಗಳಿಗೆ ತಿರುಗಾಡುವುದರಿಂದ ಅಂಗಡಿಯನ್ನು ಮುಚ್ಚಿ ಸದಾ ಸಾಮಾಜಿಕ, ಧಾರ್ಮಿಕ ಕಾರ್ಯದಲ್ಲಿ ಭಾಗಿಯಾದರು.

ತಮ್ಮ ಬಸಯ್ಯನವರು ದಷ್ಟ ಪುಷ್ಟವಾಗಿ ಬೆಳೆದು ಒಕ್ಕಲುತನ ಮಾಡುವುದರ ಜೊತೆಗೆ ಊರಲ್ಲಿಯ ಜಾತ್ರೆ, ಹಬ್ಬ–ಹರಿದಿನಗಳಲ್ಲಿ ಗುಂಡು, ಸಂಗ್ರಾಣಿ ಕಲ್ಲು, ಉಸುಕಿನ ಕೊಡ, ಜೋಳದ ಚೀಲ ಎತ್ತುವುದರಲ್ಲಿ ಮುಂದಿದ್ದನು. ಹಳ್ಳಿಯ ಮೊಹರಂ ಹಬ್ಬದಲ್ಲಿ ಮುಖಂಡನಾಗಿ ಮೊಹರಂ ಕುಣಿತ, ಹಾಡುಗಳನ್ನು ಹೇಳುವುದರಲ್ಲಿ ನಿಸ್ಸೀಮನು. ಊರಲ್ಲಿಯೇ ಆಗಲಿ, ಎಲ್ಲಮ್ಮ ದೇವಿಯ ಜಾತ್ರೆಯಲ್ಲೇ ಆಗಲಿ ಆಡುವ ದೊಡ್ಡಾಟದಲ್ಲಿ ತಪ್ಪದೇ ಪಾತ್ರ ವಹಿಸುತ್ತಿರುವನು. ಅದರಲ್ಲಿಯೂ ಪ್ರತಿ ವರ್ಷ ಜಾತ್ರೆಯಲ್ಲಿ ಆಡುವ ಶ್ರೀ ದೇವಿ ದೊಡ್ಡಾಟದಲ್ಲಿ ಶುಂಭಾಸೂರನ ಪಾತ್ರ ವಹಿಸುವಲ್ಲಿ ಪ್ರಮುಖನು. ಜೇವರ್ಗಿ ತಾಲ್ಲೂಕಿನ ನರಬೋಳಿಯ ಸುಸಂಸ್ಕೃತ ಮನೆತನದ ಗಿರಿಜಮ್ಮಳೊಂದಿಗೆ ಮದುವೆಯಾದನು. ಮದುವೆಯಾದರೂ ದೊಡ್ಡಾಟದಲ್ಲಿ ಪಾತ್ರ ವಹಿಸುವುದು ಬಿಟ್ಟವನಲ್ಲ. ದೇವಿಯ ಆಟವಲ್ಲದೆ 'ಕನಕಾಂಗಿ', 'ರತಿಕಲ್ಯಾಣ', 'ಲವ–ಕುಶ', 'ವೀರ ಬಬ್ರುವಾಹನ', 'ಅಭಿಮನ್ಯು' ಮುಂತಾದ ದೊಡ್ಡಾಟಗಳಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದನು. ದೇವಿಯ ಆಟದಲ್ಲಿ ಅವನಷ್ಟು ಸಲ ಶುಂಭಾಸೂರನ ಪಾತ್ರ ಮಾಡಿದವರು ಇಂದಿಗೂ ಹುಟ್ಟಿಲ್ಲವೆಂದು ಜನರು ಹೇಳುವರು. ಬಯಲಾಟದಲ್ಲಿ ಹಿಮ್ಮೇಳದ ಹಾಡಿಕೆ ಮಾಡಿದರೆ, ಸುಗ್ಗಿಯ ದಿನದಲ್ಲಿ ಹಿಗ್ಗಿನಿಂದ ಹಾಡುವ ಹಂತಿಯ ಹಾಡುಗಳು, ಮೊಹರಂ ಹಾಡುಗಳು ಜನ ಅವರಿಂದ ಹಾಡಿಸಿಕೊಳ್ಳುತ್ತಿದ್ದರು. ಅಣ್ಣ ಶರಣಯ್ಯ ಶಾಸ್ತ್ರ ಪಂಡಿತನಾಗಿದ್ದರೆ, ತಮ್ಮ ಬಸಯ್ಯ ಕಲಾ ರಸಿಕನಾಗಿದ್ದು, ಅವನಾಡಿದ ಮಾತುಗಳು "ರಸಿಕನಾಡಿದ ಮಾತು ಶಶಿಯೂದಿಸಿ ಬಂದಂತೆ" ಎಂದು ಸರ್ವಜ್ಞ ಹೇಳಿದ ಹಾಗಿದ್ದವು. ಬಸಯ್ಯನವರು ಬೈದರು, ಬೈಸಿಕೊಂಡವರು ನಗುತ್ತಲೇ ಹೋಗುತ್ತಿದ್ದರು. ಕೆಲಸವಿಲ್ಲದಾಗ ಮನೆಯಲ್ಲಿ ಇದ್ದ ದೊಡ್ಡಾಟದ ತಾಳ, ಮದ್ದಲಿ, ಪಿಟೀಲು, ಪೇಟಿ ಮುಂತಾದವುಗಳನ್ನು

ತೆಗೆದುಕೊಂಡು ಬಾರಿಸಿ ಹಾಡುತ್ತಿದ್ದರು. ಮಠವಾಗಿರುವುದರಿಂದ ಮನೆಯಲ್ಲಿ ಸದಾ ಭಜನೆಯ ತಾಳ, ದಮ್ಮಡಿ, ತಂಬೂರಿಗಳು ಇರುತ್ತಿದ್ದವು. ಹೀಗೆ ಸಿಂಗನಹಳ್ಳಿಯಲ್ಲಿ ಪ್ರೊ॥ ಸೂಗಯ್ಯ ಹಿರೇಮಠ ಮನೆತನ ಕಲೆ, ಸಾಹಿತ್ಯ, ಸಂಗೀತದ ಸಂಗಮ ಕೇಂದ್ರವಾಗಿತ್ತು.

ಸಿಂಗನಹಳ್ಳಿಯ ಇಂತಹ ಸುಸಂಸ್ಕೃತ ಮನೆತನದಲ್ಲಿ ಶ್ರೀ ಶರಣಯ್ಯ ಶಾಂತಮ್ಮರಿಗೆ ಮಗನಾಗಿ ಪ್ರೊ॥ ಸೂಗಯ್ಯ ಹಿರೇಮಠ ರವರು ಭಾರತದ ಗಣರಾಜ್ಯ ಉತ್ಸವ ಆಚರಣೆ ಸಂಭ್ರಮದ ವರ್ಷದಲ್ಲಿ ಅಂದರೆ ದಿ:೦೯.೦೫.೧೯೫೦ ರಂದು ಜನಿಸಿದರು.

ಕಲೆ ಸಾಹಿತ್ಯದ ಕೇಂದ್ರವಾದ ಮನೆಯಲ್ಲಿ ಜನಿಸಿದ ಪ್ರೊ॥ ಸೂಗಯ್ಯ ಹಿರೇಮಠ ಅವರಿಗೆ ಸಹಜವಾಗಿಯೇ ತಂದೆ ಶರಣಯ್ಯ ನವರ ಶಿಸ್ತುಬದ್ಧ ಜೀವನ ಹಾಗೂ ಚಿಕ್ಕಪ್ಪನಾದ ಬಸಯ್ಯನವರ ದೊಡ್ಡಾಟದ ಪ್ರಭಾವದೊಂದಿಗೆ ಅತೀ ಪ್ರೀತಿಯಿಂದ ನೋಡಿಕೊಳ್ಳುವ ಗಂಗಮ್ಮ ಅಜ್ಜಿ ಹೇಳುವ ಜನಪದ ಹಾಡು, ಕಥೆಗಳು ಹಿರೇಮಠರ ಮೇಲೆ ಹೆಚ್ಚಿನ ಪ್ರಭಾವ ಬೀರಿದವು. ಹಿರೇಮಠರ ಅಕ್ಕ ಕಮಲಮ್ಮ ಇವರಿಗಿಂತಲೂ ಎರಡು ವರ್ಷ ದೊಡ್ಡವರು. ಇವರಿಗೆ ಮೂರು ವರ್ಷ. ಈ ಅವಧಿಯಲ್ಲಿಯೇ ತಾಯಿ ಶಾಂತಮ್ಮನವರು ಸ್ವರ್ಗವಾಸಿಯಾದರು. ತಾಯಿ ಕಳೆದುಕೊಂಡ ಈ ಇಬ್ಬರು ಮಕ್ಕಳಿಗೆ ತಬ್ಬಲಿ ಎನಿಸದಂತೆ ತಂದೆ ಶರಣಯ್ಯ, ಚಿಕ್ಕಪ್ಪ ಬಸಯ್ಯ, ಚಿಕ್ಕಮ್ಮ ಗಿರಿಜಮ್ಮ, ಅಜ್ಜಿ ಗಂಗಮ್ಮ ಪ್ರೀತಿ, ವಾತ್ಸಲ್ಯ ನೀಡಿ ಪಾಲನೆ, ಪೋಷಣೆ ಮಾಡಿದರು. ಚಿಕ್ಕಂದಿನಲ್ಲಿಯೇ ಪ್ರೊ. ಹಿರೇಮಠರ ಮೇಲೆ ಮಠಕ್ಕೆ ಬರುವ ಕಾಯಕ ಮಾಡುವ ಸ್ವಾಮಿಗಳು ಅವರು ಮಾಡುವ ಮತ್ತು ವಿವಿಧ ವೇಷಗಳು ತುಂಬ ಪ್ರಭಾವ ಬೀರಿದವು. ಚಿಕ್ಕವರಿದ್ದಾಗ ಊರಲ್ಲಿ ವಾರಿಗೆಯ ಗೆಳೆಯರೊಂದಿಗೆ ಆಟ ಆಡುವುದರಲ್ಲಿಯು, ತಂಟೆ ತೆಗೆಯುವದರಲ್ಲಿಯು ಮುಂದಿದ್ದರು. ಏಕೆಂದರೆ ತಂದೆ ಶರಣಯ್ಯನವರು ಬಿಟ್ಟರೆ ಅಜ್ಜಿ, ಚಿಕ್ಕಪ್ಪ, ಚಿಕ್ಕಮ್ಮ ಎಲ್ಲರೂ ಪ್ರೋತ್ಸಾಹ ನೀಡುವವರೆ. ತಂದೆ ಮನೆಯಲ್ಲಿದ್ದರೆ ಮಾತ್ರ ಆಟ ಆಡದೆ ಮನೆಯಲ್ಲಿಯೇ ಕುಳಿತು ಸಾಕಾಗುತಿತ್ತು. ತಂದೆಯವರು ಊರಿಗೆ ಹೋದರೆ ಗೆಳೆಯರೊಂದಿಗೆ ಸೇರಿ ಊರಿನ ಹನುಮಪ್ಪನ ಗುಡಿಯ ಮುಂದೆ ಕಾಜಿನ ಗೋಲಿ ಆಡುತ್ತಿದ್ದರು. ಮಾವಿನ ಚಿಪ್ಪಿನ ಆಟ, ಲಿಂಗಪ್ಪನ ಆಟ, ಚಿಣಪಣಿ ದಾಂಡು, ಬಗರಿ, ಬಿಲ್ಲು ಮುಂತಾದ ಆಟ ಆಡುವುದರಲ್ಲಿ ಮುಂದಿದ್ದರು. ವರ್ಷದಲ್ಲಿ ಗೆದ್ದ ಕಾಜಿನ ಗೋಲಿ, ಮಾವಿನ ಚಿಪ್ಪುಗಳನ್ನು ತಮ್ಮ ಮನೆಯ ಅಂಗಳದಲ್ಲಿ ಹಗೆ ತೋಡಿ ಮುಚ್ಚಿಡುತ್ತಿದ್ದರು. ಒಂದು ಸಲ ಚಿಣಿದಾಂಡು ಆಟ ಆಡುವಾಗ ಏಕಾಪಾವ್, ದೋಕಾ ಚಿಟ್ಟಿ, ಮೂರುಕಾ ಮುಟ್ಟಿ, ಚರಕೆ ಗೌಡಾ, ಐದುರ್ ಕೋಲ್, ಆರಲಂಕಿ ಪಚಂಗಂಮಲ್ಲಿ ಹೀಗೆ ಅಳೆದು ಚರಕೆ ಗೌಡ ಎಂದು ಹೊಡೆದಾಗ ಚಿಣಿ ನೇರವಾಗಿ ನೆರ ಮನೆಯ ಗೆಳೆಯ ಪರಮಣ್ಣನ ಕಣ್ಣಿಗೆ ಬಡೆದು ರಕ್ತ ಸೋರಿ ರಾದ್ಧಾಂತವಾಯಿತು. ಮನೆಯಲ್ಲಿದ್ದು ಇಂತಹ ತುಂಟಾಟ ಮಾಡಿದರೆ ಇನ್ನೆಷ್ಟು ಜಗಳ ತರುವನೆಂಬ ಭಯದಿಂದ ಶಾಲೆಗೆ ಕಳುಹಿಸಿದರು. ಅವರ ಗೆಳೆಯರೊಂದಿಗೆ ಶಾಲೆಗೆ ಹೋದರೆ ತುಂಟಾಟವು ಮಾಡವದು ಬಿಟ್ಟವರಲ್ಲ. ತಂದೆಯವರು ಇಲ್ಲದಿದ್ದರೆ ಮನೆಯವರಿಗೂ ಉಳಿಗಾಲ ಇರುವುದಿಲ್ಲ.

ಯಾಕೆಂದರೆ ಹಿರೇಮಠರ ಹಟಮಾರಿತನವೇ ಅಂತಹದ್ದು. ಬೇಡಿದಾಗ ಕೇಳಿದ್ದು ಕೊಡಬೇಕು. ಆಗ ಊರಿಗೆ ಪೇಠ ಗೋಗಿಯಿಂದ ಬರುವ ಹಣ್ಣು ಮಾರಾಟಗಾರರು ಭಜಿಕಕರ ದಂಟು ಮಾರುವ ಮಿಠಾಯಿಗಾರರು ವಾರದಲ್ಲಿ ಒಂದೆರಡು ಸಲ ಊರಲ್ಲಿ ತಿರುಗಾಡಿ ಮಾರುತ್ತಿದ್ದರು. ಹಿರೇಮಠರ ಹಟಮಾರಿತನ ಕಂಡ ತಂದೆ, ಚಿಕ್ಕಪ್ಪ, ಅಜ್ಜಿಯವರು ತಪ್ಪದೆ ಖರೀದಿಸಿ ಅಡ್ಡಿ ಮಾಡಿದಾಗ ಕೊಡಲು ದೇವರ ಮನೆಯ ಅಡಕಲು ಗಡಿಗೆಯಲ್ಲಿ ಬಚ್ಚಿಡುತ್ತಿದ್ದರು. ಇವರ ಅಕ್ಕ ಕಮಲಮ್ಮ ತಿಂದರೆ ದೊಡ್ಡ ಜಗಳವೇ ಆಗುತಿತ್ತು. ಕೊಡದೇ ಇದ್ದಾಗ ಅಡಕಲ ಗಡಿಗೆಗಳನ್ನು ತಂದು ಹಿರೇಮಠರು ಅಂಗಳಕ್ಕೆ ಎಸೆಯುತ್ತಿದ್ದರು. ಇಂತಹ ತುಂಟಾಟವನ್ನು ಮನೆಯವರು ಸಹಿಸಲಾರದಿದ್ದರು. ಅವರ ತಂದೆಯವರು ಹೊಡೆಯುವರೆಂಬ ಅಂಜಿಕೆಯಿಂದ ಒಂದೂ ಮಾತು ಹೇಳುತ್ತಿರಲಿಲ್ಲ. ಇಂತಹ ತುಂಟಾಟವನ್ನು ಸಹಿಸದೆ ಹಿರೇಮಠರಿಗೆ ಶಾಲೆಗೆ ಸೇರಿಸಿದರು.

- **ಬಾಲ್ಯ ಮತ್ತು ಶಿಕ್ಷಣ**

ರಾಜ್ಯದಲ್ಲಿ ಸರಕಾರಿ ಶಾಲೆಗಳು ಪ್ರಾರಂಭವಾದಂತೆ ಸಿಂಗನಹಳ್ಳಿಯಲ್ಲಿಯೂ ತೆರೆದ ಸರಕಾರಿ ಶಾಲೆಗೆ ಸೇರಿಸಿದರು. ಆಗ ಶಾಲೆಗೆ ಕಟ್ಟಡವಿರಲಿಲ್ಲ. ಊರ ಹೊರಗಿನ ವಿಶಾಲ ಬಯಲಿನಲ್ಲಿ ಕಟ್ಟಿದ ಚಿಕ್ಕಮಠದ ಮೂರು ಅಂಕಣದ ಜಂತೆಯ ದೊಡ್ಡ ಮನೆಯಲ್ಲಿಯೇ ಶಾಲೆ ನಡೆಯುತಿತ್ತು. ಮಾಸ್ತರರು ಶಾಲೆಯಲ್ಲಿಯೇ ವಾಸವಾಗಿದ್ದರು. ಮುಂಜಾನೆ ೧೦.೩೦ ಗಂಟೆಗೆ ಶಾಲೆ ಪ್ರಾರಂಭವಾಗಿ ಸಂಜೆ ೪.೩೦ ಗಂಟೆಗೆ ಬಿಡುತ್ತಿದ್ದರು. ದಿನಾಲೂ ಕನ್ನಡ ಪಠ್ಯ ಪುಸ್ತಕದಲ್ಲಿಯ ಪದ್ಯಗಳನ್ನು ಎದ್ದು ನಿಲ್ಲಿಸಿ ಹಾಡಿಸುವುದು, ಕಂಠ ಪಾಠ ಮಾಡಿಸುವುದು. ಮಗ್ಗಿಗಳನ್ನು ಒಂದರಿಂದ ಇಪ್ಪತ್ತರವರೆಗೆ ಜೋರಾಗಿ ಹೇಳಿಸುತಿದ್ದರು. ದಿನಾಲೂ ಪಾಠ ಓದುವುದು, ಮಗ್ಗಿ ಎಣಿಸುವುದಲ್ಲದೆ ಮನೆಯಲ್ಲಿ ರಾತ್ರಿ ಶುದ್ಧ ಬರಹ ಬರೆಯಲು ತಿಳಿಸುತ್ತಿದ್ದರು. ಮರುದಿನ ಪಾಟಿಯಲ್ಲಿ ಬರೆದಿಕೊಂಡು ಬಂದ ಮಗ್ಗಿಗಳನ್ನು ಪರಿಶೀಲಿಸುತ್ತಿದ್ದರು. ಮಧ್ಯಾಹ್ನ ಶಾಲೆಯ ಬಯಲಿನಲ್ಲಿ ಕಬ್ಬಡ್ಡಿ, ಖೋ ಖೋ ಹಾಗೂ ಓಟ ಮುಂತಾದ ಆಟಗಳನ್ನು ಆಡಿಸುತ್ತಿದ್ದರು.

ಮಾಸ್ತರ್‌ರ ಉಡುಪು ಬಹಳ ಸರಳವಾಗಿದ್ದವು. ಧೋತಿ ಉಟ್ಟು, ಖಮೀಜ್ ಅಂಗಿ ತೊಟ್ಟು, ತಲೆಗೆ ರುಮಾಲು ಸುತ್ತುತ್ತಿದ್ದರು. ಶಾಲೆಯಲ್ಲಿ ಸದಾ ಒಂದು ಉದ್ದನೆಯ ಕೊಲು ಕೈಯಲ್ಲಿರುತ್ತಿತ್ತು. ಊರಿಂದ ತಂದ ಬುತ್ತಿ ಒಂದೆರಡು ದಿನಗಳಲ್ಲಿಯೇ ಮುಗಿಯುತ್ತಿತ್ತು. ಆದ್ದರಿಂದ ಪ್ರತಿದಿನ ಒಬ್ಬ ವಿದ್ಯಾರ್ಥಿಯ ಮನೆಗೆ ಊಟಕ್ಕೆ ಹೋಗುತ್ತಿದ್ದರು. ಮಾಸ್ತರರು ಊಟಕ್ಕೆ ಇಂದು ಬರುವವರೆಂದು ಮನೆಯಲ್ಲಿ ಹೇಳಿದರೆ ಅವರಿಗಾಗಿ ಅನ್ನ ಮಾಡಿ ಮೊಸರು, ಮಜ್ಜಿಗೆ, ತುಪ್ಪ ಕಾಯ್ದಿಡುತ್ತಿದ್ದರು. ಮಾಸ್ತರರಿಗೆ ತಾವು ಊಟ ಮಾಡುವ ಸಾದಾ ಊಟ ನೀಡುವುದು ಸರಿಯಲ್ಲವೆಂಬ ಭಾವನೆ ಜನರಲ್ಲಿತ್ತು. ಅಲ್ಲದೆ ಅಂದು ಎಲ್ಲರ ಮನೆಯಲ್ಲಿ ಎಮ್ಮೆ, ಆಕಳುಗಳು ಸಾಕಿರುವುದರಿಂದ ಹಾಲು-ಮೊಸರಿಗೆ ಯಾವ ಕೊರತೆ ಇರುತ್ತಿರಲಿಲ್ಲ. ಮಧ್ಯಾಹ್ನದಲ್ಲಿ ಮಾಸ್ತರರಿಗೆ

ಚಹಾ ಕುಡಿಯುವ ಚಟ ಇತ್ತು. ಅಂದು ಅವರ ಊರಲ್ಲಿ ಇಂದಿನಂತೆ ಹೋಟೆಲ್‌ಗಳು ಇರಲಿಲ್ಲ. ಎಲ್ಲರೂ ತಮ್ಮ ಮನೆಗಳಲ್ಲಿಯೇ ಚಹಾ ಮಾಡಿಕೊಂಡು ಕುಡಿಯುತ್ತಿದ್ದರು. ಆದ್ದರಿಂದ ಮಾಸ್ತರರು ಮುಂಜಾನೆ ಮತ್ತು ಮಧ್ಯಾಹ್ನ ಚಹಾ ಮಾಡಿಕೊಳ್ಳಲು ಶಾಲೆಯ ಒಂದು ಮೂಲೆಯಲ್ಲಿಯೇ ಮೂರು ಗುಂಡುಗಳನ್ನಿಟ್ಟು ಚಿಕ್ಕ ಬೊಗಣಿಯಲ್ಲಿ ಅಂದು ಧಾರಾಳವಾಗಿ ಸಿಗುವ ಕಟ್ಟಿಗೆಯ ತುಂಡು ತಂದು ಒಲೆ ಹಚ್ಚಿ ಚಹಾ ಮಾಡಿ ತನ್ನಲ್ಲಿಗೆ ಬಂದ ಊರ ಹಿರಿಯರಿಗೆ ಕೊಟ್ಟು ತಾವು ಕುಡಿಯುತ್ತಿದ್ದರು. ಊಟಕ್ಕೆ ಹೋದಂತೆ ದಿನಾಲು ಮುಂಜಾನೆ ಬೇರೆಯವರ ಮನೆಗೆ ಹೋಗಿ ಚಹಾ ಕುಡಿಯಲು ಇಷ್ಟವಿರಲಿಲ್ಲ. ಹೀಗೆ ಆ ಊರಿನ ಶಾಲೆಯ ಗುರುಗಳಾದ ನಾಗಪ್ಪ ಮಾಸ್ತರ ವಾಸ ಮಾಡುತ್ತಲೇ ಪಾಠ ಮಾಡುತ್ತಿದ್ದರು. ದಿನಾಲೂ ಪಾಠ ಹೇಳುವುದು, ಹೇಳಿದ ಪಾಠವನ್ನು ಮರುದಿನ ಓದಿಸುವುದು, ತಪ್ಪಿದ್ದಲ್ಲಿ ಹೊಡೆದು ಮತ್ತೊಮ್ಮೆ ಓದಲು ಹೇಳುತ್ತಿದ್ದರು. ನಂತರ ಪ್ರೀತಿಯಿಂದಲೇ ಕರೆದು ನಾಳೆ ಚೆನ್ನಾಗಿ ಓದಿಕೊಂಡು ಬರಬೇಕೆಂದು ಹೇಳುತ್ತಿದ್ದರು. ಅವರ ಪ್ರೀತಿಗೆ ಹುಡುಗರು ಹೆಚ್ಚಾಗಿ ಶಾಲೆ ತಪ್ಪಿಸುತ್ತಿರಲಿಲ್ಲ. ಮಾಸ್ತರರು ಕೇಳದಿದ್ದರೂ ಮನೆಯಲ್ಲಿ ಹಿರೇಮಠ ಅವರ ತಂದೆಯವರು ರಾತ್ರಿ ಪಾಠ ಓದಿಸುತ್ತಿದ್ದರು. ಮಗ್ಗಿ ಲೆಕ್ಕ ಮಾಡಿಸುತ್ತಿದ್ದರು. ಮಾಸ್ತರ್‌ರಿಗಿಂತಲೂ ಮನೆಯಲ್ಲಿ ತಂದೆಯವರ ಅಂಜಿಕೆ ಹಿರೇಮಠರಿಗೆ ಹೆಚ್ಚಾಗಿತ್ತು.

ಶಾಲೆಯ ಬಿಡುವಿನಲ್ಲಿ ಗೆಳೆಯರೊಂದಿಗೆ ಊರ ಹೊರಗಿನ ಯಲ್ಲಮ್ಮ ದೇವಿಯ ದೇವಾಲಯಕ್ಕೆ ಹೋಗಿ ನಮಸ್ಕರಿಸಿ ದೇವಾಲಯದ ಸುತ್ತಲೂ ಬೆಳೆದ ದೊಡ್ಡದಾದ ಆಲದ ಮರದ ಬೀಳಲು ಬಿಟ್ಟ ಬೇರುಗಳನ್ನು ಹಿಡಿದು ಜೋಕಾಲಿ ಆಡುತ್ತಿದ್ದರು. ನಂತರ ಗೆಳೆಯರೆಲ್ಲ ಸೇರಿ ಊರ ಸಮೀಪ ಹರಿಯುವ ದೊಡ್ಡದಾದ ಹಳ್ಳದ ಉಸುಕಿನಲ್ಲಿ ಕಬ್ಬಡ್ಡಿ, ಕುಸ್ತಿ ಆಡುವುದು ಸಾಮಾನ್ಯವಾಗಿತ್ತು. ಆಟವಾಡಿ ಸಾಕಾದ ಮೇಲೆ ಹಳ್ಳದಲ್ಲಿ ಹರಿಯುವ ನೀರಿನಲ್ಲಿ ಸ್ನಾನ ಮಾಡಿ ತೇಲಿ ಬಿದ್ದ ದೊಡ್ಡ ದೊಡ್ಡ ಶಂಖ, ಬಳಪದ ಕಲ್ಲುಗಳನ್ನು ಆರಿಸಿಕೊಂಡು ಬರುತ್ತಿದ್ದರು. ದಾರಿಯಲ್ಲಿ ಬೆಳೆದ ದೊಡ್ಡದಾದ ಹುಣಸೆ ಮರ ಹೂ ಬಿಟ್ಟು ಕಾಯಿಯಾದರೆ ಗೆಳೆಯರೆಲ್ಲ ಜೊತೆ ಬಿದ್ದು ಟೊಂಗೆ ಹಿಡಿದು ಜೋಕಾಲಿ ಆಡುವುದಲ್ಲದೆ, ಟೊಂಗೆಯ ಮುಖಾಂತರವೇ ಮರವನ್ನು ಹತ್ತಿ ಹುಣಸೆಕಾಯಿ ಹರಿದು ಮನೆಯಿಂದ ತೆಗೆದುಕೊಂಡ ಹೋದ ಉಪ್ಪಿನೊಂದಿಗೆ ಬೆರೆಸಿ ತಿನ್ನುತಿದ್ದರು. ಆಟ ಸಾಕಾದಾಗಲೂ ಇಲ್ಲವೆ ಮನೆಯವರು ಕರೆದಾಗಲೆ ಬರುತ್ತಿದ್ದರು. ಊರ ಸಮೀಪವಿದ್ದ ಹಾಳು ಬಾವಿಯ ಕಡೆಗೆ ಹೋಗಬಾರದೆಂದು ಹಿರಿಯರು ಹೇಳಿದರೂ ದಿನಾಲೂ ಹಳ್ಳಕ್ಕೆ ಹೋಗುವಾಗ ಮಧ್ಯ ಬರುವ ಹಾಳು ಬಾವಿಯನ್ನು ತಪ್ಪದೇ ಇಣುಕಿ ನೋಡುತ್ತಿದ್ದರು. ಯಾಕೆಂದರೆ ಹಾಳು ಬಾವಿಯ ನೀರಿನಲ್ಲಿ ಸದಾ ದೊಡ್ಡ ದೊಡ್ಡ ಹಾವುಗಳು ವಾಸವಾಗಿದ್ದವು. ಆದ್ದರಿಂದ ಜನರು ಆ ಕಡೆ ಹೋಗಲು ಹೆದರುತ್ತಿದ್ದರು. ಮಳೆಗಾಲದಲ್ಲಿ ಬಾವಿಯಲ್ಲಿ ಸಾಕಷ್ಟು ನೀರು ತುಂಬಿರುವುದರಿಂದ ಹಾವುಗಳು ಒಂದಕ್ಕೊಂದು ಸುತ್ತಿಕೊಂಡು ಸರಸವಾಡುತ್ತಿದ್ದವು. ಈ ಹೆಬ್ಬಾವುಗಳ ಸರಸಾಟವು ಒಂದು ತಾಸು, ಒಂದು ದಿನಕ್ಕೆ ಬಿಡುತ್ತಿರಲಿಲ್ಲ. ಹೀಗಾಗಿ ತಾಸುಗಟ್ಟಲೆ ಹುಡುಗರು, ಜನಗಳು ಕುತೂಹಲದಿಂದ ಬಾವಿಯ ಸುತ್ತ ನಿಂತು ನೋಡುತ್ತಿದ್ದರು. ಆದರೆ ಸರಸವಾಡುವ ಹಾವುಗಳಿಗೆ

ಕಲ್ಲಿನಿಂದ ಹೊಡೆಯುತ್ತಿರಲಿಲ್ಲ. ಹೊಡೆದರೆ ಸರಸವಾಡುವುದು ಬಿಟ್ಟು ಎಲ್ಲಿ ಬಂದು ಕಚ್ಚುತ್ತವೋ ಎಂಬ ಭಯ ಕಾಡುತ್ತಿತ್ತು.

ಶಾಲೆಯಲ್ಲಿ ಮಾಸ್ತರರಿಗೆ ಅಂಜದಿದ್ದರೆ ಮನೆಯಲ್ಲಿ ಅವರ ತಂದೆಯವರು ಏನು ಕೇಳುವರೊ, ತಪ್ಪಿದರೆ ಏಟು ಬೀಳುವವು ಎಂದು ತಪ್ಪದೆ ದಿನಾಲು ಓದು ಬರಹ ಮಾಡುತ್ತಿದ್ದರು. ಅವರ ಚಿಕ್ಕಪ್ಪ, ಚಿಕ್ಕಮ್ಮ ವಾರಿಗೆ ಹುಡುಗರೊಂದಿಗೆ ಯಲ್ಲಮ್ಮ ದೇವಾಲಯಕ್ಕೆ ಹೋಗುವುದಾಗಲಿ, ಹಳ್ಳದ ಉಸುಕಿನಲ್ಲಿ ಆಡುವುದಾಗಲಿ, ವಾರಿಗೆಯ ಗೆಳೆಯರೊಂದಿಗೆ ಜಗಳವಾಡಿರುವುದಾಗಲಿ ಎಂದೂ ತಂದೆಯವರಿಗೆ ಫಿರ್ಯಾದಿ ಹೇಳುತ್ತಿರಲಿಲ್ಲ. ಆದರೆ ದೊಡ್ಡವಳಾದ ಅಕ್ಕ ಕಮಲಮ್ಮ ಸಮಯ ಸಿಕ್ಕಾಗ ತಂದೆಯವರಿಗೆ ಹೇಳುತ್ತಿದ್ದಳು. ಏಕೆಂದರೆ ಹಿರೇಮಠರ ತಂದೆಯವರು ಊರಲ್ಲಿ ಇಲ್ಲದಾಗ ಅಕ್ಕನೊಂದಿಗೆ ಏನಾದರೂ ಬೇಡಿ ಜಗಳ ತೆಗೆಯುತ್ತಿದ್ದರು. ಇದರಿಂದ ಬೇಸತ್ತು ತಂದೆಯವರು ಬಂದಾಗ ತನಗೆ ಕಾಡಿಸಿ ಪೀಡಿಸಿದ್ದನ್ನು ತಿಳಿಸುತ್ತಿದ್ದಳು. ಹೀಗೆ ಊರಲ್ಲಿಯ ಎರಡನೆ ತರಗತಿಯನ್ನು ಉತ್ತೀರ್ಣರಾಗಿ ಪೇಠ ಗೋಗಿಯ ಸರಕಾರಿ ಪ್ರಾಥಮಿಕ ಶಾಲೆಗೆ ಮೂರನೆಯ ತರಗತಿಗೆ ಸೇರಿದರು.

ಪೇಠ ಗೋಗಿಯ ಚಂದಾ ಹುಸೇನ ದರ್ಗಾವು ಸಿಂಗನಹಳ್ಳಿಯಿಂದ ಸುಮಾರು ಎರಡು ಕಿ.ಮೀ. ದೂರದಲ್ಲಿದೆ. ಚಂದಾ ಹುಸೇನ್ ಒಬ್ಬ ಸೂಫಿ ಸಂತ. ಬಿಜಾಪೂರದ ಅದಿಲಶಾಹಿ ಆಳ್ವಿಕೆಯಲ್ಲಿ ಈ ಭಾಗ ಸೇರಿದ ಮೇಲೆ ಚಂದಾ ಹುಸೇನ್ ಇಲ್ಲಿ ಬಂದು ನೆಲೆಸಿದನಂತೆ. ಚಂದಾ ಹುಸೇನ್ ಗೋರಿಯ ಮುಂದೆ ಲಿಂಗ ಮುದ್ರೆಯ ದೊಡ್ಡ ಪಾಣಿಬಟ್ಟಲು ಇದ್ದು, ಇದು ಮೊದಲು ಸಂಗಮೇಶ್ವರ ದೇವಾಲಯವೆಂದು ಹೇಳಲು ಸಾಕ್ಷಿಯಾಗಿದೆ. ಸೂಫಿ ಸಂತನಾದ ಚಂದಾ ಹುಸೇನ್ ಮತ್ತು ಶರಣನಾದ ಸಂಗಯ್ಯನ ತಾತ್ವಿಕ ವಿಚಾರಗಳು ಒಂದೇ ಆಗಿದ್ದರಿಂದ ಇದೊಂದು ಭಾವೈಕ್ಯತೆಯ ಸಂಕೇತವಾಗಿ ಪ್ರತಿ ವರ್ಷ ಜಾತ್ರೆಯಾಗುವುದು. ಆಗ ಸಂಗಯ್ಯನಿಗೂ ಗಂಧ ಏರಿಸುವರು. ದಿನಾಲೂ ಭಕ್ತರು ಸಂಗಯ್ಯನ ಗದ್ದಿಗೆಗೆ ಕಾಯಿ ಒಡೆದು ಸಕ್ಕರೆ ಹಂಚುವರು. ದೇವಾಲಯದ ಮುಂದಿನ ಬಯಲಿನಲ್ಲಿ ದೊಡ್ಡ ಪುಷ್ಕರ್ಣಿ ನಿರ್ಮಿಸಲಾಗಿದೆ. ಸುತ್ತಲು ಪ್ರಕಾರದ ಗೋಡೆ ಕಟ್ಟಿಸಲಾಗಿದ್ದು, ದರ್ಗಾದ ಗೋಡೆಗೆ ಹೊಂದಿಕೊಂಡಂತೆ ಬಂದ ಜನರು ತಂಗಲು ಅಥವಾ ರಾಜನ ಪರಿವಾರದವರು ವಿಶ್ರಾಂತಿಗಾಗಿಯೇ ದೊಡ್ಡ ದೊಡ್ಡ ಗುಮ್ಮಟಗಳನ್ನು ಕಟ್ಟಿಸಿರುವರು. ಒಳಗಡೆ ಯಾವುದೇ ಗೋಡೆಯಾಗಲಿ, ಸಮಾಧಿಯಾಗಲಿ ಇಲ್ಲಿ ಇಂತಹ ಏಳೆಂಟು ಕೋಣೆಗಳಿಗೆ ಬಾಗಿಲು, ಕಿಟಕಿಗಳನ್ನು ಹಚ್ಚಿ ಶಾಲೆಯ ಕೋಣೆಗಳನ್ನಾಗಿ ಮಾಡಿರುವರು. ಈ ಕೋಣೆಗಳು ಸಾಲದಿದ್ದಾಗ ಮೂರನೇಯ ಮತ್ತು ನಾಲ್ಕನೇಯ ತರಗತಿಗಳನ್ನು ಮುದುಕಿ ಮನೆಯೆಂದು ಕರೆಯುವ ದೊಡ್ಡ ದೊಡ್ಡ ಕಂಬಗಳ ವಿಶಾಲ ಪಟಾಂಗಣದ ಹಳೆಯ ಕೋಣೆಯಲ್ಲಿ ತರಗತಿಗಳನ್ನು ನಡೆಸುತ್ತಿದ್ದರು. ಇಂತಹ ಕೋಣೆಗಳಲ್ಲಿ ವಿದ್ಯಾರ್ಥಿಗಳು ಕೂಡಲು ಬೆಂಚುಗಳನ್ನು ಮಾತ್ರ ಹೊಸದಾಗಿ ಮಾಡಿಸಿದ್ದರು. ಶಾಲೆಯ ಕಟ್ಟಡದ ಹಿಂದುಗಡೆ ವಿಶಾಲವಾದ ಆಟದ ಮೈದಾನವಿತ್ತು.

ಅದರ ಹಿಂದುಗಡೆಯಲ್ಲಿಯೇ ದೊಡ್ಡದಾದ ಕೆರೆಯ ಒಡ್ಡು ಇದ್ದು, ಅದನ್ನು ಹತ್ತಿ ನೋಡಿದರೆ ಅಪಾರವಾದ ನೀರಿನ ರಾಶಿಯೇ ಕಾಣುತ್ತಿತ್ತು. ಮಳೆ ಬಂದಾಗ ಕೆರೆಯು ತುಂಬಿಕೊಂಡಿ ಬಿಳುವುದರಿಂದ ಹುಡುಗರಿಗೆ ಕೆರೆ ಕಡೆಗೆ ಹೋಗಬಾರದೆಂದು ಎಚ್ಚರಿಸುತ್ತಿದ್ದರು. ಈ ದರ್ಗಾದ ಮುಂದೆಯೇ ಆಗ ಬಸ್ ನಿಲ್ದಾಣ ಇರುವುದರಿಂದ ಹೋಟೆಲ್‌ಗಳು ಮತ್ತು ಮಿಠಾಯಿ ಅಂಗಡಿಗಳು, ಹಣ್ಣು ಮಾರುವವರು, ಸಾದಾ ಜನಜಂಗುಳಿ ತುಂಬಿರುತ್ತಿತ್ತು. ದರ್ಗಾದ ಜಾತ್ರೆಯು ನಡೆದಾಗ ಶಾಲೆಗೆ ಮೂರು ದಿನ ರಜೆ ನೀಡುತ್ತಿದ್ದರು. ಜಾತ್ರೆಗೆ ಬಂದ ಯಾತ್ರಿಗಳೆಲ್ಲ ಶಾಲೆಯ ಕೋಣೆ ಮತ್ತು ಆವರಣದಲ್ಲಿಯೇ ವಾಸಿಸುತ್ತಿದ್ದರು.

ಶಾಲೆಯಲ್ಲಿ ದಿನಾಲೂ ಮುಂಜಾನೆ ೧೦.೩೦ ಗಂಟೆಗೆ ಸಾಲಾಗಿ ನಿಲ್ಲಿಸಿ ಜನಗಣಮನ ಪ್ರಾರ್ಥನೆ ಹಾಡಿಸುತ್ತಿದ್ದರು. ನಂತರ ಸಾಲಾಗಿ ತರಗತಿಗಳಿಗೆ ಹೋಗಲು ಸೂಚಿಸುತ್ತಿದ್ದರು. ಎನ್.ಡಿ.ಎಸ್. ಶಿಕ್ಷಕರು ದಿನಾಲೂ ಶಿಸ್ತು ಬದ್ಧವಾಗಿ ವಿದ್ಯಾರ್ಥಿಗಳಿಗೆ ನಿಲ್ಲಿಸಿ ಪ್ರಾರ್ಥನೆ ಮಾಡಿಸಿ ನಂತರ ಸೀಟಿ ಊದಿ ಸಾಲಾಗಿ ತರಗತಿಗೆ ಹೋಗಲು ಸೂಚನೆ ನೀಡುತ್ತಿದ್ದರು. ಮೂರನೆ ಓದುವಾಗ ಗುಂಡಪ್ಪ ಮಾಸ್ತರರು ಕನ್ನಡ, ಇತಿಹಾಸ ಹೇಳುತ್ತಿದ್ದರು. ದಿನಾಲೂ ಹೇಳಿದ ಪಾಠವನ್ನು ಶುದ್ಧ ಬರಹ ತಪ್ಪದೆ ಬರೆದು ತಂದು ತೋರಿಸಲು ಸೂಚಿಸುತ್ತಿದ್ದರು. ಗಣಿತವನ್ನು ಕಲಿಸುವ ಗೋಪಾಲ ಕೃಷ್ಣ ಮಾಸ್ತರರು ಲೆಕ್ಕದಲ್ಲಿ ತಪ್ಪಿದ್ದರೆ ಕರೆದು ಪೆನ್ಸಿಲ್ ಎರಡು ಬೆರಳಿನ ಮಧ್ಯೆ ಇಟ್ಟು ಒತ್ತಿ ಹಿಡಿದು ನೋವಿನಿಂದ ಚಡಪಡಿಸಿದಾಗ ಬಿಡುತ್ತಿದ್ದರು. ಇಲ್ಲವೇ ತೋಳನ್ನು ಹಿಡಿದು ನೋವಾಗುವಂತೆ ಚಿವುಟುತಿದ್ದರು. ಗಣಿತ ಮತ್ತು ವಿಜ್ಞಾನದಲ್ಲಿ ಓದಲು ಬರೆಯಲು ತಪ್ಪಿದರೆ ಪೆನ್ಸಿಲ್ ಇಲ್ಲವೇ ಚಿವುಟುವ ಶಿಕ್ಷೆ ಖಾಯಂ ಆಗಿರುತ್ತಿತ್ತು. ಅದಕ್ಕಾಗಿ ಅವರ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸರಿಯಾಗಿ ಲೆಕ್ಕ, ವಿಜ್ಞಾನದ ವಿಷಯವನ್ನು ಓದಿ ಬರೆದುಕೊಂಡೇ ಹೋಗುತ್ತಿದ್ದರು. ಇನ್ನೊಬ್ಬರು ತಮ್ಮಣ್ಣ ಮಾಸ್ತರರು ಇಚಲು ಚಬರಿ ಕೈಯಲ್ಲಿ ಹಿಡಿದುಕೊಂಡೇ ತರಗತಿಗೆ ಬರುತ್ತಿದ್ದರು. ತಪ್ಪಿದ್ದಲ್ಲಿ ಕೈ ಮುಂದೆ ಚಾಚಿ ಇಚಲ ಚಬರಿಯಿಂದ ಹೊಡೆಯುತ್ತಿದ್ದರು. ಅಂದಿನ ಶಿಕ್ಷಕರು ವಿದ್ಯಾರ್ಥಿಗಳ ಕಲಿಕೆಗಾಗಿ ಶಿಕ್ಷಿಸುತ್ತಿದ್ದರೆ ವಿನಾಃ ತರಗತಿ ಮುಗಿದ ಮೇಲೆ ಪ್ರೀತಿಯಿಂದ ಮಾತಾಡುತ್ತಿದ್ದರು. ವಿದ್ಯಾರ್ಥಿಗಳ ಯಶಸ್ಸಿಗಾಗಿ ಸದಾ ಚಿಂತಿಸುತ್ತಿದ್ದರು. ಧೋತಿ, ಕಮೀಜ್, ಅಂಗಿ ತಲೆಯ ಮೇಲೆ ಗಾಂಧೀ ಟೋಪಿ ಧರಿಸುವ ಸರಳ ಜೀವಿಗಳು. ಕಪಟ ವಂಚನೆಯನ್ನು ಅರಿಯದೇ ತಮ್ಮಲ್ಲಿಗೆ ಬರುವ ಎಲ್ಲಾ ಮಕ್ಕಳು ಓದಿ ಜಾಣರಾಗಬೇಕೆಂಬ ಉದ್ದೇಶದಿಂದ ಶಿಕ್ಷೆ ನೀಡುತ್ತಿದ್ದರೆ ಹೊರತು, ಶಾಲೆಯಲ್ಲಿ ಇಂತಹ ಶಿಕ್ಷೆಗಳನ್ನು ಅನುಭವಿಸಿದರು ಹಿರೇಮಠರಲ್ಲಿ ಶಾಲೆ ಬಿಟ್ಟಾಗ ತುಂಟಾಟ ಮಾಡುವುದಕ್ಕೆ ಕೊರತೆಯಿರಲಿಲ್ಲ. ದಿನಾಲು ಅವರು ಊರಿನಿಂದ ಬರುವ ವಿದ್ಯಾರ್ಥಿಗಳಲ್ಲಿ ಅರಿಕೇರಿ ಪರಮಣ್ಣ, ಬಾಚವಾರ ಬಸವರಾಜ ಇವರ ಸಹ ಪಾಠಿಗಳಾಗಿದ್ದರು. ಶಾಲೆಯಿಂದ ಮನೆಗೆ ಬಂದರೂ ಸುಮ್ಮನೆ ಕೂಡುವವರಲ್ಲ. ಊಟ ಮಾಡಿದ ಮೇಲೆ ಮತ್ತೆ ಗೆಳೆಯರೊಂದಿಗೆ ಕೂಡಿ ಕುಂಟಾಟ, ಚೆಂಡು, ಬಗರಿ, ಕಬ್ಬಡ್ಡಿ ಆಡುವುದು ಸಾಮಾನ್ಯವಾಗಿತ್ತು. ಊರಲ್ಲಿ ದೊಡ್ಡಾಟದ ಬೈಟಕಗಳಿಗೆ ಅವರ ಚಿಕ್ಕಪ್ಪನೊಂದಿಗೆ ಹೋಗಿ ನೋಡುತ್ತಿದ್ದರು.

ಬಯಲಾಟದಲ್ಲಿ ಹಾಡುವ ಹಾಡುಗಾರಿಕೆ, ಹಾಡುವ ತಾಳ, ಕುಣಿಯುವ ಬಯಲಾಟ ಹೆಜ್ಜೆಗಳನ್ನು ನೋಡಿ ಮನೆಯಲ್ಲಿ ಹಾಗೆಯೇ ಹಾಡಲು, ಕುಣಿಯಲು ಕಲಿಯುತ್ತಿದ್ದರು. ಚಿಕ್ಕಪ್ಪನಂತು ಬಿಡುವಿದ್ದಾಗ ಮನೆಯಲ್ಲಿದ್ದ ತಾಳ, ಮದ್ದಲಿ ಬಾರಿಸಿ ಇವರಿಗೆ ಕುಣಿಸುತ್ತಿದ್ದರು. ಹಿರೇಮಠರು ನಾಲ್ಕನೇ ತರಗತಿಯಲ್ಲಿ ಓದುವಾಗಲೇ ಅವರ ಚಿಕ್ಕಪ್ಪನ ಮಗ ಮಲ್ಲಯ್ಯನು ಒಂದು ತರಗತಿ ಹಿಂದಿದ್ದನು. ಆ ವರ್ಷ ಊರಲ್ಲಿ ಆಡುವ ಶ್ರೀದೇವಿ ಮಹಾತ್ಮೆ ದೊಡ್ಡಾಟದಲ್ಲಿ ಅಣ್ಣ-ತಮ್ಮರಿಬ್ಬರಿಗೂ ಮೊದಲಿಗೆ ಬರುವ ಗಣಪತಿಯ ಪಾತ್ರವನ್ನು ನೀಡಲಾಗಿತ್ತು. ಆಟದಲ್ಲಿ ಪಾತ್ರವಹಿಸಿದ ಮೇಲೆ ಊರಲ್ಲಿ ನಡೆಯುವ ಬೈಠಕ್ಕಿಗೆ ತಪ್ಪದೇ ಹೋಗಿ ಕುಣಿದು ಬಾಯಿ ಪಾಠ ಮಾಡಿದ ಮಾತುಗಳನ್ನು ಹಾವಭಾವದಿಂದ ಹೇಳುತ್ತಿದ್ದರು.

ಧಿತ್ತಿತ್ತೆ ಥೈ ಥೈ ಥೈ ದಿನ್ನತೆ ತಗಧಿನ್

ತೋಂ ತತ್ ಜಣತಾ !

ತೈಧೀಂ ತತ್ ಜಣತಾ

ತಾಳಕ್ಕೆ ತಕ್ಕ ಹೆಜ್ಜೆ ಹಾಕಿ ಕುಣಿಯುತ್ತಿದ್ದರು. ಅಂದಿನ ದೊಡ್ಡಾಟದಲ್ಲಿ ಇವರ ಪಾತ್ರವನ್ನು ನೋಡಿದವರು ಮೆಚ್ಚಿಕೊಂಡರು. ಊರಿನ ದೊಡ್ಡಾಟದ ಪ್ರದರ್ಶನದ ಇತಿಹಾಸದಲ್ಲಿ ಅಣ್ಣ-ತಮ್ಮರು ಗಣಪತಿಗಳಾಗಿ ಪಾತ್ರ ವಹಿಸಿರಲಿಲ್ಲ. ಇವರೇ ಪ್ರಥಮವಾಗಿ ಅಣ್ಣ-ತಮ್ಮರಿಬ್ಬರು ಪಾತ್ರವಹಿಸಿ ಇತಿಹಾಸ ನಿರ್ಮಿಸದರೆಂದು ಜನರು ಇಂದಿಗೂ ಹೇಳುವರು.

ಸಿಂಗನಹಳ್ಳಿಯಲ್ಲಿ ದೊಡ್ಡಾಟ, ತುಂಟಾಟ ಮಾಡುತ್ತಲೆ ನಾಲ್ಕನೆ ತರಗತಿ ತೇರ್ಗಡೆಯಾದರು. ಚಿಕ್ಕವನಿದ್ದ ಹಿರೇಮಠರಿಗೆ ದಿನಾಲು ಮಳೆ ಚಳಿಯಲ್ಲಿ ಪೇಠ ಗೋಗಿ ಶಾಲೆಗೆ ಹೋಗುವುದು ನೋಡಿದ್ದ ಅವರ ದೊಡ್ಡಮ್ಮ ತಮ್ಮ ಊರಾದ ಬೋನಾಳದಲ್ಲಿ ಅದೇ ವರ್ಷ ಐದನೇ ತರಗತಿ ಪ್ರಾರಂಭವಾಗಿ ಶಾಲೆಗೆ ಓದಲು ಕರೆಯಿಸಿಕೊಂಡರು. ಶರಬಮ್ಮನವರ ಎರಡನೇ ಮಗ ಸಂಗಯ್ಯ ಸ್ವಾಮಿಯವರು ವ್ಯವಹಾರ ಚತುರರಾಗಿದ್ದರು. ಒಕ್ಕಲುತನ ಮಾಡಿಸುತ್ತಲೇ ಊರಲ್ಲಿ ಕಿರಾಣಿ ಅಂಗಡಿ ಹಾಗೂ ಹೋಟೆಲ್ ನಡೆಸುತ್ತಿದ್ದರು. ಊರಿನ ಎಲ್ಲಾ ಕಾರ್ಯಗಳಲ್ಲಿ ಭಾಗಿಯಾಗುವುದರಿಂದ ಊರಿನ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿದ್ದರು. ಅವರ ಮನೆಯಲ್ಲಿದ್ದರೆ ಓದುವುದಕ್ಕೆ ಯಾವ ತೊಂದರೆ ಇಲ್ಲವೆಂದು ಹಿರೇಮಠರ ತಂದೆಯವರು ಅಲ್ಲಿಗೆ ಕಳುಹಿಸಿದರು.

ಬೋನಾಳ ತಾಲ್ಲೂಕು ಕೇಂದ್ರವಾದ ಸುರಪೂರದಿಂದ ಎಂಟು ಕಿ.ಮೀ. ದೂರದಲ್ಲಿದ್ದು, ಊರಿಗೆ ರಸ್ತೆಯಾಗಲಿ, ಬಸ್ಸಾಗಲಿ ಇರಲಿಲ್ಲ. ಬಂಡಿ ದಾರಿಯಿಂದಲೇ ಸುರಪೂರಕ್ಕೆ ಬರುತ್ತಿದ್ದರು. ಗುಡ್ಡದ ಮೇಲೆ ಊರು ಕಟ್ಟಿದ್ದರಿಂದ ದೂರದಿಂದಲೇ ಊರಿನ ಮನೆಗಳು ಕಣ್ಣಿಗೆ ಕಾಣಿಸುತ್ತಿದ್ದವು. ಊರು ಗುಡ್ಡದ ಮೇಲೆ ಕಟ್ಟಲು ಕಾರಣವೆಂದರೆ ಊರಿಗೆ ಹೊಂದಿಕೊಂಡಿರುವ ಗುಡ್ಡಕ್ಕೂ ಅದರ

ಸಮೀಪದಲ್ಲಿರುವ ಮತ್ತೊಂದು ಗುಡ್ಡಕ್ಕೂ ನಡುವೆ ಕಲ್ಲು ಮಣ್ಣಿನ ದೊಡ್ಡ ಒಡ್ಡು ಹಾಕಿ ಕೆರೆ ಕಟ್ಟಲಾಗಿತ್ತು. ಬೋನಾಳದ ಈ ಕೆರೆ ಇಡೀ ಕರ್ನಾಟಕ ರಾಜ್ಯದಲ್ಲಿಯೇ ದೊಡ್ಡ ಕೆರೆಯೆಂದು ಪ್ರಸಿದ್ಧವಾಗಿದೆ. ಈ ಕೆರೆಗೆ ನೀರು ತುಂಬಿ ಒಡ್ಡು ಒಡೆದರೆ ಮುಂದಿನ ಊರುಗಳಾದ ಬೋನಾಳ, ಮಂಗಿಹಾಳ, ಗೋನಹಾಳ, ಹಾವಿನಹಾಳ, ಹಂದರಹಾಳ, ಕೋನಾಳ ಈ ಊರುಗಳೆಲ್ಲ ನೀರಿನಲ್ಲಿ ಕೊಚ್ಚಿ ಹೋಗುವುದೆಂದು ಬೋನಾಳದ ಹಿಂದಿನ ಹಿರಿಯರು ಸಮೀಪದ ಕಲ್ಲು ಗುಡ್ಡದಲ್ಲಿ ನೆಲೆಸಿದರು. ಗುಡ್ಡದ ದೊಡ್ಡ ಹಾಸು ಬಂಡೆಗಳ ಮೇಲೆ ಬುನಾದಿ ಇಲ್ಲದೆ ದೊಡ್ಡ ಮನೆಗಳನ್ನು ಕಟ್ಟಿ ವಾಸವಾಗಿರುವರು. ಅನೇಕರು ಗುಡ್ಡದ ಕಲ್ಲನ್ನೇ ಗೋಡೆ ಮಾಡಿಕೊಂಡು ಮನೆ ಕಟ್ಟಿರುವರು. ಕಲ್ಲು ಗುಂಡು ಉರುಳಿದರೆ ಮನೆಯವರು ಮತ್ತು ಅವರ ಕೆಳಗಿನವರು ಸಾಯುವುದಿಲ್ಲವೆಂದು ಕೇಳಿದರೆ, ಬಹಳದಿನಗಳಿಂದಲೂ ಹೀಗೆಯೇ ಬಂದಿರುವೆವು. ಏನೂ ಆಗಿಲ್ಲವೆಂದು ಸಹಜವಾಗಿಯೇ ಉತ್ತರಿಸುವರು. ಊರಲ್ಲಿ ದಾರಿಗಳು ಕೂಡ ದೊಡ್ಡ ದೊಡ್ಡ ಕಲ್ಲುಗಳಿಂದಲೇ ಕೂಡಿದ್ದವು. ಎರೆಯ ಸಪಟಾದ ನೆಲದಲ್ಲಿ ತಿರುಗಾಡಿದ ಹಿರೇಮಠರಿಗೆ ಕಲ್ಲಿನ ದಾರಿಯಲ್ಲಿ ಕಾಲು ಎತ್ತಿ ಇಡದೆ ಎಡವಿ ಬೊಟ್ಟು ಒಡೆದುಕೊಳ್ಳುವುದು ಸಾಮಾನ್ಯವಾಗಿತ್ತು.

ಬೋನಾಳದಲ್ಲಿ ಪ್ರತಿ ವರ್ಷ ಮೊಹರಂ ಹಬ್ಬ ಜೋರಾಗಿ ಆಗುತ್ತಿತ್ತು. ಸುತ್ತಲಿನ ಹಳ್ಳಿಯ ಜನರು ಬೋನಾಳದ ಮೊಹರಂ ಕುಣಿತ ನೋಡಲು ಬರುತ್ತಿದ್ದರು. ಹಿರೇಮಠರ ದೊಡ್ಡಮನ ಹಿರಿಯ ಮಗ ಮಲ್ಲೇಶಯ್ಯ ಮೊಹರಂ ಲಾವಣಿ ಹಾಡುಗಳಲ್ಲಿ ಪ್ರಸಿದ್ಧನಾಗಿದ್ದನು. ಬೋನಾಳದ ಮೊಹರಂ ಕಲಾವಿದರು ಸಮವಸ್ತ್ರ ತೊಟ್ಟು ಕೈಯಲ್ಲಿ ಬಣ್ಣದ ಕೋಲು ಹಿಡಿದು ದಸ್ತಿ ಬೀಸುತ್ತಾ ಹಲಗೆಯ ಗತ್ತಿಗೆ ತಕ್ಕಂತೆ ಹೆಜ್ಜೆ ಹಾಕುತ್ತಿದ್ದರು. ಹೆಜ್ಜೆ ಹಾಕುತ್ತಲೆ ಜಾಳಿಗೆ ಹೆಣೆಯುವುದು ಆಕರ್ಷಕವಾಗಿತ್ತು. ಊರಲ್ಲಿ ಮೂರು ವರ್ಷಕ್ಕೊಂದು ಸಲ ದೇವಿಯ ಉತ್ಸವ ನಡೆಯುತ್ತಿತ್ತು. ದೇವಿಗೆ ಹೊಸ ಬಣ್ಣ ಮಾಡಿ ರಥದ ಮೇಲೆ ಕುಳ್ಳಿರಿಸಿ ಊರಲ್ಲಿ ಮೆರವಣಿಗೆ ಮಾಡಿ ಮತ್ತೆ ದೇವಾಲಯಕ್ಕೆ ಬಂದ ಮೇಲೆ ದೇವತೆಗೆ ಬಿಟ್ಟ ಹರಕೆಯ ಕೋಣ, ಕುರಿಗಳನ್ನು ಬಲಿ ಕೊಡುತ್ತಿದ್ದರು. ಪ್ರತಿ ವರ್ಷ ಬೋನಾಳದ ಕಲಾವಿದರು ಇಂತಹ ಜಾತ್ರೆಗಳಲ್ಲಿ ನಾಟಕ ಆಡುತ್ತಿದ್ದರು. ಸಂಗೀತದ ಮಾಸ್ತರರು, ತಬಲಾವಾದಕರು ಮುಂತಾದ ಪ್ರಾವಿಣ್ಯ ಗಳಿಸಿದ ಕಲಾವಿದರು ಬೋನಾಳದಲ್ಲಿಯೇ ಇದ್ದರು.

ಬೋನಾಳದಲ್ಲಿ ಯುಗಾದಿ ಹಬ್ಬ ಸಂಭ್ರಮದಿಂದ ಆಚರಿಸುತ್ತಿದ್ದರು. ಊರ ಜನರೆಲ್ಲ ಬೇವು ಕುಡಿದ ಮೇಲೆ ಯುವಕರೆಲ್ಲ ಅಗಸಿಯಲ್ಲಿ ಸೇರಿ ಬೇಟೆಗೆ ಹೋಗಲು ಸಿದ್ಧರಾಗುತ್ತಿದ್ದರು. ಗೆಳೆಯರೊಂದಿಗೆ ಹಿರೇಮಠರು ಬೇಟೆಗೆ ಹೋಗುತ್ತಿದ್ದರು. ಬೇಟೆ ಆಡುವುದು, ಗುಡ್ಡದಲ್ಲಿ ಜೇನು ಹೊಡೆಯುವುದು, ಗುಡ್ಡದ ಬಂಡೆಯ ಮೇಲೆ ಹೆಸರು ಕೆತ್ತುವುದು ಮುಂತಾದ ಸಾಹಸದ ಕೆಲಸಗಳಲ್ಲಿ ಭಾಗವಹಿಸಿದ ಹಿರೇಮಠರು ಬೋನಾಳದ ಶಾಲೆ ಕಲಿಯುವುದರೊಂದಿಗೆ ಗಟ್ಟಿಗರಾಗಿ ಹೋರಾಡಲು ಅಲ್ಲಿಯ ಈ ಪರಿಸರವು ಅವರಿಗೆ ಕಲಿಸಿಕೊಟ್ಟಿತು.

ಬೋನಾಳದ ಶಾಲೆಯಲ್ಲಿ ಆಗ ಸುರಪೂರದ ತಿಪ್ಪಣ್ಣ ಕಟ್ಟಿಮನಿ ಮುಖ್ಯ ಗುರುಗಳಾಗಿದ್ದರು. ಅವರು ಪ್ರತಿಭಾನ್ವಿತರಲ್ಲದೆ ಕ್ರೀಡಾಪಟುಗಳಾಗಿದ್ದರು. ಶಾಲೆಗೆ ಬರುವ ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರತಿಭೆಯನ್ನು ಗುರುತಿಸಿ ಅವರಿಗೆ ಬೆಳೆಯಲು ಪ್ರೋತ್ಸಾಹ ನೀಡುತ್ತಿದ್ದರು. ಅವರು ಹೇಳುವ ಪಾಠಗಳು ಸ್ವತಃ ಕಬಡ್ಡಿ, ವಾಲಿಬಾಲ್ ಆಡಿ ತೋರಿಸುವ ಆಟಗಳು ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರಿದವು. ಹೊಸದಾಗಿ ಸೇರಿದ ಹಿರೇಮಠರಿಗೆ ಪ್ರೀತಿಯಿಂದ ಕರೆದು ಓದು ಬರಹದ ಬಗ್ಗೆ ವಿಚಾರಿಸುತ್ತಿದ್ದರು. ಬರುಬರುತ್ತ ಆತ್ಮೀಯರಾಗಿ ಹಿರೇಮಠರನ್ನು ಶಾಲೆಯಲ್ಲಿಯೇ ಇದ್ದು ಓದಲು ಕರೆಯಿಸಿಕೊಂಡರು. ಅವರ ಜೊತೆಗೆ ರಾತ್ರಿ ಓದಲು ಅನೇಕ ಜನ ಸಹಪಾಠಿಗಳು ಶಾಲೆಗೆ ಬರುತ್ತಿದ್ದರು.

ಐದನೇ ಮುಗಿಸಿ ಆರನೇ ಓದುವಾಗ ಸಮೀಪದ ವಾಗಿಣಿಗೇರೆ ಕೋಟೆಗೆ ಎಲ್ಲಾ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಅದರ ಗತ ಇತಿಹಾಸವನ್ನು ತಿಳಿಸಿದರು. ಮರುದಿನ ಶಾಲೆಯಲ್ಲಿ ನೀವು ನೋಡಿದ ವಾಗಿಣಿಗೇರೆ ಕೋಟೆಯ ಪ್ರವಾಸದ ಕುರಿತು ಪ್ರಬಂಧ ಬರೆಯಿರಿ ಎಂದು ಹೇಳಿದರು. ಹಿರೇಮಠರು ಪ್ರಬಂಧ ಬರೆದು ಮರುದಿನ ತೋರಿಸಿದಾಗ ಅದನ್ನು ಓದಿ ಮೆಚ್ಚುಗೆಯಿಂದ ಬೆನ್ನು ತಟ್ಟಿ ತರಗತಿಯಲ್ಲಿ ಅವರಿಂದಲೇ ಓದಿಸಿದರು. ಹೀಗೆ ಕವಿತೆ, ಪ್ರಬಂಧ ಬರೆಯಲು ಪ್ರೇರಣೆ ನೀಡಿದರು. ಹಿರೇಮಠರು ಆಗ ಬರೆದ ಯಾವುದೇ ಬರಹವನ್ನು ಸರ್‌ಗೆ ತೋರಿಸುತ್ತಿದ್ದರು. ಪ್ರತಿ ವರ್ಷ ಬರುವ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವಗಳಲ್ಲಿ ಶಾಲೆಯಿಂದ ಆಟ, ಪ್ರಬಂಧ, ಭಾಷಣ ಸ್ಪರ್ಧೆಗಳು ನಡೆಯುತ್ತಿದ್ದವು.

ಏಳನೇ ತರಗತಿಗೆ ಬಂದಾಗ ಆ ವರ್ಷದ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಸಾಮಾಜಿಕ ಕಿರುನಾಟಕ ಪ್ರದರ್ಶನ ಮಾಡಲು ಹೇಳಿದರು. ಸ್ವತಃ ತಿಪ್ಪಣ್ಣ ಮಾಸ್ತರರೇ ಪಾತ್ರಗಳನ್ನು ಹಂಚಿದರು. ಆಗ ಮಹಿಳೆಯ ಪಾತ್ರ ಮಾಡಲು ಯಾರೂ ಮುಂದೆ ಬರದಿದ್ದಾಗ ಹಿರೇಮಠರಿಗೆ ಸೂಚಿಸಿದರು. ಹಿರೇಮಠರು ಪುರುಷ ಪಾತ್ರ ಬೇಕೆಂದು ಹಟ ಹಿಡಿದಾಗ ನೀನಾದರೇ ಈ ಪಾತ್ರಕ್ಕೆ ರಂಗು ಬರುವುದು. ಬೇಗ ಮಾತು ಕಲಿತು ಪ್ರ್ಯಾಕ್ಟಿಸ್ ಮಾಡಿರೆಂದು ಆದೇಶಿಸಿದರು. ಆ ನಾಟಕದಲ್ಲಿ ಗಂಡಿಗೆ ಸವಾಲು ಹಾಕುವ ವೈಯಾರಿ ಹೆಣ್ಣಿನ ಪಾತ್ರವಾಗಿತ್ತು. ಶಾಲೆಯಲ್ಲಿಯೇ ದಿನಾಲೂ ರಾತ್ರಿ ಪ್ರ್ಯಾಕ್ಟಿಸ್ ಮಾಡಿಸಲಾಯಿತು. ಊರ ಮುಂದಿನ ಅಗಸಿಯ ಬಯಲಿನಲ್ಲಿ ಪ್ರದರ್ಶನಕ್ಕೆ ಸ್ಟೇಜು ಹಾಕಲಾಯಿತು. ಹೆಣ್ಣಿನ ಪಾತ್ರಕ್ಕೆ ಬೇಕಾಗುವ ಸೀರೆ, ಲಂಗ, ಕುಪ್ಪಸ ಹಾಗೂ ಜಡಿ ಕಟ್ಟಲು ದೊರೆಯುವ ಕೂದಲು ಚೌರಿಯನ್ನು ಹುಡುಗಿಯರಿಂದ ಪಡೆದುಕೊಂಡರು. ಆದರೆ ಊರಲ್ಲಿ ಬಳೆ ಹಾಕುವವರೇ ಇರಲಿಲ್ಲ. ಅದಕ್ಕಾಗಿ ಸಮೀಪದ ಅಮ್ಮಾಪೂರದಿಂದ ಬಳೆಗಾರರನ್ನು ಕರೆಯಿಸಿ ಮಧ್ಯಾಹ್ನದಲ್ಲಿಯೇ ಬಳೆ ಹಾಕಿಸಿದರು. ಸಂಜೆ ನಾಟಕದವರೆಗೂ ಬಳೆ ಕಾಣದಂತೆ ಅಂಗಿಯ ತೋಳನ್ನು ಮುಚ್ಚಿ ತಿರುಗುವುದು ಹಿರೇಮಠರಿಗೆ ಹೊಸ ಅನುಭವವೇ ಆಗಿತ್ತು. ರಾತ್ರಿ ಎಲ್ಲಾ

ಸಾಮಾನುಗಳನ್ನು ಚೀಲದಲ್ಲಿಟ್ಟುಕೊಂಡು ೯.೩೦ ಗಂಟೆಗೆ ಸ್ಟೇಜಿನಲ್ಲಿರಲು ಎಲ್ಲಾ ಪಾತ್ರಧಾರಿಗಳಿಗೆ ಸೂಚಿಸಿದ್ದರು. ಹಿರೇಮಠರು ಹೋದ ಕೂಡಲೆ ಒಂದು ಕಡೆ ಬ್ಯಾಗನ್ನಿಟ್ಟು ಬಣ್ಣ ಬಳಿದುಕೊಳ್ಳಲು ಕೂಡಿಸಿದರು. ಮುಖಕ್ಕೆ ಬಣ್ಣ ಬಳಿದ ಮೇಲೆ ಮಾಸ್ತರರು ಅವರೇ ಖುದ್ದಾಗಿ ಸೀರೆ ಉಡಿಸಿ, ಕುಪ್ಪಸ ತೊಡಿಸಿ, ತಲೆಗೆ ಚೌರಿ ಹಾಕಿ ಹೆಣಲು ಹಿಂದೆ ಮುಂದೆ ಬಿಟ್ಟು ಹೂವಿನ ಹಾರ ಕಟ್ಟಿ ನಡುವಿಗೆ ಡಾಬು ಸರಿದಾಡುವ ಬಳೆ, ಎದೆಯ ಮೇಲೆ ತೂಗಾಡುವ ಬಂಗಾರದ ಸರ ಹಾಕಿ ಕೈಗೆ ವಾಚು ಕಟ್ಟಿ, ಕಣ್ಣಿಗೆ ಕನ್ನಡಕ ಹಚ್ಚಿ, ಒಂದು ಕೈಯಲ್ಲಿ ಸಣ್ಣ ಪರ್ಸ್ ಇನ್ನೊಂದು ಕೈಯಲ್ಲಿ ಕರವಸ್ತ್ರ ಕೊಟ್ಟು ಕನ್ನಡಿಯ ಮುಂದೆ ನಿಲ್ಲಿಸಿದಾಗ ವೇಷ ನೋಡಿ ಹಿರೇಮಠರಿಗೆ ಅಚ್ಚರಿ ಮೂಡಿತು. ಸಹಪಾಠಿಗಳಂತೂ ಹತ್ತಿರ ಬಂದು ಚೇಷ್ಟೆ ಮಾಡುವುದನ್ನು ನೋಡಿ ಸರ್ ಅವರೇ ಗದರಿಸಿದರು. ಒಂದು ಕಡೆ ಕುರ್ಚಿ ಹಾಕಿ ಕೂಡಿಸಿ ಅವರ ಪ್ರವೇಶ ಬಂದಾಗ ಬರಲು ಸೂಚನೆ ನೀಡುವುದಾಗಿ ತಿಳಿಸಿದರು. ಶಾಲೆಯಲ್ಲಿ ಧಿಮಾಕು ಮಾಡುವ ಹಿರೇಮಠರಿಗೆ ನಾಟಕದಲ್ಲಿ ಹೆಣ್ಣಿನ ಪಾತ್ರ ಮಾಡುವುದು ಒಂದು ಸವಾಲೆ ಆಗಿತ್ತು. ಅಂದು ಹಿರೇಮಠರು ವಯ್ಯಾರದಿಂದ ಅಭಿನಯಿಸಿ ಪ್ರೇಮಿಯೊಂದಿಗೆ ಹಾಡುವ ಸರಸರದ ಹಾಡು ನೋಡುಗರ ಮೆಚ್ಚುಗೆಗೆ ಪಾತ್ರರಾಗಿ ಸಿಳ್ಳೆ ಹೊಡೆದು ಕೇಕೇ ಹಾಕಿ ಎರಡೆರಡು ಸಲ ಹಾಡಿಸಿದರು. ನಾಟಕ ಯಶಸ್ವಿಯಾಗಿ ಪ್ರಯೋಗವಾಯಿತು ಬೋನಾಳದಲ್ಲಿ ಆಟ, ನಾಟಕ ಮಾಡುತ್ತಲೇ ಏಳನೆಯದು ಪಾಸಾದರು.

ಮುಂದೆ ಸುರಪೂರದ ಪ್ರೌಢ ಶಾಲೆಗೆ ಸೇರಿಸಲು ಅಣ್ಣ ಸಂಗಯ್ಯನವರು ಹಾಗೂ ತಿಪ್ಪಣ್ಣ ಕಟ್ಟಿಮನಿ ಸರ್ ಅವರು ಹೇಳಿದರು. ಹಿರೇಮಠರ ತಂದೆಯವರು ಸುರಪೂರದಲ್ಲಿ ಬಿಡಲು ಮನಸ್ಸಾಗದೆ ಈಗ ದೊಡ್ಡವನಾಗಿರುವನು. ನಮ್ಮೂರ ಸಮೀಪದ ಗೋಗಿಯ ಸರಕಾರಿ ಪ್ರೌಢ ಶಾಲೆಯಲ್ಲಿ ಹಚ್ಚಿದರೆ ಓದುವನೆಂದು ಕರೆದುಕೊಂಡು ಬಂದು ಗೋಗಿಯ ಶಾಲೆಗೆ ಸೇರಿಸಿದರು. ಸಿಂಗನಹಳ್ಳಿಯಲ್ಲಿ ಆ ವರ್ಷ ಹಿರೇಮಠರೊಂದಿಗೆ ಇನ್ನೂ ನಾಲ್ಕು ಜನ ಹಳೆ ಗೆಳೆಯರಾದ ಪರಮಣ್ಣ, ಬಸವರಾಜರೊಂದಿಗೆ ಬಾಪುಗೌಡ ಹೊಸಮನಿ, ಮಲ್ಲಣ್ಣ ಅರಿಕೇರಿ ಜೊತೆಯಾಗಿದ್ದರು. ಐದು ಜನರು ದಿನಾಲೂ ಮನೆಯಿಂದ ಬುತ್ತಿ ಕಟ್ಟಿಕೊಂಡು ಗೋಗಿ ಶಾಲೆಗೆ ಬರುತ್ತಿದ್ದರು. ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಗೋಗಿಯ ದರ್ಗಾದಲ್ಲಿ ಕುಳಿತು ತಂದ ಬುತ್ತಿಯನ್ನು ಬಿಚ್ಚಿ ಊಟ ಮಾಡುತ್ತಿದ್ದರು. ಆಗ ಹುಡೇದ ತಿಪ್ಪಣ್ಣನವರು ಗಣಿತ ಹೇಳಿದರೆ, ಶಂಕರ ಭಟ್ಟ ಅವರು ಕನ್ನಡ ಹೇಳುತ್ತಿದ್ದರು. ಪಾಟೀಲ್ ಸರ್ ಅವರು ಇಂಗ್ಲೀಷ್ ಹೇಳುತ್ತಿದ್ದರು. ಷಣ್ಮುಖಯ್ಯನವರು ಇತಿಹಾಸ ಹೇಳಿದರೆ, ಶಂಕರೆಪ್ಪ ಸರ್ ಅವರು ವಿಜ್ಞಾನ ಹೇಳುತ್ತಿದ್ದರು. ಈ ಎಲ್ಲ ಶಿಕ್ಷಕರ ಮಾರ್ಗದರ್ಶನದಲ್ಲಿ ಓದಿ ಎಂಟನೇ ಪಾಸಾದರು. ಒಂಬತ್ತನೇ ತರಗತಿಯಲ್ಲಿ ಐಚ್ಛಿಕವಾಗಿ ಕಲಾ ಮತ್ತು ವಿಜ್ಞಾನ ವಿಷಯಗಳನ್ನು ತೆಗೆದುಕೊಂಡು ಓದುವ ಅವಕಾಶವಿತ್ತು. ಆಗ ಹಿರೇಮಠರು ವಿಜ್ಞಾನ ವಿಷಯ ತೆಗೆದುಕೊಂಡರು. ಮನೆಯಲ್ಲಿ ಇದ್ದರೆ ಹೊಲದ ಕಡೆ ಹೋಗಿ ಸದೆ ಕಳೆಯುವ ಕೂಲಿ ಆಳುಗಳಿಗೆ ನೀರು ತಂದುಕೊಡುವುದು, ಎಡೆ ಹೊಡೆಯುವುದು, ರಾಶಿಯಿದ್ದರೆ ಹಂತಿ ಹೊಡೆಯುವುದು. ಬೇಸಿಗೆಯಲ್ಲಿ ಕಂಟಿ, ಜೋಳ ಕೊಯ್ಯುವುದು ಮುಂತಾದ ಕೆಲಸಗಳಲ್ಲಿ

ಭಾಗಿಯಾಗುತ್ತಿದ್ದರು. ಆ ವರ್ಷ ಒಂಬತ್ತನೇ ತರಗತಿಯಲ್ಲಿ ಉತ್ತೀರ್ಣರಾಗಿ ಹತ್ತನೇ ತರಗತಿಗೆ ಪ್ರವೇಶ ಪಡೆದರು. ಹತ್ತನೇ ತರಗತಿ ಓದುವಾಗ ಅವರ ತಂದೆಯವರು ಚೆನ್ನಾಗಿ ಓದಲು ಸೂಚಿಸಿದರು. ಹಿರೇಮಠರಲ್ಲಿ ಅಡಗಿದ ಹವ್ಯಾಸಗಳು ಕಡಿಮೆಯಾಗಿರಲಿಲ್ಲ. ಆ ವರ್ಷ ಪೇಠ ಗೋಗಿಯ ಜಾತ್ರೆಯಲ್ಲಿ ಸಾಮಾಜಿಕ ನಾಟಕ ಆಡಿದರು. ಆ ನಾಟಕದಲ್ಲಿಯ ಪಾತ್ರವನ್ನು ಮೆಚ್ಚಿಕೊಂಡು ಸಿಂಗನಹಳ್ಳಿಯ ವ್ಯಕ್ತಿಯೊಬ್ಬ ಬಹುಮಾನ ನೀಡಲು ಹಣ ಕೊಟ್ಟನು. ಸಿಂಗನಹಳ್ಳಿಯ ದೊಡ್ಡಾಟ ಆಡುವವರು ನಾಟಕದಲ್ಲಿ ಪಾತ್ರ ಮಾಡಿದವರಿಗೆ ಬಹುಮಾನ ನೀಡಿರುವರೆಂದು ಒಂದು ರೀತಿಯಿಂದ ಅಪಹಾಸ್ಯ ಮಾಡಿ ಮಾತನಾಡಿದ್ದರು. ಆಗ ಹಿರೇಮಠರು ಮತ್ತು ಗೆಳೆಯರು ದೊಡ್ಡಾಟ ಆಡಿದವರು ನಾಟಕದವರಿಗಿಂತಲೂ ಕೀಳಲ್ಲವೆಂದು ಹೇಳಿದರು. ಇವರ ತಿಕ್ಕಾಟದಲ್ಲಿ ನಾಟಕ ಅರ್ಧ ಗಂಟೆ ಬಂದಾಯಿತು. ಅಂದೇ ಗೆಳೆಯರೆಲ್ಲ ಸೇರಿ ಊರಲ್ಲಿ ಬರಿ ದೊಡ್ಡಾಟವೇ ಆಡುತ್ತಾರೆ. ಈ ವರ್ಷ ನಾಟಕ ಆಡೋಣವೆಂದು ನಿರ್ಧರಿಸಿ ಗೆಳೆಯರನ್ನೆಲ್ಲ ಸೇರಿಸಿ 'ಜೀವನ ಯಾತ್ರೆ' ಎಂಬ ಸಾಮಾಜಿಕ ನಾಟಕ ಆಡಲು ನಿಶ್ಚಯಿಸಿದರು.

ಆ ನಾಟಕದಲ್ಲಿ ಹಿರೇಮಠರಿಗೆ ಬಿಹಾರಿ ಎಂಬ ಖಳನಾಯಕನ ಪಾತ್ರ ಕೊಡಲಾಗಿತ್ತು. ಪಾತ್ರಧಾರಿಗಳೆಲ್ಲರೂ ಮಾತು ಕಲಿತು ಪ್ರ್ಯಾಕ್ಟಿಸ್ ಮಾಡಬೇಕೆನ್ನುವುದರಲ್ಲಿ ಈ ವಿಷಯ ಅವರ ತಂದೆಗೆ ಗುರುತಾಗಿ ಓದುವುದು ಬಿಟ್ಟು ನಾಟಕವಾಡಿದರೆ ಪಾಸಾಗಲು ಸಾಧ್ಯವೇ ? ಎಂದು ಬೈಯ್ದು ಓದಿನ ಕಡೆ ಗಮನ ಕೊಡಲು ಎಚ್ಚರಿಸಿದ್ದರು. ತಂದೆಯವರ ಮಾತು ಮೀರಲಾರದೆ ನಾಟಕದ ಪಾತ್ರವನ್ನು ಬೇರೆ ಗೆಳೆಯರಿಗೆ ಒಪ್ಪಿಸಿದರು. ಆದರೆ ನಾಟಕದ ತರಬೇತಿಗೆ ಹೋಗಿ ಸಲಹೆ ಸೂಚನೆಗಳನ್ನು ಕೊಡುವುದನ್ನು ಹಾಗೂ ಪಾತ್ರಧಾರಿಗಳಿಗೆ ಅಭಿನಯ ಕಲಿಸುವುದನ್ನು ಬಿಡಲಿಲ್ಲ. ನಾಟಕ ಗೋಗಿಯವರು ಆಡಿದ ನಾಟಕಕ್ಕಿಂತಲೂ ಯಶಸ್ವಿಯಾಗಿ ಅಭಿನಯಿಸಲಾಯಿತು. ಆದರೆ ಆ ವರ್ಷದ ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯ ಗಣಿತ ವಿಷಯದಲ್ಲಿ ಫೇಲಾಗಿ ಹಿರೇಮಠರು ಮನೆಯಲ್ಲಿರಬೇಕಾಯಿತು. ಊರಿನ ಜನ ಪಾಸಾಗುವನೆಂದೇ ನಿರೀಕ್ಷಿಸಿದ್ದಕ್ಕೆ ವಿರುದ್ಧವಾಗಿ ಒಂದು ವಿಷಯ ಹೋದುದಕ್ಕೆ ತಂದೆಯವರು ಇದೆಲ್ಲ ನಾಟಕದ ಪರಿಣಾಮವೆಂದು ಬೈಯ್ದರೆ ಹಿರೇಮಠರಿಗೆ ತಪ್ಪದೆ ಮುಂದೆ ಪಾಸಾಗಬೇಕೆಂಬ ಛಲ ಮೂಡಿತು. ಮುಂದೆ ಸಪ್ಲಿಮೆಂಟ್ರಿ ಪರೀಕ್ಷೆಯಲ್ಲಿ ಇಡೀ ಗೋಗಿಯ ಪ್ರೌಢ ಶಾಲೆಗೆ ನಾಲ್ಕು ಜನ ಪಾಸಾದುದ್ದರಲ್ಲಿ ಹಿರೇಮಠರೊಬ್ಬರಾಗಿದ್ದರು. ಆ ವರ್ಷ ಸುಮ್ಮನೆ ಕೂಡದೆ 'ಮನಸ್ಸಿಲ್ಲದ ಮದುವೆ' ಎಂಬ ಸಾಮಾಜಿಕ ನಾಟಕವನ್ನು ಬರೆದರು.

೧೦ನೆಯದು ಪಾಸಾದ ಮೇಲೆ ಅವರ ತಂದೆಯವರು ಮುಂದೆ ಓದಲು ತಿಳಿಸಿದರು. ವಿಜ್ಞಾನ ವಿಷಯ ತೆಗೆದುಕೊಂಡು ಓದಿದ ಹಿರೇಮಠರು ಮುಂದೆ ಕಲಾ ವಿಷಯ ತೆಗೆದುಕೊಂಡರೆ ಪಾಸಾಗುತ್ತಿದ್ದರೆಂದು ಶಿಕ್ಷಕರು ಹೇಳಿದರು. ಅವರ ತಂದೆಯವರು ಶಿಕ್ಷಕರಿಗೆ ಹಣ ಕೊಟ್ಟು

ಕಲ್ಬುರ್ಗಿಯ ಶರಣಬಸವೇಶ್ವರ ಮಹಾವಿದ್ಯಾಲಯದಲ್ಲಿ ಸೇರಿಸಲು ಕೇಳಿದರು. ಶಿಕ್ಷಕರೊಂದಿಗೆ ಹಿರೇಮಠರು ಮರುದಿನ ಕಲ್ಬುರ್ಗಿಗೆ ಪ್ರಯಾಣ ಬೆಳೆಸಿದರು. ಆಗ ಕಲ್ಬುರ್ಗಿಯಲ್ಲಿ ಸರಕಾರಿ ಮಹಾವಿದ್ಯಾಲಯ ಬಿಟ್ಟರೆ ಶ್ರೀ ಶರಣಬಸವೇಶ್ವರ ಮಹಾವಿದ್ಯಾಲಯವೇ ಪ್ರಸಿದ್ಧಿ ಪಡೆದಿತ್ತು. ಮಹಾವಿದ್ಯಾಲಯದ ಸಮೀಪ ಬರುತ್ತಲೇ ರಿಕ್ಷಾದಿಂದಿಳಿದು ಕಟ್ಟಿದ ಸೋಪಾನ ಹತ್ತಿದಾಗ ಆವರಣದಲ್ಲಿ ಸಾಲಾಗಿ ಹಚ್ಚಿದ ಸೈಕಲುಗಳು ನೋಡಿ ಅಚ್ಚರಿ ಮೂಡಿಸಿತು. ಇವರೊಂದಿಗೆ ಬಂದ ಶಿಕ್ಷಕರು ಕಾಲೇಜಿನ ಒಳಗೆ ಕರೆದುಕೊಂಡು ಮುನ್ನಡೆದರು. ಅಲ್ಲಿ ಓದುವ ಅನೇಕ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಗುಂಪು ಗುಂಪಾಗಿ ಎದುರಿಗೆ ಬಂದರು. ಟೈಟ್ ಪ್ಯಾಂಟ್, ಬಣ್ಣದ ಬುಶರ್ಟ್, ಬೂಟು, ಟೈ ಕಟ್ಟಿಕೊಂಡವರು ಕೆಲವರಾದರೆ, ಪೈಜಾಮ ಅಂಗಿ, ಗಾಂಧಿ ಟೋಪಿ ಧರಿಸಿದವರು ಅನೇಕರಿದ್ದರು. ವಿದ್ಯಾರ್ಥಿನಿಯರು ಆಗ ಮಿನಿ ಸ್ಕರ್ಟ್ ಧರಿಸಿದರೆ ಹಲವರು ಸೀರೆ, ಲಂಗ, ದಾವಣಿ ತೊಟ್ಟು ಜೋಡು ಜಡೆ ಹಾಕಿದವರೆ ಹೆಚ್ಚಿದ್ದರು. ಸೋಕಿಯ ವಿದ್ಯಾರ್ಥಿಗಳು ಸಿನಿಮಾ ನಟರಂತೆ ಸಿಗರೇಟ ಸೇದುವುದು ನೋಡಿ ಹಿರೇಮಠರಿಗೆ ಮೋಜು ಎನಿಸಿತು. ಅಂದು ಮೂರು ಗಂಟೆಗೆ ಪ್ರವೇಶ ಪಡೆದು ಅಂದೇ ಊರಿಗೆ ಹಿಂದಿರುಗಿ ಬಂದರು.

ಒಂದು ವಾರ ಬಿಟ್ಟು ತರಗತಿಗಳು ಪ್ರಾರಂಭವಾಗುವವು ಎಂದು ಹೇಳಿದ್ದರಿಂದ ಕಲ್ಬುರ್ಗಿಯಲ್ಲಿ ಇರುವ ವ್ಯವಸ್ಥೆಯ ಬಗ್ಗೆ ಅವರ ತಂದೆಯವರು ಕಾಳಜಿ ವಹಿಸಿದರು. ಪ್ರತಿ ವರ್ಷ ಅವರ ಊರಿಗೆ ಅನೇಕ ಊರಿನ ಹರಗುರು ಚರಮೂರ್ತಿಗಳು ಮಠ ಕಟ್ಟಿಸಲು ಅಥವಾ ದೇವಾಲಯ ಕಟ್ಟಿಸಲು ಇಲ್ಲವೇ ಪುರಾಣ ದಾಸೋಹ ನಡೆಸಲು, ಶಾಲೆ ನಡೆಸಲು ಸಹಾಯ ನೀಡಿರೆಂದು ಬರುತ್ತಿದ್ದರು. ಬಂದ ಸ್ವಾಮಿಗಳೊಂದಿಗೆ ಹಿರೇಮಠರ ತಂದೆಯವರಾದ ವೇದಮೂರ್ತಿ ಶರಣಯ್ಯನವರು ಊರಲ್ಲಿ ಮುಂದಾಗಿ ಭಕ್ತರಿಂದ ಜೋಳ ಇಲ್ಲವೆ ಹಣ ಸಂಗ್ರಹಿಸಿ ಕೊಡುತ್ತಿದ್ದರು.

ಹಿರೇಮಠರು ಪಿ.ಯು.ಸಿ. ಸೇರಿದಾಗ ಆ ವರ್ಷ ಜೇವರ್ಗಿ ತಾಲ್ಲೂಕಿನ ಮಳ್ಳಿಯ ಹಿರೇಮಠದ ಪೂಜ್ಯ ಶ್ರೀ ಸಿದ್ಧಲಿಂಗ ಶಿವಾಚಾರ್ಯರು ಊರಿಗೆ ಆಗಮಿಸಿದ್ದರು. ಪೂಜ್ಯರು ಕೆಲವು ವರ್ಷಗಳಿಂದ ಬಡ ವೀರಶೈವ ವಿದ್ಯಾರ್ಥಿಗಳಿಗಾಗಿ ಕಲ್ಬುರ್ಗಿಯ ಶಹಾಬಜಾರದ ಸುಲಫಲ್ ಮಠದಲ್ಲಿ ಉಚಿತ ಬೋರ್ಡಿಂಗ್ ನಡೆಸುತ್ತಿದ್ದರು. ಪ್ರತಿ ವರ್ಷ ಹಳ್ಳಿಯಲ್ಲಿ ಸಂಚರಿಸಿ ದಾಸೋಹಕ್ಕೆ ಧಾನ್ಯ ಸಂಗ್ರಹಿಸುತ್ತಿದ್ದರು. ಪ್ರತಿ ತಿಂಗಳಿಗೆ ಒಬ್ಬ ವಿದ್ಯಾರ್ಥಿಯಿಂದ ಕೇವಲ ಹದಿನೈದು ರೂಪಾಯಿ ತೆಗೆದುಕೊಂಡು ಊಟ, ವಸತಿ ಒದಗಿಸುತ್ತಿದ್ದರು. ಊರಿಗೆ ಬಂದ ಪೂಜ್ಯರಿಗೆ ತಮ್ಮ ಮಗನನ್ನು ಕಲ್ಬುರ್ಗಿಯ ಶರಣಬಸವೇಶ್ವರ ಕಾಲೇಜಿಗೆ ಸೇರಿಸಿದ ವಿಷಯ ಕೇಳಿ ನಿಮ್ಮ ಮಗ ನಮ್ಮ ಬೋರ್ಡಿಂಗನಲ್ಲಿದ್ದು ಓದಲೆಂದು ಹೇಳಿದರು. ಹಿರೇಮಠರ ತಂದೆಯವರು ಗುರುಗಳ ಮಾತಿಗೆ ಒಪ್ಪಿ ಒಂದು ವಾರದ ನಂತರ ಕಲ್ಬುರ್ಗಿಗೆ ಹೋಗಲು ಸಿದ್ಧತೆ ಮಾಡಿದರು.

ಕಲ್ಬುರ್ಗಿಯ ಬಸ್ ಸ್ಟ್ಯಾಂಡ್ ತಲುಪಿದಾಗ ಮಧ್ಯಾಹ್ನ ಮೂರು ಗಂಟೆಯಾಗಿತ್ತು. ರಿಕ್ಷಾ ಹಿಡಿದು ಶಾಹಬಜಾರಕ್ಕೆ ಬಂದರು. ಟ್ರಂಕ್ ತೆಗೆದುಕೊಂಡು ಮಠದ ಒಳಗೆ ಹೋದಾಗ ಅಲ್ಲಿದ್ದವರಲ್ಲಿ ಏಳೆಂಟು ಜನರು ಪಿ.ಯು.ಸಿ.ಯಲ್ಲಿ ಓದುವವರೇ ಇದ್ದರು. ಸಂಜೆಯಾಗಿದ್ದರಿಂದ ಊರಲ್ಲಿ ಉಂಡು ಹೋದವರಿಗೆ ಹಸಿವೆಯಾಗಿತ್ತು. ಮಠದ ಬಯಲಿನಲ್ಲಿದ್ದ ಹೌಜಿನ ನೀರಿನಲ್ಲಿ ಕೈಕಾಲು ಮುಖ ತೊಳೆದು ಊರಿಂದ ಕಟ್ಟಿದ ಬುತ್ತಿ ಬಿಚ್ಚಿ ಅಲ್ಲಿದ್ದವರಿಗೆ ಊಟಕ್ಕೆ ಕರೆದರು. ಮೊದಲು ಒಲ್ಲೆಂದವರು ನಂತರ ಬುತ್ತಿಯ ರೊಟ್ಟಿ ನೋಡಿ ಊಟ ಮಾಡಿದರು. ಸಂಜೆಗೆ ಉಸ್ತುವಾರಿ ನೋಡಿಕೊಳ್ಳುವ ಶ್ರೀ ಬಸಯ್ಯ ಮಠಪತಿಯವರು ಮಠಕ್ಕೆ ಬಂದರು. ಅಲ್ಲಿಯ ಗೆಳೆಯರು ಹಿರೇಮಠರ ಪರಿಚಯ ಮಾಡಿಸಿದರು. ಆಗ ಬಸಯ್ಯನವರು ಒಂದು ಕೋಣೆಯನ್ನು ತೋರಿಸಿ ಅದರಲ್ಲಿ ಟ್ರಂಕ್ ಇಡುವ ಸ್ಥಳವನ್ನು ನಿರ್ಧಿಷ್ಟ ಪಡಿಸಿದರು. ಸುಲಫಿಲ್ ಮಠ ಹಳೆಯದಾಗಿದ್ದರೂ ಭದ್ರವಾಗಿತ್ತು. ಅಡುಗೆ ಮನೆ ಅದಕ್ಕೆ ಹೊಂದಿಕೊಂಡಿರುವ ದೊಡ್ಡ ಕೋಣೆ. ಅದರ ಮುಂದೆ ದೊಡ್ಡ ಪಡಸಾಲೆ ಮತ್ತು ದೇವರ ಕೋಣೆಯಿದ್ದವು. ಅಲ್ಲದೆ ಇನ್ನೊಂದು ಭಾಗದಲ್ಲಿ ಆ ಮಠದ ಪೂಜ್ಯರ ಎರಡು ಸಮಾಧಿಗಳಿದ್ದು, ಅವುಗಳಿಗೆ ರಕ್ಷಣೆ ನೀಡಲು ವಿಶಾಲವಾದ ದೊಡ್ಡ ಪಡಸಾಲೆಯಂತೆ ಕಟ್ಟಿಸಲಾಗಿತ್ತು. ಪಡಸಾಲೆಯ ಎದುರುಗಡೆ ವಿಶಾಲವಾದ ಅಂಗಳದಲ್ಲಿ ಕಪ್ಪು ಶಿಲೆಯಲ್ಲಿ ದೊಡ್ಡದಾದ ಶಿವಲಿಂಗವನ್ನು ಸ್ಥಾಪಿಸಲಾಗಿತ್ತು. ಹಿಂದುಗಡೆ ಒಂದು ಎಕರೆಯಷ್ಟು ವಿಶಾಲವಾದ ಮೈದಾನವಿತ್ತು. ದಿನಾಲೂ ಮುಂಜಾನೆ ಐದು ಗಂಟೆಗೆ ಏಳುವರು. ಬಯಲಕಡೆ ಹೋಗಿ ಬಂದು ಸ್ನಾನ ಮಾಡುವುದು ನಂತರ ಅಲ್ಲಿಯ ಶಿವಲಿಂಗಕ್ಕೆ ಪೂಜೆ ಮಾಡಿ ಸಾಮೂಹಿಕ ಪ್ರಾರ್ಥನೆ ಮಾಡುವ ನಿಯಮವಿತ್ತು. ಕಾಲೇಜು ದೂರವಾಗಿರುವುದರಿಂದ ಏಳು ಗಂಟೆಗೆ ಸಿದ್ಧವಾಗಿ ಕಾಲೇಜಿಗೆ ಹೋಗುತ್ತಿದ್ದರು. ಬ್ರಹ್ಮಪೂರದ ಶರಣಬಸಪ್ಪನ ಗುಡಿದಾಟ ಸಂದಿ–ಗೊಂದಿಯ ದಾರಿ ಹಿಡಿದು ನೇರವಾಗಿ ಕಾಲೇಜಿನ ಗ್ರೌಂಡಿಗೆ ಬರುತ್ತಿದ್ದರು. ಕಾಲೇಜು ಬಿಡುವುದು ಒಂದುವರೆ ಗಂಟೆಗೆ. ತಿರುಗಿ ಮಠಕ್ಕೆ ಬರಲು ಎರಡು ಗಂಟೆಯಾಗುತ್ತಿತ್ತು. ಮಧ್ಯಾಹ್ನದಲ್ಲಿ ಊಟಕ್ಕೆ ಮಠದಲ್ಲಿ ಜೋಳದ ರೊಟ್ಟಿ, ಪಲ್ಯ, ಬೇಳೆ, ಸಾರು, ಅನ್ನ ಇದು ನಿತ್ಯದ ದಾಸೋಹವಾಗಿತ್ತು. ಮಠದಲ್ಲಿ ಇದ್ದ ವಿದ್ಯಾರ್ಥಿಗಳಲ್ಲಿ ಯಾವುದೇ ಹೆಚ್ಚು ಕಡಿಮೆ ಎಂಬ ಕೀಳರಿಮೆ ಭಾವನೆ ಇಲ್ಲದೆ ಎಲ್ಲರೂ ಸಮಾನವಾಗಿ ಕೂತು ಊಟ ಮಾಡುತ್ತಿದ್ದರು. ಅಮವಾಸೆ ಹಾಗೂ ಹುಣ್ಣಿಮೆಯ ದಿನ ವಿಶೇಷವಾದ ಅಡುಗೆ ಮಾಡಿಸುತ್ತಿದ್ದರು.

ಶರಣಬಸವೇಶ್ವರ ಕಾಲೇಜಿನಲ್ಲಿ ಓದುವುದು ಅಂದು ಪ್ರತಿಯೊಬ್ಬ ವಿದ್ಯಾರ್ಥಿಗು ಪ್ರತಿಷ್ಠೆಯ ವಿಷಯವಾಗಿತ್ತು. ಅವರು ಸೇರಿದ ವರ್ಷ ಪಿ.ಯು.ಸಿ. ಎ.ಬಿ.ಸಿ.ಎಂದು ಮೂರು ವರ್ಗಗಳಾಗಿದ್ದವು. ಬೋನಾಳದಲ್ಲಿ ಓದಿದ ಹಳೆಯ ಗೆಳೆಯ ಮಲ್ಲಾರಡ್ಡಿಯವರು ಇವರಿಗೆ ಜೊತೆಯಾದರು. ಹಳೆಯ ಸ್ನೇಹಿತರಾಗಿದ್ದರಿಂದ ಒಂದೇ ಕಡೆ ಕೂಡುತ್ತಿದ್ದರು. ತರಗತಿಗಳು ವಿದ್ಯಾರ್ಥಿ, ವಿದ್ಯಾರ್ಥಿನೀಯರಿಂದ ಗಿಜಿಗುಡುತ್ತಿದ್ದವೆ. ಉಪನ್ಯಾಸಕರು ಸಾವಕಾಶವಾಗಿ ಹೇಳಿದರೆ ಹಿಂದಿನವರಿಗೆ ಏನೂ ಕೇಳಿಸುತ್ತಿರಲಿಲ್ಲ. ಅಲ್ಲದೆ ಹಿಂದೆ ಕುಳಿತ ವಿದ್ಯಾರ್ಥಿಗಳು ಪಿಸು ಮಾತು ಕೇಳಬೇಕಾಯಿತು. ಹೀಗಾಗಿ

ಒಂದು ವಾರ ಆ ಕಡೆ ಈ ಕಡೆ ಕೂತು ಕೇಳಿ ನಂತರ ಉಪನ್ಯಾಸರ ಎದುರಿನ ಮುಂದಿನ ಒಂದೆರಡು ಸಾಲು ಬಿಟ್ಟು ತೀರ ಹತ್ತಿರವಾಗದೆ, ದೂರವಾಗದೆ ಉಪನ್ಯಾಸಕರ ಮಾತುಗಳು ಸ್ಪಷ್ಟವಾಗಿ ಕೇಳಲು ಬೋರ್ಡ್ ಮೇಲೆ ಬರೆದದ್ದು ಕಾಣುವಂತೆ ಮೂರನೇಯ ಬೆಂಚಿಗೆ ಕುಳಿತರು. ಅಂದು ಕಾಲೇಜು ಅಧ್ಯಾಪಕರು ಕೋಟು, ಪ್ಯಾಂಟು, ಸೂಟಿನೊಂದಿಗೆ ಬೂಟು ಹಾಕಿಕೊಂಡು ಟೈ ಕಟ್ಟಿ ಶಿಸ್ತಿನಿಂದ ಬರುವದು ನೋಡಿ ಅವರ ಬಗ್ಗೆ ವಿದ್ಯಾರ್ಥಿಗಳಲ್ಲಿ ಗೌರವ ಮೂಡುತಿತ್ತು. ಅದರಲ್ಲಿಯೂ ಹಳ್ಳಿಯ ಶಾಲೆಯಲ್ಲಿ ಕನ್ನಡ ಕಲಿತ ವಿದ್ಯಾರ್ಥಿಗಳಿಗೆ ಅಧ್ಯಾಪಕರು ನಿರರ್ಗಳವಾಗಿ ಇಂಗ್ಲೀಷನಲ್ಲಿ ಹೇಳುವುದ, ಬರೆಯುವುದು ಅವರ ಪಾಂಡಿತ್ಯ ನೋಡಿ ಅಚ್ಚರಿ ಮೂಡಿಸಿತು. ಇವರಿಗೆ ಪಿ.ಯು.ಸಿ. ಯಲ್ಲಿ ಆರು ವಿಷಯಗಳಿದ್ದವು. ಕನ್ನಡ ಡಾ. ಎಮ್.ಜಿ. ಬಿರಾದಾರ, ಶ್ರೀಮತಿ ಶಶಿಕಲಾ ಮೊಳದಿ ಹೇಳಿದರೆ, ಇಂಗ್ಲೀಷ್ ಪ್ರೊ. ಪಿ.ಎಮ್. ಸಿದ್ಧಯ್ಯ, ಸಿ.ಎನ್. ಹಿರೇಮಠ, ರಾಜ್ಯಶಾಸ್ತ್ರವನ್ನು ಬಿ.ಬಿ. ಪಾಟೀಲ್ ಓಕಳಿ, ಸಮಾಜಶಾಸ್ತ್ರ ಪ್ರೊ. ಎಸ್.ಜಿ. ಮೆಳಕುಂದಿ. ಇತಿಹಾಸವನ್ನು ಪ್ರೊ. ಚಂದ್ರಶೇಖರರು ಹೇಳುತ್ತಿದ್ದರು. ಎಲ್ಲರೂ ವಿದ್ವತ್ತಪೂರ್ಣವಾದ ಉಪನ್ಯಾಸಗಳನ್ನು ತರಗತಿಗಳಲ್ಲಿ ವ್ಯಾಖ್ಯಾನಗಳು ಬೋರ್ಡಿನ ಜೊತೆ ಬರೆದು ಉದಾಹರಣೆಗಳೊಂದಿಗೆ ವಿಶ್ಲೇಷಣೆ ಮಾಡುತ್ತಿದ್ದರು. ಮೊದಲು ಇಂಗ್ಲೀಷನಲ್ಲಿ ಹೇಳಿ, ನಂತರ ಕನ್ನಡದಲ್ಲಿ ಸ್ವಲ್ಪಮಟ್ಟಿಗೆ ವಿವರಿಸುತ್ತಿದ್ದರು. ಪಿ.ಯು.ಸಿ.ಯಲ್ಲಿ ಆಗ ಒಂದು ವಿಷಯ ಬಿಟ್ಟು ಎನ್.ಸಿ.ಸಿ. ತೆಗೆದುಕೊಳ್ಳುವುದು ಕಡ್ಡಾಯವಾಗಿತ್ತು. ಹಿರೇಮಠರು ಎನ್.ಸಿ.ಸಿ.ಗೆ ಸೇರಿದ್ದರು. ಆಗ ಎಮ್.ಜಿ. ಬಿರಾದಾರ ಅವರು ಎನ್.ಸಿ.ಸಿ. ವಿಭಾಗದ ಮುಖ್ಯಸ್ಥರಾಗಿದ್ದರು. ವಾರದಲ್ಲಿ ಎರಡು ದಿನ ಎನ್.ಸಿ.ಸಿ.ಯ ಪರೇಡುಗಳು ಮಧ್ಯಾಹ್ನದಿಂದ ಕಾಲೇಜಿನ ಆಟದ ಮೈದಾನದಲ್ಲಿ ನಡೆಯುತ್ತಿದ್ದವು. ಪ್ರತಿ ಪರೇಡಿನ ನಂತರ ಅಲ್ಪ ಉಪಹಾರ ನೀಡಲಾಗುತ್ತಿತ್ತು.

ಆಗ ಕಾಲೇಜಿನಲ್ಲಿ ಪ್ರತಿ ವರ್ಷ ಆಗಷ್ಟದಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆ ನಡೆಯುತ್ತಿದ್ದವು. ಚುನಾವಣೆಗಾಗಿ ವಿದ್ಯಾರ್ಥಿಗಳಲ್ಲಿ ಪ್ರತ್ಯೇಕ ಗುಂಪು ರಚನೆಯಾಗುತ್ತಿದ್ದವು. ಪ್ರತಿಯೊಂದು ಪೆನಲಿನಲ್ಲಿ ಅಭ್ಯರ್ಥಿಯಾದವರು ಆರಿಸಲು ಸಾರ್ವತ್ರಿಕ ಚುನಾವಣೆಯಂತೆಯೇ ಪ್ರಚಾರ ಮಾಡುತ್ತಿದ್ದರು. ಯಾರು ಆರಿಸಿ ಬರುವರೋ ಅವರ ಗುಂಪು ಲಾರಿಯಲ್ಲಿ ನಿಂತು ಊರ ತುಂಬ ಜಯಘೋಷದೊಂದಿಗೆ ಹಾರ ಹಾಕಿ ಮೆರೆಯುತ್ತಿದ್ದರು. ಕೆಲವು ಸಲ ಸ್ಪರ್ಧೆಗಳ ಗುಂಪುಗಳಲ್ಲಿ ವೈಮನಸ್ಸಾಗಿ ಹೊಡೆದಾಟಗಳು ಆಗುತ್ತಿದ್ದವು.

ಪ್ರತಿ ವರ್ಷ ಯುಗಾದಿಯಾದ ಐದು ದಿನಕ್ಕೆ ಶರಣಬಸವೇಶ್ವರರ ಜಾತ್ರೆ ನಡೆಯುವುದು. ಶರಣರ ಜಾತ್ರೆಗೆ ಇಡೀ ಕಲ್ಬುರ್ಗಿಯೇ ಸಂಭ್ರಮವಾಗುತ್ತಿತ್ತು. ಕಲ್ಬುರ್ಗಿಯ ಅಡತ್ ಅಂಗಡಿಗಳು, ಬಳೆ, ಮಿಠಾಯಿಯ ದುಕಾನುಗಳು, ಮನರಂಜನೆಯ ನಾಟಕ, ಸರ್ಕಸ್‌ಗಳು, ತೂಗುವ ತೊಟ್ಟಿಲುಗಳು, ತೆಂಗಿನಕಾಯಿ, ಕಬ್ಬಿನ ಹಾಲಿನ ಅಂಗಡಿಗಳು ಸಾಲಾಗಿ ಇದ್ದು, ಪ್ರತಿಯೊಂದು ಅಂಗಡಿಯವರು ತಮ್ಮ ಪ್ರಚಾರಕ್ಕೆ ಸಿನಿಮಾ ಹಾಡುಗಳು ರಿಕಾರ್ಡ್ ಹಾಕಿ ಜೋರಾಗಿ ಹಚ್ಚುತ್ತಿದ್ದರು.

ಊರಿಂದ ಶರಣರ ಜಾತ್ರೆಗೆ ಬಂದವರು ಹಿರೇಮಠರ ರೂಮಿನಲ್ಲಿಯೇ ಇದ್ದು, ಜಾತ್ರೆ ಮುಗಿಸಿಕೊಂಡು ಹೋಗುತ್ತಿದ್ದರು. ಜಾತ್ರೆಗೆ ಬಂದವರಿಂದ ರಿಕಾರ್ಡಿನ ಹಾಡಿನಿಂದ ಕೋಣೆಯಲ್ಲಿ ಓದಲು ಕುಳಿತರು ತಲೆಗೆ ಹತ್ತುತ್ತಿರಲಿಲ್ಲ. ರಾತ್ರಿ ಜಾತ್ರೆಯಲ್ಲಿ ತಿರುಗಾಡಿ ಊಟ ಮಾಡಿ ಶರಣಬಸವೇಶ್ವರ ದಾಸೋಹದ ಮನೆಯ ಮುಂದೆ ಬೇವಿನ ಕಟ್ಟೆಯ ಮೇಲೆ ಗೀಗಿ ಪದ ಹಾಡುವರು. ಗಂಡು ಹೆಚ್ಚೊ, ಹೆಣ್ಣು ಹೆಚ್ಚೊ ಎಂದು ಢಪ್ಪು ಬಡಿದು ರಂಜನೀಯವಾಗಿ ಹಾಡುತ್ತಿದ್ದರು. ನಿದ್ದೆ ಬರುವವರೆಗೂ ಅವರ ಹಾಡುಗಳನ್ನು ಕೇಳುತ್ತಿದ್ದರು. ಜಾತ್ರೆ ಮುಗಿಯುವವರೆಗೂ ಜನರ ಗದ್ದಲ ಇರುತ್ತಿತ್ತು.

ಜಾತ್ರೆಯ ಸಂದರ್ಭದಲ್ಲಿಯೇ ವಾರ್ಷಿಕ ಪರೀಕ್ಷೆಗಳು ಬರುತ್ತಿದ್ದವು. ಜಾತ್ರೆ ಮಾಡುತ್ತಲೇ ಪರೀಕ್ಷೆ ಕೊಟ್ಟರು. ಆ ವರ್ಷದ ಫಲಿತಾಂಶದಲ್ಲಿ ತೇರ್ಗಡೆಯಾದರು. ಆ ವರ್ಷದ ಬೇಸಿಗೆಯಲ್ಲಿ ಊರಿಗೆ ಬಂದ ಮಳ್ಳಿಯ ಶ್ರೀ ಸಿದ್ಧಲಿಂಗ ಶಿವಾಚಾರ್ಯರು ಗುಲಬರ್ಗಾ ಶಹಾಬಹಾರದಲ್ಲಿರುವ ಬೋರ್ಡಿಂಗ್ ನಡೆಸುವುದಕ್ಕೆ ಅಲ್ಲಿಯ ಕೆಲವು ಜನರು ಆಕ್ಷೇಪ ಎತ್ತಿದ್ದರಿಂದ ಅನಿವಾರ್ಯವಾಗಿ ಸ್ವಾಮಿಗಳು ಬೋರ್ಡಿಂಗನ್ನು ಮುಚ್ಚಬೇಕಾಯಿತು.

ಜುಲೈನಲ್ಲಿ ಬಿ.ಎ. ಪ್ರಥಮ ವರ್ಷಕ್ಕೆ ಪ್ರವೇಶ ಪಡೆದು ಬ್ರಹ್ಮಪೂರದಲ್ಲಿ ಕಾಲೇಜಿಗೆ ಸಮೀಪ ಇರುವಂತೆ ಕೋಣೆ ಹಿಡಿದರು. ಬ್ರಹ್ಮಪೂರದ ಗೋವಾ ಹೋಟಲಿನ ಎದುರಿಗೆ ಇರುವ ವೀರಶೈವ ಖಾನಾವಳಿಯಲ್ಲಿ ಊಟಕ್ಕೆ ತಂದೆಯವರು ಬಂದು ವ್ಯವಸ್ಥೆ ಮಾಡಿದರು. ಶಂಕ್ರಣ್ಣ, ಮಲ್ಲಾರಡ್ಡಿ ದಿನಾಲೂ ಕಾಲೇಜಿನಲ್ಲಿ ಒಂದೇ ಕಡೆ ಕೂಡುತ್ತಿದ್ದರು. ಆ ವರ್ಷ ಕಾಲೇಜಿನಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನದ ಅಂಗವಾಗಿ ಹೊರಡಿಸುವ ಕಾಲೇಜ್ ಮಾಗ್ಝಿನಿಗೆ ವಿದ್ಯಾರ್ಥಿಗಳು ಪ್ರತಿಭೆ, ಪುರಸ್ಕಾರಕ್ಕಾಗಿ ಲೇಖನ, ಕವನ ಬರೆದುಕೊಡಲು ಸೂಚನೆ ನೀಡಿದ್ದರು. ಹಿರೇಮಠರು ತಾವು 'ಕುವೆಂಪು' ಮೇಲೆ ರಚಿಸಿದ ಕವನವನ್ನು ಕೊಟ್ಟರು. ಅದು ಆ ವರ್ಷದ ಮಾಗ್ಝಿನ್‌ದಲ್ಲಿ 'ಅರಿವೇ-ಗುರು' ಎಂಬ ಶೀರ್ಷಿಕೆಯೊಂದಿಗೆ ಪ್ರಕಟವಾಯಿತು. ಇದು ಅವರ ಬರೆದ ಕವನಗಳಲ್ಲಿಯೇ ಪ್ರಕಟವಾದ ಮೊದಲನೆಯ ಕವನ.

ಬಿ.ಎ. ಮೊದಲನೇ ವರ್ಷ ಪಾಸಾಗಿ ಎರಡನೆಯ ವರ್ಷಕ್ಕೆ ಪ್ರವೇಶ ಪಡೆದಾಗ ಆ ವರ್ಷ ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿತ್ತು. ಆಗ ಎಸ್.ವಿ. ಕಲಾ ಮಹಾವಿದ್ಯಾಲಯದಲ್ಲಿ ರಾಜ್ಯಶಾಸ್ತ್ರವನ್ನು ಹೆಚ್ಚಾಗಿ ತೆಗೆದುಕೊಳ್ಳುತ್ತಿದ್ದರು. ಇವರ ಗೆಳೆಯರಲ್ಲಿ ಮಲ್ಲಾರಡ್ಡಿಯು ರಾಜ್ಯಶಾಸ್ತ್ರ ತೆಗೆದುಕೊಂಡಿದ್ದರಿಂದ, ಹಿರೇಮಠರೂ ಅದನ್ನೇ ತೆಗೆದುಕೊಂಡರು. ಒಂದು ತಿಂಗಳು ಓದುವುದರಲ್ಲಿ ಕಲ್ಬುರ್ಗಿಗೆ ಬಂದ ತಿಪ್ಪಣ್ಣ ಕಟ್ಟಿಮನಿ ಮಾಸ್ತರರು ಭೇಟ್ಟಿಯಾದರು. ಸಹಜವಾಗಿಯೇ "ನೀನು ಕನ್ನಡ ಐಚ್ಛಿಕ ತೆಗೆದುಕೊಂಡಿರಬೇಕಲ್ಲವೇ" ? ಎಂದು ಪ್ರಶ್ನಿಸಿದರು. ಇಲ್ಲ

ಸರ್; ರಾಜ್ಯಶಾಸ್ತ್ರ ತೆಗೆದುಕೊಂಡಿರುವೆ ಎಂದರು. ನೀನು ಮೊದಲಿನಿಂದಲೂ ಭಾಷಣ ಮಾಡುವುದರಲ್ಲಿ, ಕವನ, ಪ್ರಬಂಧ ಬರೆಯುವದರಲ್ಲಿ ಮುಂದಿದ್ದೀ. ಇದೇಕೆ ರಾಜ್ಯಶಾಸ್ತ್ರ ತೆಗೆದುಕೊಂಡೆ ? ಕನ್ನಡ ತೆಗೆದುಕೊಂಡರೆ ಮುಂದೆ ಸಾಹಿತಿಯಾಗಿ ಬೆಳೆಯುವಿ ಎಂದು ಸೂಚಿಸಿದರು. ಅವರು ಹೋದ ಮೇಲೆ ವಿಚಾರ ಮಾಡುವುದರಲ್ಲೇ ಮತ್ತೆ ಒಂದು ತಿಂಗಳು ಕಳೆಯಿತು. ನಂತರ ಕನ್ನಡ ಐಚ್ಛಿಕ ವಿಷಯ ತೆಗೆದುಕೊಳ್ಳುವದೇ ನಿರ್ಧಾರ ಮಾಡಿ ಕನ್ನಡ ವಿಭಾಗದ ಮುಖ್ಯಸ್ಥರಿಗೆ ಕೇಳಿದರು. ಈಗಾಗಲೇ ಕೆಲವು ಪಾಠಗಳು ಮುಗಿದಿವೆ. ಇಷ್ಟು ತಡಮಾಡಿ ಯಾಕೆ ಬರುವೆ. ನೀನೊಬ್ಬನಲ್ಲದೆ ಕೆಲವು ಜನರನ್ನು ನಿನ್ನೊಂದಿಗೆ ಕರೆತಂದರೆ ಉತ್ತಮವೆಂದು ತಿಳಿಸಿದರು. ಗೆಳೆಯರನ್ನು ಕರೆದು ಕನ್ನಡ ತೆಗೆದುಕೊಳ್ಳಲು ಚರ್ಚಿಸಿದಾಗ ಕೆಲವರು ಕಠಿಣವೆಂದು ಹಿಂಜರಿದರು. ಅವರಿಗೆಲ್ಲ ಹಿರೇಮಠರ ಮನೆಯಲ್ಲಿ ತಿಳಿಸಿ ಹೇಳುವ ಭರವಸೆ ನೀಡಿದ ಮೇಲೆ ಒಪ್ಪಿಕೊಂಡರು. ಅವರೊಬ್ಬರಲ್ಲದೆ ಸುಮಾರು ಹನ್ನೆರಡು ಗೆಳೆಯರನ್ನು ರಾಜ್ಯಶಾಸ್ತ್ರದಿಂದ ಬಿಡಿಸಿ ಕನ್ನಡ ವಿಭಾಗಕ್ಕೆ ತಂದರು. ಅಲ್ಲಿಯವರೆಗೂ ಮೂರು ಅಂಕಿ ಬಿಟ್ಟು ಹೆಚ್ಚಿನ ಜನ ಕನ್ನಡ ವಿಭಾಗದ ವಿಷಯ ತೆಗೆದುಕೊಂಡಿದ್ದು ಇರಲಿಲ್ಲ. ಹನ್ನೆರಡು ಜನರೊಂದಿಗೆ ಮೊದಲಿನ ಮೂರು ಜನ ಸೇರಿ ಕನ್ನಡ ವಿಭಾಗದಲ್ಲಿ ಹದಿನೈದು ಜನ ವಿದ್ಯಾರ್ಥಿಗಳ ಸಮೂಹವೇ ದೊಡ್ಡದಾಗಿತ್ತು. ಇವರೆಲ್ಲರನ್ನು ನೋಡಿ ಅಧ್ಯಾಪಕರು ತುಂಬಾ ಸಂತೋಷಪಟ್ಟರು. ಎಸ್.ಎಸ್. ಬಾಣದ ಅವರು ಶಬ್ದಮಣಿ ದರ್ಪಣ ಮತ್ತು ಹಳೆಗನ್ನಡ ಕಾವ್ಯಗಳು ಹೇಳುತ್ತಿದ್ದರು. ಪ್ರಭುಲಿಂಗಯ್ಯ ಮಲ್ಲಾಪೂರ ರವರು ಕಾವ್ಯವಿಮಾಂಶೆ, ಭಾಷಾಶಾಸ್ತ್ರ ಕಲಿಸುತ್ತಿದ್ದರು. ಈ ಇಬ್ಬರು ಪರಿಣಿತ ವಿದ್ವಾಂಸರು ಹಿರೇಮಠರಿಗೆ ಹಳೆಗನ್ನಡ ಕಾವ್ಯ ಮತ್ತು ಕಾವ್ಯವಿಮಾಂಶೆ ಭಾಷಾ ಶಾಸ್ತ್ರದಲ್ಲಿ ಹೆಚ್ಚಿನ ಆಸಕ್ತಿ ಮೂಡಿಸಿದರು.

ಕಲ್ಬುರ್ಗಿಯಲ್ಲಿ ಪ್ರತಿ ವರ್ಷ ವಾರ್ಷಿಕ ಪರೀಕ್ಷೆ ಸಮೀಪಿಸುವಾಗಲೇ ಹೋಳಿ ಹುಣ್ಣಿಮೆಯಲ್ಲಿ ಬ್ರಹ್ಮಪೂರದ ಓಣಿಗಳಲ್ಲಿ ಮನೆಯ ಮುಂದೆ ಅಥವಾ ಚೌಕಿನಲ್ಲಿ ಎರಡು ಗೇಣು ಕಬ್ಬು ತೋಡಿ ಸುತ್ತಲಿನ ಸ್ಥಳವನ್ನು ಸ್ವಚ್ಛಗೊಳಿಸಿ ನೀರಿನ ಚಳಿ ಹೊಡೆದು ಸುತ್ತಲೂ ವಿವಿಧ ಬಣ್ಣದ ರಂಗೋಲಿ ಹಾಕುತ್ತಿದ್ದರು. ತಗ್ಗಿನಲ್ಲಿ ದೀಪ ಹಚ್ಚುತ್ತಿದ್ದರು. ಇದೇ ಕಾಮನಕಟ್ಟೆ. ಹುಣ್ಣಿಮೆಯ ದಿನ ಕಾಮನ ಸುಡಲು ದಿನಾಲು ಓಣಿಯಲ್ಲಿ ಕಟ್ಟಿಗೆ, ಕುಳ್ಳು ಹುಡುಗರು ಕದ್ದು ತಂದು ಈ ಕಾಮನ ಸುಡುವ ಜಾಗದಲ್ಲಿ ಹಾಕುತ್ತಿದ್ದರು. ಕಾಮನ ಸುಡುವ ಎರಡುಮೂರು ದಿನಗಳ ಮೊದಲೇ ಹುಡುಗರು ಸೀಸೆಗಳಲ್ಲಿ ಬಣ್ಣ ತುಂಬಿಕೊಂಡು ರಸ್ತೆಗಳಲ್ಲಿ ತಿರುಗಾಡುವವರ ಮೇಲೆ ಚೆಲ್ಲುವರು. ಹುಣ್ಣಿಮೆಯ ದಿನ ತಾವು ತಂದಿಟ್ಟ ಕುಳ್ಳು-ಕಟ್ಟಿಗೆಯನ್ನು ಕಾಮನ ಕಟ್ಟೆಯ ಮೇಲೆ ಸರಿಯಾಗಿ ಜೋಡಿಸಿ ಸಂಜೆಗೆ ಬೆಂಕಿ ಹಚ್ಚಿ ಸುಡುತ್ತಿದ್ದರು. ಹೋಳಿ ಹುಣ್ಣಿಮೆಯ ದಿನ ಓಣಿಯ ವಿದ್ಯಾರ್ಥಿಗಳು ಕಿರು ನಾಟಕ ಪ್ರದರ್ಶಿಸಿದರೆ, ಕೆಲವು ಓಣಿಯಲ್ಲಿ ಸಂಗೀತದ ರಸಮಂಜರಿ ಕಾರ್ಯಕ್ರಮ ನಡೆಯುತ್ತಿದ್ದವು.

ಆ ವರ್ಷ ಬ್ರಹ್ಮಪೂರದ ಶರಣಬಸವೇಶ್ವರರ ದಾಸೋಹ ಮನೆಯ ಪಕ್ಕದ ಚೌಕಿನಲ್ಲಿ ರಸಮಂಜರಿ ಕಾರ್ಯಕ್ರಮ ಇಟ್ಟುಕೊಳ್ಳಲಾಗಿತ್ತು. ಪುಣೆಯಿಂದ ಪ್ರಸಿದ್ಧ ಸಂಗೀತಗಾರರು, ಹಿನ್ನಲೆಗಾಯಕರು ಬಂದಿದ್ದರು. ಜನ ನೋಡಲು ಅಪಾರ ಸಂಖ್ಯೆಯಲ್ಲಿ ಸೇರಿದ್ದರು. ಇವರೆಲ್ಲ ಗೆಳೆಯರು ಒಂದು ಮನೆಯ ಕಟ್ಟೆಯ ಮೇಲೆ ಕುಳಿತಿದ್ದರು. ಉದ್ಘಾಟನೆ ಮುಗಿದು ಮನರಂಜನೆ ಕಾರ್ಯಕ್ರಮ ಪ್ರಾರಂಭವಾಯಿತು. ಒಂದು ಅರ್ಧ ಗಂಟೆ ಅನೇಕ ಕನ್ನಡ ಮತ್ತು ಹಿಂದಿ ಸಿನಿಮಾ ಹಾಡುಗಳನ್ನು ಹಾಡುಗಾರರು ತಮ್ಮ ಮಧುರ ಕಂಠದಿಂದ ಹಾಡಿ, ಜನರ ಮನಸ್ಸನ್ನು ತಣಿಸಿದರು. ಮುಂದಿನ ಕಾರ್ಯಕ್ರಮ ನೋಡಲು ಜನ ಕಾತುರರಾಗಿ ನಿಂತು ವೀಕ್ಷಿಸುತ್ತಿದ್ದರು. ಸುಮಾರು ಹನ್ನೊಂದು ಗಂಟೆಯ ಸಮಯವಾಗಿರಬೇಕು, ಒಮ್ಮೆಲೆ ಸ್ಟೇಜಿನ ಮೇಲೆ ಬಂದ ನಿರೂಪಕನು ಜೋರಾಗಿ ಎಲ್ಲರೂ ನಿಮ್ಮ ನಿಮ್ಮ ಮನೆಗೆ ಬೇಗನೆ ಹೋಗಿರಿ. ಕಲ್ಬುರ್ಗಿಯ ಮುಖ್ಯ ಬಜಾರದಲ್ಲಿ ಜಗಳವಾಗಿದೆ. ಹೊಡೆದಾಟದಲ್ಲಿ ಸತ್ತಿದ್ದಾರೆ. ಅಂಗಡಿಗಳಿಗೆ ಬೆಂಕಿ ಹಚ್ಚಿದ್ದಾರೆ. ಅದಕ್ಕಾಗಿ ಈ ಸಂಗೀತ ಕಾರ್ಯಕ್ರಮವನ್ನು ಇಷ್ಟಕ್ಕೆ ನಿಲ್ಲಿಸುತ್ತೇವೆ. ತಾವೆಲ್ಲ ಶಾಂತ ರೀತಿಯಿಂದ ಹೋಗಿ ಮನೆ ಸೇರಿಕೊಳ್ಳಿರಿ ಎಂದು ಪುನಃ ಪುನಃ ಹೇಳತೊಡಗಿದನು. ಕುಳಿತ ಜನರಿಗೆ ಸ್ಪಷ್ಟವಾಗಿ ಯಾವುದೂ ತಿಳಿಯದೇ ಹಿಂದೇಟು ಹಾಕಿದರೆ ಮನೆಯ ಮೇಲೆ ನಿಂತು ನೋಡುವವರಿಗೆ ಮುಖ್ಯ ಬಜಾರದಲ್ಲಿ ಉರಿಯ ಹೊಗೆಯು ಹಚ್ಚಿರುವುದು ನೋಡಿ ನಡೆಯಿರಿ ಎಂದು ತಮ್ಮ ಮನೆಗೆ ಓಡ ತೊಡಗಿದರು. ಹೋಗುವ ಜನರನ್ನು ನೋಡಿ ನಿಂತ ಜನ ಎದ್ದು-ಬಿದ್ದು ಮನೆಕಡೆ ಓಡತೊಡಗಿದರು. ಕೆಲವರು ಬಿದ್ದು ಚಪ್ಪಲಿ, ಅಂಗಿ ಕಳೆದವು. ಕಾಲು ಮುರಿದುಕೊಂಡರು. ಹಿರೇಮಠರು ಹಾಗೂ ಗೆಳೆಯರೆಲ್ಲ ಓಡೋಡಿ ಬಂದು ಕೋಣೆಯಲ್ಲಿ ಸೇರಿದರು. ಮನೆಯ ಮೇಲೇರಿ ನೋಡಿದರೆ ಮುಖ್ಯ ಬಜಾರದಲ್ಲಿ ಹಾಗೂ ಬೇರೆ ಬೇರೆ ಕಡೆ ಬೆಂಕಿಯ ಜ್ವಾಲೆ ಕಾಣುತ್ತಿತ್ತು. ಮನೆ ಮತ್ತು ಅಂಗಡಿಗಳಿಗೆ ಬಜಾರದಲ್ಲಿ ಬೆಂಕಿ ಹಚ್ಚಲಾಯಿತು. ಅದನ್ನು ನಿಯಂತ್ರಿಸಲು ಪೋಲಿಸರು ಜೀಪಿನಲ್ಲಿ ಗಸ್ತು ತಿರುಗುತ್ತ ಧ್ವನಿ ವರ್ಧಕ ಮೂಲಕ ಮನೆಯಿಂದ ಹೊರಗೆ ಬಾರದಂತೆ ಎಚ್ಚರಿಕೆ ನೀಡುತ್ತಿದ್ದರು. ಬಹುಹೊತ್ತಿನ ವರೆಗೆ ಬೆಂಕಿ ಉರಿಯುತ್ತಲೇ ಇತ್ತು. ಹೀಗೆ ಕಾಮನ ಸುಡುವುದರಿಂದ ಸುರುವಾದ ಉರಿ ಕ್ರಮೇಣ ಮೂರ್‍ನಾಲ್ಕು ದಿನವಾದರೂ ಆಯಾ ಓಣಿಯಲ್ಲಿ ಹಿಂದು ಅಂಗಡಿ ಮನೆಗಳಿಗೆ ಮುಸ್ಲಿಂರು, ಮುಸ್ಲಿಂರ ಅಂಗಡಿ, ಮನೆಗಳಿಗೆ ಅಲ್ಲಿಯ ಹಿಂದುಗಳು ಬೆಂಕಿ ಹಚ್ಚುವುದು ನಡೆದೇ ಇತ್ತು. ಹೀಗಾಗಿ ಶಿಸ್ತು, ಶಾಂತಿಯನ್ನು ಕಾಪಾಡುವುದು ಪೋಲಿಸ್ ಅಧಿಕಾರಿಗಳಿಗು, ಜಿಲ್ಲಾಧಿಕಾರಿಗಳಿಗು ಒಂದು ಸಮಸ್ಯೆಯೇ ಆಗಿತ್ತು. ಆದ್ದರಿಂದ ಜಿಲ್ಲಾಧಿಕಾರಿಗಳು ೧೪೪ ನೇ ಕಲಂ ನಿಷೇದಾಜ್ಞೆ ಜಾರಿ ಮಾಡಿ ಗುಂಪು ಇಲ್ಲವೇ ಇಬ್ಬರು ಜೊತೆಯಾಗಿ ನಗರದಲ್ಲಿ ತಿರುಗಾಡದಂತೆ ಆದೇಶ ಹೊರಡಿಸಿದರು. ಓಣಿ ಓಣಿ ಸುತ್ತುತ್ತು ಮೈಕ್‌ನಲ್ಲಿ ಪ್ರಚಾರ ಮಾಡಿದರು. ಹಗಲು ಏನು ಕಾಣದಿದ್ದರೂ ರಾತ್ರಿ ಮಾತ್ರ ಬೆಂಕಿ ನಾಲಿಗೆ ಚಾಚಿ ಉರಿಯುತ್ತಲೇ ಇತ್ತು. ಪ್ರತಿದಿನ ಓಣಿಯಲ್ಲಿಯ ಮನೆಗಳಿಗೆ ಬೆಂಕಿ ಹಚ್ಚುವುದು ನಡೆಯಿತು. ಇದರಿಂದ ಆಡಳಿತ ವರ್ಗ ಕಂಗೆಟ್ಟಿತ್ತು. ಕೊನೆಗೆ ಶಾಂತಿ ಕಾಪಾಡಲು ಸರ್ಕಾರ ಪ್ಯಾರಾ ಮಿಲಿಟರಿ ಪಡೆಗಳನ್ನು ಕರೆಯಿಸಿಕೊಂಡರು. ಪ್ಯಾರಾ ಮಿಲಿಟರಿಯ ಸೈನಿಕರು ಬಂದೂಕು ಹಿಡಿದು ಪ್ರತಿ ಓಣಿಯಲ್ಲಿ ಪರೇಡ್ ಮಾಡಿದರು. ಕೈಯಲ್ಲಿ ತುಂಬಿದ ಗನ್

ಹಿಡಿದುಕೊಂಡು ಸಾಮಾಜಿಕ ನೆಮ್ಮದಿಯನ್ನು ಹಾಳು ಮಾಡುವ, ಆಸ್ತಿ–ಪಾಸ್ತಿ ಸುಟ್ಟು ಹಾಕುವ 'ಪುಂಡರಿಗೆ ಕಂಡಲ್ಲಿ ಗುಂಡು' ಎಂದು ಆದೇಶ ನೀಡಿದರು. ಆಗ ಜನ ಹೆದರಿದರು. ಈ ಒಂದು ವಾರದಲ್ಲಿ ಕರ್ಫ್ಯೂ ಆರ್ಡರ್ ಇದ್ದುದರಿಂದ ಪ್ರತಿದಿನ ಪೋಲಿಸರ ಕಣ್ಣಿಗೆ ಬೀಳದಂತೆ ಕಳ್ಳಹಾದಿ ಅಂದರೆ, ಬ್ರಹ್ಮಪೂರದ ಸಂದಿಯ ದಾರಿಯಲ್ಲಿ ಹೋಗಿ ಗೋವಾ ಹೋಟಲ್ ಎದುರಿಗಿರುವ ಖಾನಾವಳಿಯಲ್ಲಿ ಊಟ ಮಾಡಿ ರಾತ್ರಿ ಊಟಕ್ಕಾಗಿ ರೊಟ್ಟಿ ಕಟ್ಟಿಸಿಕೊಂಡು ಬರುತ್ತಿದ್ದರು. ಅಜ್ಜಿ ಹೋಗಿ ಬಾಗಿಲು ತೆರೆದಳು. ಪಡಸಾಲೆಯಲ್ಲಿ ಮುದುಕಿ ಹೊಲಿಯುವ ಖೌದಿ ಬಿಟ್ಟು ಬೇರೆ ಕಾಣಲಿಲ್ಲ. ಮನ್ಯಾಗ ಯಾರೂ ಇಲ್ರಿ, ಈ ದಂಗೆ ಎದ್ದಿದ್ದು ನೋಡಿ ಊರು ಬಿಟ್ಟು ಹೋಗ್ಯಾರ್, ಏನ್ಬೇಕು ಎಂದುದಕ್ಕೆ ಪೋಲಿಸರು ಯಾರ ಸುಳಿಯುವ ಕಾಣದೇ ಸುಮ್ಮನೆ ಹಿಂದಿರುಗಿ ಹೋದರು. ಬಾಗಿಲ ಮುಚ್ಚಿ ಬಂದ ಮುದುಕಿ. ನಿಮ್ಮದೇನು ಸುದ್ದಿ ಎಂದು ಕೇಳಿದಳು. ಹೊಟ್ಟೆ ಹಸಿದಿದೆ. ಖಾನಾವಳಿಗೆ ಹೋಗುವಾಗ ಬೆನ್ನುಹತ್ತಿದ್ದರು. ಅದಕ್ಕಾಗಿ ನಿಮ್ಮ ಮನೆ ಹೊಕ್ಕೆವೆಂದು ಹೇಳಿದರು. ನಿಮ್ಮಂತ ಓದುವ ಹುಡುಗರಿಗೆ ಪೋಲಿಸರು ಬಹಳ ತ್ರಾಸ ಮಾಡ್ಯಾರ್ ಎಂದು ಕನಿಕರದಿಂದ ರೊಟ್ಟಿಕೊಟ್ಟು ಊಟ ಮಾಡಿಸಿದಳು. ಅಂದು ಆ ಅಜ್ಜಿಯ ಊಟ ಉಂಡು ಆ ಅಜ್ಜಿಗೆ ದೇವರು ಇನ್ನೂ ನೂರು ವರ್ಷ ಬದುಕುವ ಭಾಗ್ಯ ಕೊಡಲೆಂದು ಹರಿಸಿ ಮನೆ ಸೇರಿದರು. ಆ ವರ್ಷದ ಹೋಳಿ ಹುಣ್ಣಿಮೆ ಒಂದು ವಾರ ಉರಿದು ಕ್ರಮೇಣ ಶಾಂತಿ ನೆಲೆಸಿತು. ಹೋಳಿ ಹುಣ್ಣಿಮೆಯಲ್ಲಿ ಸುಟ್ಟ ಅಂಗಡಿ ಮತ್ತು ಮನೆಗಳಿಗೆ ಅಲ್ಪಮತದ ಪರಿಹಾರಧನವನ್ನು ಸರ್ಕಾರ ನೀಡಿತು. ಆದರೆ ಎರಡೂ ಜನಾಂಗಗಳ ಹೃದಯದಲ್ಲಿ ಬಿಟ್ಟ ಬಿರುಕು ಇನ್ನೂ ಮಾಸದ ಕಲೆಯಾಗಿ ಮತ್ತೆ ಮೆತ್ತಿಕೊಂಡಿದೆ. ಆ ವರ್ಷ ವಾರ್ಷಿಕ ಪರೀಕ್ಷೆ ನಡೆಯುವುದು ಆತಂಕವಾಗಿತ್ತು. ಆದರೆ ದಿನಗಳೆದಂತೆ ಜನರು ಕಹಿನೆನಪು ಮರೆತು ಮತ್ತೆ ಮೊದಲಿನಂತೆ ವ್ಯಾಪಾರ ಉದ್ಯೋಗಗಳಲ್ಲಿ ತೊಡಗಿದರು. ಇಂತಹ ದಂಗೆಯ ದಿನಗಳಲ್ಲಿ ಹಿರೇಮಠರು ವಾರ್ಷಿಕ ಪರೀಕ್ಷೆ ಬಂದಿರುವುದರಿಂದ ಊಟಕ್ಕೂ, ಓದುವುದಕ್ಕು ತೊಂದರೆ ಅನುಭವಿಸಿದರು. ಅಧ್ಯಾಪಕರ ಪ್ರೋತ್ಸಾಹದಿಂದ ಬಿ.ಎ. ಎರಡನೇ ವರ್ಷದಲ್ಲಿ ತೇರ್ಗಡೆಯಾದರು.

ಅಂತಿಮ ವರ್ಷಕ್ಕೆ ಬಂದಾಗ ಆ ವರ್ಷ ಮಳೆ ಬಾರದೆ ಬರಗಾಲ ಬಿದ್ದಿತ್ತು. ರೈತರು ತಮ್ಮ ದನಗಳನ್ನು ಹೊಡೆದು ಬಿಟ್ಟರು. ಕೆಲಸವಿಲ್ಲದೆ ಜನರು ಗೂಳೆಹೊತ್ತು ಪುಣೆ, ಮುಂಬೈ, ಬೆಂಗಳೂರು, ಹೈದರಾಬಾದಕ್ಕೆ ಕುಟುಂಬ ಸಹಿತ ದುಡಿಯಲು ಹೋದರು. ಸರಕಾರ ದನಗಳಿಗೆ ಅಲ್ಲಲ್ಲಿ ಗೋ ಶಿಬಿರಗಳನ್ನು ಮೇವಿನ ವ್ಯವಸ್ಥೆ ಮಾಡಿದರು. ಹಸಿದ ಜನರಿಗೆ ಗಂಜಿ ಕೇಂದ್ರ ತೆರೆಯಿತು. ಜನರು ಹಸಿವಿನಿಂದ ನರಳುತ್ತ ಬದುಕುತ್ತಿದ್ದರು. ಇಂತಹ ಬರಗಾಲ ಬಂದರೂ ಮನೆಯವರು ಓದಲು ಪ್ರೋತ್ಸಾಹಿಸಿದರು. ಅಂತಿಮ ವರ್ಷದಲ್ಲಿ ಗೆಳೆಯ ಮಲ್ಲಾರಡ್ಡಿ ಕಿರದ ಹಳ್ಳಿಯ ಶರಣಯ್ಯ, ದೇವದುರ್ಗ ತಾಲೂಕಿನ ಬಸವರಾಜ ಪ್ಯಾಟಿಮಠ ಖೂಬಾ ಪ್ಲಾಟಿನಲ್ಲಿ ರೂಮು ಹಿಡಿದಿದ್ದರು. ಹಿರೇಮಠರು ಆತ್ಮೀಯ ಗೆಳೆಯರಾಗಿರುವುದರಿಂದ ಅವರ ರೂಮಿನಲ್ಲಿಯೇ ಭಾಗಿಯಾದರು. ಈ ಬರಗಾಲದ ವರ್ಷವೇ ಬಿ.ಎ. ಅಂತಿಮ ವರ್ಷದ ಪರೀಕ್ಷೆ ಕೊಟ್ಟು ಐಚ್ಛಿಕ

ಕನ್ನಡ ತೆಗೆದುಕೊಂಡ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ತೇರ್ಗಡೆಯಾದುದಕ್ಕೆ ಕನ್ನಡ ವಿಭಾಗದ ಅಧ್ಯಾಪಕರೇ ತಮ್ಮ ನೆಚ್ಚಿನ ಶಿಷ್ಯರಿಗೆ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಂಡದ್ದು ಹೊಸ ದಾಖಲೆಯನ್ನು ಸೃಷ್ಟಿಸಿತು.

ಬರಗಾಲ ಬಂದಿರುವುದರಿಂದ ಮುಂದೆ ಎಮ್.ಎ. ಕಲಿಯುವುದಕ್ಕೆ ಯೋಚಿಸಬೇಕಾಯಿತು. ಎಮ್.ಎ. ಎರಡು ವರ್ಷಗಳ ಕೋರ್ಸ್ ಇರುವುದರಿಂದ ಮುಂದಿನ ಖರ್ಚು ಎಷ್ಟು ಬರುವದೊ ಏನೋ, ಈ ವರ್ಷದಿಂದ ಯಾವ ಬೆಳೆಯು ಬಂದಿಲ್ಲ ಎಂದು ಅವರ ತಂದೆಯವರು ಚರ್ಚಿಸಿದರು. ಆದರೆ ಹಿರೇಮಠರು ಅವರಿಗೆ ಎಮ್.ಇ. ಓದುವ ಉತ್ಕಟ ಇಚ್ಛೆಯಿತ್ತು. ಯಾವುದಾದರು ನೌಕರಿಗೆ ಸೇರೆಂದು ಸೂಚಿಸಿದರು. ಓದುವ ಹಂಬಲದಿಂದ ಹಿರೇಮಠರು ನೌಕರಿಯ ಕಡೆ ಗಮನವೇ ಕೊಡಲಿಲ್ಲ. ಕಲ್ಬುರ್ಗಿಯಲ್ಲಿ ಈಗಾಗಲೇ ಧಾರವಾಡ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವು ತೆರೆಯಲಾಗಿತ್ತು. ಕನ್ನಡ, ಇಂಗ್ಲೀಷ್, ಗಣಿತ ಮುಂತಾದ ಕೆಲವೇ ವಿಷಯಗಳು ಪ್ರಾರಂಭವಾಗಿದ್ದವು. ಕನ್ನಡ ಎಮ್.ಎ. ಓದಲು ಅರ್ಜಿ ಸಲ್ಲಿಸಿದರು. ಹಾಗೂ ಸೋಲಾಪೂರದ ದಯಾನಂದ ಕಾಲೇಜಿನಲ್ಲಿ ನಡೆಯುತ್ತಿರುವ ಎಮ್.ಎ. ಕನ್ನಡ ವಿಭಾಗಕ್ಕು ಪ್ರವೇಶ ಪಡೆಯಲು ಅರ್ಜಿ ಹಾಕಿ ಊರಿಗೆ ಬಂದರು. ಇವರಂತೆಯೇ ಗೆಳೆಯರಾದ ಬೋನಾಳದ ಮಲ್ಲಾರಡ್ಡಿ, ಕಿರದಹಳ್ಳಿಯ ಶರಣಯ್ಯನವರು ಎಮ್.ಎ. ರಾಜ್ಯಶಾಸ್ತ್ರ ವಿಭಾಗಕ್ಕೆ ಅರ್ಜಿ ಹಾಕಿದರು. ಒಂದು ವಾರದ ನಂತರ ಸೋಲಾಪೂರ ಕೇಂದ್ರದಿಂದಲೂ ಎಮ್.ಎ. ಪ್ರವೇಶದ ಆದೇಶ ಪತ್ರ ಬಂದಿತು.. ಸೋಲಾಪೂರಕ್ಕೆ ಹೋಗಲು ಅವರ ತಂದೆಯವರಿಗೆ ಕೇಳಿದಾಗ "ಅದು ಮರಾಠಿ ಪ್ರದೇಶ. ನಮಗೆ ದೂರವಾಗುವದು" ಎಂದು ಸಂಶಯವನ್ನು ವ್ಯಕ್ತಪಡಿಸಿದರು. ಅದೇ ವಾರ ಕಲ್ಬುರ್ಗಿ ಕೇಂದ್ರದಲ್ಲಿ ಕನ್ನಡ ವಿಭಾಗದಲ್ಲಿ ಎಮ್.ಎ. ಪ್ರವೇಶಕ್ಕೆ ಆಯ್ಕೆಯಾದವರ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಹಚ್ಚಲಾಗಿತ್ತು. ಆ ವರ್ಷದ ಪಟ್ಟಿಯಲ್ಲಿ ಇವರ ಹೆಸರು ಇರುವುದನ್ನು ನೋಡಿದ ಗೆಳೆಯರು ಒಂದು ವಾರದೊಳಗಾಗಿ ಮೂಲ ದಾಖಲೆಪತ್ರ ಮತ್ತು ಶುಲ್ಕ ಕಟ್ಟಲು ಬರುವಂತೆ ಸೂಚಿಸಿ ಅವರಿಗೆ ಗೆಳೆಯರು ಪತ್ರ ಬರೆದರು. ಆ ಪತ್ರ ಮನೆಗೆ ಬಂದಾಗ ತಂದೆಯವರು ಊರಲ್ಲಿರಲಿಲ್ಲ. ಗೋಗಿಯ ಅಂಗಡಿಯವರಲ್ಲಿ ಹಣ ತೆಗೆದುಕೊಂಡು ಕಲ್ಬುರ್ಗಿಗೆ ಬಂದು ಮೂಲ ದಾಖಲಾತಿ ಪತ್ರಗಳನ್ನು ತೆಗೆದುಕೊಂಡು ಸ್ನಾತಕೋತ್ತರ ಕೇಂದ್ರಕ್ಕೆ ಹೋದರು. ಆಗ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಬಿ. ಹೆಂಡಿಯವರು "ಆಯ್ಕೆ ಪಟ್ಟಿಯಲ್ಲಿ ನಿನ್ನ ಹೆಸರಿದೆಯೇ" ಎಂದರು. ಹೌದು ಸರ್, ಎಂದು ಅವರಿಗೆ ಕ್ರಮ ಸಂಖ್ಯೆ ಹೇಳಿ ಮೂಲ ದಾಖಲೆ ಪತ್ರಗಳನ್ನು ತೋರಿಸಿದರು. ನೋಡಿ ತಿರುಗಿ ಸರ್ಕಾರಿ ಕಾಲೇಜಿನ ಆಫೀಸಿಗೆ ಹೋಗಿ ಫೀಸು ಕಟ್ಟು ನಾಳೆಯಿಂದ ತರಗತಿಗೆ ತಪ್ಪದೆ ಹಾಜರಾಗಬೇಕೆಂದು ಆದೇಶಿಸಿದ್ದರು. ತಿರುಗಿ ಊರಿಗೆ ಹೋಗದೆ ಆಗಲೇ ಬಂದು ರೂಮು ಹಿಡಿದಿದ್ದ ಗೆಳೆಯರ ರೂಮಿನಲ್ಲಿ ಕೂಡಿಕೊಂಡರು. ಎರಡ್ಮೂರು ದಿನಗಳು ಕಳೆಯುವುದರಲ್ಲಿಯೇ ವಿಷಯ ಅವರ ತಂದೆಯವರಿಗೆ ತಿಳಿಯಿತು. ಕೂಡಲೆ ಮನೆಯಿಂದ ಹಾಸಿಗೆ, ಬಟ್ಟೆ, ಬುತ್ತಿ

ಕಟ್ಟಿಸಿಕೊಂಡು ಕಲ್ಬುರ್ಗಿಗೆ ಬಂದು ಖರ್ಚಿಗೆ ಹಣ ಕೊಟ್ಟು ಗೆಳೆಯರೊಂದಿಗೆ ಮೊದಲಿನ ಬ್ರಹ್ಮಪೂರದ ಖಾನಾವಳಿಯಲ್ಲಿ ಊಟ ಮಾಡಲು ಹೇಳಿ ಊರಿಗೆ ಹಿಂದಿರುಗಿದರು. ದಿನಾಲು ಸಿಟಿ ಬಸ್ಸಿಗೆ ಕಲ್ಬುರ್ಗಿಯ ಸ್ನಾತಕೋತ್ತರ ಕೇಂದ್ರಕ್ಕೆ ಹೋಗಲು ಮುಖ್ಯ ರಸ್ತೆಗೆ ಕೂಡುವ ಖೂಬಾ ಪ್ಲಾಟಿನ ಚೌಕಿನಲ್ಲಿ ನಿಲ್ಲುತ್ತಿದ್ದರು. ಆಗ ವಿಭಾಗದಲ್ಲಿ ಡಾ. ಬಿ.ಬಿ. ಹೆಂಡಿಯವರು ಮುಖ್ಯಸ್ಥರಾಗಿದ್ದರೆ, ಡಾ.ಎಮ್.ಜಿ. ಬಿರಾದಾರ, ಡಾ. ಕೃಷ್ಣಮೂರ್ತಿ, ಕಿತ್ತೂರು ಡಾ. ಎಮ್.ಎಸ್. ಲಠ್ಠೆ, ಡಾ. ಬಸವಲಿಂಗಯ್ಯ ಮಲ್ಲಾಪೂರ, ಡಾ. ಶಶಿಕಲಾ ಮೊಳದಿ, ಡಾ. ಸಂಗಮೇಶ ಸೌದತ್ತಿಮಠ ಅವರು ಅಧ್ಯಾಪಕರಾಗಿದ್ದರು. ದಿನಾಲೂ ಪಾಂಡಿತ್ಯಪೂರ್ಣ ಪಾಠ ಹೇಳುತ್ತಿದ್ದರು. ಡಾ. ಬಿ.ಬಿ. ಹೆಂಡಿಯವರು ಶಿಸ್ತು ಮತ್ತು ದಕ್ಷತೆಗೆ ಮಹತ್ವ ಕೊಡುತ್ತಿದ್ದರು. ದಿನಾಲು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಒಂದೇ ಸಿಟಿ ಬಸ್ಸಿನಲ್ಲಿಯೇ ಹೋಗಿ. ಮತ್ತೆ ಬರುತ್ತಿದ್ದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಷಣ, ಸ್ವರಚಿತ ಕವಿತೆಗಳು ಓದುತ್ತಿದ್ದರು. ಆ ವರ್ಷದ ವಾರ್ಷಿಕ ಸ್ನೇಹ ಸಮ್ಮೇಳನಕ್ಕಾಗಿ ವಿಭಾಗದಲ್ಲಿ ನಡೆದ ಆಶುಭಾಷಣ ಸ್ಪರ್ಧೆಯಲ್ಲಿ ಹಿರೇಮಠರು ಸರ್ವಜ್ಞನ ವಿಷಯದ ಮೇಲೆ ಮಾತನಾಡಿ ಪ್ರಥಮ ಪ್ರಶಸ್ತಿಯನ್ನು ಪಡೆದರು.

ಎಮ್.ಎ. ಅಂತಿಮ ವರ್ಷ ಓದುವಾಗಲೇ ಕಲ್ಬುರ್ಗಿಯಲ್ಲಿ ಸಾಹಿತ್ಯಾ ಆಸಕ್ತಿಯ ಗೆಳೆಯರೆಲ್ಲ ಸೇರಿ "ನೃಪತುಂಗ ಕಲಾವಿದರ ಹಾಗೂ ಬರಹಗಾರರ ಸಂಘ" ಸ್ಥಾಪನೆ ಮಾಡಿ, ಅದರ ಸಕ್ರೀಯ ಸದಸ್ಯರಾದರು. ೧೯೭೫ ರಲ್ಲಿ ಎಮ್.ಎ. ದ್ವಿತೀಯ ವರ್ಗದಲ್ಲಿ ಪಾಸಾಗಿ ಅವರು ಇಟ್ಟುಕೊಂಡ ಗುರಿಯನ್ನು ತಲುಪಿದರಲ್ಲದೆ ಊರಿಗೂ, ಮನೆಯವರಿಗು ಕೀರ್ತಿ ತಂದರು.

- **ಹೋರಾಟದ ಜೀವನ**

ಕ್ರೀಯಾಶೀಲರಾದ ಹಿರೇಮಠರು ಎಮ್.ಎ. ಓದುವಾಗಲೇ ಊರಲ್ಲಿ ಜಾಗೃತಿ ಯುವಕ ಸಂಘ ಹಾಗೂ ಅಕ್ಕನ ಬಳಗವನ್ನು ಸ್ಥಾಪಿಸಿ, ಶಹಾಪೂರದ ಸಮಾಜ ಕಲ್ಯಾಣದ ಅಧಿಕಾರಿಗಳನ್ನು ಕರೆಯಿಸಿ ಊರ ಹನುಮಪ್ಪನ ಗುಡಿಯ ಮುಂದೆ ಊರಿನ ಜನರು ಹೆಣ್ಣು-ಗಂಡನ್ನು ಸೇರಿಸಿ ಉದ್ಘಾಟನೆ ಮಾಡಿಸಿದರು. ಉದ್ಘಾಟನೆಯಾದ ಮೂರು ತಿಂಗಳಲ್ಲಿಯೇ ಅವರ ಸಂಘಕ್ಕೆ ಒಂದು ದೊಡ್ಡ ಜಮಖಾನೆ, ಗ್ಯಾಸ್, ರಾತ್ರಿ ಶಾಲೆಗಾಗಿ ಕಪ್ಪು ಹಲಗೆ, ಬಳಪ, ಪುಸ್ತಕ ಹಾಗೂ ಭಜನೆಯ ಸಾಮಾನುಗಳು ಮಂಜೂರಾಗಿ ಬಂದವು. ಊರ ಹಿರಿಯರು ದಿನಾಲೂ ಸಂಜೆ ಒಂದು ಭಜನೆ ಮೇಳದವರಿಗೆ ಸಲಹೆ ಸೂಚನೆಗಳನ್ನು ಕೊಡುತ್ತಿದ್ದರು. ಆಗ ವಯಸ್ಕರ ಶಾಲೆ ಕಲಿಸುವವರಿಗೆ ಮುವ್ವತ್ತು ರೂಪಾಯಿ ಪಗಾರ ಕೊಡುತ್ತಿದ್ದರು. ಆ ಹಣ ಸಂಘಕ್ಕೆ ಕೊಟ್ಟು ಹಿರೇಮಠರೆ ವಯಸ್ಕರಿಗೆ ಕರೆದು ರಾತ್ರಿ ಸಮಯದಲ್ಲಿ ಗ್ಯಾಸ್ ಹಚ್ಚಿ ಅಕ್ಷರ ಹಾಕಿಕೊಡುತ್ತಿದ್ದರು. ಕೆಲವರು ತಮ್ಮ ಹೆಸರು ಬರೆಯಲು ಕಲಿತರೆ ಮತ್ತೆ ಕೆಲವರು ಮಕ್ಕಳಿಗೆ ಪಾಟಿ ಬೇಕೆಂದು ತೆಗೆದುಕೊಂಡು ಹೋದವರು ತಿರುಗಿ ಬರಲೇ ಇಲ್ಲ. ಊರಲ್ಲಿ ಸರಕಾರಿ ಶಾಲೆ ಕಲಿಸಲು ಕಟ್ಟಡವಿರಲಿಲ್ಲ. ಊರಿನ ಒಂದು ದೊಡ್ಡ ಮನೆಯ ಪಡಸಾಲೆಯಲ್ಲಿ ಶಾಲೆ ನಡೆಯುತ್ತಿತ್ತು. ಹಿರೇಮಠರು ಮೆಟ್ರಿಕ್ ಓದುವಾಗ ಪ್ರಾರಂಭವಾದ ಕಟ್ಟಡ ಪೂರ್ತಿ ಮುಗಿದಿರಲಿಲ್ಲ. ಶಾಲೆಯ ಕಟ್ಟಡಕ್ಕಾಗಿ ಊರಿನ ಜಾಗೃತ ತರುಣ ಸಂಘದವರು ಹೋರಾಟ ಮಾಡಿದಾಗಲೇ ಕಟ್ಟಡ ಪೂರ್ತಿ ಮುಗಿಯಿತು. ಯುವಕ ಸಂಘದ ಗೆಳೆಯರೆಲ್ಲ ಸೇರಿ ಸಂಜೆ ಊರಲ್ಲಿ ಕಬಡ್ಡಿ, ಖೋಖೋ, ವಾಲಿಬಾಲ್ ಆಡುತ್ತಿದ್ದರು. ಅಷ್ಟೇ ಅಲ್ಲ. ಸುತ್ತಲಿನ ಊರಿನ ತರುಣ ಸಂಘದವರಿಗೆ ಕರೆಕೊಟ್ಟು ಬಂದವರೊಡನೆ ಕಬಡ್ಡಿಯಾಡಿ ಗೆದ್ದಿದ್ದರು. ಬಾಪುಗೌಡ, ಹೊಸಮನಿ, ಮಲ್ಲಣ್ಣ ಅರಿಕೇರೆ, ಪರಮಣ್ಣ ಅರಿಕೇರೆ, ಬಸವರಾಜ ಬಾಚವಾರ ಹಾಗೂ ಹಿರೇಮಠರು ಪ್ರಮುಖರಾಗಿದ್ದರು. ಆಗಾಗ ಸರಮಣಿ ಆಟ ಮಾಡುತ್ತಿದ್ದರು. ಅದೇ ವರ್ಷ ತಾಲ್ಲೂಕಾ ಮಟ್ಟದ ಯುವಕ ಸಂಘಗಳ ತಾಲೂಕಾ ಮಟ್ಟದ ಕ್ರೀಡಾಕೂಟ ಶಾಹಪೂರದಲ್ಲಿ ನಡೆಯಿತು. ಅವರ ಊರಿನ ಸಂಘದವರು ಕಬ್ಬಡ್ಡಿ ಆಡಲು ಸಿದ್ಧರಾಗಿ ಹೋದರು. ಕ್ರೀಡಾ ಕೂಟದಲ್ಲಿ ಅಂತಿಮ ಸ್ಪರ್ಧೆ ಸಿಂಗನಹಳ್ಳಿಯವರಿಗೆ ಮತ್ತು ಹಳೆ ಸಗರದವರಿಗೆ ನಡೆಯಿತು. ಆಟ ಒಮ್ಮೆ ಇವರ ಕಡೆ, ಇನ್ನೊಮ್ಮೆ ಅವರ ಕಡೆ ತೂಗುಯ್ಯಾಲೆಯಾಗಿ ಒಂದೆರಡು ಪಾಯಿಂಟ್‌ನಲ್ಲಿ ಹಳೆ ಸಗರದವರೇ ವಿಜೇತರಾದರು. ಕಬಡ್ಡಿಯಲ್ಲಿ ಸಿಂಗನಹಳ್ಳಿಯ ತರುಣ ಸಂಘದವರು ರನ್ನರಾಗಿದ್ದರು. ಅವರಿಗೆ ಖುಷಿ ತಂದ್ದದ್ದು ಭಾಷಣ ಸ್ಪರ್ಧೆ. ಸಮಾಜ ಪರಿವರ್ತನೆಯಲ್ಲಿ ಯುವಕರ ಪಾತ್ರ ಕುರಿತು ನಡೆದ ಭಾಷಣ ಸ್ಪರ್ಧೆಯಲ್ಲಿ ಸಿಂಗನಹಳ್ಳಿಯ ಸಂಘದ ಅಧ್ಯಕ್ಷರಾದ ಹಿರೇಮಠರು ಪ್ರಥಮ ಪ್ರಶಸ್ತಿ ಪಡೆದಿದ್ದರು. ಅವರು ಪ್ರಶಸ್ತಿ ಪಡೆದ ಮೇಲೆ ಇಡೀ ಸಭೆಯಲ್ಲಿ ಗೆಳೆಯರು ಅವರನ್ನು ತಲೆ ಮೇಲೆ ಹೊತ್ತಿಕೊಂಡು ಕುಣಿದರು. ಹಿರೇಮಠರಂತೆಯೇ ಅವರ ಊರಿನ ಅಕ್ಕನ ಬಳಗದವರು ಜನಪದ, ಸಂಪ್ರದಾಯದ ಹಾಡುಗಳನ್ನು ಹಾಡುವ ಸ್ಪರ್ಧೆಯಲ್ಲಿ ಬಹುಮಾನ

ಪಡೆದಿದ್ದರೂ, ಪ್ರಶಸ್ತಿ ಗೆದ್ದು ಊರಿಗೆ ಬಂದಾಗ, ಊರ ಹಿರಿ–ಕಿರಿಯರು, ತರುಣ ಸಂಘದ ಯುವಕರು ಮತ್ತು ಅಕ್ಕನ ಬಳಗದ ಸದಸ್ಯರಿಗೆ ಸಂತೋಷದಿಂದಲೇ ಸ್ವಾಗತಿಸಿದರು.

ಆ ವರ್ಷದ ಬೇಸಿಗೆಯಲ್ಲಿ ಶಹಾಪೂರ ತಾಲ್ಲೂಕಿನ ಬಿಡಿಓ ಅವರು ಹಿರೇಮಠರಿಗೆ ಬೆಂಗಳೂರಿನ ಕುಂಬಳಗೋಡಿನಲ್ಲಿ ನಡೆಯುವ ರಾಜ್ಯ ಯುವ ನಾಯಕರ ತರಬೇತಿಗೆ ತಾಲೂಕಿನ ಪ್ರತಿನಿಧಿಯಾಗಿ ಆರಿಸಿ ಕಳುಹಿಸಿದರು. ತರಬೇತಿಯಲ್ಲಿ ಮೈಸೂರು, ಬೆಂಗಳೂರು, ಮಂಗಳೂರು, ಧಾರವಾಡ, ಬೆಳಗಾಂವ, ಬಿಜಾಪೂರ ಮುಂತಾದ ಜಿಲ್ಲೆಯ ಗೆಳೆಯರೆಲ್ಲ ಒಂದೆಡೆ ಸೇರಿ ಕೇಳಿದ ಪಾಠಗಳು, ಆಡಿದ ಆಟಗಳು ಹೆಸರಿನೋವ ನೀಡಿದವು.

ಹೀಗೆ ಯುವಕ ಸಂಘದ ಕಾರ್ಯದಲ್ಲಿಯೇ ಸಕ್ರೀಯವಾಗಿ ಮುಖಂಡತ್ವ ವಹಿಸಿ ಕೆಲಸ ಮಾಡುತ್ತಿರುವಾಗಲೇ ಆತ್ಮೀಯ ಗುರುಗಳಾದ ಡಾ. ಎಮ್.ಎಸ್. ಲಠ್ಠೆಯವರಿಂದ ಗುಲಬರ್ಗಾಕ್ಕೆ ಬಂದು ಭೇಟ್ಟಿಯಾಗಲು ಪತ್ರ ಬಂದಿತ್ತು. ಡಾ.ಎಮ್. ಎಸ್. ಲಠ್ಠೆಯವರು, ಡಾ. ಬಿ.ಬಿ. ಹೆಂಡಿಯವರ ನಿರ್ದೇಶನದಲ್ಲಿ ನಡೆದ ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಜನಪದ ಸಾಹಿತ್ಯ ಸಂಗ್ರಹ ಸಂಪಾದನೆ ಪ್ರಕಟಣೆಯ ಯೋಜನೆಗೆ ಯು.ಜಿ.ಸಿ.ಯಿಂದ ಧನಸಹಾಯ ದೊರಕಿತು. ಈ ಯೋಜನೆಯ ಸಂಚಾಲಕರಾಗಿ ಡಾ. ಎಮ್.ಎಸ್. ಲಟ್ಟೆ, ಡಾ. ಎಮ್.ಜಿ. ಬಿರಾದಾರ, ಸಂಚಾಲಕರಾಗಿದ್ದರು. ಈ ಯೋಜನೆಯಲ್ಲಿ ಸಹಾಯಕ ಸಂಶೋಧಕರೆಂದು ಕೆಲಸ ಮಾಡಲು ಹಿರೇಮಠರನ್ನು ಆಯ್ಕೆ ಮಾಡಲು ಸೂಚಿಸಲಾಗಿದೆ. ಅದಕ್ಕಾಗಿ ನೀವು ನಾಳೆಯೇ ಬಂದು ಡಾ. ಹೆಂಡಿಯವರನ್ನು ಭೇಟ್ಟಿಯಾಗು ಎಂದರು. ಮರುದಿನ ವಿಭಾಗಕ್ಕೆ ಹೋಗಿ ಡಾ. ಬಿ.ಬಿ. ಹೆಂಡಿಯವರಿಗೆ ಭೇಟ್ಟಿಯಾದರು. ಅವರು ಕೆಲಸಕ್ಕೆ ಹೋಗಲು ಆದೇಶ ನೀಡಿ ಹಾಜರಾತಿ ಪತ್ರ ಕೊಟ್ಟರು. ಡಾ. ಬಿ.ಬಿ. ಹೆಂಡಿ ಮತ್ತು ಲಠ್ಠೆಯವರಿಗೆ ಓದುವಾಗಲೇ ಜನಪದ ಸಾಹಿತ್ಯದಲ್ಲಿದ್ದ ಆಸಕ್ತಿಯನ್ನು ಗುರುತಿಸಿದ್ದರಿಂದ ಈ ಹುದ್ದೆಗೆ ಸೇರಿಸಿಕೊಂಡರು. ಸಹಾಯಕ ಸಂಶೋಧಕರಾದ ಮೇಲೆ ಯೋಜನೆಯ ವತಿಯಿಂದ ಹಿರೇಮಠರಿಗೆ ಒಂದು ಟೇಪ್ ರಿಕಾರ್ಡ್ ಮತ್ತು ಕ್ಯಾಸೆಟ್‌ಗಳನ್ನು ಕೊಟ್ಟರು. ಏಳು ಜಿಲ್ಲೆಗಳ ಹಂತಿ ಹಾಡು, ಗಾದೆ, ಒಗಟುಗಳು, ಜಾನಪದ ಸಾಹಿತ್ಯ ಪ್ರಕಾರಗಳನ್ನು ಸಂಗ್ರಹಿಸುವದು ಸಂಚಾರ ಮಾಡಿದರೆ, ಪ್ರವಾಸ ಮಾಡಿದ ದಿನಭತ್ಯೆ ಮತ್ತು ಪ್ರವಾಸದ ವೆಚ್ಚವನ್ನು ನೀಡುತ್ತಿದ್ದರು. ಯಾವ ಊರಲ್ಲಿ, ಯಾವ ಪ್ರಕಾರದ ಜಾನಪದ, ಡೊಳ್ಳು, ಲಾವಣಿ, ಹಂತಿ, ಭಜನೆ, ಕಥೆ, ಹೆಣ್ಣುಮಕ್ಕಳ ಹಾಡು, ಸಣ್ಣಾಟಗಳು ಮುಂತಾದ ಹಾಡುವ ಜನಪದ ಕಲಾವಿದರನ್ನು ಗುರುತಿಸಿ ಆ ಊರುಗಳಿಗೆ ಹೋಗಿ ಅವರಿಗೆ ಭೆಟ್ಟಿಯಾಗಿ ಕಲಾವಿದರು ಬರಲು ಹೇಳಿದ ಸಮಯಕ್ಕೆ ಹಾಜರಾಗಿ ಹೇಳುವ ಹಾಡು ಕಥೆ ಟೇಪಿನಲ್ಲಿ ಸಂಗ್ರಹಿಸುತ್ತಿದ್ದರು. ಕಲಾವಿದರು ಬೇಜಾರುಪಟ್ಟರೆ ಅವರಿಗೆ ಚಹಾ ಕುಡಿಸಿದ್ದಲ್ಲದೆ, ವಿಶ್ರಾಂತಿಯು ನೀಡಿ ಒಂದೊಂದು ಸಾರಿ ಅವರ ಊರಲ್ಲಿ ಇದ್ದು, ರಾತ್ರಿ ಹಾಡಿದರೆ ನಿದ್ರೆ ಇಲ್ಲದೆ ಕೂತು ಕ್ಯಾಸೆಟ್ ಮೂಲಕ ಹಾಡು ಸಂಗ್ರಹಿಸಿಕೊಳ್ಳುವರು. ಕೆಲವು ಊರುಗಳಲ್ಲಿ ಹೋಟಲ್‌ಗಳಿಲ್ಲದೆ, ಊಟ ಇಲ್ಲದೆ ಇರಬೇಕಾಗಿತ್ತು. ಹನುಮಪ್ಪನ ಗುಡಿ, ಶಾಲೆ,

ಚಾವಡಿ ಇಲ್ಲವೆ ಹಾಡುವವ ಮನೆ ಕಟ್ಟೆ ಮೇಲೆ ಕುಳಿತು ಸಂಗ್ರಹಿಸುತ್ತಿದ್ದರು. ಹಾಡುವವರು ಸಿಕ್ಕರೆಂದರೆ ಅಲ್ಲಿಯೇ ಮಲಗುತ್ತಿದ್ದರು. ಹೊಲದಲ್ಲಿ ಅಥವಾ ತೋಟದಲ್ಲಿ ಮನೆ ಮಾಡಿದ್ದರೆ ಅಲ್ಲಿಯೇ ಉಳಿದು ಸಂಗ್ರಹಿಸುತ್ತಿದ್ದರು. ರಾಯಚೂರು, ಗುಲಬರ್ಗಾ, ಬಿಜಾಪೂರ ಮುಂತಾದ ಜಿಲ್ಲೆಗಳಲ್ಲಿಯ ಹಳ್ಳಿಹಳ್ಳಿಗಳಿಗೆ ತಿರುಗಾಡಿ ವಾರಗಟ್ಟಲೆ ಹಾಡು, ಕಥೆಗಳನ್ನು ಸಂಗ್ರಹಿಸಿ ತಂದು ವಿಭಾಗದ ಕೊಠಡಿಯಲ್ಲಿ ಟೇಪು ಹಚ್ಚಿ ಮತ್ತೆ ಕೇಳಿ ಕೇಳಿ ಶುದ್ಧ ಪ್ರತಿ ಮಾಡುತ್ತಿದ್ದರು. ಹಾಡು ಕಥೆಗಳಲ್ಲದೆ, ಕಥೆ ಹೇಳುವವರ ಹೆಸರು, ತಂದೆ ಹೆಸರು, ವಿಳಾಸ, ತಾಲ್ಲೂಕು, ಊರು, ಅಂಚೆ ವಿಳಾಸ, ವಿದ್ಯಾರ್ಹತೆ, ಉದ್ಯೋಗ, ವಯಸ್ಸು, ಯಾರಿಂದ ಕಲಿತದ್ದು, ಯಾವ ಸಂದರ್ಭದಲ್ಲಿ ಈ ಪ್ರಕಾರವನ್ನು ಹೇಳಿದವರು ಅದಕ್ಕೆ ಬೇಕಾಗುವ ವಾಧ್ಯ ಪರಿಕಾರಗಳು ಮುಂತಾದವುಗಳನ್ನು ಸಂಗ್ರಹಿಸುತ್ತಿದ್ದರು. ಹೀಗೆ ಹಿರೇಮಠರು ಎರಡು ವರ್ಷ ಸಂಗ್ರಹ ಮಾಡಿದ ಜನಪದ ಸಾಹಿತ್ಯ ಪ್ರಕಾರದ ಸಾಮಗ್ರಿಯ ಸುಮಾರು ಐದಾರು ಅಲಮಾರಾಗಳು ತುಂಬಿದ್ದವು. ೧೯೭೯ಕ್ಕೆ ಯು.ಜಿ.ಸಿ. ಯೋಜನೆ ಮುಗಿಯಿತು

ಸಂಗ್ರಹಿಸಿದ ಸಾಹಿತ್ಯದಲ್ಲಿ ಕೇವಲ ನೂರೆಂಟು ಕತೆಗಳು, ಹರದೇಶಿ, ನಾಗೇಶಿ, ಮಹತ್ವದ ಕೃತಿಗಳು ಪ್ರಕಟವಾದವು. ಉಳಿದ ಸಂಗ್ರಹಿಸಿರುವ ಸಾಹಿತ್ಯ ಪ್ರಕಟಣೆಯಾಗದೆ ಉಳಿಯಿತು. ಸಂಶೋಧಕರಾಗಿ ಕೆಲಸ ಮಾಡುತ್ತಿರುವಾಗಲೇ ಹಿರೇಮಠರು, ಡಾ. ಎಮ್.ಎಸ್. ಲಠ್ಠೆ ಅವರ ಮಾರ್ಗದರ್ಶನದಲ್ಲಿ "ಮೈಲಾರ ಲಿಂಗನ ಸಾಹಿತ್ಯ ಮತ್ತು ಸಂಪ್ರದಾಯ" ವಿಷಯದ ಮೇಲೆ ಸಂಶೋಧನೆಗೆ ನೋಂದಣಿ ಮಾಡಿಸಿದ್ದರು. ಮುಂದೆ ಇದೇ ವಿಷಯದ ಮೇಲೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಯಾರೊ ಮಾಡಿರುವರೆಂದು ತಿಳಿದು ಬಂದಿರುವುದರಿಂದ ಮತ್ತೇ ಈ ವಿಷಯವನ್ನು ಬದಲಾಯಿಸಿ 'ಸಣ್ಣಾಟಗಳ ವಸ್ತು ಮತ್ತು ತಂತ್ರ' ಕೊಟ್ಟರು. ಒಂದು ವರ್ಷ ಸಣ್ಣಾಟಗಳನ್ನು ಸಂಗ್ರಹಿಸಿದರು. ಆ ಮೇಲೆ ಬೇರೆಯವರು ಇದೇ ವಿಷಯದ ಮೇಲೆ ಪಿ.ಹೆಚ್.ಡಿ. ಮಾಡಿರುವರೆಂದು ಗೊತ್ತಾದ ಮೇಲೆ ಕೊನೆಗೆ 'ವಚನ ಸಾಹಿತ್ಯದಲ್ಲಿ ಜಾನಪದ ಅಂಶಗಳು' ಎಂಬ ವಿಷಯವನ್ನು ನೀಡಿದರು. ಯೋಜನೆ ಮುಕ್ತಾಯವಾದುದ್ದರಿಂದ ಸಂಶೋಧನೆ ಮುಂದುವರೆಸಲು ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಶೋಧನ ವಿದ್ಯಾರ್ಥಿ ವೇತನಕ್ಕೆ ಆಯ್ಕೆ ಮಾಡಿದರು. ಆದರೆ ಅದೇ ವರ್ಷದಲ್ಲಿ ಅಂದರೆ ೧೯೮೦ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯವು ಸ್ವತಂತ್ರ ವಿಶ್ವವಿದ್ಯಾಲಯವೆಂದು ಘೋಷಣೆಯಾಗಿ ಕರ್ನಾಟಕ ವಿಶ್ವವಿದ್ಯಾಲಯ ನೀಡುವ ಸಂಶೋಧನ ವೇತನವನ್ನು ಮುಂದುವರೆಸಲು ಆಡಳಿತ ಅಧಿಕಾರಿಗಳು ನಿರಾಕರಿಸಿದರು. ಹೀಗಾಗಿ ಹಿರೇಮಠರ ಪಿ.ಹೆಚ್.ಡಿ. ಸಂಶೋಧನೆ ಅರ್ಧಕ್ಕೆ ನಿಂತಿತ್ತು. ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿಯೇ ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿ ಕೈಗೊಂಡ ಸಂಶೋದಕರಿಗೆ ಗುಲಬರ್ಗಾ ವಿಶ್ವವಿದ್ಯಾಲಯವು ಹಣ ನೀಡಿ ಮುಂದುವರೆಸಬೇಕೆಂದು ವಿದ್ಯಾರ್ಥಿ ಸಂಶೋಧಕರೆಲ್ಲ ಸೇರಿ ಸಂಘ ರಚಿಸಿ ಅದರ ಪ್ರಧಾನ ಕಾರ್ಯದರ್ಶಿಯಾಗಿ ಹಿರೇಮಠರು ಹೋರಾಟ ಮಾಡಿದರು. ಆಗ ಕುಲಪತಿಗಳಾಗಿದ್ದ ಡಾ. ಎಮ್.

ನಾಗರಾಜ ಕುಲಸಚಿವ ಜಯತೀರ್ಥರಾಜ ಪುರೋಹಿತರು ನಿಮಗೆ ಮುಂದುವರೆಸಲು ಹಣವಿಲ್ಲ; ಆದರೆ ವಿಭಾಗದಲ್ಲಿ ಹುದ್ದೆಗಳನ್ನು ತುಂಬಿದಾಗ ನಿಮ್ಮನ್ನು ಪರಿಗಣಿಸುತ್ತೇವೆಂದು ಭರವಸೆ ನೀಡಿದರು. ಹೀಗಾಗಿ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುವ ಅಥವಾ ಸಂಶೋಧನೆ ಮಾಡುವ ಅವಕಾಶವೇ ಮುಂದೆ ದೊರೆಯಲಿಲ್ಲ.

೧. ಸಂಪೂರ್ಣ ಕ್ರಾಂತಿ

೧೯೭೫ ಜೂನ್ ೨೫ ರಂದು ಆಗಿನ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು ದೇಶದ ಮೇಲೆ ತುರ್ತು ಪರಿಸ್ಥಿತಿ ಜಾರಿಗೊಳಿಸಿದ್ದರು. ಆ ಅವಧಿಯಲ್ಲಿ ಸರ್ಕಾರದ ವಿರುದ್ಧ ಮಾತಾಡಿದವರಿಗೆ, ಚಳುವಳಿ ಮಾಡಿದವರಿಗೆ ಆತಂಕ ಭದ್ರತಾ ಕಾಯ್ದೆಯ ಮೇರೆಗೆ ಬಂಧಿಸಿ ಜೇಲಿಗೆ ಹಾಕುತ್ತಿದ್ದರು. ವಿರೋಧ ಪಕ್ಷದ ನಾಯಕರು, ಚಳುವಳಿಗಾರರು, ಜನಪರ ಚಿಂತಕರು ತುರ್ತುಪರಿಸ್ಥಿತಿ ವಿರೋಧಿಸಿ ಲೇಖನ ಬರೆದ ಪತ್ರಕರ್ತರು ವಿರೋಧ ಪಕ್ಷದ ನಾಯಕರನ್ನು ಬಂಧಿಸಿ ಜೇಲಿನಲ್ಲಿಡಲಾಯಿತು. ಇದನ್ನು ವಿರೋಧಿಸಿದ ಹಿರಿಯ ಸ್ವತಂತ್ರ ಹೋರಾಟಗಾರರು, ಸಮಾಜವಾದಿ ನಾಯಕರು ಆದ ಜಯಪ್ರಕಾಶ ನಾರಾಯಣರು ಬಿಹಾರದಲ್ಲಿ ಕಾಂಗ್ರೆಸ್ಸಿನ ದುರಾಡಳಿತ ಮತ್ತು ಭ್ರಷ್ಟಾಚಾರದ ವಿರುದ್ಧ ಸಂಪೂರ್ಣ ಕ್ರಾಂತಿಯ ಚಳುವಳಿಯನ್ನು ಹಮ್ಮಿಕೊಂಡರು. ಈ ಚಳುವಳಿಯು ಸ್ವತಂತ್ರತೆ, ಸಮಾನತೆ, ದುರ್ಬಲರ ಏಳಿಗೆ ಹಾಗೂ ಶಾಂತಿ, ಸುವ್ಯವಸ್ಥೆ ಮತ್ತು ಅನ್ಯಾಯದ ವಿರುದ್ಧ ಹೋರಾಟ ಮುಂತಾದ ಉದ್ದೇಶಗಳನ್ನಿಟ್ಟುಕೊಂಡು ಯುವ ಜನರು ಸರಕಾರ ಮತ್ತು ಸಮಾಜದ ವಿರುದ್ಧ ಚಳುವಳಿ ಮಾಡಲು ಕರೆಕೊಟ್ಟರು. ಇದರಿಂದ ಉತ್ತರ ಭಾರತದಲ್ಲಿ ಈ ವಿಚಾರಗಳು ಯುವಕರನ್ನು ಆಕರ್ಷಿಸಿದವು. ದೊಡ್ಡ ಚಳುವಳಿಯೇ ನಡೆಯಿತು. ಈ ಚಳುವಳಿಯ ಪರಿಣಾಮವಾಗಿ ದೇಶದ ವಿವಿಧ ರಾಜ್ಯಗಳಲ್ಲಿಯು ಸಂಘಟನೆಯಾಗಿ ಈ ಉದ್ದೇಶಗಳಿಗಾಗಿ ಯುವಕರು ಚಳುವಳಿಯನ್ನು ಪ್ರಾರಂಭಿಸಿದರು. ಆಗ ಕರ್ನಾಟಕದಲ್ಲಿಯು ಸಂಪೂರ್ಣ ಕ್ರಾಂತಿಯ ಸಂಘಟನೆಗಳು ಜಿಲ್ಲಾವಾರು ರಚನೆಯಾದವು. ಇದರಲ್ಲಿ ಆಗ ಸಮಾಜವಾದಿಗಳಾಗಿದ್ದ ವೈಜಿನಾಥ ಪಾಟೀಲ್, ಎಸ್.ಕೆ. ಕಾಂತಾ ಮತ್ತು ಬಿ.ಆರ್. ಪಾಟೀಲ್ ಮುಂತಾದವರು ಜಿಲ್ಲೆಯಲ್ಲಿ ಸಂಘಟಿಸಲು ಬೆಂಗಳೂರಿನಿಂದ ಸಮಾಜವಾದಿ ನಾಯಕರು, ಚಿಂತಕರು ಹಾಗೂ ಪ್ರಸಿದ್ಧ ವಕೀಲರಾದ ಬಾಪು ಹೆದ್ದೂರು ಶೆಟ್ಟಿಯವರು ಗುಲಬರ್ಗಾಕ್ಕೆ ಬಂದು ಆಗಾಗ ಸಭೆಗಳನ್ನು ನಡೆಸುತ್ತಿದ್ದರು. ಆಕಸ್ಮಿಕವಾಗಿ ಇವರ ಪರಿಚಯ ರಾಜಕಾರಣಿ ಗೆಳೆಯರೊಂದಿಗೆ ಹಿರೇಮಠರಿಗೂ ಆಯಿತು. ಹಿರೇಮಠರ ಜನಪರ ಕಾಳಜಿಯ ವಿಚಾರಗಳು ಹಾಗೂ ಸಂಘಟನೆಯ ಚತುರತೆಯನ್ನು ಗಮನಿಸಿ ಜಿಲ್ಲೆಯ ಸಂಪೂರ್ಣ ಕ್ರಾಂತಿಯ ಸಂಚಾಲಕರನ್ನಾಗಿ ನೇಮಿಸಿದರು. ಜಿಲ್ಲಾ ಸಂಚಾಲಕರಾದ ಹಿರೇಮಠರು ತಮ್ಮ ಬಿಡುವಿನ ವೇಳೆಯಲ್ಲಿ ಈಗಾಗಲೇ ಪರಿಚಿತವಿದ್ದ ಸಹಪಾಠಿ ಗೆಳೆಯರೊಂದಿಗೆ ಜಿಲ್ಲೆಯ ಎಲ್ಲಾ ತಾಲ್ಲೂಕಗಳ ಗ್ರಾಮ ಮತ್ತು ನಗರಗಳಲ್ಲಿ ಹೋಗಿ ಸಂಪೂರ್ಣ ಕ್ರಾಂತಿಯ ಬಗ್ಗೆ ಜನರಿಗೆ ಅರಿವು ಮೂಡಿಸುತ್ತಿದ್ದರು. ದೇಶದ ಪರಿಸ್ಥಿತಿ ಸಾಮಾಜಿಕ, ರಾಜಕೀಯ, ಆರ್ಥಿಕ ಪರಿವರ್ತನೆಯ ಬಗ್ಗೆ ಚಿಂತನೆ ಮಂಡಿಸುತ್ತಿದ್ದರು. ಇವರ ವಿಚಾರಗಳನ್ನು ಕೇಳುವ ಜನರು ತಮ್ಮ ಊರಿಗೂ ಬನ್ನಿರಿ ಎಂದು ಕರೆ ಕೊಡುತ್ತಿದ್ದರು. ಹೀಗೆ ಸಂಶೋಧಕನಾಗಿ ಜನಪದ ಸಾಹಿತ್ಯ ಸಂಗ್ರಹ ಮಾಡುತ್ತಲೇ ಈ ಸಂಪೂರ್ಣ ಕ್ರಾಂತಿಯ ವಿಚಾರಗಳನ್ನು ಜನರಿಗೆ ತಿಳಿಸಿಕೊಡುತ್ತಿದ್ದರು.

ಮುಂದೆ ೧೯೭೭ ರ ಮಾರ್ಚನಲ್ಲಿ ತುರ್ತು ಪರಿಸ್ಥಿತಿ ಹಿಂದೆ ತೆಗೆದುಕೊಂಡರು. ಜೇಲಿನಿಂದ ಬಿಡುಗಡೆಯಾದ ಎಲ್ಲಾ ವಿರೋಧ ಪಕ್ಷದ ನಾಯಕರು ಸೇರಿ ಕಾಂಗ್ರೆಸ್ಸಿಗೆ ಪರ್ಯಾಯವಾಗಿ

ಜಯಪ್ರಕಾಶ ನಾರಾಯಣರ ಮಾರ್ಗದರ್ಶನದಲ್ಲಿ ಜನತಾ ಪಾರ್ಟಿ ಸ್ಥಾಪನೆಯಾಯಿತು. ಮುಂದೆ ನಡೆದ ಸಾರ್ವತ್ರಿಕ ಲೋಕಸಭೆ ಚುನಾವಣೆಯಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಪರಾಭವಹೊಂದಿದ್ದರು. ಅವರಿಗೆ ಪುನಃ ಚುನಾವಣೆಗೆ ಸ್ಪರ್ಧಿಸಲು ಆಗಿನ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಗಳಾದ ದೇವರಾಜ ಅರಸರು ಶ್ರೀಮತಿ ಇಂದಿರಾ ಗಾಂಧಿಯವರನ್ನು ಚಿಕ್ಕಮಂಗಳೂರಿನಲ್ಲಿ ನಿಲ್ಲಿಸಿದ್ದರು. ಅವರ ವಿರುದ್ಧ ದಕ್ಷ ಮತ್ತು ಜನಪ್ರೀಯ ಮುಖ್ಯಮಂತ್ರಿಯೆಂದು ಹೆಸರಾಗಿದ್ದ ದಿವಂಗತ ಶ್ರೀಮಾನ ವೀರೇಂದ್ರ ಪಾಟೀಲರು ಎಲ್ಲಾ ಪಕ್ಷಗಳು ಸೇರಿಸಿ ರಚಿಸಿದ ಜನತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಆಗ ಗುಲಬರ್ಗಾ ಜಿಲ್ಲೆಯಲ್ಲಿ ದಕ್ಷ ಆಡಳಿತಕ್ಕೆ ಶಾಂತಿ ಸುವ್ಯವಸ್ಥೆ ಕಾಪಾಡುವುದಕ್ಕೆ ಹೆಸರಾಗಿದ್ದ ಪೋಲಿಸ್ ಅಧೀಕ್ಷ ಹೆಚ್.ಟಿ. ಸಾಂಗ್ಲಿಯಾನರನ್ನು ಒಮ್ಮಿಂದೊಮ್ಮೆಲೆ ಚಿಕ್ಕಮಂಗಳೂರಿಗೆ ವರ್ಗಾಯಿಸಲಾಯಿತು. ಗುಲಬರ್ಗಾ ಜಿಲ್ಲೆಯ ಪ್ರಗತಿಪರ ವಿರೋಧಿಗಳು ತಮ್ಮ ಭೃಷ್ಟ ಕಾರ್ಯಗಳು ನಡೆಯದಂತೆ ಮಾಡಿದ ಎಸ್.ಪಿ. ಅವರನ್ನು ಈ ಸಂದರ್ಭದಲ್ಲಿ ಚಿಕ್ಕಮಂಗಳೂರಿಗೆ ವರ್ಗಾಯಿಸಲಾಗಿದೆ ಎಂದು "ಹೆಚ್.ಟಿ. ಸಾಂಗ್ಲಿಯಾನರ ವರ್ಗಾವಣೆಯ ರಹಸ್ಯ ಸ್ಫೋಟ" ಎಂಬ ತಲೆ ಬರಹದಲ್ಲಿ ಕರಪತ್ರ ಪ್ರಕಟಿಸಿ ಹಂಚಲಾಯಿತು. ಸಾಂಗ್ಲಿಯಾನರ ವರ್ಗಾವಣೆಯನ್ನು ರದ್ದುಪಡಿಸಬೇಕೆಂದು ಸಾಮಾನ್ಯ ನಾಗರಿಕರು, ವಿದ್ಯಾರ್ಥಿಗಳು ಜೋರಾಗಿ ಚಳುವಳಿ ಮಾಡಿದರು.

ಆ ಪ್ರಕಟಣೆಯ ವಿಷಯವು ಅಂದಿನ ಸರ್ಕಾರದ ವಿಧಾನಸಭೆಯಲ್ಲಿ ಚರ್ಚೆಯಾಗಿ ಸರ್ಕಾರವು ಈ ಪ್ರಕಟಣೆ ಹಾಕಿದವರನ್ನು ಹುಡುಕಲು ಜಿಲ್ಲಾ ಆಡಳಿತಕ್ಕೆ ಸೂಚಿಸಿದರು. ಪ್ರಕಟಣೆ ಬರೆದವರು ಯಾರೆಂದು ಕೊನೆಯವರೆಗೂ ಗುರುತಾಗದೆ ಹೋದದ್ದು ಹಿರೇಮಠರಿಗೆ ಸಂದ ಜಯವೆಂದು ಹೇಳಬಹುದು. ಕನ್ನಡ ಸಾಹಿತ್ಯ ಪರಿಷತ್ತು ಪ್ರತಿ ವರ್ಷ ನಡೆಸುವ ಅಖಿಲ ಭಾರತೀಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಗತಿಪರ ವಿಚಾರಗಳನ್ನು ಮಂಡಿಸಲು ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಲು ಆಗಿನ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಕೇಳಿಕೊಂಡಾಗ ಅವರು ಸಮ್ಮತಿಸದೇ ಇರುವುದರಿಂದ ಪ್ರಗತಿಪರ ವಿಚಾರಧಾರೆಯ ಸಾಹಿತಿಗಳೆಲ್ಲರು ಸೇರಿ ಸಮಾಜದ ಪ್ರಗತಿಗಾಗಿ, ಸಮಾನತೆಗಾಗಿ ಸಾಹಿತ್ಯ ರಚನೆಯ ಕಾಳಜಿಯಿಂದ "ಖಡ್ಗವಾಗಲಿ ಕಾವ್ಯ ಜನರ ಮೋಡಿಗೆ ಮಿಡಿವ ಪ್ರಾಣ ಮಿತ್ರ"ವೆಂಬ ದೇಹ ವಾಕ್ಯದೊಂದಿಗೆ ಬಂಡಾಯ ಸಾಹಿತ್ಯ ಸಂಘಟನೆಯ ರಚನೆಯಾಗಿ ಅದರ ಅಂಗವಾಗಿ ವಿವಿಧ ಜಿಲ್ಲೆಗಳಲ್ಲಿಯೂ ಸಂಘಟನೆಗಳು ರಚನೆಗೊಂಡವು. ಆಗ ಗುಲಬರ್ಗಾದಲ್ಲಿ ಪ್ರಾರಂಭವಾದ ಬಂಡಾಯ ಸಾಹಿತ್ಯ ಸಂಘಟನೆಯ ಕಾರ್ಯಗಳಲ್ಲಿ ಹಿರೇಮಠರು ಮುಂಚೂಣಿಯಲ್ಲಿದ್ದರು. ದಲಿತ ಸಂಘರ್ಷ ಸಮಿತಿಯೊಂದಿಗೆ ಚಿಂಚನಸೂರಿನ ಮಹಾಪೂರ ತಾಯಿಯ ಬೆತ್ತಲೆ ಸೇವೆಯನ್ನು ತಡೆಗಟ್ಟಲು ಕರಪತ್ರ ಮತ್ತು ಭಾಷಣದ ಮೂಲಕ ಪ್ರಯತ್ನಿಸಿದರು. ಕೊನೆಗೆ ಆಗಿನ ಎಸ್.ಪಿ. ವಿಜಯ ಸಾಸನೂರು ಅವರಿಗೆ ವಿಷಯವನ್ನು ಮನದಟ್ಟು ಮಾಡಿ ಅವರ ನೇತೃತ್ವದಲ್ಲಿಯೇ ಪೋಲಿಸರನ್ನು ಕಾವಲು ಇಟ್ಟು ಆ

ವರ್ಷದ ಜಾತ್ರೆಯಲ್ಲಿ ಆಚರಿಸುತ್ತಿರುವ ಬೆತ್ತಲೆ ಸೇವೆಯನ್ನು ಬಂದ್ ಮಾಡಿಸಲಾಯಿತು. ಬಹುದಿನಗಳಿಂದಲೂ ಆಚರಣೆಯಲ್ಲಿರುವ ಈ ಸೇವೆಯನ್ನು ಮುಂದೆ ನಡೆಯದಂತೆ ಜನರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಿದವರಲ್ಲಿ ಹಿರೇಮಠರು ಪ್ರಮುಖರಾಗಿರುವರು.

೨. ಸಮುದಾಯ ಜಾತಾ

(೧೯೭೯ ಅಕ್ಟೋಬರ್ ೧೫ ರಿಂದ ನವಂಬರ್ ೧೫ ರ ವರೆಗೆ)

ಇದೇ ಅವಧಿಯಲ್ಲಿಯೇ ಜನಪರ ಕಾಳಜಿ ಹೊಂದಿದ ವಿಚಾರಧಾರೆಯ ಕಲಾವಿದರು, ಬುದ್ಧಿ ಜೀವಿಗಳು, ಬರಹಗಾರರು ಸೇರಿ ಶೋಷಣೆ ರಹಿತ ಸಮಾಜ ನಿರ್ಮಾಣಕ್ಕಾಗಿ ಬಂಡಾಯ ಸಾಹಿತ್ಯ ಸಂಘಟನೆಯ ಮೂಲಕ ಸಮ್ಮೇಳನ, ವಿಚಾರ ಸಂಕೀರ್ಣ, ಕವಿಗೋಷ್ಠಿ ನಡೆಸುತ್ತಿದ್ದರು. ಅವು ಕೆಲವು ಜನರಿಗೆ ಅರ್ಥವಾಗುತ್ತಿದ್ದವು. ಬೀದಿ ನಾಟಕಗಳನ್ನು ಪ್ರದರ್ಶಿಸುವದರಿಂದ ಹೆಚ್ಚಿನ ಜನರಿಗೆ ಅಭಿನಯದ ಮೂಲಕ ಮನವರಿಕೆ ಮಾಡಿಕೊಡಲು ಸಾಧ್ಯವೆಂದು ನಿರ್ಧರಿಸಿ ಸಮುದಾಯವೆಂದು ಹೆಸರಿಟ್ಟು ಸಂಘಟನೆಯು ಪ್ರಾರಂಭವಾಯಿತು. ಅದರ ಜಿಲ್ಲಾ ಘಟಕಗಳಾಗಿ ಕಲ್ಬುರ್ಗಿಯು ಸಮುದಾಯ ಸಂಘಟನೆಯು ಪ್ರಾರಂಭವಾದಾಗ ಪ್ರೊ. ಹಿರೇಮಠರು ಅದರಲ್ಲಿ ಸಕ್ರೀಯ ಸದಸ್ಯರಾಗಿ ಸೇರಿದರು.

೧೯೭೯ ರಲ್ಲಿ ಹೊಸ ಮೌಲ್ಯಗಳ ಸಾಂಸ್ಕೃತಿಕ ಜಾತಾ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವು ಅಕ್ಟೋಬರ್ ೧೫ ರಿಂದ ನವಂಬರ್ ೧೫ ರ ವರೆಗೆ ಒಂದು ತಿಂಗಳುಗಳ ಕಾಲ ಹಳ್ಳಿ-ಪಟ್ಟಣಗಳು ಸಂಚರಿಸಿ ಸಾಮಾಜಿಕ ಅನಿಷ್ಠಗಾಳದ ಜಾತಿ, ಸಂಪ್ರದಾಯ, ಮೂಢನಂಬಿಕೆ ಮತ್ತು ಭೃಷ್ಟಾಚಾರ ವಿರುದ್ಧ ಜನರ ಜಾಗೃತಿಯನ್ನು ಮೂಡಿಸಲು ಒಂದು ತಂಡ ಕೋಲಾರದ ಕೆ.ಜಿ.ಎಫ್.ನಿಂದ ಪ್ರಾರಂಭವಾದರೆ, ಇನ್ನೊಂದು ಉತ್ತರ ಕರ್ನಾಟಕದ ಬೀದರನಿಂದ ಏಕ ಕಾಲದಲ್ಲಿ ಪ್ರಾರಂಭವಾಗಿ ನವಂಬರ್ ೧೫ ರಂದು ಧಾರವಾಡದಲ್ಲಿ ಮುಕ್ತಾಯವಾಗಲು ನಿರ್ಣಯಿಸಲಾಯಿತು. ಬೀದರ ತಂಡದ ಉದ್ಘಾಟನೆಯನ್ನು ಖ್ಯಾತ ಚಲನಚಿತ್ರ ನಿರ್ದೇಶಕರಾದ ಶ್ರೀ ಎಮ್.ಎಸ್. ಸತ್ಯ ಮಾಡಿದರು. ಬೀದರ ತಂಡವು ಗುಲಬರ್ಗಾಕ್ಕೆ ಬರಲು ಆ ತಂಡದ ಸಕ್ರೀಯ ಸದಸ್ಯರಾದ ಹಿರೇಮಠರು ಸೇರಿಕೊಂಡರು. ಪ್ರತಿದಿನ ಮೂರ್ನಾಲ್ಕು ಪ್ರದರ್ಶನಗಳನ್ನು ಹಳ್ಳಿ-ನಗರಗಳಲ್ಲಿ, ಬೀದಿ ಬೀದಿಗಳಲ್ಲಿ, ಗ್ರಾಮದ ಕಟ್ಟೆಯ ಬಯಲಿನಲ್ಲಿ ಬೀದಿ ನಾಟಕಗಳನ್ನು ಪ್ರದರ್ಶಿಸಿಸುತ್ತಿದ್ದರು. ಹಿರೇಮಠರು ಬೆಲ್ಚಿ, ಪತ್ರ ಸಂಗಪ್ಪ ಕೊಲೆ ಪ್ರಕರಣ, ಚೆಸ್ನಾಲಾ ಗಣಿ ದುರಂತ, ಹೈದರಾಬಾದ ಗೋಲಿ, ಬುರುಡೆ ಬಾಬಾನ ಕಥೆ, ಕತ್ತಲೆಯ ದಾರಿ ದೂರ, ಬೆಳೆದವರು ಮುಂತಾದ ಬೀದಿ ನಾಟಕಗಳಲ್ಲಿ ಅನೇಕ ಪಾತ್ರಗಳು ವಹಿಸಿರುವರು. ಹಾಡು ಮತ್ತು ನಾಟಕದ ಮೂಲಕ ಗುಲಬರ್ಗಾ, ಜೇವರ್ಗಿ, ಸುರಪೂರ, ಶಾಹಪೂರ, ದೇವದುರ್ಗ, ರಾಯಚೂರು ವರೆಗೆ ಲಕ್ಷಾಂತರ ಜನರಿಗೆ ಸಾಂಸ್ಕೃತಿಕ ನಾಟಕಗಳ ಮೂಲಕವೇ ರಾಜಕೀಯ ಸಾಮಾಜಿಕ ಪರಿವರ್ತನೆಗೆ ಸಮುದಾಯ ಸಂಘಟನೆಯ ಮೂಲಕ ಪ್ರಯತ್ನಿಸಿರುವರು. ಪ್ರತಿ ದಿನವೂ ಬೀದಿ ನಾಟಕ ಪ್ರದರ್ಶನವಾದ ನಂತರ ಅಲ್ಲಿಯ ಸ್ಥಳೀಯ ಕಾರ್ಯಕರ್ತರು, ನಾಗರೀಕರು, ರಾಜಕಾರಣಿಗಳು, ಸಮಾಜ ಚಿಂತಕರೊಡನೆ ಸಮಾಲೋಚನೆ ನಡೆಸುತ್ತಿದ್ದರು. ಹೀಗೆ ಜನಸಮೂಹದಲ್ಲಿ ಚಿಂತನೆ ಮಾಡಿಸುವ ಬೀದಿ ನಾಟಕಗಳನ್ನು ಪ್ರದರ್ಶಿಸಿದ್ದು, ಮುಂದಿನ ರಾಜಕೀಯ ಬದಲಾವಣೆಯಲ್ಲಿ ಚಾರಿತ್ರಿಕ ದಾಖಲೆಯಾಗಿದೆ.

೧೯೮೧ ರಲ್ಲಿ ಕರ್ನಾಟಕದಲ್ಲಿ ಆಗ ಗುಂಡುರಾವ ಅವರು ಮುಖ್ಯಮಂತ್ರಿಗಳಾಗಿದ್ದರು. ಧಾರವಾಡದ ನರಗುಂದ, ನಲಗುಂದ ಭಾಗದ ರೈತರ ಹೊಲಕ್ಕೆ ಮಲಪ್ರಭ ನದಿಯ ನೀರು ಬಾರದಿದ್ದರೂ, ಕರವನ್ನು ಕೊಡಬೇಕೆಂದು ಆದೇಶ ಹೊರಡಿಸಿದರು. ನೀರು ಬಾರದೆ ಕರ ಏಕೆ ಕೊಡಬೇಕೆಂದು ಪ್ರಶ್ನಿಸಿ ಅಲ್ಲಿಯ ರೈತರು ಕರ ನಿರಾಕರಣೆ ಚಳುವಳಿಯನ್ನು ಪ್ರಾರಂಭಿಸಿದರು. ಆಗಲೇ ಕರ್ನಾಟಕದಲ್ಲಿ ರಾಜ್ಯ ರೈತ ಸಂಘವು ರೈತ ಸಮುದಾಯಕ್ಕೆ, ಸಂಘಟನೆಗೆ ಕರೆ ಕೊಟ್ಟಿತ್ತು. ಈ ನಾವಲಗುಂದ, ನರಗುಂದ ರೈತ ಕರ ನಿರಾಕರಣೆ ಚಳುವಳಿಗೂ ಬೆಂಬಲವನ್ನು ನೀಡಿತು. ಆದ್ದರಿಂದ ದಿನದಿನಕ್ಕೂ ರಾಜ್ಯವ್ಯಾಪಿ ಚಳುವಳಿಯಾಗಿ ಬೆಳೆಯಹತ್ತಿತ್ತು. ಚಳುವಳಿಯನ್ನು ಹತ್ತಿಕ್ಕಲು ಗುಂಡುರಾವ ಸರಕಾರ ಚಳುವಳಿ ಮಾಡುವ ನರಗುಂದ, ನಾವಲಗುಂದದ ರೈತರ ಮೇಲೆ ಗೋಲಿಬಾರ ನಡೆದು ಅನೇಕ ಜನರು ಪ್ರಾಣ ತೆತ್ತರು. ಆ ರೈತ ಹುತಾತ್ಮರ ಮತ್ತು ಅವರ ಬೇಡಿಕೆಗಳನ್ನು ನ್ಯಾಯ ಸಮ್ಮತವೆಂದು ಅರಿತು ಸಮುದಾಯ ತಂಡವು ೧೯೮೧ ರಲ್ಲಿ ರೈತರ ಸಮಸ್ಯೆಗಳನ್ನು ಸರಕಾರದ ಗೋಲಿಬಾರಿನ ದುರಾಡಳಿತವನ್ನು ಜನರಿಗೆ ಮನವರಿಕೆ ಮಾಡಿಕೊಡಲು ರಾಜ್ಯಾದ್ಯಂತ ರೈತ ಕಾರ್ಮಿಕರತ್ತ ಸಮುದಾಯ ಸಾಂಸ್ಕೃತಿಕ ಜಾತಾ ಹಮ್ಮಿಕೊಂಡಿತು. ಈಗಾಗಲೇ ರಚನೆಯಾದ ಜಿಲ್ಲಾ ಸಮುದಾಯ ತಂಡದವರು ಆಯಾ ಜಿಲ್ಲೆಯಲ್ಲಿ ಬೀದಿ ನಾಟಕಗಳನ್ನು ಈ ವಿಷಯಗಳ ಕುರಿತು ಪ್ರದರ್ಶನ ಮಾಡಲು ತೀರ್ಮಾನಿಸಲಾಯಿತು. ಆಗ ಹಿರೇಮಠರು ೧೯೮೧ ಜನೆವರಿ ೧೫ ರಿಂದ ೩೦ ರ ವರೆಗೆ ಸಮುದಾಯದ ತಂಡದೊಂದಿಗೆ ಗುಲಬರ್ಗಾ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಬೀದಿ ನಾಟಕಗಳ ಪ್ರನರ್ಶನದಲ್ಲಿ ಭಾಗವಹಿಸಿ ಭಾಷಣ ಮಾಡಿದರಲ್ಲದೆ, ನಾಟಕಗಳಲ್ಲಿಯೂ ಅಭಿನಯಿಸಿದರು.

೩. ರೈತರ ಪರ ಹೋರಾಟ

೧೯೮೦ ರಲ್ಲಿ ಕಲ್ಯಾಣ ನಾಡಿನ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ರಾಯಚೂರಿನಲ್ಲಿ ಸಮ್ಮೇಳನವನ್ನು ಏರ್ಪಡಿಸಲಾಯಿತು. ಆ ಸಮ್ಮೇಳನದಲ್ಲಿ ರೈತ ಚಿಂತನಗೋಷ್ಠಿಯಲ್ಲಿ ಮಾತನಾಡಲು ರಾಜ್ಯ ರೈತ ಸಂಘದ ಅಧ್ಯಕ್ಷರು, ಶ್ರೇಷ್ಠ ಸಮಾಜವಾದಿ ಚಿಂತಕರು, ಕಾನೂನಿನ ತಜ್ಞರಾದ ಶ್ರೀ ಎಮ್.ಡಿ. ನಂಜುಂಡ ಸ್ವಾಮಿಯವರು ಆಗಮಿಸಿದ್ದರು. ಆ ಸಮ್ಮೇಳನದಲ್ಲಿ ಹಿರೇಮಠರು ಅತಿಥಿಗಳಾಗಿ ಬಂದಾಗ ನಂಜುಂಡ ಸ್ವಾಮಿಯವರ ಪರಿಚಯವಾಯಿತು. ಅವರೊಂದಿಗೆ ಮೂರು ದಿನ ಹಳ್ಳಿಗಳು ಮತ್ತು ರೈತರು ಎದುರಿಸುತ್ತಿರುವ ಸಮಸ್ಯೆಗಳು, ಆ ಸಮಸ್ಯೆಗಳಿಗೆ ಪರಿಹಾರವಾಗಿ ಸರಕಾರ ತೆಗೆದುಕೊಂಡಿರುವ ಯೋಜನೆಗಳು ಮತ್ತು ಅವುಗಳ ರೂಪು ರೇಷೆಗಳ ಕುರಿತು ಚರ್ಚಿಸಲಾಯಿತು. ಇಡೀ ರಾಜ್ಯದ ತುಂಬ ರೈತರ ಆತ್ಮಹತ್ಯೆಗೆ ಕಾರಣಗಳನ್ನು ತಿಳಿಸಿ ಹೇಳಿ ಸರಕಾರದ ಜಪ್ತಿಯನ್ನು ನಿಲ್ಲಿಸಲು ಯುವಕರ ಪಡೆ ಸಿದ್ಧರಾಗಬೇಕೆಂದು ಬೆಂಗಳೂರಿನ ತಮ್ಮ ಕಾನೂನು ಕಾಲೇಜಿನಲ್ಲಿ ಒಂದು ಶಿಬಿರವನ್ನು ಏರ್ಪಡಿಸಿದ್ದರು. ಇದರಲ್ಲಿ ನೀವು ಭಾಗವಹಿಸಬೇಕೆಂದು ಆಗ್ರಹಿಸಿದರು. ಮೂರು ದಿನ ನಡೆದ ಆ ಶಿಬಿರದಲ್ಲಿ ಭಾಗವಹಿಸಿ ಬಂದ ಮೇಲೆ ಗುಲಬರ್ಗಾ ಜಿಲ್ಲೆಯಲ್ಲಿ ವಿದ್ಯಾರ್ಥಿ ರೈತ ಸಂಘದ ಸಂಚಾಲಕರಾಗಿ ಕೆಲಸ ಮಾಡಲು ಸೂಚಿಸಿದರು.

ಇದೇ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಜನಪದ ವೈದ್ಯಕೋಶದ ಮಾಹಿತಿ ಸಂಗ್ರಹಕ್ಕಾಗಿ ಕರೆಯಲಾಗಿತ್ತು. ಆಗ ಹಿರೇಮಠರು ಸಹಜವಾಗಿಯೇ ಅರ್ಜಿ ಹಾಕಿದರು. ಬೆಂಗಳೂರಿನ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನ ಕಛೇರಿಯಲ್ಲಿ ಸಂದರ್ಶನ ನಡೆಸಲಾಯಿತು. ಮರುದಿನ ಕಚೇರಿಯ ಸೂಚನಾ ಬೋರ್ಡಿನಲ್ಲಿ ಹಚ್ಚಿದ ಆಯ್ಕೆ ಪ್ರಕಟಣೆಯಲ್ಲಿ ಗುಲಬರ್ಗಾ ಜಿಲ್ಲೆಯ ಸಂಗ್ರಹಕಾರನೆಂದು ಪ್ರಕಟಿಸಲಾಗಿತ್ತು. ಮುಂದೆ ಹಳ್ಳಿಗಳಲ್ಲಿ ಜನಪದ ವೈದ್ಯರು, ದನ ಮತ್ತು ಮನುಷ್ಯರಿಗೆ ಬರುವ ಸಾಮಾನ್ಯ ರೋಗಗಳಿಗೆ ಕೊಡುವ ಗಿಡಮೂಲಿಕೆಯ ಔಷಧಗಳು, ಅವುಗಳ ಸಂಗ್ರಹಿಸುವಿಕೆ, ಮೂಲಿಕೆಗಳನ್ನು ಬೆಳೆಸುವುದು, ರಕ್ಷಿಸುವುದು ಮತ್ತು ಔಷಧವನ್ನು ತಯಾರಿಸುವ ವಿಧಾನ, ನೀತಿ ನಿಯಮಗಳು ಉಪಚರಿಸುವ ವಿಧಾನಗಳು ಬಳಸುವ ರಾಸಾಯನಿಕ ವಸ್ತುಗಳು ಮುಂತಾದವುಗಳ ಕುರಿತು ಒಂದು ತಿಂಗಳವರೆಗೆ ತರಬೇತಿ ನೀಡಲಾಯಿತು. ತರಬೇತಿ ಮುಗಿದ ನಂತರ ಸಂಗ್ರಹಿಸಿ ಕೊಡುವ ಮಾಹಿತಿಯ ಕಾಪಿಗಳನ್ನು ಕೊಟ್ಟು ಪ್ರತಿಯೊಂದು ಮಾಹಿತಿಗಾರನ ವಿವರ, ಹೆಸರು, ಯಾರಿಂದ ಕಲಿತ್ತದ್ದು, ಯಾವ ಔಷಧ ಕೊಡುತ್ತಾನೆ, ಎಷ್ಟು ವರ್ಷಗಳಿಂದ ಕೊಡುತ್ತಾನೆ, ಯಾವ ಪ್ರಕಾರದ ವೈದ್ಯ, ಮಂತ್ರ ವೈದ್ಯನೋ, ಶಾಸ್ತ್ರವೈದ್ಯನೋ ಮುಂತಾದ ಸಮಗ್ರ ವಿವರಗಳನ್ನು ಸಂಗ್ರಹಿಸಿ ಹಳ್ಳಿ ಹಳ್ಳಿ ತಿರುಗಿ ವೈದ್ಯರನ್ನು ಭೇಟ್ಟಿಯಾಗಿ ಮಾಹಿತಿ ಸಂಗ್ರಹಿಸಿ ಕಳುಹಿಸಿದರು.

೪. ಭಾಷಾ ಚಳುವಳಿ

ಇದೇ ಅವಧಿಯಲ್ಲಿಯೇ ಕರ್ನಾಟಕದಾದ್ಯಂತ ಕನ್ನಡ ಭಾಷಾ ಚಳುವಳಿ ನಡೆಯಿತು. ಅದಕ್ಕೆ ಕಾರಣವೆಂದರೆ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಕನ್ನಡ ಪ್ರಥಮ ಭಾಷೆಯೊಂದಿಗೆ ಸಂಸ್ಕೃತವು ಪ್ರಥಮ ಭಾಷೆಯಾಗಿ ಓದಲು ಸೇರಿಸಲಾಗಿತ್ತು. ಹೆಚ್ಚು ಗುಣಗಳನ್ನು ಪಡೆಯುವ ಆಸೆಯಿಂದ ಬಹುಪಾಲು ವಿದ್ಯಾರ್ಥಿಗಳು ಸಂಸ್ಕೃತ ಭಾಷೆಯನ್ನು ಪ್ರಥಮ ಭಾಷೆಯಾಗಿ ತೆಗೆದುಕೊಂಡು ಓದುತ್ತಿದ್ದರು. ಇದರಿಂದ ಬಹುಪಾಲು ಕನ್ನಡ ವಿದ್ಯಾರ್ಥಿಗಳು ಕನ್ನಡ ಓದದೆ ಗುಣಗಳ ಆಸೆಗಾಗಿ ಸಂಸ್ಕೃತ ತೆಗೆದುಕೊಳ್ಳುತ್ತಿದ್ದರು. ಇದರಿಂದ ಕನ್ನಡ ಭಾಷೆಗೆ ಕರ್ನಾಟಕ ರಾಜ್ಯದಲ್ಲಿಯೇ ಕಲಿಸದಿದ್ದರೆ ಬೇರೆ ಎಲ್ಲಿ ಕಲಿಯಲು ಸಾಧ್ಯ ? ಎಂದು ಕನ್ನಡ ಭಾಷೆಗೆ ಪ್ರಥಮ ಭಾಷೆಯಾಗಿ ಆದ್ಯತೆ ನೀಡಿ ಸಂಸ್ಕೃತವನ್ನು ತೆಗೆಯಬೇಕೆಂದು ನಾಡಿನ ಸಾಹಿತಿಗಳು, ಬುದ್ಧಿಜೀವಿಗಳು, ಭಾಷಾ ತಜ್ಞರು ಸಭೆ ನಡೆಸಿ ಪ್ರತಿಭಟಿಸಿದರು. ಕನ್ನಡ ಭಾಷೆಯ ಅಭ್ಯಾಸಕ್ಕಾಗಿ ಲೇಖನಗಳು ಬರೆದು ಪ್ರಕಟಿಸಿದರು. ಆದರೂ ಸರ್ಕಾರದ ಆಡಳಿತ ವರ್ಗವು ಅವರ ಬೇಡಿಕೆ ಕಡೆಗೆ ಗಮನ ಹರಿಸಲಿಲ್ಲ. ಆಗ ಸಾಹಿತಿಗಳು ಭಾಷಾ ಚಿಂತಕರು ಸೇರಿ ಕನ್ನಡ ಉಳಿಸುವ ಸಲುವಾಗಿ ಕನ್ನಡ ಶಕ್ತಿ ಕೇಂದ್ರ ಎಂಬ ಸಂಘಟನೆಯನ್ನು ಸ್ಥಾಪಿಸಿ ಅದರ ಮೂಲಕ ಪ್ರತಿಭಟಿಸಲು ಕರೆ ನೀಡಿದರು.

ಈ ಚಳುವಳಿಯ ಅಂಗವಾಗಿ ಗುಲಬರ್ಗಾದಲ್ಲಿಯು ನಗರಸಭೆಯ ಮುಂದೆ ಡಾ. ಬಿ.ಬಿ. ಹೆಂಡಿಯವರ ನೇತೃತ್ವದಲ್ಲಿ ಅನೇಕ ಅಧ್ಯಾಪಕರು, ಪತ್ರಕರ್ತರು, ಸಾಹಿತಿಗಳು, ಕನ್ನಡ ಆಸಕ್ತರು ಉಪವಾಸ ಕುಳಿತರು. ಅವರಲ್ಲಿ ಹಿರೇಮಠರು ಒಬ್ಬರಾಗಿದ್ದರು. ಅಂದು ಅನೇಕ ಜನ ನಾಗರೀಕರು, ರಾಜಕಾರಣಿಗಳು ಬಂದು ಸತ್ಯಾಗ್ರಹಗಳಿಗೆ ಶುಭಕೋರಿ ಹೋದರು. ಅಂದು ಸಂಜೆ ಅಫಜಲಪೂರ ತಾಲೂಕಿನ ಯುವ ಶಾಸಕರು, ವಿನಯವಂತರಾದ ಶ್ರೀ ಎಮ್.ವೈ. ಪಾಟೀಲರು ಸತ್ಯಾಗ್ರಹ ಸಭೆಗೆ ಬಂದರು. ಸರಕಾರ ನಿಮ್ಮ ಪರವಾಗಿಯೇ ತೀರ್ಮಾನ ತೆಗೆದುಕೊಳ್ಳುತ್ತದೆ. ನೀವು ಏಕೆ ಉಪವಾಸ ಕೂತಿದ್ದೀರಿ ಎದ್ದೇಳಿರೆಂದು ಪದೆ ಪದೆ ಕೇಳುತ್ತ ಮುಂದೆ ಬಂದು ಕುಳಿತದ್ದ ಹಿರೇಮಠರಿಗೂ ಕೇಳಿದರು. ಆಗ ಹಿರೇಮಠರು ನಿಮ್ಮಂತಹ ಕೈಲಾಗದ ಶಾಸಕರು ಇರುವುದರಿಂದಲೇ ನಮ್ಮಂತಹವರು ಉಪವಾಸ ಕೂಡಬೇಕಾಗಿದೆ ಎಂದಾಗ ಗಾಬರಿಯಾದ ಪಾಟೀಲರು ತಿರುಗಿ ಪ್ರಶ್ನೆ ಕೇಳದೆ ಸುಮ್ಮನಾಗಿ ಹೋದರು. ಅಂದು ಸಂಜೆಯ ಆಕಾಶವಾಣಿಯಲ್ಲಿ ಸರಕಾರವು ಕನ್ನಡ ಭಾಷೆಯನ್ನು ಪ್ರಥಮ ಭಾಷೆಯಾಗಿ ಕಲಿಯಲು ಕಡ್ಡಾಯ ಮಾಡಿದೆ ಎಂದು ಘೋಷಿಸಿದ್ದರಿಂದ ಪ್ರಸಾರ ಮಾಡಿದ ಮೇಲೆ ಗೋಕಾಕ ಚಳುವಳಿಯು ನಿಂತಿತು.

೫. ವಿಶ್ವವಿದ್ಯಾಲಯದಲ್ಲಿ ಲಾಂಛನ ಹೋರಾಟ.

೧೯೮೫ ರ ವರ್ಷದಲ್ಲಿಯ ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರವು ಇನ್ನು ಮುಂದೆ ಸ್ವತಂತ್ರ ವಿಶ್ವವಿದ್ಯಾಲಯವೆಂದು ಸರ್ಕಾರ ಘೋಷಿಸಿತು. ಅಲ್ಲಿಯವರೆಗೂ ಕೆಲವೇ ವಿಭಾಗಗಳು ಕಾರ್ಯನಿರ್ವಹಿಸುತ್ತಿದ್ದು, ಕರ್ನಾಟಕ ವಿಶ್ವವಿದ್ಯಾಲಯದ ಲಾಂಛನವೇ ಬಳಕೆಯಾಗುತ್ತಿತ್ತು. ಗುಲಬರ್ಗಾ ಸ್ವತಂತ್ರ ವಿಶ್ವವಿದ್ಯಾಲಯವೆಂದು ಘೋಷಿಸಿರುವುದರಿಂದ ಅದಕ್ಕೆ ತಮ್ಮದೇ ಆದ ಒಂದು ಲಾಂಛನ ಸಿದ್ಧಪಡಿಸಲು ವಿಶ್ವವಿದ್ಯಾಲಯದ ಉಪ ಕುಲಪತಿ ಮತ್ತು ಕುಲ ಸಚಿವರು ಈ ಭಾಗದ ಸಾಂಸ್ಕೃತಿಕ ಸಾಹಿತ್ಯದ ದ್ಯೋತಕವನ್ನು ಸಂಕೇತಿಸುವ ಚಿಹ್ನೆ ಹಾಗೂ ದೇಹವಾಕ್ಯ ಬರೆಯಲು ಸೂಕ್ತವಾದುದನ್ನು ತಿಳಿಸಿರೆಂದು ಪತ್ರಿಕೆಯಲ್ಲಿ ಅಭಿಪ್ರಾಯ ಸೂಚಿಸಲು ತಿಳಿಸಿದ್ದರು. ಈ ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಬೀದರ, ಗುಲಬರ್ಗಾ, ರಾಯಚೂರು, ಬಳ್ಳಾರಿ ಜಿಲ್ಲೆಗಳ ಕಲಾವಿದರು, ಸಾಹಿತಿಗಳು, ಬುದ್ಧಿಜೀವಿಗಳು, ಪತ್ರಕರ್ತರು, ಶಿಕ್ಷಣ ತಜ್ಞರು ಪತ್ರ ಲೇಖನಗಳ ಮೂಲಕ ತಮ್ಮ ವಿಚಾರಗಳನ್ನು ತಿಳಿಸಿದರು.

ಹೀಗೆ ಬಂದ ನಾಲ್ಕು ಜಿಲ್ಲೆಯ ಅಭಿಪ್ರಾಯಗಳನ್ನು ಕ್ರೋಢಿಕರಿಸಿ ಪರಿಶೀಲಿಸಿ ಸಿಂಡಿಕೇಟ್ ಸಭೆಯಲ್ಲಿ ಸಮಾಲೋಚನೆ ಮಾಡಿ ಗುಲಬರ್ಗಾ ವಿಶ್ವವಿದ್ಯಾಲಯದ ಲಾಂಛನದಲ್ಲಿ ಹಂಪಿಯಲ್ಲಿನ ಕಲ್ಲಿನ ರಥ ಮತ್ತು ದ್ಯೇಹ ವಾಕ್ಯವಾಗಿ ಸಂಸ್ಕೃತದ 'ಅಮೃತಂ ವಿದ್ಯಂ' ಎಂಬುದನ್ನು ಸ್ವೀಕರಿಸಲಾಗಿದೆ ಎಂದು ಅಧಿಕಾರಿಗಳು ಪ್ರಕಟಿಸಿದರು.

ಈ ಪ್ರಕಟಣೆಯನ್ನು ಗಮನಿಸಿದ ಹಿರೇಮಠರು ಮತ್ತು ಗೆಳೆಯರು ಪ್ರತಿಭಟಿಸಿದರು. ಆಗ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ಸಭೆ ಕರೆದು ತಾವು ತೆಗೆದುಕೊಂಡ ಲಾಂಛನದ ಬಗ್ಗೆ ವಿವರಣೆ ನೀಡಿದರು. ಸಭೆಯಲ್ಲಿ ಗೊಂದಲ ಏರ್ಪಟ್ಟು ಸಭಾ ಅಧ್ಯಕ್ಷರು ಯಾವ ತೀರ್ಮಾನಕ್ಕೆ ಬಾರದೆ ಮತ್ತೊಮ್ಮೆ ಸಭೆ ಕರೆದು ಚರ್ಚಿಸೋಣವೆಂದರು. ಆದರೂ ಪಟ್ಟು ಬಿಡದ ಹಿರೇಮಠರು ಅಮೃತಂ ವಿದ್ಯಂ ಬದಲಿಸಿ ಕನ್ನಡ ಭಾಷೆಯಲ್ಲಿ ದ್ಯೇಹವಾಕ್ಯ ಬರೆಸಬೇಕೆಂದು ಗೆಳೆಯರೊಂದಿಗೆ ಆಗ್ರಹಪಡಿಸಿದಾಗ ಸಭೆಯಲ್ಲಿದ್ದ ಮುಖಂಡರು ಕನ್ನಡದಲ್ಲಿ ಬರೆಸುವ ಭರವಸೆ ನೀಡಿ ಸಭೆಯನ್ನು ಮುಗಿಸಿದರು. ನಂತರ ಅಮೃತಂ ವಿದ್ಯಂ ಬದಲಾಗಿ 'ವಿದ್ಯವೇ ಅಮೃತ'ವೆಂದು ತಿಳಿಯುವಂತೆ ಬರೆಯಲು ಸೂಚಿಸಿದರು. ಆದರೂ ಬದಲಾವಣೆ ಆಗುವ ಭರವಸೆ ಕಾಣದಿದ್ದಾಗ ಹಿರೇಮಠರು ತಮ್ಮ ಸಂಗಡಿಗರೊಂದಿಗೆ ಉಪವಾಸ ಸತ್ಯಾಗ್ರಹ ಕೂಡಲು ನಿರ್ಧರಿಸಿದರು. ಆಗ ಅವರ ಗೆಳೆಯರು ಇಂದು ನೀವು ಉಪವಾಸ ಕೂಡುವುದು ಬೇಡ. ನಾವು ಕೂಡುತ್ತೇವೆ. ಅವರಿಗೆ ಪತ್ರಿಕೆ ಪ್ರಕಟಣೆ ನೀಡಲು ಸೂಚಿಸಿದರು. ಅಂದು ಉಪವಾಸ ಕೂತ ಗೆಳೆಯರೊಂದಿಗೆ ಅಲ್ಲಿಯೇ ಇದ್ದರು ಸಂಜೆ ವಿಶ್ವವಿದ್ಯಾಲಯದ ಅಧಿಕಾರಿಗಳು ಸತ್ಯಾಗ್ರಹಿಗಳ ಕಡೆಗೆ ಬಂದು, ನಾವು ಖಂಡಿತವಾಗಿಯು ಕನ್ನಡದಲ್ಲಿಯೇ ಬರೆಸುತ್ತೇವೆಂದು ಭರವಸೆ ನೀಡಿದ ಮೇಲೆ ಸತ್ಯಾಗ್ರಹವನ್ನು

ಅಂತ್ಯಗೊಳಿಸಲಾಯಿತು. ಈ ಸತ್ಯಾಗ್ರಹದ ಪರಿಣಾಮವಾಗಿಯೇ ಮುಂದೆ ಲಾಂಛನದಲ್ಲಿ ಅಮೃತಂ ವಿದ್ಯಂ ಬದಲಾಗಿ 'ವಿದ್ಯವೇ ಅಮೃತ' ವೆಂದು ಬರೆದಿರುವುದನ್ನು ಇಂದಿಗೂ ನೋಡಬಹುದಾಗಿದೆ.

ಹೀಗೆಯೇ ಜೀವನವೇ ಹೋರಾಟ, ಹೋರಾಟವೇ ಜೀವನವೆಂದು ಬಾಳಿದ ಪ್ರೊ. ಸೂಗಯ್ಯ ಹಿರೇಮಠರ ಜೀವನ ಮುಂದಿನ ಯುವಕರಿಗೆ ಮಾರ್ಗದರ್ಶಿಯಾಗಿದೆ.

- **ಕುಟುಂಬ ಜೀವನ**

ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದಲ್ಲಿ ಸಹಾಯಕ ಸಂಶೋಧಕರಾಗಿ ಸೇರಿದಾಗಲೇ ಹಿರೇಮಠರಿಗೆ ಹೆಣ್ಣು ಕೊಡಲು ಅನೇಕರು ದುಂಬಾಲು ಬಿದ್ದರು. ಅನೇಕರು ವರದಕ್ಷಿಣೆ ಕೊಟ್ಟು ಮದುವೆ ಮಾಡಲು ಮುಂದೆ ಬಂದಿದ್ದರು. ಆದರೆ ಇವರಿಗೆ ವರದಕ್ಷಿಣೆ ಇಲ್ಲದೆ ಸರಳ ಮದುವೆ ಆಗುವ ವಿಚಾರವಿದ್ದಿತ್ತು. ಆ ಸಂದರ್ಭದಲ್ಲಿ ಓದಿ ನೌಕರಿ ಮಾಡುವ ವಧುಗಳು ಕೂಡ ಇವರನ್ನು ಮದುವೆಯಾಗಬಹುದಿತ್ತು. ಅಂತಹವರು ಅನೇಕರು ಕೇಳಿದ್ದರು. ಆದರೆ ಮದುವೆಯ ವಿಚಾರ ಪ್ರಸ್ತಾಪ ಬಂದಾಗಲೆಲ್ಲ ಹಿರೇಮಠರು ನೋಡೋಣವೆಂದು ಮುಂದೂಡುತ್ತಲೇ ಬಂದಿದ್ದರು. ಗೆಳೆಯರ ಒತ್ತಾಯಕ್ಕೆ ಮಣಿದು ಕೆಲವು ಸಲ ಅನಿವಾರ್ಯವಾಗಿ ನೋಡಲು ಹೋಗುತ್ತಿದ್ದರು. ಆದರೆ ಮನೆಯಲ್ಲಿ ಅವರ ತಂದೆಯವರಿಗೆ ಮತ್ತು ಚಿಕ್ಕಪ್ಪ, ಚಿಕ್ಕಮ್ಮನವರಿಗೆ ಸೋದರ ಅಕ್ಕನ ಮಗಳನ್ನು ಮದುವೆ ಮಾಡಲು ಇಚ್ಛಿಸುತ್ತಿದ್ದರು. ಎರಡು ತಲೆಮಾರಿನಿಂದಲೂ ಸುರಪೂರ ತಾಲೂಕಿನ ದಂಡುಸೋಲಾಪೂರದ ಮಠದ ಮನೆತನದೊಂದಿಗೆ ಹೆಣ್ಣು ಕೊಡುಕೊಳ್ಳುವ ಸಂಬಂಧ ನಡೆದಿದ್ದರಿಂದ, ಹೊಸ ಬೀಗತನ ಮಾಡುವದು ಸರಿಯೆಂದು ಹೇಳಿದರು.

ಆದರೆ ಅವರ ತಂದೆಯವರಿಗೆ ಮತ್ತು ಮನೆಯವರಿಗೆ ಆ ಭಾಗದ ಊರಿನ ಜನರು ಅಕ್ಕನ ಮಗಳನ್ನು ಮದುವೆಯಾಗುವುದರಲ್ಲಿಯೇ ತೃಪ್ತಿ ಇದೆ ಎಂದು ಒತ್ತಾಯ ಮಾಡುತ್ತಿದ್ದರು. ಆದ್ದರಿಂದ ಹಿರೇಮಠರು ಪ್ರಗತಿಪರ ವಿಚಾರಧಾರೆಯಾಗಿರುವುದರಿಂದ ತಂದೆಯವರಿಗೆ ತೃಪ್ತಿಯಾಗುವುದಾದರೆ ಅಕ್ಕನ ಮಗಳಿಗೆ ಮದುವೆಯಾಗಲು ಒಪ್ಪಿಕೊಂಡರು. ಅದು ಮುಂದಿನ ಒಂದು ವಾರದಲ್ಲಿಯೇ ಸರಳ ಮದುವೆಯಾಗಬೇಕೆಂದು ಸೂಚಿಸಿದರು. ಅವರ ಮದುವೆ ಆಗದೆ ಸಮಾಜದ ಅನಿಷ್ಠಗಳ ವಿರುದ್ಧ ಹೋರಾಟ ಮಾಡುವ ಸಮಾಜ ಚಿಂತಕರಾಗಿ ಅವಿವಾಹಿತರಾಗಿ ಉಳಿಯುವರೆಂದು ಅನೇಕ ಜನ ತಿಳಿದಿದ್ದರು. ಅಲ್ಲದೆ ವಿವಾಹ ವಾಗಿಯು ಸಾಮಾಜಿಕ ಕಾರ್ಯಗಳನ್ನು ಮಾಡಬಹುದೆಂದು ಗಾಂಧೀಜಿ, ಬಸವಣ್ಣನ ಉದಾಹರಣೆಗಳನ್ನು ಹೇಳುತ್ತಿದ್ದರು. ಆದರೆ ಹಿರೇಮಠರಿಗೆ ಸಮಾಜಮುಖಿಯಾಗಿ ಹೋರಾಟ ಮಾಡುವುದೇ ಮುಖ್ಯವೆಂದು ಭಾವಿಸಿದ್ದರಿಂದ ಮದುವೆ ಪ್ರಸ್ತಾಪ ಬಂದಾಗಲೆಲ್ಲ ಉತ್ತರಿಸದೇ ಜಾರಿಕೊಳ್ಳುತ್ತಿದ್ದರು. ಹೀಗೆ ಮೂರ್ನಾಲ್ಕು ವರ್ಷ ಗತಿಸಿದರು. ಹಿರೇಮಠರಲ್ಲಿ ಮದುವೆಯಾಗುವ ಅಪೇಕ್ಷೆ ಕಾಣದಿದ್ದಾಗ

ಹೆಣ್ಣುಗಳನ್ನು ನೋಡಿದರು. ಉತ್ಸುಕತೆ ತೋರದೆ ಇದ್ದಾಗ ಅವರ ತಂದೆ ಮತ್ತು ಮನೆಯವರಿಗೆ ಚಿಂತೆ ಮೂಡಿತು. ಯಾಕೆಂದರೆ ಇದ್ದ ಇಬ್ಬರು ಮಕ್ಕಳಲ್ಲಿ ಹೆಣ್ಣು ಮಗಳನ್ನು ಈಗಾಗಲೇ ಸೋದರ ಮಾವನ ಮಗನಿಗೆ ಕೊಟ್ಟು ಮದುವೆ ಮಾಡಿದ್ದರು. ಅವರಿಗೆ ಹೆಣ್ಣು ಗಂಡು ಮಕ್ಕಳಾಗಿ ಸುಖವಾಗಿದ್ದರು. ಇದ್ದ ಒಬ್ಬ ಮಗನು ಓದಿ ಜಾಣನಾಗಲಿ ಎಂಬ ಹೆಮ್ಮೆಯಿಂದ ಅನೇಕ ತೊಂದರೆಗಳನ್ನು ತೆಗೆದುಕೊಂಡು ಓದಿಸಿದ್ದರು. ಅಲ್ಲದೆ ತಮ್ಮ ವಂಶದ ಕುಡಿಯನ್ನು ಬೆಳಗಿಸುವನೆಂದು ಬಹುವಾಗಿ ನಂಬಿದ್ದರು. ಹೀಗಾಗಿ ಹಿರೇಮಠರ ಮದುವೆ ಬಗ್ಗೆ ಉದಾಸೀನತೆಯು ಅವರಲ್ಲಿ ಸಹಜವಾಗಿಯೇ ಆತಂಕ ಮೂಡಿಸಿತು. ತನ್ನ ಗೆಳೆಯರಿಗೆ ಹಾಗೂ ಹಿರೇಮಠರ ಗೆಳೆಯರಿಗೂ, ಹಿತಚಿಂತಕರಿಗೂ, ರಾಜಕಾರಣಿ ಮುಖಂಡರಿಗೂ ಪ್ರಸಂಗ ಬಂದಾಗಲೆಲ್ಲ ಮದುವೆಯ ವಿಷಯವನ್ನು ಪ್ರಸ್ತಾಪ ಮಾಡಿ ನೀವೆಲ್ಲರೂ ಅವರನ್ನು ಒಪ್ಪಿಸಿ ಮದುವೆ ಮಾಡಿರೆಂದು ಹೇಳುತ್ತಿದ್ದರು. ಹೀಗಾಗಿ ಎಲ್ಲಾ ಕಡೆಯಿಂದಲು ಮದುವೆಗೆ ಒತ್ತಾಯ ಬಂದಾಗ ಅನಿವಾರ್ಯವಾಗಿ ಹಿರೇಮಠರು ತಮ್ಮ ನಿರ್ಧಾರವನ್ನು ಬದಲಿಸಿ ತಂದೆಯವರ ಮತ್ತು ಹಿರಿಯ ಗೆಳೆಯರ, ಹಿತಚಿಂತಕರ ಮಾತಿಗೆ ಒಪ್ಪಿ ಅಕ್ಕನ ಮಗಳಿಗೆ ಮದುವೆಯಾಗಲು ನಿರ್ಧರಿಸಿದರು. ಅಲ್ಲದೆ ಒಂದು ವಾರದಲ್ಲಿಯೇ ಅಡಂಬರವಿಲ್ಲದೆ ಸರಳವಾಗಿ ಮದುವೆ ಮಾಡಬೇಕೆಂದು ತಿಳಿಸಿದರು. ಹಿರೇಮಠರು ಮದುವೆಗೆ ಒಪ್ಪಿದ ಸುದ್ದಿ ತಿಳಿಯುತ್ತಲೇ ಮನೆಯವರು, ಊರಿನವರು ಸುತ್ತಲಿನ ಹಿತಚಿಂತಕರು ಸಂತೋಷ ವ್ಯಕ್ತಪಡಿಸಿದರು. ಆದರೂ ಒಂದು ವಾರದಲ್ಲೇ ಎಲ್ಲವನ್ನು ಸಿದ್ಧಪಡಿಸಿವುದು ಹೇಗೆ ಎಂಬ ಆತಂಕವು ಬೀಗರಿಗೆ ಮೂಡಿ ಕೆಲವು ಮುಖಂಡರನ್ನು ಮದುವೆಯ ದಿನಾಂಕವನ್ನು ಮುಂದೂಡಲು ಕೇಳಿಕೊಂಡರು. ಆದರೆ ಹಿರೇಮಠರು ಅವಧಿಯನ್ನು ಮುಂದೂಡಲು ಒಪ್ಪಿಕೊಳ್ಳದಿದ್ದಾಗ ಜನರೆಲ್ಲ ಒಂದು ಗೂಡಿ ಒಂದು ವಾರದಲ್ಲಿಯೇ ಮದುವೆ ಮಾಡಲು ಸಿದ್ಧತೆ ಮಾಡಿ, ಸುರಪೂರ ತಾಲ್ಲೂಕಿನ ಏವೂರಿನ ಬಸವೇಶ್ವರ ದೇವಾಲಯದಲ್ಲಿ ಸರಳ ಮದುವೆ ನೆರವೇರಿಸಿದರು. ಅಕ್ಕನ ಮಗಳಾದ ಶ್ರಿಮತಿ ಶಾಂತಾಳೊಂದಿಗೆ ಮದುವೆ ನೆರವೇರಿತು.

ಮದುವೆಯಾಗಿ ತುಂಬು ದಾಂಪತ್ಯ ಜೀವನವನ್ನು ಸುಖವಾಗಿ ನಡೆಸಿರುವರು. ಅವರಿಗೆ ಅವರ ಸಹಧರ್ಮಿಣಿಯು ಎಲ್ಲಾ ಕಾರ್ಯಗಳಲ್ಲಿ ಸಹಕರಿಸಿ ಸುಖ ಸಂತೋಷವನ್ನು ನೀಡುತ್ತಿರುವರು. ಈ ದಂಪತಿಗಳಿಗೆ ಇಬ್ಬರು ಮಕ್ಕಳು. ಹಿರಿಯ ಮಗ ಚಿ॥ ನಟರಾಜನು ಈಗ ಎಮ್.ಟ್ಯಾಕ್ ಓದುತ್ತಿರುವನು. ಮಗಳು ಚಿ॥ ಜ್ಯೋತಿ ಎಮ್.ಸಿ.ಎ. ಓದುತ್ತಿರುವ ಜಾಣ ವಿದ್ಯಾರ್ಥಿನಿಯಾಗಿರುವಳು. ಇಬ್ಬರು ಮಕ್ಕಳನ್ನು ಪಡೆದ ಹಿರೇಮಠರದು ಸುಖಿ ಕುಟುಂಬವಾಗಿರುವದು. ಹಿರೇಮಠರ ಸಾಹಿತ್ಯ ರಚನೆಯಲ್ಲಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವುದಕ್ಕೆ ಕಾರಣಕರ್ತರೆಂದರೆ ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಸಹನಶೀಲತೆ ಜಾಣ್ಮೆಯಿಂದ ನಡೆಸಿಕೊಂಡು ಹೋಗುತ್ತಿರುವ ಅವರ ಧರ್ಮಪತ್ನಿಯವರು ಜವಾಬ್ದಾರರಾಗಿರುವರು. ಬಂದ ಅತಿಥಿಗಳಿಗೆ ಆದರ ಆತಿಥ್ಯ ನೀಡುವರು. ಹಿರೇಮಠರು ಮನೆಯ ಕಡೆಗೆ ಕಾರ್ಯಕ್ರಮ ಮುಗಿಸಿ ಬರುವುದು ವಿಳಂಬವಾದರೂ ಎಲ್ಲವನ್ನು ತೂಗಿಸಿಕೊಂಡು

ಸಂತೋಷದಿಂದ ಮಕ್ಕಳ ಪಾಲನೆ ಪೋಷಣೆಯನ್ನು ಜವಾಬ್ದಾರಿಯಿಂದ ಮಾಡುತ್ತಿರುವದು. ಯಾವುದೇ ಅಡಂಬರದ ಬದುಕಿಗೆ ಆಶೆಪಟ್ಟವರಲ್ಲ. ಹಿರೇಮಠರ ಜೀವನ ಸಿದ್ಧಾಂತವು ಸರಳವಾಗಿರುವಂತೆಯೇ ಅವರ ಮನೆಯವರು ಇದ್ದಾರೆ. ಯಾವುದೇ ಮನೆತನಕ್ಕೆ ಸೌಂದರ್ಯವನ್ನು ಹೆಚ್ಚಿಸುವುದು ಬಾಹ್ಯ ವಸ್ತುಗಳಲ್ಲ. ಮನೆಯಲ್ಲಿರುವವರ ಒಳ್ಳೆಯ ಗುಣ-ನಡತೆಗಳೇ ಆ ಕುಟುಂಬ, ಮನೆಯ ಸೌಂದರ್ಯದ ಒಳ್ಳೆಯ ಲಕ್ಷಣ. ಇದಕ್ಕನುಗುಣವಾಗಿ ಹಿರೇಮಠರ ಕುಟುಂಬವು ಬಾಳುತ್ತಿರುವುದು. ಇಂದಿನ ಅಧುನಿಕ ವೈಭವದ ಬದುಕಿಗೆ ಮಾರು ಹೋಗಿ ಕುಟುಂಬಗಳು ಶಿಥಿಲವಾಗಿ ಒಡೆದು ಹೋಗುತ್ತಿರುವ ಇಂತಹ ಸಂದರ್ಭದಲ್ಲಿ ಹಿರೇಮಠರಂತಹ ದಾಂಪತ್ಯ ಜೀವನವು ಆದರ್ಶಪ್ರಾಯವೆಂದು ಹೇಳಬಹುದಾಗಿದೆ.

- **ವೃತ್ತಿ ಜೀವನ**

ಜನತಾ ಪಕ್ಷವು ಅಧಿಕಾರಕ್ಕೆ ಬಂದು ಹಿರೇಮಠರ ಆತ್ಮೀಯರಾದ ಶ್ರೀ ಎಸ್.ಕೆ. ಕಾಂತಾ ಶಾಸಕರಾಗಿ ಆರಿಸಿ ಬಂದಿದ್ದರು. ಅಲ್ಲದೆ ಗೆಳೆಯರಾದ ಬಿ.ಆರ್. ಪಾಟೀಲ್, ಕೆ.ಬಿ. ಶಾಣಪ್ಪಾ ಮುಂತಾದ ಶಾಸಕರು ಹಿರೇಮಠರ ಒಡನಾಡಿಗಳಾಗಿದ್ದರು. ಶಾಹಪೂರ ತಾಲೂಕಿನಿಂದ ಶ್ರೀಮಾನ್ ಬಾಪುಗೌಡ ದರ್ಶನಾಪೂರರು ಶಾಸಕರಾಗಿ ಆರಿಸಿ ಬಂದಿದ್ದರು. ಅವರೊಂದಿಗೆ ಚುನಾವಣೆಯಲ್ಲಿ ಹಿರೇಮಠರು ಸಾಕಷ್ಟು ಪ್ರಚಾರ ಮಾಡಿದ್ದರು. ಜನತಾ ಪಕ್ಷವು ಅಧಿಕಾರಕ್ಕೆ ಬಂದಿರುವುದರಿಂದ ಸಹಜವಾಗಿಯೇ ಹಿರೇಮಠರಿಗು ಬೆಂಗಳೂರಿಗೆ ಬರಲು ಆಗ್ರಹಿಸಿದರು. ಈಗಾಗಲೇ ರಾಜಕೀಯ ಕ್ಷೇತ್ರದಲ್ಲಿ ಧುರಿಣರಾಗಿ ಕೆಲಸ ಮಾಡಿರುವುದರಿಂದ ರಾಜಕೀಯದಲ್ಲಿಯೇ ಹಿರೇಮಠರು ಮುಂದುವರೆಯುವರೆಂದು ಅವರ ಮಿತ್ರರು ಮತ್ತು ಜನರ ಸಹಜ ಆಲೋಚನೆಯಾಗಿತ್ತು. ಶಾಸಕ ಮಿತ್ರರೊಂದಿಗೆ ಬೆಂಗಳೂರಿನ ಶಾಸಕ ಭವನದಲ್ಲಿರುವಾಗಲೇ ಸಮಾಜವಾದಿ ಚಿಂತಕರೊಂದಿಗೆ ದಿನಾಲೂ ಚರ್ಚೆ ಮಾಡುತ್ತಿದ್ದರು. ಹಿರೇಮಠರ ಆಪ್ತರಾದ ಶಾಸಕರು ಯಾವುದಾದರು ಒಂದು ಹುದ್ದೆ ನೀಡಬೇಕೆಂಬ ಆಲೋಚನೆಯಲ್ಲಿದ್ದರು. ಆ ಉದ್ದೇಶದಿಂದಲೇ ಅವರನ್ನು ತಮ್ಮ ಜೊತೆಗೆ ಇರಲು ಕರೆದಿದ್ದರು. ಶಾಸಕರ ಭವನದಲ್ಲಿರುವಾಗಲೇ ಹೈದರಾಬಾದ-ಕರ್ನಾಟಕ ಶಿಕ್ಷಣ ಸಂಸ್ಥೆಯ ಅಂದಿನ ಅಧ್ಯಕ್ಷರಾದ ಶ್ರೀಮಾನ್ ಡಾ. ಬಿ.ಜಿ. ಜವಳಿಯವರು ಆಗಾಗ ಗೆಳೆಯರಾದ ಕೆ.ಬಿ. ಶರಣಪ್ಪ ನವರಲ್ಲಿ ಬರುತ್ತಿದ್ದರು. ಶಾಸಕರೊಂದಿಗೆ ಚರ್ಚಿಸುವ ಹಿರೇಮಠರ ನಿಕಟ ಸಂಬಂಧ ಬೆಳೆಯಿತು. ಹಿರೇಮಠರು ರಾಜಕೀಯದಲ್ಲಿ ಮುಂದುವರೆಯಲು ಇಚ್ಛೆ ವ್ಯಕ್ತಪಡಿಸದಿದ್ದಾಗ ಅವರ ಗೆಳೆಯರಾದ ವೈಜಿನಾಥ ಪಾಟೀಲ್ ಮುಂತಾದವರೆಲ್ಲರು ರಾಜಕೀಯದಲ್ಲಿ ಮುಂದುವರೆಯಲು ಒತ್ತಾಯಿಸುತ್ತಿದ್ದರು. ರಾಜಕೀಯದಲ್ಲಿ ಮುಂದುವರೆದರೆ ಯಾವುದೋ ಒಂದು ನಿಗಮ ಅಥವಾ ಮಂಡಳಿಯ ಸದಸ್ಯನನ್ನಾಗಿ ಕೆಲಸ ಮಾಡಬಹುದು. ಆದರೆ, ಅವರು ಇಲ್ಲಿಯವರೆಗೂ ಸಾಮಾಜಿಕ ಪರಿವರ್ತನೆಗಾಗಿ ಮಾಡಿರುವ ಹೋರಾಟಕ್ಕೆ ವಿರಾಮ ನೀಡಬೇಕಾಗುವುದು. ಮತ್ತೆ ವ್ಯವಸ್ಥೆಯೊಂದಿಗೆ ಒಂದಾಗುವದಕ್ಕೆ ಅವರ ಮನೋಧರ್ಮ ಒಪ್ಪಲಿಲ್ಲ. ಆ ಸಂದರ್ಭದಲ್ಲಿ ತಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಲು ಜವಳಿಯವರು ಸೂಚಿಸಿದರು. ಉಪನ್ಯಾಸಕರ ಹುದ್ದೆಯಾದರೆ ಮಾಡುವೆನೆಂದು ಹಿರೇಮಠರು ಹೇಳಲು ಡಾ. ಜವಳಿಯವರು ಉಪನ್ಯಾಸಕ ಯಾಕೆ, ಬೇರೆ ಹುದ್ದೆ ನಡೆಯುವುದಿಲ್ಲವೆ? ಎಂದು ಪ್ರಶ್ನಿಸಿದರು. ಆಗ ಹಿರೇಮಠರು ಇಲ್ಲಿಯವರೆಗೂ ಗ್ರಾಮಗಳಲ್ಲಿ ತಿರುಗಿ ಜನರಿಗೆ ಸಾಮಾಜಿಕ ಬದಲಾವಣೆಯ ಚಿಂತನೆಗಳನ್ನು ಮೂಡಿಸಿರುವೆ. ಈಗ ಉಪನ್ಯಾಸಕರಾದರೆ ತನ್ನಲ್ಲಿಗೆ ಗ್ರಾಮೀಣ ವಿದ್ಯಾರ್ಥಿಗಳು ಬರುತ್ತಾರೆ. ಅವರಿಗೆ ದಿನಾಲು ಪಾಠದ ಜೊತೆಗೆ ಇಂತಹ ಸಾಮಾಜಿಕ ಪರಿವರ್ತನೆಯ ವಿಚಾರಗಳನ್ನು ಹೇಳಲು ಸಾಧ್ಯವಿದೆ. ಆ ಕಾರಣದಿಂದ ಉಪನ್ಯಾಸಕನಾಗಲು ಇಚ್ಛಿಸುವೆನೆಂದು ಅಭಿಪ್ರಾಯ ವ್ಯಕ್ತಪಡಿಸಿದಾಗ ಡಾ. ಜವಳಿಯವರು ಸಂತೋಷದಿಂದ ಒಪ್ಪಿ ತಮ್ಮ ಸಂಸ್ಥೆಯಿಂದ ನಿಮ್ಮ ಆತ್ಮೀಯರಾದ ವೈಜಿನಾಥ ಪಾಟೀಲರ ಚಿಂಚೋಳಿಯಲ್ಲಿ ಮಹಾವಿದ್ಯಾಲಯ ತೆರೆಯಲು ಅವರಿಗೆ ಕೇಳಿರೆಂದು ಹೇಳಿದರು. ಆಗ ಹಿರೇಮಠರು ಸಹಜವಾಗಿಯೇ ಶ್ರೀಮಾನ್ ವೈಜಿನಾಥ ಪಾಟೀಲರಿಗೆ ಈ ವಿಷಯ ಪ್ರಶ್ನಿಸಿದಾಗ ಮನಪೂರ್ವಕವಾಗಿ ಸ್ವಾಗತಿಸಿ ಅದಕ್ಕೆ ಬೆಂಬಲ

ಸೂಚಿಸಿದರು. ಮುಂದೆ ಸಂಸ್ಥೆಯ ವತಿಯಿಂದ ಚಿಂಚೋಳಿ ತಾಲೂಕಿಗೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ತೆರೆಯಲು ಕೋರಿ ಶಿಕ್ಷಣ ಮಂತ್ರಿಗಳಿಗೆ ಅರ್ಜಿಯನ್ನು ನೀಡಲಾಯಿತು. ಕಾಲೇಜಿನ ಆದೇಶ ಪತ್ರವು ಗುಲಬರ್ಗಾದಲ್ಲಿರುವ ಹೈ.ಕ.ಶಿ. ಸಂಸ್ಥೆಗೆ ತಲುಪಿದ ಮೇಲೆ ಡಾ. ಜವಳಿಯವರು ಮತ್ತು ಅವರ ಕಾರ್ಯಕಾರಿ ಮಂಡಳಿಯ ಸದಸ್ಯರು ಚರ್ಚಿಸಿ ಚಿಂಚೋಳಿಯಲ್ಲಿ ಕಾಲೇಜು ತೆರೆಯಲು ನಿರ್ಧರಿಸಿ ಮೊದಲಿಗರಾಗಿ ಆ ಊರಿಗೆ ಹೋಗಲು ಶ್ರೀ ಹಿರೇಮಠರಿಗೆ ಕಳುಹಿಸಿಕೊಟ್ಟರು. ಚಿಂಚೋಳಿಗೆ ಹೋದ ಹಿರೇಮಠರು ಅಲ್ಲಿಯ ಅತಿಥಿ ಗೃಹದಲ್ಲಿ ಉಳಿದು ತಮ್ಮ ಸಿಬ್ಬಂದಿಯೊಂದಿಗೆ ಮಹಾವಿದ್ಯಾಲಯ ನಡೆಸಲು ಸೂಕ್ತವಾದ ಕಟ್ಟಡವನ್ನು ಹುಡುಕಿದರು. ಚಿಂಚೋಳಿಯಲ್ಲಿ ಅಂತಹ ದೊಡ್ಡದಾದ ಯಾವುದೇ ಕಟ್ಟಡ ಇಲ್ಲದ್ದರಿಂದ ಚಂದಾಪೂರದ ಸರಕಾರಿ ಕಿರಿಯ ಮಹಾವಿದ್ಯಾಲಯ ಭವ್ಯ ಕಟ್ಟಡವಾಗಿದ್ದು, ಅದರಲ್ಲಿ ಮಹಾವಿದ್ಯಾಲಯ ತಾತ್ಕೂರ್ತಿಕವಾಗಿ ನಡೆಸುವುದು ಸೂಕ್ತವೆಂದು ಭಾವಿಸಿ ಅಲ್ಲಿಯ ಅಂದಿನ ಪ್ರಾಚಾರ್ಯರಿಗೆ ಭೇಟಿಯಾಗಿ ಒಂದು ವರ್ಷದವರೆಗೆ ಕಾಲೇಜು ನಡೆಸಲು ಅನುಮತಿ ಪಡೆದರು. ಸರಕಾರಿ ಕಾಲೇಜಿನ ಮುಂದಿನ ನಾಲ್ಕು ಕೋಣೆಗಳು ಕಾಲೇಜು ನಡೆಸಲು ನೀಡಿದರು. ಮುಂದೆ ಒಂದು ವಾರದಲ್ಲಿ ಹಿರೇಮಠರು, ಅಧ್ಯಕ್ಷರು ಮತ್ತು ಊರಿನ ಗಣ್ಯರನ್ನು ಕರೆಯಿಸಿ ಹಾಗೂ ಅಂದು ಪ್ರಭಾರ ಪ್ರಾಚಾರ್ಯರಾಗಿರುವ ಸಿ.ಆರ್. ಬಡಾ ಅವರು ಬಂದು ಸರಕಾರಿ ಹಿರಿಯ ಮಹಾವಿದ್ಯಾಲಯದಲ್ಲಿ ಹೈದರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಪದವಿ ಪೂರ್ವ ಮಹಾವಿದ್ಯಾಲಯದ ತರಗತಿಗಳ ಉದ್ಘಾಟನೆಯನ್ನು ನೆರವೇರಿಸಿದರು.

ಆ ವರ್ಷ ಆಳಂದ ಕಾಲೇಜಿನ ಅಧ್ಯಾಪಕರನ್ನು ಪಾರ್ಟ್‌ಟೈಮ್ ತೆಗೆದುಕೊಂಡು ಪಾಠಗಳನ್ನು ಮುಗಿಸಲಾಯಿತು. ಮುಂದೆ ಮರು ವರ್ಷ ಎಲ್ಲಾ ವಿಷಯಗಳಿಗು ಹೊಸದಾಗಿ ಅಧ್ಯಾಪಕರನ್ನು ನೇಮಿಸಲಾಯಿತು. ಒಂದು ವರ್ಷ ತೆಗೆದುಕೊಂಡ ಸರ್ಕಾರಿ ಕಿರಿಯ ಮಹಾವಿದ್ಯಾಲಯದಲ್ಲಿ ಮುಂದೆ ಐದು ವರ್ಷಗಳ ವರೆಗೆ ಪದವಿ ಮಹಾವಿದ್ಯಾಲಯ ನಡೆಯಿತು. ಅದೇ ವರ್ಷವೇ ವಾರ್ಷಿಕ ಪರೀಕ್ಷೆಗಳನ್ನು ಕೂಡ ಹಿರೇಮಠರು ಮೇಲ್ವಿಚಾರಕರಾಗಿ ಶಿಸ್ತಿನಿಂದ ಯಾವ ಅಹಿತರಕ ಘಟನೆ ನಡೆಯದಂತೆ ಪರೀಕ್ಷೆ ನಡೆಸಿದರು. ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರಿತು. ಮುಂದೆ ತರಗತಿಗಳು ಹೆಚ್ಚಾದಂತೆ ಕೋಣೆಗಳ ಸಮಸ್ಯೆ ಬಂದಿತು. ಆಗ ಸಂಸ್ಥೆಯ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯವರು ಸ್ಥಳದ ಪರಿಶೀಲನೆ ಮಾಡಿ ಸರಕಾರಿ ಕಿರಿಯ ಮಹಾವಿದ್ಯಾಲಯದ ಹಿಂದಿರುವ ಉಳಿದ ಬಯಲಿನಲ್ಲಿ ಪದವಿ ಮಹಾವಿದ್ಯಾಲಯ ಕಟ್ಟಿಸುವುದು ಸೂಕ್ತವೆಂದು ನಿರ್ಧರಿಸಿ ಸರ್ಕಾರದಿಂದ ಆ ಪ್ರದೇಶವನ್ನು ತಮ್ಮ ಸಂಸ್ಥೆಯ ಸ್ವಾಧೀನಕ್ಕೆ ಪಡೆಯಲು ಸೂಚಿಸಿದರು. ಹಿರೇಮಠರು ಉಪ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುವಾಗಲೇ ಸ್ಥಳವು ದೊರಕಿ ಶ್ರೀಮಾನ್ ವೀರೇಂದ್ರ ಪಾಟೀಲರ ಅಮೃತ ಹಸ್ತದಿಂದ ನೂತನ ಮಹಾವಿದ್ಯಾಲಯದ ಕಟ್ಟಡಕ್ಕೆ ಅಡಿಗಲ್ಲು ಸಮಾರಂಭವು ಅದ್ದೂರಿಯಾಗಿ ನಡೆಯಿತು. ಮುಂದೆ ಎರಡು ವರ್ಷಗಳಲ್ಲಿಯೇ ಸುಸಜ್ಜಿತ ಕಟ್ಟಡವಾಗಿ ಶ್ರೀ ವೀರೇಂದ್ರ ಪಾಟಿಲರು ಎರಡನೇ ಸಲ ಮುಖ್ಯಮಂತ್ರಿಯಾದಾಗ ಆ ಕಾಲೇಜಿನ ಕಟ್ಟಡವನ್ನು ಉದ್ಘಾಟಿಸಿದರು. ಅಲ್ಲಿಯವರೆಗೂ ಕಾಲೇಜು ಸರಕಾರದ ಅನುದಾನಕ್ಕೆ

ಒಳಪಟ್ಟಿರಲಿಲ್ಲ. ಮೂರನೇ ಸಲ ಹಿರೇಮಠರು ಪ್ರಾಚಾರ್ಯರಾಗಿದ್ದಾಗಲೇ ಕಾಲೇಜನ್ನು ಅನುದಾನಕ್ಕೆ ಒಳಪಡಿಸಲಾಯಿತು. ಕಾಲೇಜಿನ ಆವರಣದ ಸುತ್ತಲು ಮರ-ಬಳ್ಳಿಗಳನ್ನು, ಹೂ-ಗಿಡಗಳನ್ನು ಬೆಳೆಸಿ ಅದೊಂದು ಸುಂದರ ತಾಣವನ್ನಾಗಿ ಮಾಡಿದ್ದರು. ಕಾಲೇಜಿನ ವಾಚನಾಲಯವು ರಾತ್ರಿ ಹನ್ನೆರಡರವರೆಗೂ ಪರೀಕ್ಷೆಯ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಓದಲು ಅನುಕೂಲವಾಗುವಂತೆ ತೆರೆದಿಡುವ ವ್ಯವಸ್ಥೆ ಮಾಡಿದ್ದರು.

ಗ್ರಾಮೀಣ ಪ್ರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ಪಾಠದಲ್ಲಿ, ಆಟದಲ್ಲಿ ಯಾವುದೇ ಕೊರತೆಯಾಗದಂತೆ ಅನುಕೂಲವನ್ನು ಮಾಡಿಸಿಕೊಟ್ಟಿದ್ದರು. ಗುಲಬರ್ಗಾ ವಿಶ್ವವಿದ್ಯಾಲಯದ ವಿಭಾಗ ಮಟ್ಟದ ವಾಲಿಬಾಲ್ ಕ್ರೀಡಾಪಟುಗಳ ಆಯ್ಕೆಯ ಸ್ಪರ್ಧೆಯನ್ನು ಹಿರೇಮಠರ ನೇತೃತ್ವದಲ್ಲಿ ಕಾಲೇಜಿನ ಆವರಣದ ಬಯಲಿನಲ್ಲಿ ನಡೆದು ಇತಿಹಾಸವೇ ನಿರ್ಮಿಸಿತು. ಪ್ರತಿ ವರ್ಷವು ಕಾಲೇಜಿನ ರಾಷ್ಟ್ರ ಸೇವಾ ಯೋಜನೆಯ ವತಿಯಿಂದ ನಡೆಯುವ ವಿಶೇಷ ಶಿಬಿರಗಳಲ್ಲಿ ಗ್ರಾಮೀಣ ಜನರಿಗೆ ಅಕ್ಷರ, ಆರೋಗ್ಯ, ಕುಟುಂಬ ಯೋಜನೆ, ಜೀವ ವಿಮೆ ಮತ್ತು ಸರಕಾರದ ಸೌಲಭ್ಯಗಳ ಕುರಿತು ಮಾಹಿತಿ ನೀಡುವುದರ ಜೊತೆಗೆ ತಮ್ಮ ಸಾಂಸ್ಕೃತಿಕ ಪರಂಪರೆಯ ಕಲೆ, ಸಾಹಿತ್ಯದ ಬಗ್ಗೆಯು ಅರಿವನ್ನು ಮೂಡಿಸಿದ್ದರು. ಪ್ರತಿ ವರ್ಷ ಶಿಬಿರ ನಡೆಸಲು ಊರಿನ ಜನರೇ ಬಂದು ಬೇಡಿಕೆಯನ್ನು ಇಡುತ್ತಿದ್ದರು. ಕಾಲೇಜಿನಲ್ಲಿಯು ವಿದ್ಯಾರ್ಥಿಗಳ ಪ್ರತಿಭೆಗೆ ಪೂರಕವಾಗುವ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ತಪ್ಪದೇ ನಡೆಸುತ್ತಿದ್ದರು. ಅಲ್ಲದೆ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯು ಹಿರೇಮಠರು ವಿದ್ಯಾರ್ಥಿಗಳ ಅನೇಕ ಊರುಗಳಲ್ಲಿ ಸಾಹಿತ್ಯದ ಕಾರ್ಯಕ್ರಮ ನಡೆಸಿರುವುದಲ್ಲದೆ ಪ್ರಪ್ರಥಮ ತಾಲೂಕಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಪ್ರೇರಕರಾದರು. ವಿದ್ಯಾರ್ಥಿಗಳಲ್ಲಿ ಅಪಾರ ಪ್ರೀತಿಯನ್ನು ಗಳಿಸಿದ ಹಿರೇಮಠರು ಇಂದಿಗೂ ಚಿಂಚೋಳಿ ತಾಲೂಕಿನ ವಿದ್ಯಾರ್ಥಿ ಸಮೂಹದ ಮನದಲ್ಲಿ ಅಚ್ಚರಿಯದ ಪ್ರಾಧ್ಯಾಪಕರಾಗಿದ್ದಾರೆ. ಚಿಂಚೋಳಿ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದವರಲ್ಲಿ ಪ್ರೊ. ಸೂಗಯ್ಯ ಹಿರೇಮಠರ ಸೇವೆಯನ್ನು ಇಂದಿಗೂ ಮರೆಯಲಾರದ ಅವಿಸ್ಮರಣೆಗಳು ಸೇವೆಯಾಗಿದೆ. ಕಾಲೇಜಿನ ಕಾರ್ಯಕಲಾಪದೊಂದಿಗೆ ಸಾಹಿತ್ಯಿಕ ಬರವಣಿಗೆಯನ್ನು ನಿರಂತರವಾಗಿ ಮುಂದುವರೆಸಿರುವರು. ಅವರ ಮೊದಲ ಕವನ ಸಂಕಲನ ಉಂಡು ಮಲಗಿದವರು. ಕೃತಿಯು ೧೯೮೪ ರಲ್ಲಿ ಧ್ವನಿ ಪ್ರಕಾಶನ ಚಿಂಚೋಳಿ ವತಿಯಿಂದ ಪದವಿ ಮಹಾವಿದ್ಯಾಲಯದಲ್ಲಿಯೇ ಬಿಡುಗಡೆಯಾಯಿತು. ಚಿಂಚೋಳಿಯಲ್ಲಿ ಸೇವೆ ಸಲ್ಲಿಸುತ್ತಿರುವಾಗಲೇ ಹಿರೇಮಠರು ಜಾನಪದ ಸಾಹಿತ್ಯದ ಜೀವನ ಮೌಲ್ಯಗಳು, ಅಂತರ್ ಕಥಾ ಸಂಕಲನ, ನೀರು ನೆಲೆ ಕವನ ಸಂಕಲನ, ಉರಿಲಿಂಗ ಪೆದ್ದಿ ಸಂಪಾದನೆ ಮತ್ತು ಸ್ವರಚಿತ ಹನ್ನೊಂದು ಕೃತಿಗಳು ಪ್ರಕಟಿಸಿ ಸಾಹಿತ್ಯ ಕ್ಷೇತ್ರದಲ್ಲಿಯು ಮಹತ್ವದ ಸ್ಥಾನವನ್ನು ಗಳಿಸಿದ್ದರು.

೧೯೯೬ ರ ಆಗಷ್ಟ ತಿಂಗಳಲ್ಲಿ ಹಿರೇಮಠರು ಅದೇ ಸಂಸ್ಥೆಯ ಬೀದರಿನ ಪ್ರಥಮ ಮಹಾವಿದ್ಯಾಲಯವೆಂದು ಪ್ರತಿಷ್ಠಿತೆ ಪಡೆದು ಇತಿಹಾಸ ನಿರ್ಮಿಸಿರುವ ಬಿ.ವಿ.ಬಿ.

ಮಹಾವಿದ್ಯಾಲಯಕ್ಕೆ ವರ್ಗವಾಗಿ ಬಂದರು. ಅಲ್ಲಿಂದ ಆ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುವುದರ ಜೊತೆಗೆ ಮಹಾವಿದ್ಯಾಲಯದ ಸಾಂಸ್ಕೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ವಿದ್ವತ್ ಪೂರ್ಣ ಮಾತುಗಳಿಂದ ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ಜನಮನವನ್ನು ಸೂರೆಗೊಂಡರು. ಅಲ್ಲದೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಲಾಪಗಳ ಪ್ರೇರಕ ಶಕ್ತಿಗಳಾಗಿ ಜಿಲ್ಲೆಯ ತುಂಬ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಾಹಿತ್ಯೀಕ, ಸಾಂಸ್ಕೃತಿಕ ಲೋಕದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದರು. ಹಾಗೆಯೇ ವಿಜ್ಞಾನ ಪರಿಷತ್ತಿನ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಜನರಿಗೆ ಜಾಗೃತಿ ಮೂಡಿಸಿರುವರು. ಜಿಲ್ಲೆಯ ಎಲ್ಲಾ ಮಠಗಳು ಹಾಗೂ ಶಾಲಾ-ಕಾಲೇಜುಗಳ ಸಾಮಾಜಿಕ ಸಮಾರಂಭಗಳಲ್ಲಿ ಭಾಗವಹಿಸಿ ತಮ್ಮ ಚತುರ ವಾಗ್ಮತೆಯಿಂದ ವಿದ್ವತಪೂರ್ಣ ವಿಚಾರಗಳನ್ನು ನೀಡಿ ಬೀದರ ಜಿಲ್ಲೆಯ ಹಿರಿಯ, ಮಾತಿನಿಂದ ಖ್ಯಾತ ಸಾಹಿತಿಗಳೆಂದೇ ಪ್ರಸಿದ್ಧಿ ಪಡೆದಿರುವರು. ಸಾಹಿತ್ಯಿಕ, ಸಾಂಸ್ಕೃತಿಕ ಸೇವೆಯ ಜೊತೆಗೆ ಸಂಶೋಧಕರಾಗಿ ಈ ಜಿಲ್ಲೆಯಲ್ಲಿ ಪ್ರಥಮ ಮಾಂಡಲಿಕರಾಗಿ ರಾಜ್ಯವಾಳಿದ ಖೇಣಿ ರಂಜೋಳಿನ ಸಿಂಧರ ಕುರಿತು ಶಾಸನಗಳನ್ನು ಹುಡುಕಿ ಆಧಾರ ಸಹಿತ ಸಂಶೋಧನಾತ್ಮಕ ಕೃತಿ ರಚಿಸಿ ಬೀದರ ಇತಿಹಾಸಕ್ಕೆ ಹೊಸ ಚರಿತ್ರೆಯನ್ನು ಬರೆದವರಲ್ಲಿ ಮೊದಲಿಗರಾಗಿರುವರು. ಅಲ್ಲದೆ ಸುಮಾರು ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ಇಲ್ಲಿಯೇ ರಚಿಸಿದ್ದಾರೆ. ೩೧.೦೫.೨೦೦೮ ರಂದು ಬಿ.ವಿ.ಬಿ. ಮಹಾವಿದ್ಯಾಲಯ ಸೇವೆಯಿಂದ ನಿವೃತ್ತರಾದ ಮೇಲೆಯೂ ಅವರ ಅಧ್ಯಾಪಕ ವೃತ್ತಿ ಮತ್ತು ಬರವಣಿಗೆ ನಿರಂತರವಾಗಿ ಮುಂದುವರೆದಿದೆ.

ನಿವೃತ್ತರಾದ ಮೇಲೆ ಬೀದರಿನ ಕರ್ನಾಟಕ ಮಹಾವಿದ್ಯಾಲಯದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ವತಿಯಿಂದ ನಡೆದಿರುವ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದಲ್ಲಿ ಸಂದರ್ಶಕ ಪ್ರಾಧ್ಯಾಪಕರೆಂದು ಇಂದಿಗೂ ಸೇವೆ ಸಲ್ಲಿಸುತ್ತಿದ್ದಾರೆ. ಸೇವೆ ಸಲ್ಲಿಸುವುದರೊಂದಿಗೆ ಜನಪದ ಸಾಹಿತ್ಯ, ಶಿಷ್ಟ ಸಾಹಿತ್ಯ ಕುರಿತು ಅನೇಕ ಮಹತ್ವದ ಲೇಖನಗಳನ್ನು ಬರೆದು ಪತ್ರಿಕೆಗಳಿಗೆ ನೀಡುತ್ತಿರುವುದು ಅವರ ಸಾಹಿತ್ಯ ಸೇವೆಯ ಚಿರಂತನತೆಗೆ ಸಾಕ್ಷಿಯಾಗಿದೆ.

ಅಧ್ಯಾಯ : ೩

ಜನಪದ ಕೃತಿಗಳು

೧) ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು

೨) ಜನಪದ ವೈದ್ಯ ಪದ್ಧತಿ ಮತ್ತು ಮನೆಮದ್ದು

೩) ದೇವ ದೇವ ವನ

೪) ಜಾನಪದ ಸಂಸ್ಕೃತಿ

೫) ಅಮೃತ ಬಳ್ಳಿ ಮತ್ತು ಇತರ ಲೇಖನಗಳು

ಅಧ್ಯಾಯ : ೩

ಜನಪದ ಕೃತಿಗಳು

೧) ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು :

ಕೃತಿಯು ಪ್ರೊ. ಸೂಗಯ್ಯ ಹಿರೇಮಠರು ದಿನಾಂಕ ೧೦/೧೦/೧೯೮೮ರಂದು ಪೂಜ್ಯ ಶ್ರೀ ಚೆನ್ನಬಸವೇಶ್ವರ ಶಿವಾಚಾರ್ಯರ ಸಂಸ್ಥಾನ ಹಿರೇಮಠ ಹಾರಕೂಡದ ಹಿಂದಿನ ಪೀಠಾದಿಪತಿಗಳಾದ ಪೂಜ್ಯ ಲಿಂಗೈಕ್ಯ ಶ್ರೀ ಷ.ಬ್ರ. ಶ್ರೀ ಗುರುಲಿಂಗ ಶಿವಾಚಾರ್ಯರ ೨೦ನೆಯ ಪುಣ್ಯತಿಥಿಯ ಅಂಗವಾಗಿ ನೀಡಿದ ಉಪನ್ಯಾಸ ಅಂದ ಮಾಡಿದ ಉಪನ್ಯಾಸವನ್ನು ಪೂಜ್ಯರು ತಮ್ಮ ಮಠದ ಅನುಭಾವ ಪ್ರಚಾರೋಪನ್ಯಾಸ ಮೂರ್ತಿಯ ಮೊದಲನೆಯ ಪುಷ್ಪರಾಗಿ ಪ್ರಕಟಿಸಿರುವರು.

ಹಾರಕೂಡ ಮಠದಲ್ಲಿ ಅಂದಿನಿಂದ ಇಂದಿನವರೆಗೂ ತಪ್ಪದೇ ಅನುಭಾವ ಪ್ರಚಾರೋಪನ್ಯಾಸ ನಡೆದು ಮುಂದಿನ ವರ್ಷದಲ್ಲಿ ಆ ಉಪನ್ಯಾಸದ ಕೃತಿಗಳು ಪ್ರಕಟಣೆಯಾಗಿ ಬಿಡುಗಡೆಯಾಗುತ್ತಲಿವೆ. ಹಾರಕೂಡ ಮಠಕ್ಕೆ ಅಂದು ಅನೇಕ ಊರುಗಳಿಂದ ಬಂದು ಉಪನ್ಯಾಸ ಕೇಳಿ ಆನಂದಿಸುವದಲ್ಲದೆ, ನಿರಂತರವಾಗಿ ಅನ್ನ ಮತ್ತು ಜ್ಞಾನ ದಾಸೋಹ ಮುನ್ನಡಿಸಿ ಧರ್ಮ, ಸಾಹಿತ್ಯ ಸಂಗೀತದ ತ್ರಿವೇಣಿ ಸಂಗಮದ ಸುಕ್ಷೇತ್ರವೇ ಹಾರಕೂಡ ಮಠವಾಗಿದೆ.

ಹಾರಕೂಡ ಮಠದ ಈ ಅನುಭಾವ ಪ್ರಚಾರ ಉಪನ್ಯಾಸ ಮಾಲೆಗೆ ಪ್ರೇರಕರೂ ಪ್ರೊ. ಸೂಗಯ್ಯ ಹಿರೇಮಠರೆ ಆಗಿರುವರು; ಪ್ರೊ. ಹಿರೇಮಠರು ಗುಲಬರ್ಗಾದಲ್ಲಿ ಓದುವಾಗ ಪೂಜ್ಯಶ್ರೀ ಚನ್ನಬಸವ ಶಿವಯೋಗಿಗಳ ಪರಮ ಶಿಷ್ಯರಾದ ಹಾಬಾಳ ಶ್ರೀ ಬಸವರಾಜಪ್ಪ ದೇಶಮುಖ ಆಗ ಬ್ರಹ್ಮಪುರದಲ್ಲಿ ಮನೆ ಖರೀದಿಸಿ ಮಕ್ಕಳಿಗೆ ಓದಿಸತ್ತಿರು. ಅವರ ಮಕ್ಕಳಾದ ಶ್ರೀ ಶರಣ ಭೂಪಾಲ ದೇಶಮುಖ, ಅಳಿಯ ಶಂಕರಣ್ಣ ಶ್ರೀ ಶಿವಕುಮಾರ ದೇಶಮುಖರು ಪ್ರೊ. ಸೂಗಯ್ಯ ಹಿರೇಮಠರ ಸಹಪಾಠಿಯಾಗಿದ್ದರು. ಹೀಗಾಗಿ ಹಿರೇಮಠರು ದೇಶಮುಖರ ಮನೆಯಲ್ಲಿಯೇ ಹೆಚ್ಚು ಇರುತ್ತಿದ್ದರು. ದೇಶಮುಖರ ಮನೆಗೆ ಆಗಾಗ ಪೂಜ್ಯ ಶ್ರೀ ಚನ್ನವೀರ ಶಿವಾಚಾರ್ಯರು ಬರುತ್ತಿದ್ದುದರಿಂದ ಸಹಜವಾಗಿಯೇ ಪೂಜ್ಯರ ದರ್ಶನವಾಯಿತು. ಪೂಜ್ಯರ ಆಚಾರ-ವಿಚಾರ ಕೇಳಿ ಅನೇಕ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ವಿಷಯಗಳ ಕುರಿತು ಚರ್ಚಿಸುತ್ತಿದರು. ಮುಂದೆ ಪೂಜ್ಯರು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಗುಲಬರ್ಗಾಕ್ಕೆ ಬಂದು, ಶ್ರೀದೇಶಮುಖರ ಮನೆಯಲ್ಲಿರುವದರಿಂದ ಹೆಚ್ಚಿನ ಆತ್ಮೀಯತೆ ಬೆಳೆಯಿತು.

ಮುಂದೆ ಪೂಜ್ಯರು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಧಾರವಾಡಕ್ಕೆ ಹೋದರು. ಎಂ.ಎ. ಪಾಸಾದ ಹಿರೇಮಠರು ಕೆಲದಿನಗಳಲ್ಲಿಯೇ ಗುಲಬರ್ಗಾ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದಲ್ಲಿ ಸಹಾಯಕ ಸಂಶೋಧಕರಾಗಿ ಕೆಲಸ ಮಾಡಿದರು. ಗುರುಗಳಾದ ಡಾ. ಎಂ.ಎಸ್. ಲಠ್ಠೆ ಅವರೊಂದಿಗೆ ಹಾರಕೂಡ ಮಠದ ಕಾರ್ಯಕ್ರಮಕ್ಕೆ ಹೋಗಿದ್ದರು. ಕಾರ್ಯಕ್ರಮದಲ್ಲಿ ಡಾ. ಲಠ್ಠೆಯವರು ತಮ್ಮ ಭಾಷಣದಲ್ಲಿ ಹಾರಕೂಡ ಪೂಜ್ಯ ಲಿಂಗ ಶ್ರೀ ಚನ್ನವೀರ ಶಿವಾಚಾರ್ಯರು ಮಹಾನ್ ಅನುಭಾವಿಗಳೂ ತಪೋನಿಷ್ಠರೂ ಸಾಹಿತ್ಯ ಸಂಗೀತ ಪ್ರೇಮಿಗಳು ಪೂಜ್ಯರು ಯಾವ ಊರಿಗೆ ಹೋದರು ಅಲ್ಲಿ ಸಾಹಿತ್ಯ ಸಂಗೀತದ ಗೋಷ್ಠಿಗಳನ್ನು ನಡೆಸುತ್ತಿದ್ದರು ಹೀಗಾಗಿ ಅವರ ಜೊತೆಯಲ್ಲಿ ಅನೇಕ ಜನಪದ ಸಾಹಿತಿಗಳು, ಕಲಾವಿದರೂ ಹಾಡುಗಾರರು, ಭಜನೆ ಹಾಡು ರಚಿಸುವ ಅನುಭಾವಿಗಳು ಇರುತ್ತಿದ್ದರು. ಅವರಲ್ಲಿ ಅನೇಕರು ಕುರಿತು ಹಾಡುಗಳನ್ನು ಬರೆದಿರುವರು ಪೂಜ್ಯರು ಅಪ್ಪಣೆ ಕೊಟ್ಟರೆ ಅವುಗಳನ್ನು ಸಂಪಾದಿಸಿ ಪ್ರಕಟಿಸಿವೆನೆಂದು ತಮ್ಮ ಸ್ವಇಚ್ಛೆಯನ್ನು ವ್ಯಕ್ತ ಪಡಿಸಿದರು. ಆಶೀರ್ವಚನದಲ್ಲಿ ಪೂಜ್ಯರು ಡಾ. ಲಠ್ಠೆಯವರ ಬೇಡಿಕೆಯಂತೆ ಸಂಪಾದಿಸಲು ಅನುಮತಿ ನೀಡಿದರು. ಅಂದು ಕಾರ್ಯಕ್ರಮ ಮುಗಿದು ಗುಲಬರ್ಗಾಕ್ಕೆ ಹೋದ ಮೇಲೆ ಡಾ. ಲಠ್ಠೆಯವರು, ಕಾರ್ಯಕ್ರಮದಲ್ಲಿ ಹೇಳಿದಂತೆ ಪೂಜ್ಯರ ಕುರಿತು ಹಾಡುಗಳನ್ನು ಸಂಗ್ರಹಿಸಲು ಶ್ರೀ ಹಿರೇಮಠರಿಗೆ ಕಳುಹಿಸಿದರು. ಪ್ರೊ. ಹಿರೇಮಠರು ಹಾರಕೂಡಕ್ಕೆ ಹೋಗಿ ಪೂಜ್ಯರಿಗೆ ವಿಷಯ ತಿಳಿಸಲು, ಪೂಜ್ಯರು ಊರಿನ ಸುತ್ತಲಿನ ಜನಪದ ಹಾಡುಗಾರರು ಕಲಾವಿದರನ್ನು ಮಠಕ್ಕೆ ಕರೆಸಿ ಹಾಡಿಸುವ ವ್ಯವಸ್ಥೆ ಮಾಡಿದರು. ಪ್ರೊ. ಹಿರೇಮಠರು ೩–೪ದಿನ ಮಠದಲ್ಲಿಯೇ ಉಳಿದು ಹಾಡುಗಳನ್ನು ಸಂಗ್ರಹಿಸಿ ತಂದು, ಅವುಗಳನ್ನು ಶುದ್ಧ ಪ್ರತಿಮಾಡಿ ಸರ್‌ಗೆ ಕೊಟ್ಟರು. ಹಾಡುಗಳನ್ನು ಪರಿಶೀಲಿಸಿ, ಪರಿಷ್ಕರಿಸಿ ಚರಿತ್ರೆ ಬರೆದು ಜಾನಪದದಲ್ಲಿ ಹಾರಕೂಡ ಶ್ರೀ ಚೆನ್ನಬಸವ ಶಿವಯೋಗಿಯವರ ಹೆಸರಿನಲ್ಲಿ ಗ್ರಂಥವನ್ನು ಪ್ರಕಟಿಸಿದರು. ಇದರಿಂದ ಹಿರೇಮಠರಿಗೂ ಹಾರಕೂಡದ ಪೂಜ್ಯರಿಗೆ ಅತ್ಯಂತ ಆತ್ಮೀಯವಾದ ಅವಿನಾಭಾವ ಸಂಬಂಧ ಬೆಳೆಯಿತು.

ಮುಂದೆ ಪ್ರೊ. ಹಿರೇಮಠ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿದಾಗ ತಪ್ಪದೇ ಪೂಜ್ಯರ ಮಠಕ್ಕೆ ಹೋಗಿತ್ತಿದ್ದ, ಚಿಂಚೋಳಿಯಲ್ಲಿ ಲಿ. ಶ್ರೀ ಚನ್ನಬಸವ ಶಿವಯೋಗಿಗಳ ದೇವಾಲಯ ಭವ್ಯವಾಗಿದ್ದೂ ಅಪಾರ ಭಕ್ತರು ಭಕ್ತಿ ಶ್ರದ್ಧೆಯಿಂದ ಪ್ರತಿವರ್ಷ ಜಾತ್ರೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವದರಿಂದ ಪೂಜ್ಯರು ಆಗಾಗ ಚಿಂಚೋಳಿಗೆ ತಪ್ಪದೇ ಪ್ರೊ. ಹಿರೇಮಠರು ಭೇಟಿಯಾಗಿ, ಅನೇಕ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದರು. ಹೀಗೆ ಒಮ್ಮೆ ಚರ್ಚಿಸುವಾಗಲೇ ಪ್ರೊ. ಹಿರೇಮಠರು ಪೂಜ್ಯರಿಗೆ ಪ್ರತಿವರ್ಷ ಜಾತ್ರೆ ಉತ್ಸವ ಮಾಡಿದರೆ ಜಾತ್ರೆಗೆ ಬಂದವರಷ್ಟೆ ನೋಡಿ ಸಂತೋಷಪಡುತ್ತಾರೆ ಆದರೆ ವರ್ಷವೂ ಪಂಚತರಿಂದ ಉಪನ್ಯಾಸ ಏರ್ಪಡಿಗೆ, ಅಂದು ಮಾಡಿದ ಉಪನ್ಯಾಸದ ವಿಷಯವನ್ನು ಮುಂದಿನ ವರ್ಷದ ಕಾರ್ಯಕ್ರಮದಲ್ಲಿ ಪ್ರಕಟಿಸಿ ಬಿಡುಗಡೆ ಮಾಡಿದರು. ಆ ಕೃತಿಯು ದೂರದ ಭಕ್ತರಿಗೆ ತಲುಪಿ ಇಲ್ಲಿಯ ಸಾಂಸ್ರುತಿಕ ಕಾರ್ಯಕ್ರಮದ ಪರಿಚಯವಾಗುದೆಂದು ಸೂಚಿಸಲು ಪೂಜ್ಯರು ಒಪ್ಪಿಗೆ

ನೀಡಿ ಈ ವರ್ಷ ತಮ್ಮಿಂದಲೇ ಉಪನ್ಯಾಸವಾಗಲಿ, ಮುಂದಿನ ವರ್ಷ ಆಕೃತಿಯನ್ನು ಪ್ರಕಟಿಸಿ ಬಿಡುಗಡೆ ಮಾಡೋಣವೆಂದು ಆಹ್ವಾನವಿತ್ತರು. ಪೂಜ್ಯರಿಗೆ ಹೇಳಿದಂತೆ ಆ ವರ್ಷ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿ ಬರೆದು ಕೊಟ್ಟಿದ್ದರಿಂದಲೇ ಈ ಕೃತಿಯು ಉಪನ್ಯಾಸ ಮಾಲೆಯ ಪ್ರಥಮ ಕೃತಿಯಾಗಿ ಪ್ರಕಟಣೆಯಾಗಿ. ಇವರಿಗೂ ಪ್ರತಿವರ್ಷ ಉಪನ್ಯಾಸ ನಡೆದು ಕೃತಿಗಳು ಪ್ರಕಟವಾಗುತ್ತಲಿವೆ.

ಪ್ರೊ. ಹಿರೇಮಠರು ಜನಪದ ಸಾಹಿತ್ಯದಲ್ಲಿ ಅಪಾರ ಅನುಭಾವ ಪಡೆದ ಪ್ರತಿಭಾನಿತರು ಕಥೆಗಾರರಂತೆಯೇ ಜನಪದ ಸಾಹಿತ್ಯದ ಸಂಗ್ರಾಹಕಾರರು ಸಂಪಾದಕರೂ ಹಾಗೂ ವಿಮರ್ಶಕರೂ ಆಗಿರುವರು. ಕರ್ನಾಟಕ ವಿಶ್ವವಿದ್ಯಾಲಯದ ಗುಲಬರ್ಗಾ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದಲ್ಲಿ ಸಹಾಯಕ ಸಂಶೋಧಕರಾಗಿ ಕೆಲಸ ಮಾಡುತ್ತಿರುವಾಗಲೆ ಜನಪದ ಸಾಹಿತ್ಯ ಕುರಿತು ಪತ್ರಿಕೆಗಳಿಗೆ ಲೇಖನ ಬರೆದವರು. ಆಕಾಶವಾಣಿಯಲ್ಲಿ ಭಾಷಣ ಮಾಡಿದವರು. ಪ್ರೊ. ಹಿರೇಮಠರು ರಚಿಸಿದ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಕೃತಿ ಚಿಕ್ಕದಾದರೂ, ಮೌಲ್ಯಗಳನ್ನು ಗುರುತಿಸುವಲ್ಲಿ ಅತ್ಯಂತ ಮಹತ್ವದ್ದು. ಪ್ರಥಮ ಕೃತಿ ಯಾಗಿದೆಯೆಂದು ಅನೇಕ ಜನಪದ ವಿದ್ವಾಂಸರು ಮೆಚ್ಚಿಗೆ ವ್ಯಕ್ತ ಪಡಿಸಿರುವುದು ನೋಡಿದರೆ ಪ್ರೊ. ಸೂಗಯ್ಯ ಹಿರೇಮಠರ ಅನುಭವ ಹಾಗೂ ಪಾಂಡಿತ್ಯ ಪೂರ್ಣ ಬರವಣಿಗೆಯೇ ಕಾರಣವಾಗಿದೆ. ಕೃತಿಯ ಪ್ರತಿಯೊಂದು ಪುಟದ ಬರವಣಿಗೆಯು ಅವರ ವಿದ್ವತ್ತಿಗೆ ಪ್ರತೀಕವಾದಂತಿದೆ. ಚಿಕ್ಕ ಚಿಕ್ಕ ವಾಕ್ಯಗಳಲ್ಲಿಯೇ ಸ್ಪಷ್ಟವಾಗಿ ತಿಳಿಸುವ ವಿಚಾರಗಳಿಂದ ಕೃತಿಜನಪದ ಸಾಹಿತ್ಯದ ಮಹತ್ವ ಮತ್ತು ಪಾತ್ರವನ್ನು ಅರಿವಾವಲ್ಲಿ ಗಮನಾರ್ಹ ಕೃತಿಯಾಗಿದೆ.

ಕೃತಿಯ ಪೀಠಿಕೆಯಲ್ಲಿಯೇ ಜನಪದ ಸಾಹಿತ್ಯದ ಕುರಿತು ಅವರು ಪ್ರಸ್ತಾಪಿಸಿದ ವಿಚಾರಗಳು ಹೊಸದೆನಿಸುತ್ತವೆ. ಇಲ್ಲಿಯವರೆಗೂ ಜನಪದ ಸಾಹಿತ್ಯವೆಂದರೆ ಜನಸಾಮಾನ್ಯರು ಸಹಜ ಸಾಹಿತ್ಯವೆಂದೇ ಬಗೆಯಲಾಗಿತ್ತು. ಇಂದಿಗೂ ಅನೇಕ ಜನ ಜಾನಪದ ವಿದ್ವಾಂಸರೂ ಕೂಡ ಹೀಗೆ ಹೇಳುತ್ತಿರುವುದು ಸಾಮಾನ್ಯವಾಗಿದೆ. ಆದರೆ ಹಿರೇಮಠರು ಈ ಮಾತು ಒಪ್ಪುವುದಿಲ್ಲ "ಜನಪದ ಸಾಹಿತ್ಯದ ಸೃಷ್ಟಿಗೆ ಜನರೆ ಕಾರಣರಾದರೂ, ಆ ಪ್ರದೇಶದಲ್ಲಿಯ ಎಲ್ಲಿ ಜನರು ಸಾಹಿತ್ಯ ರಚಿಸಿರುವುದಿಲ್ಲ ಪ್ರತಿಭಾವಂತರು ಮಾತ್ರ ಸಾಹಿತ್ಯ ರಚಿಸುವರು. ಯಾವನೊಬ್ಬನಿಂದ ರಚಿತವಾದ ಹಾಡು, ಕಥೆ, ಸಾಮೂಹಿಕ ಮನ್ನಣೆ ಪಡೆದು ಸಾರ್ವತ್ರಿಕವಾಗಿದೆ. ಸಮಷ್ಟಿಯ ಆಶಯವನ್ನು ಪ್ರತಿಬಿಂಬಿಸುವದರಿಂದ ಜನಸಾಮಾನ್ಯರ ಸ್ವತ್ತಾಗಿದೆ. ಜನಪದ ಸಾಹಿತ್ಯ ಸಾಮೂಹಿಕ ನಂಬಿಕೆ, ಸಂಪ್ರದಾಯ ಆಚರಣೆಯಲ್ಲಿ, ಸುಗ್ಗಿಯ ಹಿಗ್ಗಿನಲ್ಲಿ ಹೊರ ಹೊಮ್ಮಿದರೂ ಪ್ರಜ್ಞಾಪೂರ್ವಕವಾಗಿಯೇ ರಚಿಸಲಾಗಿದೆ"[೧]. ಎಂದು ಹೆಳುವದು ನಿಜವೆನಿಸುತ್ತದೆ. ಯಾಕಂದರೆ ಎಲ್ಲರೂ ಸಾಹಿತ್ಯ

೧ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಪು. ಸಂ. ೧

ರಚಿಸುವದಿಲ್ಲ, ರಚಿಸದವರನ್ನು ಯಾರೋ ಒಬ್ಬ ಪ್ರತಿಭಾನ್ವಿತನಿರಬಹುದು. ಆದರೆ ಅವನಿಂದ ರಚಿತವಾದ ಹಾಡು ಕಥೆ, ಗಾದೆ ಒಗಟು ಆಪ್ರದೇಶದ ಸರ್ವಜನರ ಮೆಚ್ಚಿಗೆ ಪಡೆದು ಮನ್ನಣೆಯಾದಗಲೇ ಎಲ್ಲರ ಅದನ್ನು ಸ್ವೀಕರಿಸುವರು. ಅನೇಕ ಬದಲಾವಣೆಯಾಗಿ ಹೊಸ ಅಂಶಗಳು ಸೇರಲೂಬಹುದು. ಹೀಗೆ ಜನರಿಂದ ಜನರಿಗೆ ಸಾಗಿ ಬರುವ ವಾಕ್ ಸಂಪ್ರದಾಯದ ಜನಪದ ಸಾಹಿತ್ಯದಲ್ಲಿ ಒಂದು ರೀತಿಯ ಪರಿಷ್ಕರಣೆ ನಡಿದೇ ಇರುತ್ತದೆ. ಆದ್ದರಿಂದಲೇ ಪ್ರೊ. ಹಿರೇಮಠರು ಜನಪದ ಸಾಹಿತ್ಯದ ಸೌಂದರ್ಯದ ಆಕರ್ಷಣೆಗೆ ಭಾವುಕರಾಗಿ ಹೇಳುವ ಜನ ಸಾಮಾನ್ಯ ಸಾಹಿತ್ಯ ಎನ್ನುವ ಅಭಿಪ್ರಾಯವನ್ನು ಮನ್ನಿಸಿದ ಜನಪದ ಸಾಹಿತ್ಯದ ರಚನೆ, ಬದಲಾವಣೆ ಮತ್ತು ಪರಿಷ್ಕರಣೆಯ ಹಿನ್ನಲೆಯಲ್ಲಿ ವಿವೇಚಿಸಿ ವೈಜ್ಞಾನಿಕ ಮತ್ತು ಸಮಂಜಸವಾದ ಅಭಿಪ್ರಾಯವನ್ನು ನೀಡಿದ್ದಾರೆ ಹಿರೇಮಠರ ಈ ಅಭಿಪ್ರಾಯವನ್ನು ಜನ ಪದ ಸಾಹಿತ್ಯ ಲೋಕದ ದಿಗ್ಗಜರು ಮತ್ತೊಮ್ಮೆ ತಮ್ಮ ಅಭಿಪ್ರಾಯಗಳನ್ನು ವಿಮರ್ಶಿಸಿಗೊಳ್ಳುವಂತೆ ಮಾಡಿರುವದನ್ನು ಕಾಣುತ್ತೇವೆ.

ಅಲ್ಲದೆ ಜನಪದ ಸಾಹಿತ್ಯದ ಅವಹೇಳನ ಮಾಡಿದನೆಂದು ಅಪವಾದ ಕೊಟ್ಟಿರುವ ಮಧುರ ಕವಿಯ

“ಪಂಡಿತರು ವಿವಿಧ ಕಲಾ
ಮಂಡಿತರು ಕೇಳತಕ್ಕ ಕೃತಿಯಂ ಕ್ಷಿತಿಯೋಳ್
ಕಂಡರ್ ಕೇಳ್ವೊಡೆ ಗೊರವರ
ಡುಂಡುಚಿಯೇ ಬೀದಿವರೆಯೇ ಬೀರನ ಕತೆನೇ”

ಎನ್ನುವ ಪದ್ಯವನ್ನು, ಸಹ ಪ್ರೊ. ಹಿರೇಮಠರು ಭಿನ್ನವಾಗಿಯೇ ವಿಮರ್ಶೆ ಮಾಡುತ್ತಾರೆ. “ಬೀದಿಯಲ್ಲಿ ಪಾಡುವ ಬೀರನ ಕತೆ ಇದು ಎಂದು ಮಧುರ ಕವಿ ಜನಪದ ಸಾಹಿತ್ಯವನ್ನು ಹೀಗಳೆದಿರುವನೆಂಬುದರ ಸಾಮಾನ್ಯ ಹೇಳಿಕೆಯಾಗಿದೆ. ಪಂಡಿತರು, ವಿವಿಧ ಶಾಸ್ತ್ರ ಬಲ್ಲವರು ಬಂದು ಹೇಳುವ ಕತೆಯಿದು, ಕಂಡ, ಕಂಡಲ್ಲಿ ಕೇಳುವ, ಬೀದಿಯಲ್ಲಿ ಹಾಡುವ ಬೀರನ ಕತೆಯಲ್ಲಿ, ವೆಂದು ಹೇಳುವಲ್ಲಿ ಜನಪದ ಕಥೆ, ಹಾಡಿನ ವಸ್ತು, ಸಾಮಾನ್ಯವಾದದ್ದು, ಮತ್ತು ಹಾಡುವವರು, ಕೇಳುವವರು ಸಾಮಾನ್ಯರೂ ಎನ್ನುವರ್ಥದಲ್ಲಿ ಹೇಳಿದ್ದಾನೆ, ಆದರೆ “ಜನಪದ ಸಾಹಿತ್ಯ ರಚನೆ ಕುರಿತಲ್ಲ. ಅಭಿಜಾತ ಸಾಹಿತಿಗಳು ಸಂಸ್ಕೃತ ಪಾಂಡಿತ್ಯದಿಂದ ರಾಜನಾಶ್ರಯ ಪಡೆದು ಅವನಿಚ್ಛೆಯಂತೆ ಸಾಹಿತ್ಯ ರಚಿಸಿದರು, ಶಿಷ್ಟ ಸಂಸ್ಕೃತಿಯ ನೀತಿ ದರ್ಶನವನ್ನೆ ಶ್ರೇಷ್ಠ ಮೌಲ್ಯವೆಂದು ಸಾರಿದರು. ಜನಪದ ಸಾಹಿತ್ಯ ಬೆಳೆದು ಬಂದ ಹಿನ್ನಲೆ ಮತ್ತು ಮೌಲ್ಯಗಳನ್ನು ಸರಿಯಾಗಿ ಗುರುತಿಸಲಿಲ್ಲ”[೨]. ಎಂದು ವಿವರಿಸುತ್ತಲೆ, ಅದರ ಮೌಲ್ಯಗಳನ್ನು ನಂಬಿಕೆ ಸಂಪ್ರದಾಯದಲ್ಲಿ

---

೨ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಪು.ಸಂ. ೩

ಬೆಳೆದು ಬಂದ ಮೌಢ್ಯಗಳೆಂದು ಕರೆಯುವದಕ್ಕೆ ಆಗುವದಿಲ್ಲ ಇಂದು ನಾಗರಿಕತೆಯ ನೋಟಕ್ಕೆ ಮೌಢ್ಯಗಳೆಂದು ಕಾಣುವ ನಂಬಿಕೆ, ಆಚರಣೆಗಳು, ಹಿಂದಿನ ಜನಾಂಗದ ಜೀವನಕ್ಕೆ ಮೂಲಭೂತ ದ್ರವ್ಯಗಳಾಗಿದ್ದವು. ಈ ಹಿನ್ನಲೆಯಲ್ಲಿಯೇ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳನ್ನು ಗುರುತಿಸವದು ಸೂಕ್ತವೆನಿಸುತ್ತದೆಂದು ಜನಪದ ಬದುಕಿಗೆ ಪೂರಕವಾದ ಉಪಯುಕ್ತವಾದ ಮೌಲ್ಯಗಳನ್ನು ವಿವರವಾಗಿ ಉದಾಹರಣೆಗಳೊಂದಿಗೆ ವಿವರಿಸಿರುವದು ಪ್ರೊ ಹಿರೇಮಠರ ಬರಹದಲ್ಲಿಯ ಸತ್ವವನ್ನು ಎತ್ತಿ ತೋರಿಸುತ್ತದೆ.

ಎರಡನೆಯ ಅಧ್ಯಯನದಲ್ಲಿ 'ಮೌಲ್ಯವಿವೇಚನೆ' ಮಾಡುತ್ತ ಮೌಲ್ಯಗಳನ್ನು ಕುರಿತು ಗಂಭೀರ ಚಿಂತನೆ ನಡೆಸಿದ ಪಾಶ್ಚ್ಯಾತ್ಯ ವಿಮರ್ಶಕ ಎಂ.ಎ. ರಿಚರ್ಡನು "ವಿಸ್ತಾರವಾದ ಅರ್ಥದಲ್ಲಿ ಜೀವನದ ಯಾವುದೇ ಅವಶ್ಯಕತೆಗಳನ್ನು ಪೂರೈಸುವ ಸಾಧನಗಳೆಲ್ಲ ಮೌಲ್ಯಗಳಾಗುತ್ತವೆ. ಅನ್ನ, ಬಟ್ಟೆ, ಮನೆ, ಆಹಾರ ಮುಂತಾದವು ಮೌಲ್ಯಗಳೇ, ಆದರೆ ಇವು ಅಖಂಡ ಮೌಲ್ಯಗಳಲ್ಲ (Absolute Value) ಸಾಪೇಕ್ಷ ಮೌಲ್ಯಗಳು (Reletive Value) ಎಂದಿರುವನು; ಆದ್ದರಿಂದ ಸಾಪೇಕ್ಷಗಳು ಅಖಂಡ ಮೌಲ್ಯಗಳಿಗೆ ಪೂರಕವಾಗಿರುತ್ತವೆಂದು ವಿಶೇಷಿಸದ ಪ್ರೊ. ಹಿರೇಮಠರು ಮೌಲ್ಯವೆನ್ನುವದು ನಿರ್ದಿಷ್ಟವಾದುದಲ್ಲ. ಒಂದು ಕಾಲಕ್ಕೆ ಶ್ರೇಷ್ಠವಾದ ಮೌಲ್ಯ ಇನ್ನೊಂದು ಕಾಲಕ್ಕೆ ತೀರ ನಿಕೃಷ್ಟ ಮೌಲ್ಯವಾಗಬಹುದು. ವ್ಯಕ್ತಿ ಮತ್ತು ಸಮಾಜದ ಬೆಳವಣಿಗೆಯೊಂದಿಗೆ ಅಂದಿನ ಅವಶ್ಯಕತೆಗೆ ಅನುಗುಣವಾಗಿ ಮೌಲ್ಯಗಳು ಬದಲಾಗುತ್ತವೆ. ಆದ್ದರಿಂದ ಮೌಲ್ಯಗಳಲ್ಲಿ "ಸಹಜ ಮತ್ತು ನಿಮಿತ್ಯ ಮೌಲ್ಯಗಳೆಂದು ಎರಡು ಬಗೆ ಆಹಾರವನ್ನೇ ತೆಗೆದು ಕೊಳ್ಳೋಣ ಆಹಾರ ಈ ಅರ್ಥದಲ್ಲಿ ಬದುಕಿಗೆ ನಿಮಿತ್ಯ ಮೌಲ್ಯ"[೨] ಆದರೆ ಆಹಾರದಿಂದ ಮಾನವನಿಗೆ ದೊರೆಯುವ ಸೌಂದರ್ಯಗಳು ಸಹಜ ಮೌಲ್ಯಗಳೆಂದು"[೨] ವಿವರಿಸಿದ್ದಾರೆ.

ಜನಾಂಗದ ವಿಕಾಸದಲ್ಲಿ ಬೆಳೆದು ಬಂದಿರುವ ಧರ್ಮ, ಸಂಸ್ಕೃತಿ, ನಂಬಿಕೆ, ಸಹಿತ್ಯ ಸಂಗೀತ ಕಲೆಗಳಲ್ಲಿ ಅಂದಿನ ಮೌಲ್ಯಗಳನ್ನು, ನೋಡಬಹುದು. ಜನಪದ ಸಾಹಿತ್ಯದಲ್ಲಿ ವ್ಯಷ್ಟಿಯ ಬೇಡಿಕೆಗಿಂತ ಸಮಷ್ಟಿಯ ಬೇಡಿಕೆ ಮುಖ್ಯವಾಗಿದೆ. ಆದ್ದರಿಂದ ಕೆಲವೊಮ್ಮೆ ಸರಳೀಕರಣವೆನಿಸದರಿಂದ ವ್ಯಷ್ಟಿ ಮತ್ತು ಸಮಷ್ಟಿಯ ಹಿತ ಜನಪದರ ಪ್ರಮುಖ ಮೌಲ್ಯವಾಗಿದೆ. ಆದ್ದರಿಂದ ಶಿಷ್ಟ ಸಾಹಿತ್ಯದಲ್ಲಿ ಒಂದು ಕಾಲದ ಬದುಕಿನ ಉದಾತ್ತ ಮೌಲ್ಯಗಳನ್ನು ಗುರುತಿಸುವಂತೆ ಜನಪದರ ಬದುಕಿನಲ್ಲಿಯೂ ಅಂದಿನ ನಂಬಿಕೆ, ಆಚರಣೆಗಳು ಮುಂತಾದವುಗಳನ್ನು ಮೌಲ್ಯಗಳೆಂದು ಉದಾಹರಣೆಗಳೊಂದಿಗೆ ವಿವೇಚಿಸಲಾಗಿದೆ.

---

೨ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಪು.ಸಂ. ೪

ಮೂರನೆಯ ಜನಪದ ಮೌಲ್ಯಗಳು ಅಧ್ಯಾಯದಲ್ಲಿ ಸಮೃದ್ಧ ಜನಪದ ಸಾಹಿತ್ಯದ ಕಥೆ ಹಾಗೂ ಗಾದೆ ಮುಂತಾದ ಎಲ್ಲ ಪ್ರಕಾರಗಳನ್ನು ಅಭ್ಯಾಸಿಸಿ ಜನಪದರ ಬದುಕಿನ ಜೀವನ ಮೌಲ್ಯಗಳನ್ನು ಗುರುತಿಸಿರುವರು "೧) ಪ್ರಕೃತಿ ಆರಾಧನೆ ೨) ಕುಟುಂಬ, ೩) ಮಗು, ೪) ಬಂಜೆ ೫) ಸಮಾಜ, ೬) ದುಡಿಮೆ, ೭) ಶೀಲ, ೮) ತ್ಯಾಗ–ಬಲಿದಾನ, ೯) ವಿಧಿ–ಸಂಕಲ್ಪ, ೧೦) ಮಿತ್ರತ್ವ ೧೧) ಶಾಂತಿ ಸಹಬಾಳ್ವೆ ಮುಂತಾದವು ಪ್ರಮುಖ ಮೌಲ್ಯಗಳೆಂದು ಗುರುತಿಸಿ ಪ್ರತಿಯೊಂದು ಮೌಲ್ಯ ಕುರಿತು ಹಲವಾರು ಉದಾಹರಣೆ ನೀಡಿ ಸುದೀರ್ಘವಾಗಿ ಚರ್ಚಿಸಿರುವುದು ಅವರ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ.

೧) **ಪ್ರಕೃತಿ ಆರಾಧನೆ** : ಪ್ರಕೃತಿ ಆರಾಧನೆಯ ಪುಣ್ಯ, ಮಳೆ, ಬವಳಕು ಮಾನವನಿಗೆ ನಿಸರ್ಗ ನೀಡಿದ ಕೊಡುಗೆಗಳು ಸರ್ವಾಂತರಯಾಮಿಯಾದ ದೇವರ ಸ್ವರೂಪವನ್ನು ಪ್ರಕೃತಿಯಲ್ಲಿ ಕಂಡು ಭಯ ಭೀತಿಯಿಂದ ಆರಾಧಿಸಿದ್ದಾನೆ. ಮುಂದೆ ಬುದ್ಧಿ ಬೆಳೆದು ಸಮಾಜ ಜೀವಿಯಾದನು. ಪ್ರಜ್ಞೆಯ ಬೆಳೆದು ಹೊತ್ತು–ಹೆತ್ತವರೊಂದಿಗೆ ನಿತ್ಯ ಕಾಯಕದ ಸಾಮಾಗ್ರಿಗಳೇ ಅವನಿಗೆ ದೈವವಾದವು.

೨) ಕುಟುಂಬ : ಪ್ರಕೃತಿ ಅಡಿಯಲ್ಲಿ ಬೆಳೆದ ಮಾನವನವ ಮುಂದೆ ಕುಟುಂಬ ಜೀವಿಯಾದನು. ಸಾಮಾಜಿಕ ವ್ಯವಸ್ಥೆ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಯ ಮೂಲಕೇಂದ್ರ. ಕುಂಟುಂಬದಲ್ಲಿ ಬೆಳೆದ ಮಗು ಸಹಜವಾಗಿಯೇ ತನ್ನನ್ನು ಪ್ರೀತಿಸುವ ತಂದೆ ತಾಯಿ ಅಣ್ಣ–ತಮ್ಮರ ಬಗ್ಗೆ ಪ್ರೀತಿಯನ್ನಿಟ್ಟಿರುವುದು ಸಹಜವಾದುದು ಅದರಲ್ಲಿ ಹೆಣ್ಣಿಗಂತೂ ಪ್ರೀತಿ ಹೇಳಲಾರದು; ತಯಿ ಇಲ್ಲದ ತೌರಿನ ಕುರಿತು ಹೇಳುವ ಈ ಹಾಡು ಹಡಗ ಇಲ್ಲದ ಕೈಯ ಹೊಳೆಯ ಕಡಗ ಇಲ್ಲದ ಹಡದವ್ವ ಇಲ್ಲದ ತವರೂರಕ ಹ್ವಾದರೆ ಅಡಿವ್ಯಾಗ ವಸ್ತಿ ಇಳಿದಂಗ ಎನ್ನುವ ತ್ರಿಪದಿಯಲ್ಲಿ "ಇಲ್ಲಿ ಗರತಿಯೇ ಹಡಗು, ಹೊಳೆಯ ಸಂಸಾರ, ಹಡಗು ನಡೆಸುವವನು ಪತಿ ಪತಿಯಿಂದಲೇ ಸಂಸಾರದ ಹಡಗು ಮುನ್ನಡಿಯುವದು"[೪] ಎಂಥ ಪತಿಯಿದ್ದರೂ ಹೆಣ್ಣಿಗೆ ತಾಯಿ ಮತ್ತು ಹಡದವ್ವನ ಪ್ರೀತಿ ಬಹಳ "ಹಡದವ್ವ ಪದ ಹೆಣ್ಣಿನ ಸೂಕ್ಷ್ಮ ಮನೋಧರ್ಮವನ್ನೇ ಸೂಚಿಸುತ್ತದೆ ಹೆಣ್ಣು ಹಡದವ್ವನಾಗುವ ಪರಿಕಲ್ಪನೆ ಇಲ್ಲದೆ, ತಾನು ಹಡದವ್ವಳಾಗಿ ತನ್ನ ಮನೆಗೆ ಸೀಮಿತಳಾದರೂ ತನ್ನ ಬಳಿಯಲ್ಲಿ ಹೂವಾಗಿ ಅರಳಿದ ಮಗಳು ಈಗ ಮತ್ತೊಂದು ಮನೆಯಲ್ಲಿ ಹಡದವ್ವಳಾಗುತ್ತಾಳೆ, ತವರು ಮತ್ತು ಗಂಡನ ಮನೆಯ ಎರಡು ದಡಗಳನ್ನು ದಾಟುವವಳು. ಹಡಗು ನಡೆಸುವ ಅವಳಗಂಡ ಯಾವ ಆಪತ್ತಿಗೂ ಸಿಲುಕದೆ ಮುನ್ನಡೆಸುವನೆಂದು ಹಿರಿದಾದ ಆಸೆ ಅವಳದು. ಆದರೆ ಆ ದಡದಿಂದ ಕೆಲವೊಮ್ಮೆ ಬೇಸರ ನೀಗಿಸಿ ಕೊಳ್ಳಲು ತವರಿಗೆ ಬಂದರೆ ತಾಯಿ ಇಲ್ಲದ ಮನೆಯಲ್ಲಿ ಯಾರಿದ್ದರೂ ತಾಯಿಯ ಅಂತಃಕರಣದ ಮಾತು ದೊರೆಯಲಾರದು, ಮನಸ್ಸಿಗೆ ತೃಪ್ತಿ

---

೪ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಪು.ಸಂ. ೮

ಸಿಗಲಾರದು ಪ್ರಯಾಣಿಕನಿಗೆ ಅರಣ್ಯದ ಹಾದಿಯಲ್ಲೆ ಅಕಸ್ಮಾತ ಕತ್ತಲಾದರೆ ಅನುಭವಿಸುವ ಯಾತನೆಯಂತೆ ತಾಯಿ ಇಲ್ಲದ ತೌರಿಗೆ ಬಂದರೆ ತೊಂದರೆ ಯಾಗುವದು. ಅಡಿವ್ಯಾಗ ವಸ್ತಿ ಇದ್ದಾಗ, ಎನ್ನುವಲ್ಲಿ ತೌರಿನ ಪ್ರೀತಿಯ ವಿಶಾಲ ಕತೆಯನ್ನು ನಿರೂಪಿಸವದೆಂದು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿರುವರು.

ಕುಟುಂಬ ಜೀವನದಲ್ಲಿ ತಂದೆ ತಾಯಿಯರಷ್ಟೆ, ಬಂಧುಬಳಗದವರ ಪ್ರೀತಿಯನ್ನು ಮರೆಯಲಾರದು ಆದರೂ ಪ್ರೀತಿಯ ಜೊತೆಯಲ್ಲಿಯೇ ಕೆಲವು ಸಲ ದ್ವೇಷವೂ ಇರುತ್ತದೆ. ವಿನಾಃ ಕಾರಣ ದ್ವೇಷಿಸುವವರಿಗೆ ನಿಂದೆ ಮಾಡುವವರ ಎದುರಿಗೆ ಬಿಚ್ಚುಗಾತ್ತಿಯಾಗಿಯೇ ಉತ್ತರಿಸಬೇಕು. ಹೊಗಳಿಕೆ ತೆಗಳಿಕೆ ಕಿವಿಗೊಡದೆ ಕೆಟ್ಟದ್ದನು ತಿರಸ್ಕರಿಸಿ ಮುನ್ನಡೆಯಬೇಕು ಕುಟುಂಬದ ರಥ ಮುನ್ನಡೆಯಲು ಸತಿ ಪತಿಗಳು ಎರಡು ಚಕ್ರಗಳು, "ಮದುವೆಯೆಂದರೆ ಕೇವಲ ಗಂಡು-ಹೆಣ್ಣು ತಮ್ಮ ಬಯಕೆಗಾಗಿ ಮಾಡಿಕೊಂಡ ಒಪ್ಪಂದವಲ್ಲ ಬದುಕಿನ ಸರ್ವೋತೋಮುಖ ಅಭಿವೃದ್ಧಿಯ ಪೂರ್ಣಂಗ"[೩]. ಪತಿಯೆ ಗರತಿಗೆ ಬೆಳ್ಳಿ, ಬಂಗಾರ, ಪತ್ನಿಗೆ ತಕ್ಕಂತ ಪತಿರಾಯನಿದ್ದರೆ ಜೀವನವೇ ಸ್ವರ್ಗ ಆದರೆ ಕೆಲವು ಸಲ ಸತಿಪತಿಯರಲ್ಲಿ ಯಾವದಕ್ಕಾದರೂ ವಿರಸವು ಬರುತ್ತದೆ. "ಇಲ್ಲಿಯ ವಿರಸ ಪಾಶ್ಚತ್ಯಾರಂತೆ ವಿವಾಹ ವಿಚ್ಛೇದನೆಗೆ ಕಾರಣವಾಗುವುದಿಲ್ಲ. ಒಬ್ಬರನೊಬ್ಬರು ಅರಿತುಕೊಂಡು ಬಾಳುವ ಬಂಧನವಾಗಿದೆ. ಅದು ಬಿಡುಗಡೆಯ ಬೇಡಿಯಲ್ಲಿ ಮದುವೆ ಭಾರತೀಯ ಸಂಸ್ಕೃತಿಯಲ್ಲಿ ಕುಂಟುಂಬ ಮತ್ತು ಸಮಾಜದ ತನ್ಮೂಲಕ ಹೇಳಿದ ಪ್ರಕೃತಿಯನ್ನು ಕಾಪಾಡುವ ಪ್ರಮುಖ ಮೌಲ್ಯವೆಂದು ಸಾರಿದ್ದಾರೆ.

೩) ಮಗು : ಗಂಡ ಹೆಂಡತಿಯರ ಪ್ರೀತಿಯ ಸೇತುವೆಯೆಂದರೆ ಮಗು, ಮಗು ಮಮತೆಯ ಕುಡಿ, ವಂಶ ಉದ್ಧಾರಕ, ಮಗುವನ್ನು ಪಡದ ಸತಿ ಅದರ ಆಟದಲ್ಲಿಯೇ ತನ್ನ ನೋವು ಮರೆಯುತ್ತಾಳೆ. ಮಗುವಿನ ಆಟದಲ್ಲಿ ಕೆಲವು ಸಲ ಗಂಡನನ್ನು ಮರೆಯುತ್ತಾಳೆ. ಇದರಿಂದ ಗಂಡ-ಹೆಂಡತಿಯಲ್ಲಿ ವಿರಸ ಮಾಡಲುಬಹುದು. ಆಗ ಮಗು ಪತಿ-ಪತ್ನಿಯರನ್ನು ತನ್ನ ಆಟದಿಂದ ನಗಿಸುವ ಬೀಸಣಿಕೆಯಾಗುತ್ತದೆ. ಸತಿ ಪತಿ ಇಬ್ಬರಲ್ಲಿಯ ವಿರಸವನ್ನು ಶಮನಗೊಳಿಸಿ ನಗು ಚಿಮ್ಮುವಂತೆ ಮಾಡುತ್ತದೆ. ಆದ್ದರಿಂದ ಮಗುವನ್ನು ಹಡೆಯುವದು ಹಿಂದಿನ ಸಮಾಜದಲ್ಲಿ ಒಂದು ಮೌಲ್ಯವೆಂದು ಗುರುತಿಸದ್ದಾರೆ.

೪) ಬಂಜೆ : ಸಂತಾನಾಭಿವೃದ್ಧಿಯೇ ಸಮಾಜದ ಬಯಕೆಯಾಗಿರುವ ಸಮಾಜದಲ್ಲಿ ಬಂಜೆಯ ಬದುಕು ನಿರ್ಭಾಗ್ಯವೆನಿಸುತ್ತದೆ. ಮಗುವಿಲ್ಲದ ಮಹಿಳೆಯ ಬದುಕು ಮರುಭೂಮಿಯಂತೆ.

---

೩) ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಪು.ಸಂ. ೧೮

ದುಡಿದು ಸಣ್ಣಾಗುವ ಅವಳಿಗೆ ಮನ ಸಂತೈಸುವ ಮಗು ಇಲ್ಲ. ಅಂಥವಳ ಬಾಳು ಬಾಡಿಗೆ ಎತ್ತು ದುಡಿದಂತಾಗಿದೆ. ಜೈವಿಕ ಕ್ರಿಯೆ ಸಮಾನವಾದದು. ಆದರೆ ಹಿಂದಿನ ಸಮಾಜದಲ್ಲಿ ಬಂಜೆತನ ಹೆಣ್ಣು-ಗಂಡಿಗೆ ಕೇವಲ ಹೆಣ್ಣಿನ ಮೇಲೆ ಹೊರಿಸಿರುವದು ಸರಿಯಲ್ಲವೆಂದು ಅಭಿಪ್ರಯ ಪಟ್ಟಿರುವದು ಸಮಂಜಸವಾಗಿದೆ.

೫) ಸಮಾಜ : ಮಾನವನು ಸಮಾಜದಲ್ಲಿಯೇ ಹುಟ್ಟಿ ಸಮಾಜದಲ್ಲಿಯೇ ಬೆಳೆದು ಬಾಳುತ್ತಾನೆ. ಸಮಾಜವು ತಲೆಮಾರಿನಿಂದ ತಲೆಮಾರಿಗೆ ಜೀವನ ನೀತಿ, ಧರ್ಮ, ಮೌಲ್ಯಗಳನ್ನು ನೀಡಿತ್ತಲೆ ಬಂದಿದೆ "ಹೀಗೆ ಸಮೂಹಗಳಿಂದ ರಚನೆಯಾದ ಸಮಾಜದಲ್ಲಿ ಎಲ್ಲರೊಂದಿಗೆ ಒಂದಾಗಿ ಬಾಳುವದನ್ನು ಜನಪದರು ಸಾರಿದ್ದಾರೆ. ತಾನು ಎಲ್ಲರಿಗಾಗಿ ಎಲ್ಲರು ತನಗಾಗಿ ಎನ್ನುವ ಉದಾತ್ತ ತತ್ವ ಸಮಾಜದ್ದಾಗಿದೆ. ಸಮಾಜದಲ್ಲಿ ಬಡವ-ಬಲ್ಲಿದನೆಂಬ ಭೇದ ಸಲ್ಲದು ಸಿರಿತನ ಬಂದಾಗ ಮೆರದು, ಬಡತನ ಬಂದಾಗ ಕೊರಗುವದು ಸಾಮಾಜಿಕ ನೀತಿಗೆ ವಿರುದ್ಧವಾದದು. ಯಾಕೆಂದರೆ ಸಿರಿತನ ಬಿಸಿಲಿನಂತೆ ಮುಂಜಾನೆ ಒಂದು ದಿಕ್ಕಿಗಿದ್ದರೆ, ಮಧ್ಯಾಹ್ನ ಇನ್ನೊಂದು ದಿಕ್ಕಿಗೆ ಇರುತ್ತದೆ. ಹಾಗೆಯೇ ಸಂಪತ್ತು ಸೇರಿದಂತೆ ಮನುಷ್ಯನಲ್ಲಿ ಗುಣಗಳು ಬದಲಾಗುತ್ತವೆ. ಜನಪದ ಜೀವಿಗಳಿಗೆ ಬದುಕು ಅಸಹ್ಯವಾದುದಲ್ಲಿ ಶಾಶ್ವತವೂ ಅಲ್ಲ, ಬದುಕಿರುವಷ್ಟು ದಿನ ಆತ್ಮಗೌರವದಿಂದ ಜೀವಿಸಿ, ಸಾವು ಬಂದಾಗ ನರಳದೆ ಸಾಯಬೇಕೆನ್ನುವರು ಅಭಿಮಾನ ಶೂನ್ಯ ಜನರಿಂದ ಯಾವುದೇ ದೇಶ ಬೆಳೆಯಲಾರದೆಂದು"[೬] ವಿವರಿಸಿರುವರು.

೬) ದುಡಿಮೆ : ವ್ಯಕ್ತಿ ಮತ್ತು ಸಮಾಜಕ್ಕೆ ದುಡಿಮೆ ಅಗತ್ಯವಾದುದು, ದುಡಿಯದ ವ್ಯಕ್ತಿ ಮನೆಗೂ-ಸಮಾಜಕ್ಕೂ ಭಾರ. ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲುವದಿಲ್ಲ ಅದಕ್ಕಾಗಿ ಯಾವ ಉದ್ಯೋಗವಾದರೇನು ಸತ್ಯ ನಿಷ್ಠತೆಯಿಂದ ದುಡಿಯಬೇಕು ದುಡಿಯದೇ ತಿನ್ನುವರು ಅಪರಾಧ ಅದ್ದರಿಂದ ದೇಶ ಮತ್ತು ಸಮಾಜಕ್ಕೆ ದಾರಿದ್ರ್ಯತನ ಬರುವದು. ದುಡಿದು ತಿನ್ನವದು ಗೌರವ ಮೌಲ್ಯವೆಂದು ಎತ್ತಿ ತೋರಿಸಿರವದು ಗಮನಾರ್ಹವಾದದು.

೭) ಶೀಲ ಮತ್ತು ಪತಿವೃತ ಧರ್ಮ : ಭಾರತೀಯ ಪ್ರಾಚೀನ ಸಮಾಜಿಕ ಜೀವನದಲ್ಲಿ ಮಹಿಳೆಯ ಶೀಲ ಅಥವಾ ಪತಿವ್ರತ ಧರ್ಮಕ್ಕೆ ಹೆಚ್ಚಿನ ಮಾನ್ಯತೆ ನೀಡಿರುವದರಿಂದ ಅದೊಂದು ಮೌಲ್ಯವೇ ಆಗಿ ಜನಪದರಲ್ಲಿ ಬೆಳೆದು ಬಂದಿದೆ. ಶೀಲನಾಶವಾದರೆ ಜೀವನವೇ ನಾಶ ಎನ್ನುವ ಸಿದ್ದಾಂತವೂ ರೂಪಿತವಾಗಿದೆ. ಆದರೆ ಶೀಲ ಕೇವಲ ಹೆಣ್ಣಿಗೆ ಅಷ್ಟೇ ಸೀಮಿತವಾಗಿರುವದು ಜನಪದರಲ್ಲಿ ಕಂಡುಬರುತ್ತದೆ. ಶೀಲವೇ ಮುಖ್ಯವಾಗಿರುವ ಸಮಾಜದಲ್ಲಿ ಕಡ್ಲಿಮಟ್ಟಿ ಕಾಶಿಬಾಯಿ ಅಂಥ ಪತಿವ್ರತೆಯು, ಶೀಲ ಹಾಳು ಮಾಡಲು ಮುಂದಾದ ಸ್ಟೇಷನ್ ಮಾಸ್ತರಗೆ "ಕೂಸು ಸತ್ತರೆ

---

೬ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಪು.ಸಂ. ೨೬

ಸಾಯಿಲಿ, ನನ್ನ ಗಂಡನ ಆಸಿ ಇದ್ದರೆ ಮುಂದೆ ಹತ್ತು ಮಕ್ಕಳನ್ನು ಹಡೆಯುವೇನೆಂದು ಹೇಳುವಲ್ಲಿ ಕೂಸಿನ ಪ್ರಾಣಕ್ಕಿಂತಲೂ ತನ್ನ ಶೀಲವೇ ಮುಖ್ಯವೆಂದು ಸಾರುತ್ತಾಳೆ. ಶೀಲ ಹೆಣ್ಣಿನಷ್ಟೇ ಗಂಡಿಗೂ ಮುಖ್ಯವಾಗಿರಬೇಕಿತ್ತು. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿಗಷ್ಟೇ ನಿಗದಿ ಪಡಿಸಿರುವದು ಬರೆದಿರುವಲ್ಲಿ ಉಪನ್ಯಾಸ ಪ್ರೊ. ಹಿರೇಮಠರ ವೈಚಾರಿಕ ಮನೋಭಾವ ಮತ್ತು ಸಾಮಾಜಿಕ ವಿಷಮತೆಯ ಹಿನ್ನಲೆಯಲ್ಲಿ ಮೌಲ್ಯ ವಿಶ್ಲೇಷಣೆ ಮಾಡಿರುವದನ್ನು ಕಾಣಬಹುದಾಗಿದೆ.

೮) ತ್ಯಾಗ ಮತ್ತು ಬಲಿದಾನ : ದೇಶ ಮತ್ತು ಸಮಾಜಕ್ಕಾಗಿ ಪ್ರಾಣಿ ಮತ್ತು ಜನರು ಪ್ರಾಣವನ್ನೇ ಬಲಿಕೊಟ್ಟಿರುವ ಅನೇಕ ಉದಾಹರಣೆಗಳು ದೊರೆಯುತ್ತವೆ. ಸಮಾಜದ ಒಳತಿಗಾಗಿ ಆತ್ಮ ಬಲಿದಾನ ಕೊಡುವದು ಹಿಂದಿನ ಸಮಾಜದಲ್ಲಿ ದೊಡ್ಡ ಮೌಲ್ಯವಾಗಿದೆ. ಕೆರೆಗೆ ನೀರು ಬರಲು ನಾಡಿಗೆ ಕೇಡು ತಪ್ಪಿಸಲು ರಾಜನ ಪ್ರಾಣ ಉಳಿಸಲು ಅನೇಕರು ಆಗ ಬಲಿದಾನ ಮಾಡಿ ತ್ಯಾಗಿಗಳೆನಿಸಿಕೊಂಡಿರುವರು. ಸಮಾಜಕ್ಕೆ ಬಲಿದಾನ ಮಾಡಿದವರದನ್ನು ಜನಪದರು ಗೌರವಿಸಿ ದೇವರಾಗಿ ಪೂಜಿಸಿರುವರು. ಸಮಾಜದ ಹಿತಕ್ಕಾಗಿ ತಮ್ಮ ಹಿತವನ್ನು ಬಲಕೊಟ್ಟವರು ಮಹಾತ್ಮರು ಅವರ ತ್ಯಾಗ ಸಾಮಾಜಿಕ ಮೌಲ್ಯವೆಂದೇ ಪರಿಗಣಿಸಿ ಗೌರವಿಸುವದು ಸಮಂಜಸವೆಂದು ವಿವರಿಸಿರುವರು.

೯) ವಿಧಿ ಸಂಕಲ್ಪ : ಜನಪದರ ಬದುಕಿನಲ್ಲಿ ದೈವಕ್ಕೆ ಹೆಚ್ಚಿನ ಮನ್ನಣೆ ಇದೆ. ದೈವ, ದೇವರ ಬಲವಿಲ್ಲದವನು ಸಾಧ್ಯವಿಲ್ಲವೆಂಬ ನಂಬಿಕೆ ಬಲವಾಗಿ ಬೇರೂರಿದೆ. ಸೆಟವಿ ಎಂಬುವಳು ಹುಟ್ಟಿದ ಕೂಸಿಗೆ ಹಣೆಬರಹ ಬರೆಯುವಳೆಂದು ನಂಬಿರುವರು. ಆ ಬರಹದಂತೆಯೇ ಮುಂದೆ ಆ ವ್ಯಕ್ತಿ ಬಡವ-ಬಲ್ಲಿದನಾಗುವನೆಂಬುದು ಪರಂಪರೆಯಿಂದ ಹೇಳುತ್ತ ಬಂದಿರುವರು ಇಂದು ಆಧುನಿಕ ವಿದ್ಯಾವಂತರಿಗೆ ಇದು ಮೋಜೆನಿಸದರೂ, ಅನೇಕ ಜನ ಸಮೂಹಗಳಲ್ಲಿ ಇಂದಿಗೂ ದೈವ ಸಂಕಲ್ಪ ಅಥವಾ ಹಣೆಬರಹ ಕುರಿತ ನಂಬಿಕೆ ಪ್ರಪಂಚದ ತುಂಬಾ ಪ್ರಚಲಿತವೆಂದು ಉದಾನೀಡಿರುವಲ್ಲಿ ಅವರ ಅಧ್ಯಾಯನದ ವ್ಯಾಪ್ತಿಯಲ್ಲಿ ಕಾಣುತ್ತೇವೆ.

೧೦) ಮಿತ್ರತ್ವ : ಸಾಮಾಜಿಕ ಜೀವನದಲ್ಲಿ ವ್ಯಕ್ತಿ-ವ್ಯಕ್ತಿಗೆ ಬೆಸುಗೆಯಾಗಿರುವದು ಪ್ರೀತಿಂದು ಮೋಹ ಚುಂಬಕ ಶಕ್ತಿ ಇದ್ದಂತೆ ಪ್ರೀತಿಯಿಂದಲೆ ಬಂಧು-ಬಳಗ, ಸಂಘ-ಸಮಾಜ ಬಾಳುತ್ತದೆ. ಬದುಕುತ್ತದೆ. ಸಮಾಜಿಕ ಕೊಡು ಕೊಳ್ಳೂವಿಕೆಯು ಪ್ರೀತಿಯ ಮುಖಾಂತರವೇ ಮುನ್ನಡಿಯುತ್ತದೆ. ಪ್ರೀತಿಯಿಂದಲೇ ದೇಶ-ವಿದೇಶ ಜನರಲ್ಲಿ ಗೆಳೆತನ ಬೆಳೆಯುತ್ತದೆ. ವಿಶ್ವಾಸ ಮೂಡುತ್ತದೆ. ಒಂದೊಂದು ಸಲ ಅರಿತೋ ಅರಿಯದೆಯೋ ಪ್ರೀತಿಗೂ ಭಂಗ ಬಂದು ಒದಗುತ್ತದೆ. ಆತ್ಮೀಯರಾದ ಗೆಳೆಯರು ಒಬ್ಬರಿಗೊಬ್ಬರು ಅರ್ಪಿಸಿಕೊಳ್ಳುವದು ನಿಜವಾಗಿಯೂ ಶ್ರೇಷ್ಠ ಆದರ್ಶ ಮಿತ್ರರೆಂದೇ ಹೇಳಬೇಕು, ಮಿತ್ರತ್ವದ ಮೌಲ್ಯವೇ ಅಂಥದ್ದು. ಗೆಳೆಯನಿಗಾಗಿ ಜೀವ ಕೊಡುವ ಗೆಳೆಯ ಸಂಕಟ ಬಂದಾಗ ಸಹಾಯ ಮಾಡುವ ಗೆಳೆಯನೆ ನಿಜವಾದ ಮಿತ್ರ ಹಾಗೂ ಮಿತ್ರತ್ವಕ್ಕೆ

ಬೆಲೆ ತಂದು ಕೊಡತಕ್ಕವನು. ಅಪೂರ್ವ ಗೆಳೆಯರ ಮಿತ್ರತ್ವಕ್ಕೆ ಉದಾಹರಣೆಯೆಂದರೆ ಸೋಮ್ರಾಯ ಭೀಮ್ರಾಯರು ಇಬ್ಬರೂ ಜೀವದ ಗೆಳೆಯರ ಒಂದು ದಿನ ಸೋತ್ರಾಯ ಅರಿಯದೇ ಕೊಡು ಹೊತ್ತ ಕೊಂಡು ಹೋಗುವ ಭೀಮರಾಯನ ಹೆಂಡತಿಯನ್ನು ನೋಡಿ ಆಸೆ ಪಡುವನು ಇವನೂ ತಳದ ಭೀಮರಾಯ ತನ್ನ ಹೆಂಡತಿಗಳೆಂದು ಹೇಳಿ ಮಿತ್ರ ಮನಸ್ಸು ನೋಯಿಸದೆ ಹೆಂಡತಿಗೆ ಹೇಳಿ ಮನ ಒಲಿಸುವನು. ಅಂದು ರಾತ್ರಿ ಸೋಮರಾಯನಿಗೆ ಕರೆದು ತಂದು ಮನೆಯೊಳಗೆ ಕಳಿಸಿ ಹೋಗುವನು ಮನೆಯ ಜಂತಿಯಲ್ಲಿಟ್ಟ ಖಡ್ಗ ನೋಡಿದ ಸೋಮರಾಯರೆಂದು ದಿನಾಲೂ ಗರಡಿ ಮನೆಯಲ್ಲಿ ತಿರುಗಿಸುವ ಗೆಳೆಯ ಭೀಮರಾಯನದೆಂದು ಗುರುತಿಸಿ ಗೆಳೆಯನ ಹೆಂಡತಿಯ ಮೇಲೆ ಆಸೆಪಟ್ಟನೆಂದು ಹೇಸಿಕೆಯಿಂದ ಖಡ್ಗ ತೆಗೆದುಕೊಂಡು ಇರುದುಕೊಳ್ಳುವನು, ಗಂಡ ಬಂದು ಕೇಳಿದರೆ ಏನು ಹೇಳಲೆಂದು ತೋಚದೆ ಭೀಮರಾಯನ ಹೆಂಡತಿ ಇರಿದುಕೊಂಡು ಸತ್ತಳು. ನಂತರ ಮನೆಗೆ ಬಂದು ನೋಡಿದಾಗ ಗೆಳೆಯ ಹೆಂಡತಿ ಸತ್ತದು ನೋಡಿ ನಾನಾದರೂ ಯಾಕೆ ಬದುಕಬೇಕೆಂದು ಭೀಮರಾಯನು ಇರಿದುಕೊಂಡು ಸಾಯುವನು ಮಿತ್ರತ್ವದ ಮೌಲ್ಯ ಪಾಲನೆಗಾಗಿ ತನೂ ಹೆಂಡತಿಯ ಪ್ರಾಣ ನೀಡಿದ ದುರಂತ ಚಿತ್ರಣ ಜನಪದರ ಬದುಕಿನೊಳಗೆ ಆದರ್ಶ ಮೌಲ್ಯವಾಗಿ ಬೆಳೆದು ಬಂದಿದೆ. ಆದ್ದರಿಂದಲೇ ಹೊಳೆಗೆ ಆದವನೆ ಗೆಳೆಯನೆಂಬ ಗಾದೆ ಮಾತುಗಳು ಪ್ರಚಲಿತವಾಗಿವೆಂದು ಸಾದ್ಯಾಂತವಾಗಿ ನಿರೂಪಿಸಿದ್ದರೆ.

ಇಂದಿನ ವೈಜ್ಞಾನಿಕ ಯುಗದಲ್ಲಿ ಮಾನವನು ಜಗತ್ತಿನ ಜನರೊಂದಿಗೆ ಸಂಪರ್ಕ ಬೆಳೆಸುತ್ತಿದ್ದಾನೆ. ತನ್ನ ನಾಡು, ದೇಶವಲ್ಲದೆ ವಿಶ್ವ ಸಮೂಹದೊಂದಿಗೆ ವ್ಯವಹರಿಸುತ್ತಾನೆ. ಇಂದು ದೇಶದ ಸಮಾಜದವರೊಂದಿಗೆ ಬೆರೆತು ಬಾಳುವದೇ ಸಮಾನ ಸಹಬಾಳ್ವೆಯಾಗಿದೆ ಸರ್ವರಿಗೂ ಸಮಾನತೆದೊರೆತೂ, ಸರ್ವರಿಗೂ ಸಮಬಾಳು, ಸಮಪಾಲು ದೊರೆಯುಲೆಂದು ಜನಪದರು ಆಶಿಸುತ್ತಾರೆ.

"ಲೋಕದಲ್ಲಿ ಬದುಕಿರುವವರಿಗೂ ಎಲ್ಲರೊಂದಿಗೆ ಬೆರೆತಿರಬೇಕು, ಸಹಜೀವಿಗಳ ಸುಖ-ದುಃಖಗಳಲ್ಲಿ ಭಾಗಿಯಾಗುವವನಿಗೆ ಎಲ್ಲರೂ ಸಹಕಾರಿಯಾಗುತ್ತರೆ, ಗೌರವಿಸುತ್ತಾರೆ. ಈ ರೀತಿ ಎಲ್ಲರೊಂದಿಗೆ ಬೆರೆತು ಬದುಕಲು ತಾಳ್ಮೆ ಅಗತ್ಯವಾಗಿದೆ. ತಾಳಿದವನು ಬಾಳುತ್ತಾನೆ, ಬದುಕುತ್ತಾನೆ"[೭]. ಶಾಂತಿಯಿಲ್ಲದ ಮನ, ಮನೆ, ಸಮಾಜವಾಗಲಿ, ದೇಶವಾಗಲಿ ಸುಖಿಯಗಿರಲು ಸಾಧ್ಯವಿಲ್ಲ. ಶಾಂತಿ ಇಂದು ಪ್ರಪಂಚಕ್ಕೆ ಬೇಕಾಗಿದೆ. ಇಂಥ ಶಾಂತಿಯ ಉಪದೇಶವನ್ನು ಜನಪದ ಸಾಹಿತ್ಯ ಸಾರಿ ವಿಶ್ವ ಮೌಲ್ಯವನ್ನೇ ಎತ್ತಿ ತೋರಿಸಿದೆ.

---

೭ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಪು.ಸಂ. ೩೪

ಹೀಗೆ ಜನಪದ ಮೌಲ್ಯಗಳನ್ನು ಅತ್ಯಂತ ವಿಮರ್ಶಾತ್ಮಕವಾಗಿ ವಿವರಸುತ್ತ, ಪತ್ರ ಉಪಸಂಹಾರದಲ್ಲಿ "ಇಂದಿನ ವಿಜ್ಞಾನ ಯುಗದಲ್ಲಿ ಜನರ ನೈತಿಕತೆ ಕುಸಿಯುತ್ತದೆ. ದೇಶ ಸಂಪ್ರದಾಯ ಅಚಾರ-ವಿಚಾರಗಳಲ್ಲೂ ಶಿಥಿಲತೆಯುಂಟಾಗಿದೆ. ಆದರೆ ಜನಪದ ಇದಕ್ಕೆ ಹೊಸ ಭರವಸೆಯನ್ನು ಕೊಡುತ್ತದೆ.

"ನೀವು ಸತ್ತರ ಭೂಮಿ ಹಾಳಿಲ್ಲ
ಮಳಿ ನಿಲ್ಲುವುದಿಲ್ಲ/ ನೀನಾದಿಗೊಬ್ಬರಾ
ಹಾಡಿತಾಳ ಮತ್ತೊಬ್ಬರನ
ಅಕಿ ಅಲ್ಲೋ ಬಂಜರಾ"[೬] ॥

ಒಬ್ಬ ವ್ಯಕ್ತಿ ಇಲ್ಲವೆ ಒಂದು ಕಾಲದ ಜನಾಂಗ ಸತ್ತರೆ ಭೂಮಿ ಬಂಜೆಯಲ್ಲ, ಹಾಳು ಬೀಳುವದಿಲ್ಲ ಮಳೆ ಬರುತ್ತದೆ, ಗಾಳಿ ಬೀಸುತ್ತದೆ. ಸೃಷ್ಟಿ ಮರುಹುಟ್ಟು ಪಡೆಯುತ್ತದೆ. ಹಾಗೆಯೇಕೆ ಒಳ್ಳೆಯವರು ಹುಟ್ಟುತ್ತಾರೆ ಬಾಳುತ್ತಾರೆ. ದೇಶವನ್ನು ಬೆಳಗಿಸುತ್ತಾರೆಂದು, ಉತ್ತಮ ಗುಣಗ್ರಾಹಿ ವ್ಯಕ್ತಿತ್ವದ ಭಾವಾರ್ತ ಮೌಲ್ಯವನ್ನು ಎತ್ತಿ ಹಿಡಿಯುವ ಸಂದೇಶವನ್ನು ಸೂಚಿಸುತ್ತದೆ.

ಜನಪದರಿಗೆ ವೈಯಕ್ತಿಕ ಬದುಕಿಗಿಂತಲೂ ಸಾಮಾಜಿಕ ಬದುಕು ಮುಖ್ಯವಾಗಿ, ಆಯಾ ಕಾಲದ ಸಾಮೂಹಿಕ ಜನಂಗದ ಅಭಿವೃದ್ಧಿ ಮತ್ತು ಹಿತಕ್ಕಾಗಿ ಇಲ್ಲಿಯ ಮೌಲ್ಯಗಳು ನಿರ್ಮಾಣವಾಗಿವೆ. ಕಾಲಮಾನದಲ್ಲಿ ಕೆಲವು ಮೌಲ್ಯಗಳು ಸ್ಥಗಿತಗೊಂಡರೆ ಇನ್ನೂ ಕೆಲವು ಸ್ಥಿತ್ಯಂತರವಾಗಿವೆ. ಜನರನ್ನು ಸನ್ಮಾರ್ಗದಲ್ಲಿ ನಡೆಸಲು ಆಯಾಕಾಲದ ಮೌಲ್ಯಗಳು ಶ್ರಮಿಸಿವೆಂಬುದನ್ನು ಮರೆಯಲಾಗದೆಂದು ಪ್ರೊ. ಹಿರೇಮಠರು ಹೇಳಿರುವುದು ಅತ್ಯಂತ ಸಮಂಜಸವಾಗಿದೆ.

೨) ಜನಪದ ವೈದ್ಯ ಪದ್ಧತಿ ಮತ್ತು ಮನೆಮದ್ದು :

ಜನಪದ ಸಾಹಿತ್ಯ ಸಂಗ್ರಹಕಾರರಾಗಿ ಅರಿತಿರುವ ಪ್ರೊ. ಸೂಗಯ್ಯ ಹಿರೇಮಠರು ಬೆಂಗಳೂರಿನ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಯು.ಜಿ.ಸಿ. ಸರಕಾರದೊಂದಿಗೆ ಜನಪದ ವೈದ್ಯಕೋಶವನ್ನು ಸಿದ್ಧಪಡಿಸಲು ಯೋಜನೆ ಹಾಕಿಕೊಂಡಿದ್ದರು. ೧೯೮೧ರಲ್ಲಿ ರಾಜ್ಯದ ಪ್ರತಿ ಜಿಲ್ಲೆಯಿಂದ ಒಬ್ಬರನ್ನು ಜನಪದ ವೈದ್ಯಕೋಶದ ಮಾಹಿತಿ ಸಂಗ್ರಹಕಾರರೆಂದು ನೇಮಿಸಲು ಪತ್ರಿಕೆಗಳಿಗೆ ಪ್ರಕಟಣೆ ನೀಡಿದ್ದು ನೋಡಿ ಪ್ರೊ. ಹಿರೇಮಠರು ಅರ್ಜಿ ಹಾಕಿದರು. ಸಂದರ್ಶನದಲ್ಲಿ

---

೬ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಪು.ಸಂ. ೩೫

ಪ್ರೊ. ಹಿರೇಮಠರು ನೀಡಿದ ಜನಪದ ಸಾಹಿತ್ಯದ ಅಪಾರ ಪಾಂಡಿತ್ಯವನ್ನು ಹಾಗೂ ಈಗಾಗಲೇ ಸಹಾಯಕ ಸಂಶೋಧಕರಾಗಿ ಮಾಡಿದ ಅನುಭವವನ್ನು ಪರಿಗಣಿಸಿದ ಆಯ್ಕೆ ಸಮಿತಿಯ ಗುಲಬರ್ಗಾ ಜಿಲ್ಲೆಯ ಮಾಹಿತಿ ಸಂಗ್ರಹಕಾರರನ್ನಾಗಿ ನೇಮಿಸಿದರು. ಸಂಗ್ರಹಕಾರರಾಗಿ ಒಂದು ತಿಂಗಳವರೆಗೆ ಬೆಂಗಳೂರಿನ ಸಾಹಿತ್ಯ ಪರಿಷತ್ತಿನಲ್ಲಿಯೇ ನಾಡಿನ ಜನಪದ ವಿದ್ವಾಂಸರಿಂದ ಉಪನ್ಯಾಸ ನೀಡದಲ್ಲದೆ ಈಗಾಗಲೇ ಜನಪದ ವೈದ್ಯ ಕುರಿತು ಪ್ರಕಟವಾದ ಗ್ರಂಥದಲ್ಲಿ ವಿಷಯ ಸಂಗ್ರಹಣೆ ಮತ್ತು ವಿಂಗಡಣೆ ಹಾಗೂ ಮುಂದೆ ಗ್ರಾಮಾಂತರ ಪ್ರದೇಶದಲ್ಲಿ ಜನಪದ ವೈದ್ಯರೊಂದಿಗೆ ಸಂದರ್ಶನ ಮತ್ತು ಸಂಗ್ರಹಿಸುವ ಗಿಡಮೂಲಿಕೆಗಳ ವಿವರ ಕುರಿತು ತಿಳಿಸಿಕೊಟ್ಟದ್ದಲ್ಲದೆ ಕೊನೆಯಲ್ಲಿ ತಮ್ಮ ಜಿಲ್ಲೆಗೆ ಹೋಗಿ ಮಾಹಿತಿ ಸಂಗ್ರಹಿಸಲು ಅಗತ್ಯವಾಗಿ ಬೇಕಾಗುವ ಮಾಹಿತಿ ಸಂಗ್ರಹದ ಪ್ರಕಾರಗಳ ಮತ್ತು ಪ್ರವಾಸದ ಭತ್ಯೆಗಳನ್ನು ಕೊಟ್ಟು ಕಳುಹಿಸಿದರು. ಹೀಗಾಗಿ ಜನಪದ ವೈದ್ಯ ಮಾಹಿತಿಯನ್ನು ಜಿಲ್ಲೆಯ ತಾಲೂಕಿನ ಪ್ರತಿ ಹಳ್ಳಿಗೆ ಹೋಗಿ ಅಲ್ಲಿಯ ದನ ಮತ್ತು ಮನುಷ್ಯರ ವೈದ್ಯರನ್ನು ಭೇಟಿಯಾಗಿ ಜನಪದ ವೈದ್ಯರು ಬಾರೆಂದು ಹೇಳಿದ ದಿನ ಹಗಲು ರಾತ್ರಿ ಮಳೆ ಚಳಿ ಎನ್ನದೆ ಬಸ್ಸ್ ಇಲ್ಲದ ಹಳ್ಳಿಗಳಿಗೆ ನಡೆದು ಹೋಗಿ ಅವರು ನೀಡುವ ಸಮಗ್ರ ಮಾಹಿತಿಯನ್ನು ಸಂಗ್ರಹಿಸಿ ಕಳುಹಿಸಿರುವರು. ಈ ಯೋಜನೆಯಲ್ಲಿ ಕ್ಷೇತ್ರಕಾರ್ಯ ಮಾಡಿದ ಅಪಾರ ಅನುಭವದಿಂದಲೇ (೧) ಜನಪದ ವೈದ್ಯಪದ್ಧತಿ (೨) ಮನೆ ಮದ್ದು ಮತ್ತು (೩) ದೇವ ದೇವ ವನ ಎಂಬ ಮೂರು ಮಹತ್ವದ ಕೃತಿಗಳನ್ನು ರಚಿಸಿರುವರು.

(೧) ಜನಪದ ವೈದ್ಯ ಪದ್ಧತಿ :

ಇದು ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ೧೯೯೯ರಲ್ಲಿ ಪ್ರಕಟವಾದ ಉಪನ್ಯಾಸ ಮಾಲೆಯ ಕೃತಿ. ಉಪನ್ಯಾಸ ಮಾಲೆ ಕೃತಿಯಾದರೂ ವಿಷಯದಿಂದ ಮಹತ್ವದ್ದಾಗಿದೆ. ಯಾಕೆಂದರೆ ಜನಪದ ವೈದ್ಯಕೀಯ ಕುರಿತು ಅಲ್ಲಲ್ಲಿ ಪತ್ರಿಕೆಯಲ್ಲಿ ಒಂದೆರಡು ಲೇಖನ ಪ್ರಕಟವಾಗಿದ್ದವು. ಪ್ರೊ. ಸೂಗಯ್ಯ ಹಿರೇಮಠರು ತಮ್ಮ ಜನಪದ ವೈದ್ಯಕೋಶದ ಮಾಹಿತಿ ಸಂಗ್ರಹದ ಅನುಭವದಿಂದ ಇಂಥ ಕೃತಿ ಬರೆದವರಲ್ಲಿ ಪ್ರಥಮರಲ್ಲದೆ, ನಮ್ಮ ಭಾಗದಲ್ಲಿ ಅನೇಕ ಆಧುನಿಕ ರೋಗಗಳಿಗೆ ಜನಪದ ವೈದ್ಯರು ತಮ್ಮ ಗಿಡ-ಮೂಲಿಕೆಗಳ ಅನುಭವದಿಂದ ಮದ್ದು ಕೊಡುವ ಸಭ್ಯ ವೈದ್ಯರನ್ನು ಗುರುತಿಸಿ ಅವರಿಂದ ಮಾಹಿತಿ ಸಂಗ್ರಹಿಸದ್ದರಿಂದ ಇದೇನಿದು ಉತ್ತಮ ಹಾಗೂ ಪರಿಪೂರ್ಣ ವಿಷಯದ ಕೃತಿಯೆಂದೇ ಹೇಳಬಹುದು. ಈ ಕೃತಿಯ ಪೀಠಿಕೆಯಲ್ಲಿಯೇ ಪ್ರೊ. ಹಿರೆಮಠರು "ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಂದು ಪ್ರಾಣಿ ಪಕ್ಷಿ, ಮರ ಮಾನವನಿಗೆ ರೋಗಗಳು ಬರುವದು ಸ್ವಾಭಾವಿಕವಾದುದು. ಪ್ರಕೃತಿಯಲ್ಲಿ ಸೃಷ್ಠಿಯಾದ ಜೀವರಾಶಿಗಳು ತಮ್ಮ ಬದುಕಿನ ಉಳಿವಿಗಾಗಿ ಎಲ್ಲಾ ಪ್ರಯತ್ನಗಳನ್ನು ನಡೆಸಿವೆ. ಜೀವಿಸುವದಕ್ಕೆ ಬೆಳೆಯುವದಕ್ಕೆ ಆಹಾರ, ನೀರು, ಹುಡುಕಿಕೊಂಡಂತೆ ತಮ್ಮ ಅಳುವಿಗೆ ಕಾರಣವಾದ ರೋಗಕ್ಕೆ 'ಮದ್ದು'ಗಳನ್ನು ಹುಡುಕಿಕೊಂಡಿವೆ. ಮೊದಲು ಸಹಜವಾಗಿ ಉಪಯೋಗಿಸಿದ ಮರಬಳ್ಳಿಗಳು ತಿಳುವಳಿಕೆ ಬಂದ ಮೇಲೆ ಪುನಃ ಪುನಃ ಪರೀಕ್ಷಿಸಿ ಖಚಿತ ಪಡಿಸಿಕೊಂಡಿರಬೇಕು. ಖಚಿತ

ಪಡಿಸಿಕೊಂಡ ಬಳ್ಳಿ ಎಲೆ, ಬೀಜಗಳೆ ಮುಂದಿನ ತಲೆಮಾರಿಗೆ ಹರಿದು ಬಂದಿದೆ. ಮಾನವನು ಸಹಸ್ರಾರು ವರ್ಷ ಇಂಥ ಪ್ರಯೋಗಗಳನ್ನು ಮಾಡಿ ನಿಶ್ಚಿತ ಪಡಿಸಿದ್ದ ಮದ್ದಾಗಿದೆ"[೧], ಎಂದು ವಿವರಿಸುತ್ತಾ, ಇಂದಿನ ಬಳಕೆಯಲ್ಲಿರುವ ಆಯುರ್ವೇದಿಕ, ಹೋಮಿಯಪತಿ ಮತ್ತು ಅಲೋಪತಿ ಪದ್ಧತಿಗಳು ಬರುವ ಪೂರ್ವದಲ್ಲಿ ಜನಪದ ವೈದ್ಯ ಪದ್ಧತಿಯೇ ಪ್ರಧಾನವಾಗಿತ್ತು. ಆನಪದ ವೈದ್ಯಪದ್ಧತಿಯನ್ನು ಸಂಶೋಧಿಸಿಯೇ ಹೊಸ ವಿಧಾನಗಳ ಅವಿಷ್ಕಾರಗೊಂಡಿದೆ. ಆದ್ದರಿಂದ ಆಧುನಿಕ ಯುಗದಲ್ಲಿ ಜನಪದ ಅಧ್ಯಯನ ಶಾಸ್ತ್ರೀಯವಾಗಿ ನಡೆದಂತೆ, ಜನಪದ ವೈದ್ಯ ಪದ್ಧತಿ ಮತ್ತು ಸಸ್ಯ ಬಳಕೆಯ ಬಗ್ಗೆ ವ್ಯಾಪಕ ಅಭ್ಯಾಸ ಸಂಗ್ರಹ ಮತ್ತು ಸಂಶೋಧನೆ ನಡೆದೆಂದು, ಆಧುನಿಕ ವೈದ್ಯ ಶಾಸ್ತ್ರಕ್ಕೆ ಜನಪದವೇ ಬುನಾದಿಯಾಗಿದೆಂದು ವಿಸ್ತಾರವಾಗಿ ವಿವರಿಸಿರುವದ್ದಲ್ಲದೆ

೨) ಜನಪದ ವೈದ್ಯ ಪದ್ಧತಿಯ ಪ್ರಾಚೀನತೆ

೩) ಜನಪದ ವೈದ್ಯ ಪದ್ಧತಿ ಬೆಳೆದ ಬಗೆ

೧. ಜನಪದ ವೈದ್ಯ ಪದ್ಧತಿ ಪು. ಸಂ. ೧

೪) ಜನಪದ ವೈದ್ಯ ಪದ್ಧತಿಗಳು ಮತ್ತು ವೈದ್ಯರು

೫) ಜನಪದ ವೈದ್ಯರ ವಿಧಿ ವಿಧಾನಗಳು

೬) ಜನರ ರೋಗಗಳು ಮತ್ತು ಮದ್ದುಗಳು

೭) ದನದ ರೋಗಗಳು ಮತ್ತು ಮದ್ದುಗಳು

೮) ಕೊನೆಯಲ್ಲಿ ಉಪಸಂಹಾರದೊಂದಿಗೆ ವಿಷಯವನ್ನು ಮುಕ್ತಾಯಗೊಳಿಸಿರುವರು.

೧) ಜನಪದ ವೈದ್ಯ ಪದ್ಧತಿಯ ಪ್ರಾಚೀನತೆ : ಈ ಅಧ್ಯಾಯದಲ್ಲಿ ಪ್ರಕೃತಿಯ ಜೀವಿಗಳಲ್ಲಿ ಬೆಳೆದ ಆದಿಮಾನವನಿಗೆ ಮಳೆ ಗುಡುಗು ಮಿಂಚು ವಿಚಿತ್ರವೆನಿಸಿ ಭಯ ಹುಟ್ಟಿಸಿದವು. ತನ್ನ ಹಸಿವೆ ಹಿಂಗಿಸಲು ಹಣ್ಣು, ಗಡ್ಡೆ, ಗೆಣಸು, ಪ್ರಾಣಿಗಳನ್ನು ತಿಂದು ತನ್ನ ಹಸಿವೆ ಹಿಂಗಿಸುವ ಪ್ರಾಣಿ ಮರಗಳೊಡನೆ ಪ್ರೀತಿಯಿಂದ ಬಾಳಿದನೆ ಆದರೆ ಕೆಲವು ಸಲ ಪ್ರಕೃತಿ ವಿಕೋಪದಿಂದ ಆಗುವ ಅನಾಹುತಕ್ಕೆ ಹೆದರಿ, ತನಗೆ ಕೇಡು ಬಾರದೆಂದು ಪ್ರಕೃತಿ ಪೂಜಿಸಿದನು. "ಪ್ರಕೃತಿಯಲ್ಲಿ ಬದುಕುವದೇ ಪ್ರಮುಖವಾದಾಗ ತನಗೆ ನಾಶಮಾಡುವ ಪ್ರಾಣಿ ಹಾವು ಉಂತಾದ ವಿಷಯಜಂತುಗಳ ವಿಷಯ ಶಮನಕ್ಕಾಗಿ ಹಲವಾರು ನಾರು ಬೇರು ಕಟ್ಟಿದನು. ತನ್ನ ಸುತ್ತಲಿನ ಪ್ರಾಣಿಗಳು ಅನುಸರಿಸುವುದನ್ನು ನೋಡಿ 'ಮದ್ದು' ಕಂಡುಹಿಡಿದನು"[೨] ಹೀಗೆ ಪ್ರಾಣಿ ಮತ್ತು ಪ್ರಕೃತಿ ವಿಕೋಪದಿಂದ ಬದುಕಲು ಆದಿಮಾನವನು ಬಳಸಿದ ಮದ್ದು ಮುಂದಿನ ಜನಾಂದಲ್ಲಿ ಬೆಳೆದು

೧. ಜನಪದ ವೈದ್ಯ ಪದ್ಧತಿ ಪು. ಸಂ. ೧

೨. ಜನಪದ ವೈದ್ಯ ಪದ್ಧತಿ ಪು.ಸಂ. ೬

ಬಂದಿತು. ಜೀವನ ಉಳಿಸುವ, ರೋಗ ಕಳೆಯುವ 'ಮದ್ದು' ಗಾರನಿಗೆ ಜನರಲ್ಲಿ ಗೌರವ ಹೆಚ್ಚಿತು. ಮದ್ದುಗಾರನಿಗೆ ದೇವರೆಂದೇ ಪೂಜಿಸ ತೊಡಗಿದರು. ಹೀಗೆ ಆದಿ ಮಾನವನಿಂದ ಬೆಳೆದು ಬಂದ ಜನಪದ ವೈದ್ಯಪದ್ಧತಿ ಮುಂದೆ ಕುರಿತು ಜೀವನದಲ್ಲಿಯೇ ಬೆಳೆದು ಬಂದಿದೆ. ಮನೆಯಲ್ಲಿ ದೊರಕುವ ಅಜವಾನ, ಉಪ್ಪು, ಎಣ್ಣೆ, ಬೆಳ್ಳುಳ್ಳಿ ಮುಂತಾದವುಗಳನ್ನು ಕೊಟ್ಟು ರೋಗ ಗುಣಪಡಿಸುವದರಿಂದ ಇದಕ್ಕೆ ಮನೆಮದ್ದೆಂದು ಕರೆಯುವರು. ನಾಟೆಂದರೆ ಭೂಮಿಯಲ್ಲಿ ಹುಟ್ಟಿದ ಮರ, ಬಳ್ಳಿಯ ಕಾಯಿ ತಪ್ಪಲು ತಂದು ಕೊಡುವದರಿಂದಿದಕ್ಕೆ ನಾಟಿ ಮದ್ದು ಎನ್ನುವರು. ಇಂಥ ನಾಟಿ ಮದ್ದುಗಳೆ ಮುಂದಿನ ನಾಗರಿಕ ಜೀವನದ ನಾಡ ಮದ್ದುಗಳಾಗಿವೆ. 'ಕಾಡಮದ್ದು' ಮುಂದೆ ನಾಡಮದ್ದಾಗಿ ಆಧುನಿಕ ಜಗತ್ತಿನಲ್ಲಿ ಬೇರೆ, ಬೇರೆ, ಹೆಸರಿನಿಂದ ಪ್ರಚಾರದಲ್ಲಿದೆಂದು ವಿವರವಾಗಿ ವಿವರಿಸಿದ್ದಾರೆ.

೩) ಜನಪದ ವೈದ್ಯ ಪದ್ಧತಿ ಬೆಳೆದು ಬಂದ ಬಗೆ : ಈ ಅಧ್ಯಾಯದಲ್ಲಿ ಪ್ರಾಚೀನ ಮಾನವನಲ್ಲಿ ಅಕಾಲಿಕವಾಗಿ ಸತ್ತರೆ ಅವನ ಆತ್ಮ ದೆವ್ವ ಭೂತವಾಗಿ ಸಂಚರಿಸಿ, ರೋಗಗಳಾವ್ರೂ ತರುವದೆಂದು ಪೀಡೆಗಳನ್ನು ನೀಡಿ ಕೆಡಕು ಉಂಟುಮಾಡುವದೆಂಬ ನಂಬಿಕೆ ಬಲವಾಗಿದ್ದಿತು. ಅದಕ್ಕಾಗಿ ಸತ್ತವರ ಆತ್ಮಕ್ಕೆ ಶಾಂತಿ, ಮೋಕ್ಷ ದೊರಕಲು ಅವರ ಬಯಕೆಗಳನ್ನು ಈಡೇರಿಸುತ್ತಿದ್ದರು; ಇಂಥ ಕ್ರಿಯೆಗಳನ್ನು ಅಂದಿನ ಸಮಾಜದಲ್ಲಿ ಕೆಲವು ಮದ್ದು ಮಾಟಗಾರರೆ ಮಾಡುತ್ತಿದ್ದರು. ಇಂಥ ದೇವರಿಂದ ಇಂಥ ರೋಗಗಳು ಬರುತ್ತವೆಂದು ಹೇಳುವ ಮದ್ದುಗಾರರಿದ್ದರು. ಅವರೆಲ್ಲ ದೇವರ ಹೆಸರಿನಲ್ಲಿ ತಿಥಿ ವಾರ ನಕ್ಷತ್ರ ಜ್ಯೋತಿಷ್ಯ ಬಲ್ಲವರಲ್ಲದೆ, ದೇಹ ರಚನೆಯನ್ನು ಅರಿತವರಾಗಿದ್ದರು. ಅನೇಕರು ರೋಗಿಯ ನಾಡಿ ಮಿಡಿತದ್ದಲೇಲೆನೇ ರೋಗಕ್ಕೆ ಮದ್ದು ನೀಡದರೆ, ಇನ್ನು ಕೆಲವರು ಮಾಟ ಮಂತ್ರದ ಮೇಲೆ ಮಾನಸಿಕ ರೋಗಗಳನ್ನು ಪರಿಹರಿಸುತ್ತಿದ್ದರು. ಇಂಥ ನಿಗೂಢ ರೀತಿಯ ಮದ್ದುಗಾರರಿಗೆ ಹೆದರಿಕೆಯಿಂದಲ್ಲಿ ಜೀವ ಉಳಿಸುವದೆಂಬ ಶ್ರದ್ಧೆಯಿಂದಲೂ ಗೌರವಿಸ ತೊಡಗಿದರು. ಮದ್ದುಗಾರರಿಗೆ ಗೌರವ ಹೆಚ್ಚಿದಂತೆ, ತಮ್ಮ ಮದ್ದಿನ ವಿಷಯವನ್ನು ಬೇರೆಯವರಿಗೆ ಬಾಯಿ ಬಿಟ್ಟು ಹೇಳುತ್ತಿರಲಿಲ್ಲ ಹೇಳಿದರೆ ಎಲ್ಲರು ಕುರಿತು ತನ್ನ ಸ್ಥಾನಮಾನ ಕಡಿಮೆ ಆಗುವದೆಂಬ ಭಯವಿತ್ತು. ಹೀಗಾಗಿ ಜನಪದ ವೈದ್ಯರು ಜನರ ಜೀವ ಉಳಿಸುವದೇನಾದರೂ ಬೇರೆಯವರಿಗೆ ತಾನು ಕಲಿತ ವಿದ್ಯೆ ಮರ ಗಿಡ ಬಳ್ಳಿ ಎಲೆ ಬೀಜಗಳನ್ನು ತೋರಿಸಿದೇ ಒಂದು ರೀತಿಯಲ್ಲಿ ಜನಪದ ವೈದ್ಯ ಪದ್ಧತಿಯ ನಾಶಕ್ಕೆ ಅವರೇ ಕಾರಣವಾದರು. ಮೂಲದಲ್ಲಿ ಸಹಜವಾಗಿ ಬೆಳೆದು ಬಂದ ಜನಪದ ವೈದ್ಯಪದ್ಧತಿಯು ಮದ್ದುಗಾರನ ಬುದ್ಧಿವಂತಿಕೆಯಿಂದ ನಿಗುಢವೂ ದುಬಾರಿಯಾಗಿಯೂ ಬೆಳೆದಿದೆ. ಈ ಎಲ್ಲ ಹಿನ್ನೆಲೆಯಲ್ಲಿಯೂ ಜನಪದ ವೈದ್ಯ ಪದ್ಧತಿ ಇಂದಿಗೂ ಉಳಿದು ಬಂದಿರುವದು ಅದರಲ್ಲಿಯ ಮಹತ್ವದಿಂದ ಪ್ರೊ. ಹಿರೇಮಠರು ಸರಿಯಾಗಿಯೇ ಗುರುತಿಸಿದ್ದಾರೆ.

೪) ಜನಪದ ವೈದ್ಯಪದ್ಧತಿಗಳು ಮತ್ತು ವೈದ್ಯರು : ಅಧ್ಯಾಯದಲ್ಲಿ "ಜನಪದ ವೈದ್ಯ ಪದ್ಧತಿಯನ್ನು ವೈದ್ಯರು ಕೊಡುವ ಮದ್ದಿಗನುಗುಣವಾಗಿ ಹೀಗೆ ವರ್ಗೀಕರಿಸಬಹುದಾಗಿದೆ.

- ಗಿಡಮೂಲಿಕೆ ಪದ್ಧತಿ
- ರಸ ಪದ್ಧತಿ
- ಶಾಸ್ತ್ರ ಚಿಕಿತ್ಸಾ ಪದ್ಧತಿ
- ಮಾಟ ಮಂತ್ರ ಮಾಡುವ ಪದ್ಧತಿ"[೪]

ಈ ಪದ್ಧತಿಗಳು ಬಹುದಿನಗಳಿಂದಲೇ ಪ್ರಚಾರದಲ್ಲಿದೆ. ವೈದ್ಯನು ಪ್ರಾವಿಣ್ಯತೆಯನ್ನು ಗಳಿಸಲು ಸಾಧ್ಯವಿತ್ತು. ಕೆಲವರು ಒಂದೇ ರೋಗದಲ್ಲಿ ಪರಿಣಿತ ಪಡೆದವರಾಗುವದು ಸಾಮಾನ್ಯವಾದದೆಂಬ ವರ್ಗೀಕರಿಸುವ ತತ್ವ ಬೇರು, ಬೀಜ ಕುಟ್ಟಿ ಷಧ ಕೊಡುವದೆ ಗಿಡಮೂಲಿಕೆ ವೈದ್ಯರು, ಹಾಲೂ ತುಪ್ಪ ಕರ್ಪೂರ ಕೊಂಬು ಚಂದ್ರ ಮುಂತಾದ ರಸ ವಸ್ತುಗಳಿಂದ ಮದ್ದು ತಯಾರಿಸಿ ಕೊಡುವದೇ ರಸಪದ್ಧತಿ ವೈದ್ಯಕರು, ದೇಹದಲ್ಲಿಯ ಅಗಳು ಕುರುವು, ಬಾವು ಕೀಲುನೋವುಗಳಿಗೆ ಚೂಪಾದ ಕಲ್ಲು, ಉಕ್ಕಿನ ಮೊಳೆ, ಚಕು ಬೇವಿನ ಕಡ್ಡಿ ಮುಂತಾದವುಗಳನ್ನು ಬೆಂಕಿಯಲ್ಲಿ ಕಾಸಿ ದನಗಳಿಗೆ ಬರೆಹಾಕುವರು ಮತ್ತು ಕುರುವು, ಗಡ್ಡೆಗಳನ್ನು ಕೊಯ್ದು ಹಾಕುವವರು ಶಸ್ತ್ರ ಪದ್ಧತಿ ವೈದ್ಯರಾಗಿರುವರು. ಇನ್ನು ಮಾಟ ಮಂತ್ರದವರು ಮಕ್ಕಳಿಗೆ ಸಿಡುಬು, ಮೈಲಿಗೆ ರೋಗಗಳು ಮಾರಿಯಮ್ಮ, ಸುಂಕಲಮ್ಮನಿಂದ ಬರುವವೆಂದು ದೇವರಿಗೆ ಹರಕೆ ಹೊರಲು ಹೇಳಿ ರೋಗಿಯ ಹರಕೆಯನ್ನು ದೇವರಿಗೆ ತಿಳಿಸಿ, ಬಲಿಗೊಡುವದು ಮಂತ್ರಿಸಿದ ನೀರು, ತಾಯಿತ ಕಟ್ಟುವವರು ಮಂತ್ರ ತಂತ್ರ ಮಾಡುವ ವೈದ್ಯರು. ಇವರು ರೋಗಿಯ ಮನದ ಆಶೆಯನ್ನು ಅರಿತು ದೈಹಿಕ ಮತ್ತು ಮಾನಸಿಕ ರೋಗಗಳಿಗೆ ಪರಿಹಾರ ನೀಡುವರು. ಇವರಿಗೆ ಕೆಲವರು ಸಾಧು ಪುರುಷರು, ಪವಾಡ ಪುರುಷರಾಗಿ ಪೂಜಿಸಿಕೊಳ್ಳುವವರೆಂದು ಜನಪದ ವೈದ್ಯಪದ್ಧತಿ ವೈದ್ಯರ ಬಗ್ಗೆ ವಿಸ್ತಾರವಾಗಿ ವಿವೇಚಿಸಿದ್ದಾರೆ.

೫) ಜನಪದ ವೈದ್ಯರ ವಿಧಿ–ವಿಧಾನಗಳು : ಜನಪದ ವೈದ್ಯರು ಯಾವ ಪದ್ಧತಿಗಳನ್ನು ಅನುಸರಿಸಿ ಮದ್ದು ನೀಡಿದರೂ ಜನಸೇವೆಯೆಂದೇ ಬಗೆದರೂ ಮದ್ದು ನೀಡಿ ಆಧುನಿಕ ವೈದ್ಯರಂತೆ ಹಣ ಗಳಿಸಿದವರಲ್ಲ. ರೋಗಿಗಳು ಕೊಟ್ಟದ್ದರಲ್ಲಿಯೇ ತೃಪ್ತಿಯಿಂದ ಬದುಕಿದವರು. ಮದ್ದು ನೀಡುವದು ದೇವರ ಸೇವೆಯೆಂದೇ ತಿಳಿದವರು. ಆದ್ದರಿಂದಲೇ ಇಂದಿಗೂ ಹಳ್ಳಿಯಲ್ಲಿ ಮನುಷ್ಯರಿಗೆ ದನಗಳಿಗೆ ಮದ್ದು ಕೊಡುವವರು ಬಡತನದಲ್ಲಿಯೇ ಬಾಳುತ್ತಿದ್ದಾರೆ ತಪ್ಪಲ ಕೊಡುವವನಿಗೆ ತಿಪ್ಪಲ ಬಹಳ ಅದರ ನಿಜಸ್ಥಿತಿಯನ್ನೇ ಚಿತ್ರಿಸುತ್ತದೆ. ಆನಪದ ವೈದ್ಯರು ಹಣದಾಶೆಗೆ ಮದ್ದು ನೀಡದಿದ್ದರೂ ಅವರು ನಡೆಸುವ ಹುಡುಕಾಟ ಮತ್ತು ಮದ್ದು ತಯಾರಿಕೆಗಾಗಿ ಮಾಡುವ ನೇಮ ವಿಆನಗಳು

---

೪ ಜನಪದ ವೈದ್ಯ ಪದ್ಧತಿ ಪು.ಸಂ. ೧೩

ಜನಪದ ವೈದ್ಯರಿಗೆ ಗಿಡ ಮೂಲಿಕೆಗಳ ಅಪಾರ ಗೌರವ ಅವುಗಳಿಂದಲೆ ಮದ್ದು ತಯಾರಿಸುವವರು. ವಾರ ತಿಥಿ ನೋಡಿ ಶುಚಿಯಾಗಿಯೇ ಹೋಗಿ ಪೂಜಿಸಿ ಗಿಡದ ಎಲೆ ಕಾಯಿ ಬೀಜಗಳನ್ನು ತರುವರು ಅಲ್ಲದೆ ಹಣ್ಣು ಬೀಜಗಳನ್ನು ಬೇಸಿಗೆಯಲ್ಲಿ ದೊರೆಯುವದಲ್ಲಿ ಅದಕ್ಕಾಗಿ ವರ್ಷಕ್ಕೆ ಬೇಕಾಗುವ ಮದ್ದನ್ನು ಸಂಗ್ರಹಿಸಿ ಕೆಡದಂತೆ ಕಾಪಾಡುವದು ಕಷ್ಟದ ಕೆಲಸವಾಗಿದೆ. ದೇವರ ಹೆಸರಿನ ಮೇಲೆ ವಾರದ ಹೆಸರು ಅಂದರೆ ರವಿವಾರ, ಶನಿವಾರ ಮುಂತಾದ ನಿಗದಿತ ದಿನಗಳಲ್ಲಿ ಮಾತ್ರ ಮದ್ದು ಕೊಡುವರು, ಮದ್ದು ನೀಡಿದ ಮೇಲೆ ತಪ್ಪದೇ ಪಥ್ಯ ಮಾಡಲು ಹೇಳುವದು, ಪಥ್ಯ ತಪ್ಪಿದರೆ ರೋಗ ಹೆಚ್ಚಾಗುವದೆಂದು ಎಚ್ಚರಿಸುವದು ಪ್ರತಿಯೊಬ್ಬ ಜನಪದ ವೈದ್ಯನ ಲಕ್ಷಣವಾಗಿದೆ. ಆದ್ದರಿಂದ ಜನಪದ ವೈದ್ಯರ ಬದುಕಿನ ಬವಣೆಯ ಬಗ್ಗೆ ಬಹಳ ಕ್ಷೇತ್ರಕಾರ್ಯದಿಂದ ನೋಡಿ ಅವರ ಧಾರಣ ಪರಿಸ್ಥಿತಿಯನ್ನು ಕಂಡು ಸಮರ್ಥವಾಗಿ ವಿವರಿಸಿದ್ದಾರೆ.

೧) ಜನರ ರೋಗಗಳು ಮತ್ತು ಮದ್ದುಗಳು : ಅಧ್ಯಾಯದಲ್ಲಿ ಪ್ರತಿಯೊಬ್ಬ ವೈದ್ಯರೂ ರೋಗ ಬರುವದು ಸ್ವಾಭಾವಿಕ ಆದರೆ ಯಾವ ರೋಗಕ್ಕೆ ಯಾವ ಮದ್ದು ಕೊಡುವಲ್ಲಿ ಭಿನ್ನತೆ ಇದೆ. ಯಾಕೆಂದರೆ ಒಂದೊಂದು ಪ್ರದೇಶದಲ್ಲಿ ಒಂದೊಂದು ಮರ ಬಳ್ಳಿಗಳು ಬೆಳೆದಿರುತ್ತವೆ. ಅವುಗಳು ಔಷಧಿಯ ಗುಣದಿಂದಲೆ ಮದ್ದು ತಯಾರಿಸಿ ಕೊಡುವರು. ಹೀಗೆ ಮದ್ದು ಕೊಡುವವರ ಮನೆತನಗಳು ಆಯಾ ಪ್ರದೇಶದಲ್ಲಿ ಪರಂಪರೆಯ ಮನೆತನಗಳಿವೆ. ರಾಜರಿಗೆ ಮದ್ದು ಕೊಡುವ ರಾಜ ವೈದ್ಯರೆಂದು ಹೆಸರಾಗಿರುವರು, ಅವರಿಗೆ ರಾಜನು ಉಂಬಳಿಯಾಗಿ ಹೊಲ ಮನೆ ಕೊಡುತ್ತಿದ್ದನೆಂದು ಅನೇಕ ಶಾಸನಗಳು ತಿಳಿಸುತ್ತವೆ. ಜನಪದ ವೈದ್ಯರು ಕೊಡುವ ಮದ್ದುಗಳು ಕೇವಲ ದೇಹದ ಹೊರಭಾಗದ ರೋಗಗಳಿಗೆ ಗಡ್ಡೆ, ಕುರುವು ಕೆಲವೊಮ್ಮೆ ಜ್ವರ ಶೀತ ಮುಂತಾದವು ಹೃದಯ ಉಂತಾದವುಕ್ಕೆ ಇವರು ಮದ್ದು ಇಲ್ಲವೆ ಶಸ್ತ್ರ ಚಿಕಿತ್ಸೆ ಮಾಡುವವರಲ್ಲಿ ಸಾಮಾನ್ಯವಾಗಿ ಮನುಷ್ಯನಿಗೆ ತಲೆಯಿಂದ ಕಾಲಿನವರೆಗೂ ದೇಹದ ರೋಗಗಳಿಗೆ ಮಾತ್ರ ಮದ್ದು ನೀಡುವರು ಪರಿಸರದಲ್ಲಿ ಸಿಗುವ ತಪ್ಪಲು ಬೀಜಗಳಿಂದ ಮದ್ದು ತಯಾರಿಸಿ ಹೆಚ್ಚಾಗಿ ತಲೆಶೂಲೆ, ಕಣ್ಣು ಬೇನೆ, ಕಿವಿಸೋರುವದು, ನೆಗಡಿ, ಕೆಮ್ಮು, ಗದ್ದದಗೌರಿ, ಎದೆಉರಿ, ಹೊಟ್ಟೆಉರಿ, ಕುರುವು, ಚೇರು, ಜಂತುಹುಳ, ವಾತ, ಮೊಳಕಾಲ ಮಂಡೆ, ಮುಳ್ಳು ಮುರಿದರೆ, ಉಗುರು ಸುತ್ತು, ಅಂಗಾಲಬೇನೆ ಮುಂತಾದ ರೋಗಗಳಿಗೆ ಔಷಧ ಕೊಟ್ಟು ಕಟ್ಟು ನಿಟ್ಟಾದ ಪಥ್ಯ ಹೇಳುವರು ಪಥ್ಯದಿಂದಲೇ ಅರ್ಧ ರೋಗಗಳು ವಾಸಿಯಾಗುವದು ವೈದ್ಯರ ಪ್ರಮುಖವಾಗಿದೆ.

೭) ದನದ ರೋಗಗಳು ಮತ್ತು ಮದ್ದುಗಳು : ಇನ್ನು ದನದ ರೋಗಗಳಾದ ಕೊಂಬು ಮುರಿದರೆ, ಮುರಿದ ಕೊಂಬಿನಲ್ಲಿ ಹುಳಬಿದ್ದನೆ, ಹೆಗಲಬಾವು, ಕುಕ್ಕಡಿ, ತಲೆಸುತ್ತು, ನಾಯಿಗುತ್ತಿಗೆ, ಕಳ್ಳುತಿಂದರೆ, ಕುಂದ, ಗುಂಡಿಗೆ ಶೂಲ, ಹೊಟ್ಟೆ ಉಬ್ಬರ, ಉಚಿಗೆ, ಮುಳ್ಳುಬಿದ್ದರೆ, ಚಪ್ಪೆರೋಗ, ಪೆಚೆಬ್ಯಾನಿ ಗಡ್ಡೆಗೆ, ನೆದರು ಗಡ್ಡೆ, ಹುಣ್ಣಿಗೆ, ಕಾಲುಬೇನೆ, ಬಾಯಿ ಸುಂಡಿ, ಹಡಮು, ಎಲುವು

ಮುರಿದರೆ, ಸೂಜಿ ನುಂಗಿದರೆ, ಹೊಟ್ಟೆಯಲ್ಲಿ ಕರು ಸತ್ತರೆ, ಮಾಸು ಬೀಳಲು, ಮೈ ಹಾಯ್ದರೆ, ಮುಳ್ಳು ಮುರಿದರೆ ಮುಂತಾದವುಗಳಿಗೆ ದನ ವೈದ್ಯರು ದನದ ರೋಗವನ್ನು ಪರೀಕ್ಷಿಸಿ ಅದಕ್ಕೆ ತಕ್ಕ ಹಾಗೆ ಮದ್ದು ನೀಡುವರು.

ಹೀಗೆ ಪ್ರೊ. ಹಿರೇಮಠರು ಜನ ಮತ್ತು ದನಗಳಿಗೆ ಜನಪದ ವೈದ್ಯರು ಯಾವ ರೋಗಕ್ಕೆ ಯಾವ ಮದ್ದು ನೀಡುವದೆಂದು ಸಮಗ್ರವಾದ ವಿವರವನ್ನು ವಿಸ್ತಾರವಾಗಿ ಪ್ರತಿಪಾದಿಸಿ ಹೇಳುವ ಜನಪದ ವೈದ್ಯ ವಿಧಾನವನ್ನು ಉಳಿಸಲು ಸಹಾಯಕವಾಗುವಂತೆ ಗ್ರಂಥ ರಚಿಸಿ ಕೃತಾರ್ಥರಾಗಿದ್ದಾರೆ.

ಉಪಸಂಹಾರದಲ್ಲಿ ಇಂದಿಗೂ ಹಳ್ಳಿಗಳಲ್ಲಿ ಜನಪದ ವೈದ್ಯರು ಜನರಿಗೂ ತಂತ್ರ ದನಗಳಿಗೆ ಮದ್ದು ನೀಡುವವರಿದ್ದಾರೆ. ಅವರ ಸೇವೆಯನ್ನು ಗುರುತಿಸಿ ಸರಕಾರ ಮತ್ತು ಸಮಾಜ ಗೌರವಿಸ ಬೇಕು ಮತ್ತು ಜನಪದ ವೈದ್ಯ ಪರಂಪರೆಯನ್ನು ಔಷಧ ವನಗಳಲ್ಲಿ ಬೆಳೆಸಿ ಮುಂದಿನ ತಲೆಮಾರಿಗೆ ಉಳಿಸಬೇಕೆಂದು ಆಗ್ರಹ ಪಡಿಸುತ್ತಾರೆ. ಪ್ರೊ ಹಿರೇಮಠ ಅಭಿಪ್ರಾಯ ನಿಜಕ್ಕೂ ಶ್ಲಾಘನೀಯವಾದದು ಯಾಕೆಂದರೆ ನಮ್ಮ ಆಧುನಿಕ ಪರಿಸರದಲ್ಲಿ ಹಲವಾರು ರೋಗಗಳಿಗೆ ಇಂದಿಗೂ ಔಷಧ ಖಚಿತವಾಗಿ ದೊರೆಯಲಾರವು ಆದರೆ ಜನಪದ ವೈದ್ಯರಲ್ಲಿ ಅಪಾರವಾದ ಔಷಧ ಜ್ಞಾನವಿದೆ, ಆದ್ದರಿಂದ ಅವರಿಂದ ಜ್ಞಾನವನ್ನು ಬಳುವಳಿಯಾಗಿ ಮುಂದಿನ ತಲೆಮಾರಿಗೆ ಕಲಿಸಲು ಜನಪದ ವೈದ್ಯರಿಗೆ ಪ್ರೋತ್ಸಾಹ ನೀಡುವದಲ್ಲದೆ ಔಷಧಿ ಸಸ್ಯಗಳ ವನಗಳನ್ನು ಬೆಳೆಸುವದು ಅವಶ್ಯವಾಗಿದೆಯೆಂದು ಹೇಳುವದರಲ್ಲಿ ಸತ್ಯಾಂಸವಿದೆ.

೩) ದೇವ ದೇವ ವನ

ಇದು ಪ್ರೊ. ಸೂಗಯ್ಯ ಹಿರೇಮಠ ಮತ್ತು ಗೆಳೆಯರಾದ ಬಿ.ಎಸ್. ಸಜ್ಜನ ಅವರೊಂದಿಗೆ ಬರೆದ ಔಷಧ ಸಸ್ಯಗಳ ಅಪೂರ್ವ ಗ್ರಂಥ. ಪ್ರೊ. ಹಿರೇಮಠ ಔಷಧಿ ಸಸ್ಯಗಳ ಮಾಹಿತಿ ಇರುವದನ್ನು ಗಮನಿಸಿದ ಬೀದರ ಜಿಲ್ಲಾ ಅರಣ್ಯಾಧಿಕಾರಿಗಳು ಆಗ ನಿರ್ಮಿಸುತ್ತಿರುವ ದೇವ ದೇವ ವನದ ಬಗ್ಗೆ ಕೃತಿ ಬರೆದುಕೊಡಲು ಕೇಳಿಕೊಂಡಾಗ ಪ್ರೊ. ಹಿರೇಮಠರು ತನಗೆ ಗೊತ್ತಿರುವ ಮಾಹಿತಿ ಸಾಕಷ್ಟಿದ್ದರೂ ತನ್ನಂದಿಗೆ ತಮ್ಮ ಮಹಾವಿದ್ಯಾಲಯದ ಸಸ್ಯ ಶಾಸ್ತ್ರದ ಅಧ್ಯಾಪಕರಾದ ಪ್ರೊ. ಬಿ.ಎಸ್. ಸಜ್ಜನ ಅವರನ್ನು ಸೇರಿಸಿಕೊಂಡು ಕೃತಿರಚಿಸಿ ಇದೊಂದು ಔಷಧ ಸಸ್ಯಗಳ ಅಥಾಂಟಿಕ್ ಕೃತಿ ಎನ್ನುವದನ್ನು ಸಾದರ ಪಡಿಸಿರುವರು.

ಬೀದರ ಚಾರಿತ್ರಿಕ ಇತಿಹಾಸ ಹೊಂದಿದ್ದು ಬೆಳೆಯುತ್ತಿರುವ ನಗರವಾಗಿದೆ. ನಗರದ ಸೌಂದರ್ಯ ಹೆಚ್ಚಿಸಲು ನಾಗರಿಕರ ಆರೋಗ್ಯ ಕಾಪಾಡುವ ದೃಷ್ಟಿಯಿಂದ ಅರಣ್ಯ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್ ಅಧಿಕಾರಿಗಳು, ಸರಕಾಂ; ಜನರು ಸಹಕಾರದೊಂದಿಗೆ 'ದೇವ ದೇವ ವನ'

ನಿರ್ಮಿಸಲಾಗಿದೆ. ಈ ಕೃತಿಯ ಪ್ರಸ್ತಾವನೆಯಲ್ಲಿ ಲೇಖಕರು ಬೀದರ ಜಿಲ್ಲೆಯ ಭೌಗೋಳಿಕ ಪರಿಸರ, ಹವಾಮಾನ ಜಿಲ್ಲೆಯ ಇತಿಹಾಸವನ್ನು ವಿಸ್ತಾರವಾಗಿ ವಿವರಿಸುತ್ತ, ಜಿಲ್ಲೆಯಲ್ಲಿ ಪ್ರಸಿದ್ಧವಾದ ಕೋಟೆ, ಪ್ರಾಚೀನವಾದ ಪಾಪನಾಶಿನಿ ದೇವಾಲಯ ನಾನಕ ಝರಾ ಇದ್ದಂತೆ ನಗರದ ಹೊರವಲಯದಲ್ಲಿ ನಿರ್ಮಿಸಿದ ದೇವ ದೇವ ವನ ಪ್ರವಾಸಿಗರ ಸುಂದರ ತಾಣವಾಗಿದೆಂದು ಹೇಳಿರುವುದು ಸತ್ಯವಾಗಿದೆ.

ಕೃತಿಯ ಪ್ರಾರಂಭದಲ್ಲಿ ದೇವ ದೇವ ವನ ಕುರಿತು ಪ್ರೊ. ಸೂಗಯ್ಯ ಹಿರೇಮಠರು ವನದಲ್ಲಿರುವ ಗಿಡ ಬಳ್ಳಿಗಳ ಬಗ್ಗೆ ಸುಂದರ ಕವನ ರಚಿಸಿ ಕೃತಿಗೆ ಹೆಚ್ಚಿನ ಶೋಭೆ ತಂದಿರುವರು.

ವನದೇಗುಲ ಅದ್ಯಾಯನದಲ್ಲಿ ವರಾಹ ಮಿಹಿರ ಬೃಹತ್ಸಂಹಿತಾ ದಲ್ಲಿಯ ಶ್ಲೋಕದ ವಿವರಣೆ ನೀಡಿ ಒಗಟ್ಟಿನ ಸಕಲ ಜೀವ ರಾಶಿಗಳಿಗೆ ಪ್ರಕೃತಿಯೇ ತಾಯಿ, ಪ್ರಕೃತಿಯ ಒಡಲಲ್ಲಿ ಹುಟ್ಟಿ, ಮಡಲಲ್ಲಿ ಬೆಳೆದ ಜೀವ ರಾಶಿಗಳೆಲ್ಲ ಆ ಮಾತೆಯ ಶಿಶುಗಳು ಮಾತೃ ಸ್ವರೂಪಿಣಿಯಾದ ಪ್ರಕೃತಿಯನ್ನು ಗೌರವದಿಂದ ರಕ್ಷಿಸಿ ಕಾಪಾಡುವದು ಮಕ್ಕಳ ಸಹಜಧರ್ಮವೆಂದು ವಿಶ್ಲೇಷಿಸಿದ್ದಾರೆ.

ಪ್ರಕೃತಿಯ ಪಂಚ ತತ್ವಗಳಿಗೆ, ಪಂಚ ಮಹಾಭೂತಗಳೆಂದು ಹೆಸರಿಸಿ ಪ್ರತಿಯೊಂದಕ್ಕೂ ಒಂದೊಂದು ದೇವತೆಯ ಸಂಕೇತ ನೀಡಿದ್ದಾರೆ.

ಪೃಥ್ವಿತ್ತತಕ್ಕೆ ಗಣಪತಿದೇವರು-ಶಮಿ ಹಾಗೂ ದೂರ್ವಾ ಸಸ್ಯ ಮೂಲಗಳು
ಜಲತತ್ತ್ವಕ್ಕೆ ಭವಾನಿದೇವತೆ – ಅಶೋಕ ಹಾಗೂ ವಿಷ್ಣುಕಾಂತ ಸಸ್ಯಗಳು
ವಯುತತ್ತ್ವಕ್ಕೆ ವಿಷ್ಣುದೇವರು-ಆಶ್ವತ್ಥ ಮತ್ತು ತುಳಸಿ ಮೂಲಗಳು
ಆಕಾಶ ತತ್ತ್ವಕ್ಕೆ ಈಶ್ವರ ದೇವರು-ಬಿಲ್ವ, ದ್ರೋಣಾ, ಪುಷ್ಪಾ ಅಥವಾ ಎಕ್ಕೆ
ತೇಜಸ್ಸು ತತ್ತ್ವಕ್ಕೆ ಸೂರ್ಯದೇವರು-ಕರವೀರ ಹಾಗೂ ಜಪಾಕುಸಮಗಳು

ಇವೆಲ್ಲವೂ ಪರಿಸರ ಮಾಲಿನ್ಯವನ್ನು ಪರಿಹರಿಸುವ ಸಸ್ಯಗಳೂ, ಇಂಥ ವನದೇಗುಲವೇ ಬೀದರಿನ ದೇವ ದೇವ ವನವೆಂದು ಕರೆದಿರುವದು ಯತೋಚಿತವಾಗಿದೆ.

ಈ ವನದಲ್ಲಿ ೧) ಬೃಹತ್ ಪಂಚವಟಿ ವನ, ೨) ಶಿವ ಪಂಚಾಯತ ವನ, ೩) ನವಗ್ರಹ ವನ, ೪) ರಾಶಿವನ, ೫) ಫಲ-ಪುಷ್ಪ ಪತ್ರಿ ವನ, ೬) ನಂದನವನ, ೭) ಅಶೋಕವನ, ೮) ಬೃಂದಾವನ ಅಥವಾ ಜಪಾನ ಮಾದರಿ ವನವೆಂದು, ವನದೇಗುಲವಾಗಿದೆ. ಇಲ್ಲಿಯ ಪ್ರತಿಯೊಂದು ವನವು ಅವುಗಳ ಮೂಲಗ್ರಂಥಗಳಲ್ಲಿ ಉಲ್ಲೇಖಗೊಂಡ ಪ್ರಕಾರವೇ ರಚಿಸಲಾಗಿದೆ.

ಮಹತ್ವವನ್ನು ಸಾರುವ ಸಂಸ್ಕೃತ ಶೋಕಗಳತ್ತ ಬರೆದು ನಿಲ್ಲಿಸಲಾಗಿರುವದು ವಿಶೇಷವಾಗಿದೆ ಆದ್ದರಿಂದ ವನದ ಮಹತ್ವ ಅರಿವಾಗುತ್ತದೆ.

೧) ಬೃಹತ್ ಪಂಚವಟಿ ವನ : ಬೃಹತ್ ಪಂಚವಟಿವನವು ಮೂಲ ವಾಲ್ಮೀಕಿ ರಚಿಸಿದ ರಾಮಾಯಣ, ಮಹಾಕಾವ್ಯದ ಅರಣ್ಯಕಾಂಡದ ೧೩ನೆಯ ಸಗರದಲ್ಲಿ 'ಪಂಚವಟಿ' ವನದ ವರ್ಣನೆ ಬರುತ್ತದೆ. ವನಕ್ಕೆ ಬಂದ ಶ್ರೀ ರಾಮಚಂದ್ರನಿಗೆ ಅಗಸ್ತ್ಯ ಋಷಿಯು ಗೋದಾವರಿ ನದಿ ಸಮೀಪದಲ್ಲಿರುವ ಪಂಚವಟಿ ವನ ವರ್ಣಿಸಿದ ಉಲ್ಲೇಖವಿದೆ.

೨) ಶಿವಪಂಚಾಯತವನ : ಶಿವ ಪಂಚಾಯತ ವನವು ಪ್ರಕೃತಿಯ ಪೃಥ್ವಿ, ಜಲ, ತೇಜ, ವಾಯು, ಆಕಾಶ, ತತ್ತ್ವಗಳನ್ನೊಳಗೊಂಡಿದೆ. ಈ ತತ್ತ್ವಗಳಿಗೆ ಗಣಪತಿ, ಅಂಬಿಕೆ, ಸೂರ್ಯ, ವಿಷ್ಣು ಶಿವ ಅಧಿಪತಿಗಳು, ಇವರಲ್ಲಿ ಶಿವಕೇಂದ್ರ ಸ್ಥಾನದಲ್ಲಿರುವದರಿಂದ ಇದಕ್ಕೆ ಶಿವ ಪಂಚಾಯತ್ ವನವೆಂದು ಹೆಸರು ಬಂದಿದೆ.

ಶಿವ ಪಂಚಯತ ವನದಲ್ಲಿ ಆಯಾ ದೇವತೆಗಳಿಗೆ ಪ್ರಿಯವಾದ ಸಸ್ಯ ಮತ್ತು ಮರಗಳ ಆಯಾ ಸಾಲಿನಲ್ಲಿ ನೆಡಲಾಗಿದೆ. ಈ ವನದ ಉಲ್ಲೇಖವು ಪುರಾಣ ಚೂಡಾಮಣಿಯಲ್ಲಿ ವಿವರಿಸಲಾಗಿದೆ. ಅದರ ಪ್ರಕಾರ ವನದಲ್ಲಿ ಮರಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಈಶ್ವರ	ಬಿಲ್ವ	ದ್ರೋಣಾ
ವಿಷ್ಣು	ಅಶ್ವತ	ತುಳಸಿ
ಸೂರ್ಯ	ಶಕವೀರ	ಶ್ವೆತಾರ್ಕ
ಗಣಪತಿ	ಖರೀಕ	ದುರ್ವಾಂ
ಅಂಬಿಕಾ	ಅಶೋಕ	ಶಂಕಪುಷ್ಪ

ಮುಂತಾದ ಮರಗಳು ತುಂಬಾ ಸುಂದರವಾಗಿವೆ.

೩) ನವಗ್ರಹ ವನ : ಮಾನವನಿಗೂ ನಿಸರ್ಗಕ್ಕೂ ಇರುವ ಅನ್ಯೋನ್ಯ ಸಂಬಂಧವಿರವಂತೆ ಮರಗಳಿಗೂ ಮತ್ತು ಗ್ರಹಗಳಾದ ಸೂರ್ಯ, ಚಂದ್ರನಿಗೂ ನಿಕಟ ಸಂಬಂಧವಿದೆ. ಇಡೀ ಜೀವಸಂಕುಲ ಒಂದನ್ನೊಂದು ಅವಲಂಬಿಸಿ ಜೀವಸಿರುವದನ್ನು ನವಗ್ರಹ ವನದಲ್ಲಿ ಕಾಣುತ್ತೇವೆ. ನವಗ್ರಹಗಳಿಗೆ ಅನುಸರಿಸಿ ಸಸ್ಯಗಳನ್ನು ಹಚ್ಚಲಾಗಿದೆ.

ಗ್ರಹಗಳು	**ವೃಕ್ಷಗಳು**
ರವಿ	ಬಿಳಿ ಎಕ್ಕಿ
ಗುರು	ಅಶ್ವತ
ಶುಕ್ರ	ಅತ್ತಿ

ಶನಿ	ಬನ್ನಿ
ಚಂದ್ರ	ಪಲಾಶ
ಬುಧ	ಅಪಮಾಗರ
ಕುಜ	ಖದೀರ
ರಾಹು	ದುರ್ವಾಂ
ಕೇತು	ದರ್ಬೆ

ಹೀಗೆ ನವಗ್ರಹ ವನ ಹೆಸರಿಗೆ ತಕ್ಕಂತೆ ಇದೆ

೪) ರಾಶಿವನ : ಮಂತ್ರ ಮಹಾವರ್ಣ ಮತ್ತು ಶಾರದಾ ತಿಲ ತಂತ್ರ ಗ್ರಂಥಗಳಲ್ಲಿ ವಿವರಿಸಿದಂತೆ, ಮೇಷ, ವೃಷಭ, ಮೊದಲಾದ ರಾಶಿಗಳಿಗೆ ಅನುಕ್ರಮವಾಗಿ ಮರಗಳನ್ನು ಹಚ್ಚಲಾಗಿದೆ.

ಮೀನ ಗುರು ವಟ	ಮೇಷ ಕುಜ ರಕ್ತ ಚಂದನ	ವೃಷಭ ಶುಕ್ರ ಅತ್ತಿ	ಮಿಥುನ ಬುಧ ಉತ್ತರಾಣಿ
ಕುಂಭ ಶನಿ ಶಮೀ			ಕರ್ಕ ಚಂದ್ರ ಮುತ್ತುಗ
ಮಕರ ಶನಿ ಬೀಟೆ			ಸಿಂಹ ರವಿ ಕರ್ಪೂರ
ಧನು ಗುರು ಅಶ್ವತ್ಥ	ವೃಶ್ಚಿಕಾ ಕುಜ ಖದಿರೆ	ತುಲಾ ಶುಕ್ರ ಬಕುಳ	ಕನ್ಯಾ ಬುಧ ಮಾವು

ಸೂರ್ಯನ ಚಲನೆಯನ್ನು ಅರಿಯುವದು ರಾಶಿವನದ ವೈಶಿಷ್ಟ್ಯವಾಗಿದೆ. ಸೂರ್ಯ ಕರ್ಕ ಸಂಕಾಂತಿ ವೃತ್ತ ಮತ್ತು ಮಕರ ಸಂಕ್ರಾಂತಿ ವೃತ್ತಗಳ ನಡುವೆ ಚಲಿಸುವನು. ಈ ಚಲನೆಯಿಂದ ಭೂಮಿಯ ಮೇಲಿನ ಯಾವುದೇ ಸ್ಥಿರ ವಸ್ತುವಿನ ನೆರಳು ಒಂದು ವರ್ಷದಲ್ಲಿ ಕ್ರಮಬದ್ಧವಾಗಿ ದಿಕ್ಕನ್ನು ಬದಲಾಯಿಸುತ್ತದೆಂದು ಅರಿಯಬಹುದು ಈ ನಿಯಮದ ಪ್ರಕಾರವೇ ವನದಲ್ಲಿ ಮರಗಳನ್ನು ನೆಡಲಾಗಿದೆ.

೫) ಫಲ–ಪುಷ್ಪ ಪತ್ರಿ ವನ : ಈ ವನದಲ್ಲಿ ಹಲವಾರು ಔಷಧ ಸಸ್ಯಗಳನ್ನು ಬೆಳೆಸಿದ್ದು, ಇವುಗಳ ಫಲ, ಪುಷ್ಪ ಪತ್ರಿಗಳು ಉಪಯುಕ್ತವಾಗಿರುವದರಿಂದ ಇದಕ್ಕೆ ಈ ಹೆಸರು ಇಡಲಾಗಿದೆ. ಇದರಲ್ಲಿ ಚಂದನ, ದಾಸವಾಳ, ಗೇರು, ಮುತ್ತುಗ, ತಾರೆ, ಅರಳಿ, ಮೆಣಸು, ರಜನಿಗಂಧ, ಕ್ಯಾದಗಿ, ಕೊಡಪತ್ರಿ, ಶತಾವರಿ, ಶಂತುವಾಳ, ಮನೋರಂಜಿನಿ, ರಾತ್ರಿರಾಣಿ, ದಾಲಚಿನ್ನಿ, ಚಿರಂಜಿ, ಅರ್ಜುನ ಪನ್ನೇರಳೆ ಮುಂತಾದ ಮರಗಳಿಂದ ವನ ಸುಂದರವಾಗಿದೆ.

೬) ನಂದನವನ : ಮಹಾಕವಿಕಾಳಿದಾಸನು ಬರೆದ ಸಂಸ್ಕೃತದ 'ಮಂಗಳಾಷ್ಟಕ' ಗ್ರಂಥದಲ್ಲಿ ನಂದನವನದ ಪ್ರಸ್ತಾಪವಿದೆ. ನಂದನವನದಲ್ಲಿ ಕಾಳಿದಾಸನು ಹೇಳಿದ ಹತ್ತು ಮರಗಳಲ್ಲದೆ ವಿವಿಧ ಜಾತಿಯ ಔಷಧ ಮರಗಳನ್ನು ಹಚ್ಚಲಾಗಿದೆ. ಶ್ರೀ ಕೃಷ್ಣನು ಈ ವನದಲ್ಲಿ ಕಳೆದನೆಂದು ಪ್ರತೀತಿ ಇದೆ.

ಅಶ್ವತ, ಜಂಬೂ, ವದ್ರ, ನಿಂಬ, ಚಂದನ, ಕದಂಬ, ಮಂದಾರ, ಚೂತ, ಕಲ್ಪದ್ರುಮ, ಸರಲಾ, ಅಲ್ಲದೆ, ಬಕುಳ, ಮಾವು, ಬೇವು, ಅಶೋಕ ಅರಳಿ, ಬೆಳವಲ ಮುಂತಾದ ಉಪಯುಕ್ತ ಮರಗಳಿಂದ ವನ ನಿಜಕ್ಕೂ ನಂದನವಾಗಿ ಕಂಗೊಳಿಸುತ್ತದೆ.

೭) ಅಶೋಕವನ : ಮಹಾಕವಿ ವಾಲ್ಮೀಕಿ ಬರೆದ ರಾಮಾಯಣದ ಸುಂದರ ಕಾಂಡದಲ್ಲಿ 'ಅಶೋಕ' ವನದ ವರ್ಣನೆ ಇದೆ. "ಈ ವನವನ್ನು ರಾವಣನು ರಾಜಧಾನಿಯಾದ ಲಂಕೆಯಲ್ಲಿ ಅನೇಕ ಫಲ–ಪುಷ್ಪ ಭರಿತವಾದ ಗಿಡ–ಮರಗಳನ್ನು ಬೆಳೆಸಿ, ಅಲ್ಲಿ ಕೃತ್ರಿಮ ಜಲಾಶಯಗಳನ್ನು ಲತಾವಟಿಕೆಗಳನ್ನು ನಿರ್ಮಿಸಿದನೆಂದೂ, ಇದರಲ್ಲಿ ತಾನು ಅಪಹರಿಸಿ ತಂದ ಸೀತೆಯನ್ನು ಇರಿಸಿದನೆಂದು ಹೇಳಲಾಗಿದೆ"[೧].

ಅಶೋಕ ವನದಲ್ಲಿ ರಾವಣನು ೩೮ ವಿವಿಧ ಬಗೆಯ ಔಷಧೀಯ ಮರಗಳನ್ನು ಬೆಳೆಸಿದ್ದನೆಂದು ಶ್ರೀ ಭೋಜನಿರಚಿತ, 'ಚಂಪುರಾಮಾಯಣದಲ್ಲಿ' ವಿವರಿಸಲಾಗಿದೆ. ಮೇಲಿನ ೩೮ ಮರಗಳಲ್ಲಿದೆ ದೇವ ದೇವ ವನದಲ್ಲಿ ಇನ್ನು ಹೆಚ್ಚಿನ ಮರಗಳನ್ನು ಬೆಳೆಸಿದ್ದನ್ನು ನೋಡಬಹುದಾಗಿದೆ.

ಅಶೋಕ, ಚಂಚಕ, ಕಪಿತ್ಥ, ಪನಸ, ಸರಲ, ಅಮಲಕ, ಉದ್ಧಾಲಕ, ಮಾಕಂದ, ತಾಲ, ಅಶ್ವತ್ಥ, ಕುಂದ, ಪುನ್ನಾಗ ವೇತಸ, ಕಕ್ಕೋಲ, ಪಲಾಶ ನಾಗಕೇಶರ, ಅಂಕೋಲ, ಕದರು, ಬಕುಲ,

---

೧. ದೇವ ದೇವ ವನ ಪು.ಸಂ. ೧೫

ಕೇತಕಿ, ಪ್ರಿಯಾಲು, ಚಾಂಪೆಯ, ಪಾತಿಲಿ, ಸಾಲ, ಶೀಶುಫ, ತಮಾಲ, ಆಮ್ರ, ಲಿಕುಚ, ಲವಂಗ, ಔದುಂಬರ, ಮಜುಲ, ಕರುವಕ, ರಸಾಲ, ಕರವೀರ, ಮರುವಕ, ಚಂದನ, ಕತಮಾಲ, ತಿಲಕ, ಕರ್ಣಿಕಾರ ಕುಟುಜ, ವೇತಸ ಮುಂತಾದ ಮರಗಳು ಹಚ್ಚಿರುವದರಿಂದ, ದೇವ ದೇವ ವನ ಔಷಧ ಸಸ್ಯಗಳ ಸಮೃದ್ಧ ವನವಾಗಿದೆಂದು ಹೇಳಬಹುದಾಗಿದಲ್ಲದೆ, ಹೋಗಿ ನೋಡುವವರಿಗೆ ಮರಗಳ ಮತ್ತು ವನದ ಬಗ್ಗೆ ತಿಳಿಯಲು ಹಿರೇಮಠರು ಬರೆದ ಕೃತಿಯು ಉಪಯುಕ್ತವೆಂಬುದನ್ನು ಓದುಗರು ಅರಿಯಬಹುದಾಗಿದೆ.

೮) **ಬೃಂದಾವನ ಅಥವಾ ಜಪಾನ ಮಾದರಿ ವನ** : ಇದು ಆಧುನಿಕ ರೀತಿಯಲ್ಲಿ ನಿರ್ಮಿಸಿರುವದರಿಂದ ಜಪಾನ ಮಾದರಿ ವನವೆಂದು ಹೆಸರಿಸಲಾಗಿದೆ, ಹರಿಯುವ ಕಿರು ತೊರೆಗೆ ನಡುವೆ ಚಿಕ್ಕ ಸೇತುವೆ ಕಟ್ಟಿ ಅದರ ಎದುರು ಬಲದಲ್ಲಿ ನೈಸರ್ಗಿಕ ಕಿರುಬೆಟ್ಟ ಗುಡ್ಡವನ, ನಿರ್ಮಿಸಿರುವದರಿಂದ ವನ ಸುಂದರವಾಗಿ ಕಾಣುತ್ತದೆ.

ಸುತ್ತಲು ಹಚ್ಚಿದ ವಿವಿಧ ಹೂಬಳ್ಳಿಗಳಿದ್ದು ಅರಳಿದ ಹೂಗಳಿಂದ ಮಕರಂದ ಸೂಸಿ ಬರುತ್ತದೆ. ನಡುವೆ ಚಿಮ್ಮುವ ಬಣ್ಣದ ಕಾರಂಜಿಯ ತುಂತುರು ಹನಿಗಳು ಕಾಮನ ಬಿಲ್ಲಿನ ಕಮಾನು ಕಟ್ಟಿ ನೋಟಕರ ಕಣ್ಣಿಗೆ ಹಬ್ಬವನ್ನುಂಟು ಮಾಡುವಂತಿದೆ. ರಾತ್ರಿ ಬೆಳಕು ಬೀರುವ ಲೈಟುಗಳಿಂದ ವನದ ಸೌಂದರ್ಯ ಹೆಚ್ಚುತ್ತದೆ. ಬೆಳದಿಂಗಳಲ್ಲಿ ಇಡೀ ಉದ್ಯಾನವನ ಬೃಂದಾವನದಂತೆ ಕಂಗೊಳಿಸುತ್ತದೆ.

ಅಲ್ಲಲ್ಲಿ ಆಯಾ ಮರಗಳಿಗೆ ಸಂಬಂಧಿಸಿದಂತೆ ಪ್ರಾಚೀನ ಗ್ರಂಥ, ಪುರಾಣ ಕಾವ್ಯಗಳಲ್ಲಿ ಬಂದ ವಿವರಣೆ ಶ್ಲೋಕಗಳನ್ನು ಆಧಾರವಾಗಿ ನೀಡಿದಲ್ಲದೆ. ಅದರ ಸರಳವಾದ ವಿವರಣೆನ್ನು ನೀಡಿರುವದರಿಂದ ಜನಸಾಮಾನ್ಯರಿಗೂ ಅರಿಯಲು ಸಾಧ್ಯವಾಗಿದೆ.

ದೇವ ದೇವ ವನ ಕೃತಿಯಲ್ಲಿ ಮರಗಳು ಮತ್ತು ಉಪಯುಕ್ತ ಮರಬಳ್ಳಿಗಳ ವರ್ಣ ರಂಜಿತ ಚಿತ್ರಗಳು ಕೃತಿಯ ಹಿರಿಮೆ ಮತ್ತು ಸೌಂದರ್ಯವನ್ನು ಹೆಚ್ಚಿಸಿವೆ.

ಕೃತಿಯ ಬೆನ್ನುಡಿಯಲ್ಲಿ ಗುಲಬರ್ಗಾ ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಮನಾತಿ ಶ್ರೀಧರ ಐ.ಎ.ಎಫ್. ಅವರು "ಅಪೂರ್ವ ಔಷಧ ಸಸ್ಯಗಳಿಂದ ಕೂಡಿದ ವನ ದೇಗುಲ ಎಲ್ಲ ವಯಸ್ಸಿನವರಿಗೂ ಆಕರ್ಷಿಸುವ ದ್ಯಾನ-ಜ್ಞಾನ-ವಿಜ್ಞಾನದ ಸಂಗಮವೇ ದೇವ ದೇವ ವನ.

ಇಂಥ ವನದ ಮಹತ್ವ ಮತ್ತು ಉಪಯೋಗ ಕುರಿತು ಪರಿಚಯಾತ್ಮಕ ಕೃತಿ ಬರೆದು ಕೊಟ್ಟ ಪ್ರೊ. ಸೂಗಯ್ಯ ಹಿರೇಮಠರು ಚಾರಿತ್ರಿಕ ಇತಿಹಾಸದೊಂದಿಗೆ, ಬಹುಪಯುಕ್ತ ಕೃತಿಯನ್ನು ಅರ್ಥಪೂರ್ಣವಾಗಿ ಬರೆದು ದೇವ ದೇವ ವನದ ಮಹತ್ವವನ್ನು ಹೆಚ್ಚಿಸಿದಕ್ಕಾಗಿ ಅವರನ್ನು ಹೃದಯ ತುಂಬಿ ಅಭಿನಂದಿಸಿರುವುದು''[೨] ತುಂಬಾ ಅರ್ಥಪೂರ್ಣ ಮತ್ತು ಸಮಂಜಸವಾಗಿದೆ.

೪) ಜಾನಪದ ಸಂಸ್ಕೃತಿ :

'ಜಾನಪದ ಸಂಸ್ಕೃತಿ' ಕೃತಿಯು ಪ್ರೊ. ಸೂಗಯ್ಯ ಹಿರೇಮಠರು ಬರೆದ ಮಹತ್ವದ ಕೃತಿ. ಜನಪದ ಸಾಹಿತ್ಯದ ಸಂಗ್ರಹದ ಜೊತೆಗೆ ವೈದ್ಯಕೋಶಕ್ಕಾಗಿ ಅನೇಕ ಊರುಗಳನ್ನು ಸುತ್ತಿ, ಜನಪದ ಕಲೆ, ಸಾಹಿತ್ಯವಲ್ಲದೆ ವೈದ್ಯಕೀಯ ಪದ್ಧತಿ ಕುರಿತು ಮಾಹಿತಿ ಸಂಗ್ರಹಿಸಿದ ಪ್ರತಿಭಾವಂತರು, ಜನಪದ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಅತ್ಯಂತ ಆಳವಾಗಿ ಅಭ್ಯಾಸ ಮಾಡಿದವರು. ಜನಪದ ಸಾಹಿತ್ಯ ಸಂಗ್ರಹದ ಜೊತೆಗೆ, ಮನ ಆಕರ್ಷಿಸಿದ ವಿಷಯಗಳ ಕುರಿತು ಬರೆದ ಅವರ ಲೇಖನಗಳು ಹಲವಾರು ಸಂಚಿಕೆ ಹಾಗೂ ಅಭಿನಂದನ ಗ್ರಂಥಗಳಲ್ಲಿಯೂ ಪ್ರಕಟವಾಗಿವೆ.

ಈ ಕೃತಿಯಲ್ಲಿ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಲೇಖನಗಳು ಹೆಚ್ಚಾಗಿರವದರಿಂದ ಜಾನಪದ ಸಂಸ್ಕೃತಿ ಎಂದು ಹೆಸರಿಸಿರವದು ಔಚಿತ್ಯಪೂರ್ಣವೆನಿಸುತ್ತದೆ.

ಜಾನಪದ ಸಂಸ್ಕೃತಿಯಲ್ಲಿ ಸುಮಾರು ೧೩ ಲೇಖನಗಳಿದ್ದು ವಿಷಯ ವೈವಿದ್ಯದಿಂದ ಕೂಡಿವೆ. ವಿಷಯಕ್ಕೆ ಸಂಬಂದಿಸಿದಂತೆ ಹೆಚ್ಚಾಗಿ ಭಾಷೆ ಸಾಹಿತ್ಯ, ಕಲೆ ಜನಪದ ವೈದ್ಯ ಮತ್ತು ಸ್ವಾತಂತ್ರ್ಯ ಹಾಗೂ ಜನಪದ ವಿದ್ಯಾವಂತರ ಕುರಿತು ಲೇಖನಗಳಿವೆ.

ಜನಪದ ಜಿದ್ದುಗಳು ಲೇಖನವು ಹಿರೇಮಠರು ೧೯೮೧ರಲ್ಲಿ ಕಲಬುರ್ಗಿಯಲ್ಲಿ ನಡೆದ ಕರ್ನಾಟಕ ಜಾನಪದ ಕಲಾ ಮಹೋತ್ಸವದ ಅಂಗವಾಗಿ ಪ್ರಕಟಿಸಿದ ಕಲಬುರ್ಗಿ ಮುನ್ನಡೆ ಸ್ಮರ ಸಂಚಿಕೆಗೆ ಬರೆದ ಲೇಖನ ಈ ಲೇಖನದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಬಳಕೆಯಲ್ಲಿರು ಜಿದ್ದುಗಳು ಕುರಿತು ಸುದೀರ್ಘವಾಗಿ ಚರ್ಚಿಸಿದ್ದರೆ,

''ವ್ಯಕ್ತಿಯನ್ನು ಸ್ಪರ್ದೆಯ ಬದ್ಧತೆಎ ಗುರಿಮಾಡುವ ಮಾನಸಿಕ ಕ್ರಿಯೆಗೆ ಜಿದ್ದು, ಎಂದು ಕರೆಯಕುವರು. ಜಿದ್ದು ಪದಕ್ಕೆ ಬದ್ಧಮಾತು ಪೈಪೋಟಿ, ಸ್ಪರ್ಧೆ ಮೊದಲಾದ ಅರ್ಥಗಳಿವೆ.

---

೨. ದೇವ ದೇವ ವನ ಪು.ಸಂ. ೯೪

ಇಂಗ್ಲೀಷಿನಲ್ಲಿ Betting or Gambling ಎನ್ನುವ ಪದಗಳರ್ಥವೂ ಕನ್ನಡ ಪದಗಳಿಗೆ ಸಮಾನವಾಗಿದೆಂದು''[೧] ಜಿದ್ದುವಿನ ವಿವರಣೆಗಳನ್ನು ನೀಡಿರುವರು.

ಜಿದ್ದು ಕಟ್ಟುವದು ಪ್ರಪಂಚದ ಜನಾಂಗಳಲ್ಲಿ, ಅದರಲ್ಲೂ ಕಾರ್ಮಿಕ ಪರಿಸರದಲ್ಲಿ ಬೆಳೆದು ಬಂದಿದೆಂದು ಸಮಾಜ ಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿರುವರು. ದುಡಿಮೆಯಲ್ಲಿ ಬಳಲಿದ ಹೃದಯಕ್ಕೆ ಜಿದ್ದು ಬಿಡುವಿನಲ್ಲಿ ಖುಷಿ ಕೊಡುತ್ತದಲ್ಲದೆ ಮುಂದಿನ ಕಾರ್ಯಕ್ಕೆ ಪ್ರೇರಕ ಶಕ್ತಿ ನೀಡುತ್ತದೆ. ಆದ್ದರಿಂದ ಜಿದ್ದುಗಳು ಜನಪದದ ಜೀವನದಲ್ಲಿ ಹಾಸು ಹೊಕ್ಕಾಗಿವೆ. ಹೊಲ-ಮನೆಯಲ್ಲಿ ಕೆಲಸ ಮಾಡುವಾಗ ಹಳ್ಳಿಯ ಜನರು ಸಹಜವಾಗಿಯೇ ಜಿದ್ದು ಕಟ್ಟುವರು, ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳಿಗೆ ಪ್ರಾಮುಖ್ಯತೆ ಇದೆ. ನಾಗರ ಅಮವಾಸೆಯಲ್ಲಿ ಜನರ ತಾವಾಗಿಯೇ ಜಿದ್ದು ಕಟ್ಟಿ ಆಡುವರು. ಹುಣ್ಣಿಯ ದಿನದಲ್ಲಿಯು ಅನೇಕ ಜಿದ್ದು ಕಟ್ಟಿ ಕೆಲಸ ಮಾಡುವರು. ಇನ್ನೂ ನಮ್ಮ ದೇಶದ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದಲ್ಲಿಯೂ, ಸ್ವಯಂವರದಲ್ಲಿ ಬಿಲ್ಲು ಮುರಿಯುವದು, ಮತ್ತು ಬೇಧಿಸುವದು ಅಂದಿನ ಜನಾಂಗದ ಶೌರ್ಯ, ಸಾಹಸದ ಜಿದ್ದು ಅಥವಾ ಸ್ಪರ್ಧೆಗಳಾಗಿವೆಂದು ಆಧಾರ ಸಹಿತ ಉದಾಹರಿಸಿದ್ದಾರೆ.

೧) ಮನೋರಂಜನೆ ಜಿದ್ದುಗಳು :

ಹಳ್ಳಿಯ ಜನರು ಕೆಲಸವಿಲ್ಲ ಬಿಡುವಿನ ವೇಳೆಯಲ್ಲಿ ಅಗಸಿಯ ಕಟ್ಟೆಯಲ್ಲಿ ಕುಳಿತು ಮಾತಿಗೆ ಮಾತು ಬೆಳೆದು ಜಿದ್ದು ಕಟ್ಟಿ ಹುಲಿಕಟ್ಟಿ, ಚಕಾರ ಕಟ್ಟೆ, ಬಗರಿ ಆಡಿಸುವದು, ಭಾರ ಎತ್ತುವದು, ಕೊಡ, ಗುಂದು, ಜೋಳದ ಚೀಲ, ಬಂಡೆಗಲ್ಲು, ಕೋಳಿ ಪಂದ್ಯ ಮುಂತಾದ ಜಿದ್ದುಗಳನ್ನು ಆಡುವರು ಇವೆಲ್ಲ ಬಿಡುವಿನ ಸಮಯದಲ್ಲಿ ಆಡುವ ಮನೋರಂಜನೆಯ ಜಿದ್ದುಗಳು ಇಂಥ ಜಿದ್ದುಗಳಲ್ಲಿ ಗುಂಪುಗಳಾಗಿಯೇ ಜನರು ಪಾಲು ಗೊಳ್ಳುವರು.

೨) ಧಾರ್ಮಿಕ ಪರಿಸರದಲ್ಲಿ ಬೆಳೆದು ಬಂದ ಜಿದ್ದುಗಳು

ಹಳ್ಳಿಪಟ್ಟಣದಲ್ಲಿ ನಾಗರ ಅಮವಾಸಿಯಲ್ಲಿ ಆಡುವ ಜಿದ್ದುಗಳು ಆ ಹಬ್ಬದ ಹಿನ್ನಲೆಯಲ್ಲಿಯೇ ಆಡಲಾಗುವದು ಹಬ್ಬಕ್ಕೂ-ಜಿದ್ದಗೂ ಪರಸ್ಪರ ಸಂಬಂಧ ಕಲ್ಪಸಿರುವದನ್ನು ಕಾಣುತ್ತೇವೆ. ಧರ್ಮದ ಹಿನ್ನಲೆಯಲ್ಲೇ ಆಚರಿಸುವ ಸಂಪ್ರದಾಯದ ಈ ಹಬ್ಬವಾದರೂ, ಬಹುದಿನಗಳಿಂದಲೇ ನಾಗರ ಅಮವಾಸೆ, ದೀಪಾವಳಿಯಲ್ಲಿ ಜಿದ್ದುಗಳನ್ನು ಕಟ್ಟಿ ಆಡುವದು ಸಾಮಾನ್ಯವಾಗಿದೆ.

---

೧. ಜನಪದ ಸಂಸ್ಕೃತಿ ಪು.ಸಂ. ೨

೩) ಸುಗ್ಗಿ ದಿನದ ಜಿದ್ದುಗಳು

ಹಳ್ಳಿಯ ರೈತರು ಹೊಲದಲ್ಲಿ ಕೆಲಸಮಾಡುವಾಗ ಹಲವಾರು ಜಿದ್ದು ಕಟ್ಟಿ ಹೊಲದ ಕೆಲಸಗಳಾದ ಬೆಳೆ ಕೊಯ್ಯುವದು, ಗೂಡು ಮುರಿವದು, ಎತ್ತಿನ ಬಂಡಿ ಎತ್ತುವದು, ಹತ್ತಿ ಬಿಡಿಸುವದು, ರಾಶಿ ಮಾಡುವದು ಮುಂತಾದವುಗಳನ್ನು ನೋಡಬಹುದು. ಒಬ್ಬನೆ ವ್ಯಕ್ತಿ ಜಿದು ಕಟ್ಟಿ ಗೆದಿಯುವುದು ಶಕ್ತಿ ಪ್ರಧಾನಕ್ಕೆ ಸಾಕ್ಷಿಯಾಗಿದೆ.

೪) ಸಾಹಸ ಪ್ರದರ್ಶನದ ಜಿದ್ದುಗಳು

ಸಾಹಸ ಪ್ರದರ್ಶನದ ಜಿದ್ದುಗಳಿಗೆ ಬಹಳ ಧೈರ್ಯ ಬೇಕಾಗುತ್ತದೆ. ಧರ್ಯ ವಿರದಿದ್ದರೆ ಇಂಥ ಜಿದ್ದು ಗೆದಯಲಾಗದು. ಅಮವಾಸೆ ರಾತ್ರಿ ಗಿಡವನ್ನು ಮುಟ್ಟಿ ಬರುವದು, ದುರ್ಬಲ ಹೃದಯದವರು ಇಂಥ ಜಿದ್ದುಗಳಲ್ಲಿ ಭಾಗವಹಿಸದರೆ ಅನಾಹುತ ಸಂಭವಿಸುತ್ತದೆಂದು ಪ್ರೊ. ಹಿರೇಮಠರು ಹೇಳಿರುವದು ಸಮಂಜಸವಾಗಿದೆ.

೫) ಬುದ್ಧಿವಂತಿಕೆ ಜಿದ್ದುಗಳು

ಕೇವಲ ಬುದ್ಧಿವಂತಿಕೆಯಿಂದಲೇ ಜಿದ್ದು ಗೆದೆಯಲು ಕಟ್ಟಿದವರಲ್ಲಿ ಮಾತಿನ ಚಮತ್ಕಾರದ ಅರ್ಥ ತಿಳಿಯುವ ಸಾಮರ್ಥ್ಯ ಇರುವದು ಅಗತ್ಯವಿದೆ. ಹೊತ್ತ ಮುಳುಗುವದರೊಳಗೆ ಊಟ ಮಾಡುವದು ಎನ್ನುವ ಜಿದ್ದುವಿನಲ್ಲಿ ಮಾತಿನ ಶ್ಲೇಷಾರ್ಥವಿದೆ. ಹೊತ್ತು ಮುಳುಗುವದರೊಳಗೆ ಎಂದರೆ ಸೂರ್ಯ ಮುಳುಗುವದೆಂದು ಅರ್ಥವಾಗುವದು ಆದರೆ ಅನ್ನ, ಹೊತ್ತಿದ ರೊಟ್ಟಿಯನ್ನು ನೀರಿನಲ್ಲಿ ಹಾಕಿ ಅದು ನೀರಿನಲ್ಲಿ ಮುಳುಗುವದರ ಒಳಗಾಗಿ ಊಟ ಮಾಡಬೇಕೆಂದು ಹೇಳಿದಾಗ, ಜಿದ್ದಿನ ಅರ್ಥ ತಿಳಿದವರಾದರೆ ಕಟ್ಟಿದವರಿಗೆ ಸೋಲುವಾಗುವದು ಕಂಡಿತ. ಇದರಂತೆಯೇ ತಲೆಯಲ್ಲಿ ಕೂದಲು ಇಲದಲ್ದಂತೆ ಮಾಡುವದು, ಮಾಡದಲ್ಲಿ ವಾಸ್ತ್ರ ಹಾಕಿಕೊಡುವದು ಮುಂತದವು ಶ್ಲೇಷಾರ್ಥದ ಜಿದ್ದುಗಳಾಗಿವೆ.

ಉಪಜೀವನದ ಕಲೆಗಳು

ಕಲೆಗಳು ಮೂಲಕವೇ ಜೀವನ ಸಾಗಿಸುವದರಿಂದ ಇವುಗಳಿಗೆ ಉಪಜೀವನದ ಕಲೆಗಳೆಂದು ಹೆಸರಿಸಿ, ಇವುಗಳಲ್ಲಿ ಸಾರುವ ಅಯ್ಯನವರು, ಗೊಂದಲಿಗರು, ಬುಡ ಬುಡಕಿಯವರು, ವೇಷಗಾರರು, ಸುಡಗಾಡು ಸಿದ್ಧರು, ಬಾಳ ಸಂತೋಷರು, ಹೆಳವರು, ಇವರೆಲ್ಲ ಕಲೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡು ಜೀವನ ಸಗಿಸುವವರು. ಪ್ರತಿಯೊಂದು ಕಲೆಯ ವಿವರವಾದ ಹಿನ್ನೆಲೆಯೊಂದಿಗೆ ವಿಶ್ಲೇಷಿಸಿದಲ್ಲದೆ ಜನಪದ ಕಲಾಗಾರರು ದೇಶದ ಸಂಸ್ಕೃತಿಕ ಬದುಕಿನ ಸಂಪತ್ತು ಕಲಾವಿದರನ್ನು ಉಳಿಸಿದರೆ ಕಲೆಯು ಉಳಿಯುವದೆಂದು ಎಚ್ಚರಿಕೆ ನೀಡಿರುವರು.

ಶಹಪೂರ ತಾಲೂಕಿನ ಕಲೆ ಮತ್ತು ಕಲಾವಿದರು ಲೇಖನದಲ್ಲಿ, ಬಯಲಾಟದ ಕಲಾವಿದರು, ಹಲಗೆ ಬಾರಿಸುವವರು, ಪುರವಂತರೂ, ಡೊಳ್ಳಿನ ಮೇಳದವರು, ಜನಪದ ಕಲೆ, ಹಾಡು ಹೇಳುವವರು, ಚಿತ್ರಕಾರರೂ, ಸಂಗೀತಗಾರರು, ಕುಸ್ತಿಪಟುಗಳು ಮುಂತಾದ ಪ್ರಮುಖರನ್ನು ಕುರಿತು ಕಲಾವಿದರ ಜೀವನ ಹಾಗೂ ಕಲೆಯ ಪ್ರಾಮುಖ್ಯತೆಯನ್ನು ಕುರಿತು ಬರೆದು ಕಲೆ ಮತ್ತು ಕಲೆಗಾರರನ್ನು ಕುರಿತು ೩ ಲೇಖನದಲ್ಲಿ ಸಾಹಿತ್ಯಿಕವಾಗಿ ಜೀವಂತಗೊಳಿಸಿರುವದಲ್ಲದೆ ಶಹಾಪೂರ ತಾಲೂಕಿನ ಭಾಷೆಯ ವೈಶಿಷ್ಟತೆಯನ್ನು ಗುರುತಿಸಿರುವರು.

ಜನಪದ ವೈದ್ಯ ಪದ್ಧತಿ ಮತ್ತು ಶಹಾಪೂರ ತಾಲೂಕಿನ ಜನಪದ ವೈದ್ಯರು, ಲೇಖನಗಳಲ್ಲಿ ಆದಿಮಾನವನು ಪ್ರಾಣಿಗಳೀಂದ ದೇಹ ರಕ್ಷಿಸಿಕೊಳ್ಳಲು ಚೂಪಾದ ಕಲ್ಲುಗಳನ್ನು ಆಯುಧವಾಗಿ ಬಳಸಿದನು. ಹೋರಾಟದಲ್ಲಾದ ಗಾಯಗಳಿಗೆ ತಾನೆ ಕಂಡುಹಿಡಿದ ಮದ್ದುಗಳನ್ನು ಬಳಸಿ ಅದರಿಂದ ಗಾಯಗುಣವಾಗುವದು ಕಂಡು ಪ್ರಾಣಿಗಳಿಗೂ ಮದ್ದು ನೀಡಿ ಜೀವ ಉಳಿಸಿದನು. ಹೀಗೆ ಜನಪದರು ತಾವು ಕಂಡು ಹಿಡಿದ ಮದ್ದಿನಿಂದಲೇ ವೈದ್ಯರೆನಿಸಿಕೊಂಡರು. ವೈದ್ಯರಿಗೆ ಸಮಾಜದಲ್ಲಿ ಸಿಗುವ ಗೌರವದಿಂದ ತಮ್ಮ ವಿದ್ಯೆಯನ್ನು ಯಾರಿಗೂ ಕಲಿಸದೆ ಜನಪದ ಔಷದ ಸಸ್ಯಗಳ ಬಗ್ಗೆ ರಹಸ್ಯವಾಗಿವಿರುವದರಿಂದಲೇ ಜನಪದ ವೈದ್ಯ ಪದ್ಧತಿ ಅಳಿಯುತ್ತೆಂದು ಸೂಚಿಸಿರುವರು.

ಜನಪದ ಹಾಡಿನಲ್ಲಿ ಸ್ವತಂತ್ರ ಚಳುವಳಿ

ಲೇಖನದಲ್ಲಿ "ಭಾರತದ ಸ್ವತಂತ್ರ್ಯ ಸಂಗ್ರಾಮವನ್ನು ವಿವರಿಸುವ ಅನೇಕರು ಬರೆದ ಗ್ರಂಥಗಳು ದೊರೆಯುತ್ತಿವೆ. ಆದರೆ ಅವುಗಳಲ್ಲಿ ನಿಜವಾದ ಹೋರಾಟದ ಪೂರ್ಣ ಚಿತ್ರವಿರದೆ ಬರಹಗಾರನಿಗೆ ಬೇಕಾದ್ದು ಮಾತ್ರ ಚಿತ್ರಿಸುತ್ತವೆ"[೨]. ಆದರೆ ಜನಪದ ಹಾಡಿನಲ್ಲಿ ಜನಪದರು ನೇರವಾಗಿ ಹೋರಾಟದಲ್ಲಿ ಭಾಗವಹಿಸಿದ್ದನ್ನು. ಚಿತ್ರಸುತ್ತಾರೆ ಆದ್ದರಿಂದ ಜನಪದ ಹಾಡಿನಲ್ಲಿ ಪುಸ್ತಕದ ಚರಿತ್ರೆಗಿಂತಲೂ ವಾಸ್ತವಿಕ ಸತ್ಯವು ಹೆಚ್ಚಿರುತ್ತದೆ.

ಭಾರತ ಸ್ವತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ಜನಪದ ಕವಿಗಳು ಅಂದಿನ ಬ್ರಿಟಿಷರ ದಬ್ಬಾಳಿಕೆಯನ್ನು ವಿರೋಧಿಸಿ ಹಾಡು ರಚಿಸಿದ್ದಾರೆ.

ಸ್ವಾತಂತ್ರ್ಯದ ಹೋರಾಟಗಾರರಿಗೆ ಕಿತ್ತೂರ ಚೆನ್ನಮ್ಮ, ಲಕ್ಷ್ಮಿ ಬಾಯಿ ಸಂಗೋಳ್ಳಿ ರಾಯಣ್ಣರು ದೇಶಕ್ಕಾಗಿ ಹೋರಾಟ ಮಾಡಿ ವೀರರಾದಂತೆ, ನೀವು ಹೋರಾಡಿರೆಂದು ಹಾಡಿನ ಮೂಲಕ ಸ್ಪೂರ್ತಿ

---

೨. ಜನಪದ ಸಂಸ್ಕೃತಿ ಪು.ಸಂ. ೩೪

ನೀಡಿರುವರು, ಲಾವಣಿ, ರಿವಾಯತ ಹಾಡಿನಲ್ಲಿ ಅಂದಿನ ನೇತಾರರಾದ ಗಾಂಧೀಜಿ, ನೆಹರು ಪಟೇಲರ ಬಗ್ಗೆ ಅಭಿಮಾನದಿಂದ ಹಾಡು ಕಟ್ಟಿರುವದನ್ನು ಕಾಣುತ್ತೇವೆ.

ಭಾರತ ಸ್ವಾತಂತ್ರ್ಯವಾದರೂ ಹೈದ್ರಾಬಾದ ಕರ್ನಾಟಕ ವಿಮೋಚನೆ ಯಾಗಲಿಲ್ಲ ಯಾಕೆಂದರೆ ಹೈದ್ರಾಬದ ನಿಜಾಮನು ಸ್ವತಂತ್ರ್ಯ ಭಾರತದ ಒಕ್ಕೂಟಕ್ಕೆ ಸೇರದೆ, ತನ್ನದೇ ರಾಜ್ಯ ಸ್ಥಾಪಿಸಲು ರಜಕಾರರು ಪಡೆ ಕಟ್ಟಿದನು. ರಜಾಕಾರರು ಹಿಂದುಗಳ ಮೇಲೆ ಹಲ್ಲೆ, ಅತ್ಯಾಚಾರ ಮತ್ತು ಲೂಟಿ ಮಾಡಿದರು. ೧೯೪೭ ಅಗಸ್ಟ ೧೫ರಂದು ಭಾರತ ಸ್ವಾತಂತ್ರ್ಯವಾದರೂ ಹೈದ್ರಾಬಾದ ಕರ್ನಾಟಕದಲ್ಲಿ ಧ್ವಜ ಹಾರಲಿಲ್ಲ. ಆಗ ಈ ಭಾಗದ ಜನರ ನಿಜಾಮನ ವಿರುದ್ಧ ಹೋರಾಟ ಮಾಡಿದರಿಂದ. ಹೈದ್ರಾಬಾದ ಕರ್ನಾಟಕ ನಿಜಾಮನಿಂದ ವಮೋಚನೆ ಪಡೆಯಿತು. ಆಗ ರಜಾಕಾರರ ಮಾಡಿದ ಧಾರುಣ ಘಟನೆಗಳ ಕುರಿತು ಅನೇಕರು ಜನಪದ ಹಾಡುಗಳಲ್ಲಿ ಚಿತ್ರಿಸಿದ್ದಾರೆ. ಅವುಗಳನ್ನು ಓದಿದರೆ ಇಂದಿಗೂ ರೋಮಾಂಚನೆ ಆಗುತ್ತದೆ. ಅಂಥ ಹಾಡುಗಳನ್ನು ಸಂಗ್ರಹಿಸಿ ಅಂದಿನ ಹೋರಾಟದ ಸ್ವರೂಪ ಮತ್ತು ಜನರ ನೋವು ನಲಿವನ್ನು ಪ್ರೊ. ಹಿರೇಮಠರು ಲೇಖನದಲ್ಲಿ ವಿವರಿಸಿ ಇತಿಹಾಸದ ದಾಖಲೆಯನ್ನಾಗಿ ಮಾಡಿದ್ದಾರೆ.

ಜನಪದ ಹಾಡಿನಲ್ಲಿ ಬರಗಾಲ

ಈ ಲೇಖನದಲ್ಲಿ ಹೈದ್ರಾಬಾದ ಕರ್ನಾಟಕದಲ್ಲಿ ಬಿದ್ದ ಬರಗಾಲ ಪರಿಸ್ಥಿತಿಯನ್ನು ಜನಪದ ಹಾಡಿನಲ್ಲಿ ಹೇಗೆ ಚಿತ್ರಿಸಲಾಗಿದೆ ಎಂಬುದನ್ನು ವಿವರಿಸಿದ್ದಾರೆ. ರೈತರಿಗೆ ತಾವು ಉತ್ತಿ ಬಿತ್ತಿ ಬೆಳೆಯುವ ಮಣ್ಣು ಪವಿತ್ರವಾದದ್ದು. ಮಣ್ಣಿನಲ್ಲಿ ಬಂಗಾರದ ಬೆಳೆ ಬೆಳೆಯಲು ಮಳೆ ಬೇಕು ಅದಕ್ಕಾಗಿ ಮಳೆರಾಜನನ್ನು ರಾಜರೊಳರಾಜನೆಂದು ಮನತುಂಬಿ ಹಾಡಿರುವರು.

ಪ್ರೊ. ಹಿರೇಮಠರು ಈ ಭಾಗದಲ್ಲಿ ೧೯೩೨ರಲ್ಲಿ ಬಂದ ಭೀಕರ ಬರ ಮತ್ತು ೧೯೭೨ರಲ್ಲಿ ಬರ ಕುರಿತು ಚರ್ಚಿಸಿರುವರು. ೧೯೩೨ರಲ್ಲಿ ಡೋಗಿಬರ ಕುರಿತು ಶ್ರೀ ರಾಮಯ್ಯನವರು ಬರೆದ ಲಾವಣಿ ಗಮನಾರ್ಹವಾಗಿದೆ. ಆಗ ಭಾರತ ಸ್ವಾತಂತ್ರ್ಯವಾಗಿರಲಿಲ್ಲ, ಬ್ರಿಟಿಷ್‌ರ ಆಶ್ರಯದಲ್ಲಿ ಜನರು ಅನುಭವಿಸಿದ ನಗ್ನ ಸತ್ಯವನ್ನು ಲಾವಣಿ ಬಿಚ್ಚಿಡುತ್ತದೆ.

ಮಳೆಬಾರದೆ ದನಕರುಗಳಿಗೆ ಹುಲ್ಲು ಇಲ್ಲ, ಹೊಲದಲ್ಲಿ ಬೆಳೆಯಾಗಿಲ್ಲ ಹಚ್ಚಗೆ ಕಾಣುವ ಗಿಡದ ತಪ್ಪಲು ತಿಂದು ಎಷ್ಟು ದಿನ ಬದುಕಲು ಸಾಧ್ಯ. ಆಹಾರವಿಲ್ಲದ ದನ ಕರುಗಳು ಸಾಯುವದು ನೋಡದೆ ರೈತರು ಕಟುಕರಿಗೆ ಮಾರುವದು ಧಾರಳವಾಗಿದೆ. ಜನರ ಸ್ಥಿತಿಯೂ ಭಿನ್ನವಿಲ್ಲ. ಆಹಾರಕೊಳ್ಳಲು ಮನೆಯಲ್ಲಿಯ ಬಂಗಾರ, ಬೆಳ್ಳಿ, ಕೊನೆಗೆ ಗಂಗಾಳ, ಚರಿಗಿ ಅಲ್ಲದೆ ಹಾಸುವ ಖೌದಿ ಮಾರಿ ಜೀವನ ನಡೆಸಲು ಪ್ರಯತ್ನಸಿರುವರು. ಇಂಥ ಬರಗಾಲದಲ್ಲಿ ಅಣ್ಣನ ಮನೆಗೆ ತಂಗಿ ಬಂದಾಗ ಅಣ್ಣ ಊಟಕ್ಕ ಕುಳಿತರೂ, ತಂಗಿಗೆ ತುತ್ತು ರೊಟ್ಟಿ ಹಾಕಿ ಕಳುಸುವದು

ಬರದ ಭೀಕರತೆಯ ದುರಂತ ಚಿತ್ರವಾಗಿದೆ. ಈ ಭೀಕರ ಬರ ಎಂದು ಜನರು ಡೋಗಿ ಬರ, ಉಂಡು ಕರೆದಿರುವದೇ ಸಾಕು. ಅಲ್ಲದೆ ಜನಪದವೇ ಇತಿಹಾಸಕ್ಕೆ ಮೂಲವೆಂಬುದನ್ನು ಸಾದರಪಡಿಸುವಲ್ಲಿ ಈ ಹಾಡು ಸಾರ್ಥಕವಾಗಿದೆ.

ಜನಪದದಲ್ಲಿ ಪೋತುರಾಜ

ಈ ಲೇಖನವು ಭಾರತೀಯ ಜಾತಿ ವ್ಯವಸ್ಥೆಯಲ್ಲಿ ಬೆಳೆದು ಬಂದ ದುರಂತ ಕಥಯಾಗಿದೆ. ಅಲೆಮಾರಿ ಜನಾಂಗವಾದ ದುರಗ-ಮರಗಿಯವರು ದೇವತೆಯನ್ನು ತಲೆಯ ಮೇಲೆ ಇಟ್ಟುಕೊಂಡು ಡೋಲು ಬಾರಿಸಿದರೆ, ಎದುರಿಗೆ ಪೋತುರಾಜ ಕುಣಿಯುತ್ತಾನೆ. ಕೈಯಲ್ಲಿ ಹಿಡಿದು ಲಡ್ಡಿನಿಂದ ಮೈಗೆ ಹೊಡಿದುಕೊಂಡು ಬಯ್ಯುತ್ತಾನೆ. ಈ ರೀತಿ ದೇವಿಯ ಮುಂದೆ ಹೊಡೆದುಕೊಳ್ಳುವ ಪೋತರಾಜ ಯಾರು? ಯಾಕೆ ಹೀಗೆ ಅರ್ಭಟಿಸಿ ಪ್ರತಿರೋಧಿಸುವದರ ಬಗ್ಗೆ ನೆರಸಿ, ಸಂಶೋಧಿಸಿ ಪ್ರೊ. ಹಿರೇಮಠರು ಪೋತುರಾಜನ ಇತಿಹಾಸವನ್ನೇ ವಿಶ್ಲೇಷಿಸಿದ್ದಾರೆ. "ವಿದ್ಯೆ ಪಡೆದ ಮಾದಿಗರ ಹುಡುಗ ಬ್ರಾಹ್ಮಣನೆಂದು ಸುಳ್ಳು ಹೇಳಿ ಬ್ರಾಹ್ಮಣರ ಹುಡುಗಿಯನ್ನು ಮದುವೆಯಾದನು. ಎರಡು ಮಕ್ಕಳಾದ ಮೇಲೆ ಅವನ ತಾಯಿ ಬಂದಳು. ಮಗನು ತಾಯಿಗೆ ಮನೆಯಲ್ಲಿ ಏನು ಮಾತಾಡಬಾರದೆಂದು ಹೇಳಿ ಮನೆಗೆ ಕರೆತಂದನು, ಊಟವಾದ ಮೇಲೆ, ಏನಮ್ಮ ಊರ ಹಬ್ಬ ಹೇಗಿತ್ತು ಅಂತ ಕೇಳಿದ, ಅಯ್ಯೋ ಏನು ಊಟ, ಎತ್ತಿನ ಮಾಂಸ ಎಳೆಗರಿನ ನಾಲ್ಗೆ ತಿಂದಂತೆ ಆಗಲಿಲ್ಲ" ಅಂದಳು ಅವಳ ಹೆಂಡತಿ ಇವರ ಮಾತುಗಳನ್ನು ಕೇಳಿ, ಇವರು ಮಾದಿಗರೆಂದು ತಿಳಿದು ದುಃಖಿಸಿ ತಂದೆಗೆ ಹೇಳಿದಳು. ನಾಯಿ ಮೂಸದ ಗಡಗಿಯನ್ನು ಮಾಡಬೇಕು, ನಾಯಿ ಕೊಳ್ಳಾಗ ಕಟ್ಟಬೇಕು. ಎಂದು ಉತ್ತರಿಸಿದನು. ಆಗ ತನಗೆ ಮೋಸಮಾಡಿ ಮದುವೆಯಾದುದಕ್ಕೆ ಕೋಪಗೊಂಡು ತನ್ನಗಂಡ ಊರ ಗೌಡನ ಹೊಟ್ಟೆಯಲ್ಲಿ ಕೋಣವಾಗಿ ಹುಟ್ಟಲಿ, ಅತ್ತೆ ಘಟದ ಗಡಿಗೆಯಾಗಲಿ, ಎರಡು ಮಕ್ಕಳು ಆಡಾಗಲಿ, ತಾನು ಮಾರಮ್ಮತಾಗಿ ಇವರನ್ನೆಲ್ಲ ಬಲಿ ತಗೋತಿನಿ ಎಂದು ಮಾತು ಕೊಟ್ಟು ಬೆಂಕಿಯಲ್ಲಿ ಹಾರಿ ಸತ್ತಳೆಂದು ಕಥೆಹೇಳುವರು"[೩]. ಈ ಕಥೆಯು ಜನರು ಒಂದೆಡೆ ನೆಲಸಿದ ಮೇಲೆ ಉಂಟಾದ ವರ್ಣ ವ್ಯವಸ್ಥೆಯ ಸಂಕಟವನ್ನು ಸೂಚಿಸುತ್ತದೆ ಇದರ ಸಂಕೇತವಾಗಿಯೇ ಇಂದಿನ ಹಳ್ಳಿಗಳಲ್ಲಿ ಕೋಣ ಕಡಿಯುವ ಕಾರ್ಯ ಅಥವಾ ಗಾವು ಮಾಡುವ ಕಾರ್ಯಕ್ರಮದಲ್ಲಿಯು ಪೋತರಾಜನ ಪಾತ್ರಧಾರಿ ಕುಣಿಯುವನು.

ಜನಪದ ಕವಿಕಂಡ ಶಿಕ್ಷಣ

ಆಧುನಿಕ ಲೋಕದಲ್ಲಿ ಶಿಕ್ಷಣಕ್ಕೆ ಬಹಳ ಮಹತ್ವವಿದೆ. ಶಿಕ್ಷಣಕ್ಕಾಗಿ ಹಲವಾರು

---

೩. ಜನಪದ ಸಂಸ್ಕೃತಿ ಪು.ಸಂ. ೧೧೨

ಯೋಜನೆಗಳನ್ನು ಹಾಕಿಕೊಂಡು ಸರ್ವರಿಗೂ ಶಿಕ್ಷಣ ನೀಡಿದೆ. ಅಲ್ಲದೆ ಸಂಸ್ಥೆಗಳು ಪ್ರಯತ್ನಿಸಿವೆ. ಆದರೂ ಇನ್ನೂ ಶಿಕ್ಷಿತರ ಪ್ರಮಾಣ ಕಡಿಮೆ ಇದೆ. ಆದ್ದರಿಂದ ಸಾತ್ತೂರದ ಮೈಲಾರಿ ಗೂಡ್ಲೆನವರು ರಚಿಸಿದ ಹಾಡು ಶಿಕ್ಷಣದ ಮಹತ್ವವನ್ನು ವಿವರಿಸುತ್ತದೆ. ಮಕ್ಕಳು ಹಾಲು ಕುಡಿದು ದಷ್ಟಪುಷ್ಟರನ್ನಾಗಿ ಮಾಡಿದಂತೆ, ಕಾಳಜಿಯಿಂದ ಶಿಕ್ಷಣವನ್ನು ಕೊಡಿಸಬೇಕು ಹಾಲು ಕುಡಿದರೆ ದೈಹಿಕವಾಗಿ ಸದೃಡರಾಗುವರು. ದೈಹಿಕ ಬೆಳವಣಿಗೆ ಜೊತೆಗೆ ವಿದ್ಯೆಯು ಬೇಕು.

ಶಿಕ್ಷಣ ಕಲಿಸಲು ಹಳ್ಳಿಗರಿಗೆ ಬಡತನ ಕಾಡುವದು ಸ್ವಾಭಾವಿಕ, ಆದರೆ ಇಂದು ಬಡವರಿಗೆ ಶಿಕ್ಷಣ ಕಲಿಸಲು ಸರಕಾರ ಸೌಕರ್ಯಗಳನ್ನು ನೀಡಿದೆ. ಅವುಗಳನ್ನು ಉಪಯೋಗಿಸಿಕೊಂಡು ಶಿಕ್ಷಣ ಪಡೆದರೆ ಅವರ ಬಾಳು ಬಂಗರವಾಗುವದೆಂದು ಹೇಳುವರು, ಶಿಕ್ಷಣದ ಜೊತೆಗೆ ಎರಡೇ ಮಕ್ಕಳೆ ಹಡಿರೆಂದು ಕುಟುಂಬ ಯೋಜನೆಯನ್ನು ಸಾರಿದ್ದನೆ. ಆದ್ದರಿಂದ ಮಿತ ಕುಟುಂಬಕ್ಕಾಗಿ ಶಿಕ್ಷಣ ಪಡೆಯಿರೆಂದು ಹೇಳುವಲ್ಲಿ ಲೇಖನ ಸಾರ್ಥಕವಾಗಿದೆ.

ಜನಪದ ವಿದ್ವಾಂಸ ಸಿಂಪಿ ಲಿಂಗಣ್ಣನವರು

ಬರಗಾಲದ ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ ಚಡಚಣದಲ್ಲಿ ಜನಿಸಿದ ಸಿಂಪಿ ಲಿಂಗಣ್ಣನವರು ಬಡತನದಲ್ಲಿ ವಿದ್ಯೆ ಕಲಿತು ಪ್ರಾಥಮಿಕ ಶಾಲೆಯ ಶಿಕ್ಷಕರಾದರು. ಶಿಕ್ಷಣ ನೀಡುವದರ ಜೊತೆಗೆ ಹಲಸಂಗಿ ಗೆಳೆಯರ ಗುಂಪು ಕಟ್ಟಿ ಜನಪದ ಸಾಹಿತ್ಯದ ಕಥೆ, ಹಾಡುಗಳನ್ನು ಸಂಗ್ರಹಿಸಿ, ಕನ್ನಡ ಸಾಹಿತ್ಯಕ್ಕೆ ಬಹುದೊಡ್ಡ ಕೊಡುಗೆಯನ್ನೇ ನೀಡಿದ್ದಾರೆ.

ಸರಳ ಜೀವಿಗಳಾದ ಸಿಂಪಿ ಲಿಂಗಣ್ಣನವರು ಯಾವತ್ತು ಖಾದಿದೋತರ, ಮೇಲೊಂದು ಕೋಟು, ತಲೆಯ ಮೇಲೆ ಗಾಂಧಿ ಟೋಪಿ ಹಾಕಿಕೊಳ್ಳುತ್ತಿದ್ದರು. ಜನಪದ ಸಾಹಿತ್ಯವನಲ್ಲದೆ, ಅರವಿಂದ ವಿಚಾರಕ್ಕೆ ಮಾರುಹೋಗಿ ಆಧ್ಯಾತ್ಮ ಜೀವಿಗಳಾದರು. ಅವರು ರಚಿಸಿದ ಸಾಹಿತ್ಯ ಅಪಾರವಾಗಿದೆ. ವಿಶಾಲ ಕಾರ್ಯಗನುಗುಣವಾಗಿ ಜನಪದ ಸಾಹಿತ್ಯ, ಪ್ರಬಂಧಗಳು, ಜೀವನ ಚರಿತ್ರೆಗಳು, ಸಣ್ಣ ಕಥೆ ಹಾಗೂ ಕಾದಂಬರಿ, ಏಕಾಂತ ನಾಟಕಗಳು, ಮಕ್ಕಳ ಹಾಗೂ ನವ ಶೀಕ್ಷಕರ ಸಾಹಿತ್ಯ, ಅನುವಾದಿತ ರಾಮತೀರ್ಥರ ಸಹಿತ್ಯ, ಅರವಿಂದರ ಸಾಹಿತ್ಯ ಹೀಗೆ ವಿವಿಧ ಪ್ರಕಾರದ ಸುಮಾರು ೧೦೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ ಧೀಮಂತ ಸಾಹಿತಿಗಳು.

ಡಾ. ಸಿಂಪಿ ಲಿಂಗಣ್ಣನವರು ಕನ್ನಡ ನಾಡಿನ ಹಿರಿಯ ಜಾನಪದ ವಿದ್ವಂಸರಾಗಿ, ಭಾಷಣಕಾರರಾಗಿ, ಪ್ರಕಾಶಕರಾಗಿ ಮತ್ತು ಆಧ್ಯಾತ್ಮಿಕ ವಾದಿಗಳಾಗಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದಂತೆ, ಕನ್ನಡಿಗರ ಮನ ಗೆದ್ದವರು, ಬಿಸಿಲ ನಾಡಿನ ಅನುಭವಗಳನ್ನು ಕುರಿತು

ವೈವಿಧ್ಯಮಯ ಕೃತಿಗಳನ್ನು ಬರೆದ, ಬಿಯಲ ನಾಡಿನ ಭೈರವ ರಾಗಿದ್ದಾರೆ; ಎಂದು ಅಭಿಪ್ರಾಯಪಟ್ಟಿರುವದು ನಿಜಕ್ಕೂ ಒಪ್ಪುವಂತಿದೆ.

೫. ಅಮೃತ ಬಳ್ಳಿ ಮತ್ತು ಇತರ ಬರೆದ ಜನಪದ ಲೇಖನಗಳು

ಅಮೃತಬಳ್ಳಿ ಬೀದರನಲ್ಲಿ ದಿನಾಂಕ ೨, ೩ ಜೂನ ೨೦೦೩ರಂದು ನಡೆದ ನಾಟಿ ಮಧ್ಯ ಸಮ್ಮೇಳನದ ಅಂಗವಾಗಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಾಮಾಜಿಕ ಅರಣ್ಯ ಇಲಾಖೆಯಿಂದ ಪ್ರಕಟಿಸಿದ ಸ್ಮರಣ ಸಂಚಿಕೆ ಈ ಸಂಚಿಕೆಯಲ್ಲಿ ಪ್ರಧಾನ ಸಂಪಾದಕರಾದ ಪ್ರೊ. ಸೂಗಯ್ಯ ಹಿರೇಮಠರು. ಸಂಚಿಕೆಗೆ "ಅಮೃತ ಬಳ್ಳಿ" ಎಂದು ಹೆಸರು ನೀಡಿರುವದು. ಅರ್ಥ ಪೂರ್ಣವಾಗಿದೆ. ಸಂಚಿಕೆಯ ಸಂಪಾದಕೀಯದಲ್ಲಿ " ಗ್ರಾಮೀಣ ಪ್ರದೇಶಗಳಲ್ಲಿ ದೊರೆಯುವ ಗಿಡ ಮೂಲಿಕೆಯಿಂದ ಹಳ್ಳಿಗರ ಆರೋಗ್ಯವನ್ನು ಕಾಪಾಡುವ ನಾಟಿವೈದ್ಯರ ದೇಶಿ ಪದ್ಧತಿಯ ಗಿಡ ಮೂಲಿಕೆಯಿಂದ ಮೂಲವ್ಯಾಧಿ, ಮಧುಮೇಹ, ಕಾಮಾಲೆ, ಮಹಿಳೆಯರ ಲೈಂಗಿಕ ರೋಗಗಳು ಮುಂತಾದವುಗಳನ್ನು ಪರಿಹರಿಸಿ ಗ್ರಾಮೀಣರಿಗೆ ಸಂಜೀವಿನಿ ಆಗಿರುವರು ಇಷ್ಟೆಲ್ಲ ಪರಿಣಿತರು ಜನಪದ ವೈದ್ಯರಾಗಿದ್ದರು. ಸಮಾಜವಾಗಲಿ, ಸರ್ಕಾರವಾಗಲಿ ಅವರ ಜೀವನ ಮತ್ತು ವೃತ್ತಿಯ ಬಗ್ಗೆ, ಅಂದು ಬಳಸುವ ಗಿಡ ಮೂಲಿಕೆಗಳ ಬಗ್ಗೆ ಗಮನ ಹರಿಸಿಲ್ಲ. ಆದ್ದರಿಂದ ಈ ಸಮ್ಮೇಳನದಲ್ಲಿ "ನಾಟಿ ವೈದ್ಯಕೀಯ ಮಹತ್ವ ಮತ್ತು ಔಷಧಿಯ ಸಸ್ಯಗಳ ಅಳಿವು ಉಳಿವಿನ ಕಡೆಗೆ ಗಮನ ಸೆಳೆಯುವದೇ ಮುಖ್ಯ ಉದ್ದೇಶವೆಂದು ಹೇಳಿರುವದು ಸೂಕ್ತವಾಗಿದೆ. ಅಲ್ಲದೆ ಸಂಚಿಕೆಯಲ್ಲಿ ಜನಪದ ವೈದ್ಯ ಪದ್ಧತಿ, ದೇವ ದೇವ ವನ, ಔಷಧ ಹಾಗೂ ಸುಗಂಧ ಸಸ್ಯಗಳ ಕೃಷಿ ವಿವರ, ಸಂಸ್ಕೃತಿ ಮತ್ತು ಮಹಿಳಾ ಆರೋಗ್ಯ, ಪಶು ವೈದ್ಯಕೀಯದಲ್ಲಿ ಔಷಧಿಗಳ ಬಳಕೆ ಭರತೀಯ ಔಷಧಿ ಸಸ್ಯಗಳು ಮುಂತಾದ ಉಪಯುಕ್ತ ಲೇಖನಗಳಿದ್ದು ಇದೊಂದು ಸಂಗ್ರಹ ಹಾಗೂ ದೇಶಿವೈದ್ಯ ಪದ್ಧತಿ ಸಸ್ಯಗಳ ಕುರಿತು ಮಾಹಿತಿ ನೀಡುವ ಆಕರ ಸಂಚಿಕೆಯಾಗಿದೆ.

ಈ ಸಂಚಿಕೆಯಲ್ಲಿದೆ ಬೇರೆ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ ಲೇಖನಗಳು ಸಾಕಷ್ಟಿವೆ, ಅವುಗಳಲ್ಲಿ ಅಲೆಮಾರಿ ಜನಾಂಗವಾದ 'ಬಾಳ ಸತೋಷರು' ಆ ಜನಾಂಗದ ಮೂಲ, ಸಂಪ್ರದಾಯ, ವೇಷ ಭೂಷಣ, ಹಾಡುಗಾರಿಕೆ, ಜೀವನ ವಿಧಾನಗಳು, ಆಚರಣೆಗಳು ಮುಂತಾದವುಗಳನ್ನು ವಿವರವಾಗಿ ಬರೆದು ಆ ಜನಾಂಗದ ಭವಿಷ್ಯದ ಬಗ್ಗೆ ಚರ್ಚಿಸಿದ್ದಾರೆ.

ಬ್ರಿಟೀಷರ ವಿರುದ್ಧ ಹೋರಾಡಿದ ವೀರರಾಣಿ ಕಿತ್ತೂರ ಚೆನ್ನಮ್ಮ ರಾಣಿಯ ಕುರಿತು ಅನೇಕ ಜನಪದ ಹಾಡುಗಳಿವೆ. "ದುಂದುಮೆ" ಹಾಡಿನಲ್ಲಿ "ಕಿತ್ತೂರ ಚನ್ನಮ್ಮ ಲೇಖನದಲ್ಲಿ ಅವಳ ಶೌರ್ಯ, ಪ್ರತಾಪ ಹೋರಾಟ ಕುರಿತು ಪ್ರೊ. ಹಿರೇಮಠರು ಹೃದಯಂಗಮವಾಗಿ ವಿವರಿಸಿದ್ದಾರೆ.

ಜನಪದ ಅಕಾಡೆಮಿ ಬೆಂಗಳೂರು ಮತ್ತು ಗುಲಬರ್ಗಾ ವಿಶ್ವವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ನಡೆದ "ಜನಪದ ಕಲೆಗಳ ಮರು ಚಿಂತನೆ" ವಿಚಾರ ಸಂಕೀರಣದಲ್ಲಿ 'ಜನಪದ ಪ್ರದರ್ಶನ ಕಲೆಗಳು' ಕುರಿತು ಪ್ರಬಂಧ ಮಂಡಿಸಿ, ಜಾನಪದರೂ ಪ್ರದರ್ಶನಕಾರರು ನಮ್ಮ ನಾಡಿನ ಸಾಂಸ್ಕೃತಿಕ ರಾಯಭಾರಿಗಳು ಇಂದಿನ ಆಧುನಿಕ ಯುಗದಲ್ಲಿ ಜನಪದ ಕಲೆ ಕಲೆಗಾರರ ವೃತ್ತಿಗಳು ಬದಲಾಗಿವೆ. ಆದ್ದರಿಂದ ಇಂಥ ಅಪೂರ್ವ ಕಲೆಗಳನ್ನು ಉಳಿಸಿ ಬೆಳೆಸಲು ರಾಜ್ಯದಲ್ಲಿ 'ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕೆಂದು' ಹೇಳಿರುವದು ಸ್ತುತ್ಯವಾಗಿದೆ. ಅದರಂತೆಯೇ ಬೀದರಿನ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ "ಜನಪದ ಕರಕುಶಲ ಕಲೆಗಳು" ಮರು ಚಿಂತನೆ ವಿಚಾರ ಸಂಕಿರಣದಲ್ಲಿ ಪ್ರೊ ಹಿರೇಮಠರು 'ಕೌದಿಕಲೆ' ಕುರಿತು ಅಳಿದು ಹೋಗುತ್ತಿರುವ ಕೌದಿ ಕಲೆಯನ್ನು ಇಂದಿನ ಯುವಕರು ಆಧುನಿಕ ಹೊಸ ವಿಧಾನದಲ್ಲಿ ತಯಾರಿಸಿದರೆ ಅದಕ್ಕೆ ಆಕರ್ಷಣೆ ಹೆಚ್ಚಿ ಮಾರಾಟ ಮಾಡಲು ಸಾಧ್ಯವಿದೆ. ಆ ದಿಶೆಯಲ್ಲಿ ನಮ್ಮ ಯುವ ಜನಾಂಗ ಮುಂದಾದರೆ ಉದ್ಯೋಗವು ದೊರೆಯುವದೆಂದು ಪ್ರಬಂಧದಲ್ಲಿ ವ್ಯಕ್ತಪಡಿಸಿದ ವಿಚಾರಗಳು ಒಪ್ಪುವಂತಿವೆ.

ಹೀಗೆ ಬಿಡಿಲೇಖನಗಳಲ್ಲಿಯೂ ಜನಪದ ಸಾಹಿತ್ಯ ಕಲೆ ಕುರಿತು ಪ್ರೊ. ಹಿರೇಮಠರ ಅಪಾರ ಪಾಂಡಿತ್ಯ ಮತ್ತು ಸಂಶೋಧನಾ ಪ್ರವೃತ್ತಿಯನ್ನು ಕಾಣಬಹುದಾಗಿದೆ.

ಅಧ್ಯಾಯ : ೪

ಸಂದರ್ಶನ

ಅಧ್ಯಾಯ : ೪

ಸಂದರ್ಶನ

ಈ ನಿಬಂಧ ಮಂಡನೆಗೆ ಪ್ರೊ. ಸೂಗಯ್ಯ ಹಿರೇಮಠರ ಜನಪದ ಕೃತಿಗಳ ವಿಷಯವನ್ನು ಆಯ್ಕೆ ಮಾಡಿಕೊಂಡಾದ ಮೇಲೆ ಅವರೊಂದಿಗೆ ನೇರ ಸಂದರ್ಶನ ಮಾಡಿ ಅವರ ಬದುಕು ಮತ್ತು ಜನಪದ ಕೃತಿಗಳ ಕುರಿತು ಚರ್ಚಿಸಲಾಯಿತು. ಆ ಸಂದರ್ಶನದ ಕೆಲವು ಅಂಶಗಳು ಈ ಕೆಳಗಿನಂತಿವೆ.

ಪ್ರಶ್ನೆ : ೧ ಹಳ್ಳಿಯಲ್ಲಿ ಹುಟ್ಟಿ ಬೆಳೆದ ನೀವು ಇಂದಿನ ಪರಿಸರ ಕುರಿತು ನಿಮ್ಮ ಅನಿಸಿಕೆಗಳನ್ನು ಹೇಳುವಿರಾ ?

ಉತ್ತರ : ನಾನು ಚಿಕ್ಕವನಿದ್ದಾಗ ಹಳ್ಳಿಯಲ್ಲಿ ಜನ ಪ್ರೀತಿ ವಿಶ್ವಾಸದಿಂದ ಬಾಳುತ್ತಿದ್ದರು. ಕಷ್ಟ ಸುಖಕ್ಕೆ ಇನ್ನೊಬ್ಬರಿಗೆ ಸಹಾಯ ಮಾಡುತ್ತಿದ್ದರು. ರಸ್ತೆ ವಿದ್ಯುತ್ ಇರಲಿಲ್ಲ. ಇಂದು ಸುಧಾರಣೆಯಾಗಿದೆ. ಆದರೆ ಪರಸ್ಪರ ಪ್ರೀತಿ ಕಂಡು ಬರುವುದಿಲ್ಲ ಹೆಚ್ಚಾಗಿ ನಗರ ಜೀವನ ಪದ್ಧತಿ ಅನುಕರಣೆ ಮಾಡುತ್ತಿದ್ದಾರೆ.

ಪ್ರಶ್ನೆ : ೨ ಹಳ್ಳಿಯಲ್ಲಿ ಓದಿದ ನೀವು ಅಲ್ಲಿನ ಅನುಭವಗಳನ್ನು ವಿವರಿಸುವಿರಾ ?

ಉತ್ತರ : ಅಂದು ನಾನು ಓದುವಾಗ ಹೆಚ್ಚಾಗಿ ಹಳ್ಳಿಗಳಲ್ಲಿ ಸರ್ಕಾರಿ ಶಾಲೆ ಕಟ್ಟಡಗಳು ಇರಲಿಲ್ಲ ಊರಲ್ಲಿಯ ದೊಡ್ಡ ಮನೆಯಲ್ಲಿಯೇ ಶಾಲೆ ನಡೆಯುತ್ತಿತ್ತು. ನಮ್ಮೂರಲ್ಲಿ ಹೋಟೆಲ್, ಖಾನಾವಳಿ ಯಾವುದೂ ಇರಲಿಲ್ಲ ಮಾಸ್ತರರು ವಿದ್ಯಾರ್ಥಿಗಳ ಮನೆಯಲ್ಲಿಯೇ ಊಟ ಮಾಡಿ ಓದಿಸುತ್ತಿದ್ದರು. ಹೊಡೆದು ಶಿಕ್ಷಣ ನೀಡಿದರೂ ಅಂದಿನ ಗುರುಗಳಲ್ಲಿ ಶಿಷ್ಯರ ಬಗ್ಗೆ ಹೆಚ್ಚಿನ ಪ್ರೀತಿ ಕಾಳಜಿ ಇತ್ತು. ಇನ್ನು ಮಾಧ್ಯಮಿಕ ಪ್ರೌಢ ಶಾಲೆ ಓದಲು ಸುಮಾರು ೩–೪ ಕಿ.ಮೀ. ನಡೆದು ಹೋಗಬೇಕಿತ್ತು. ಇನ್ನಿತರ ತೊಂದರೆಗಳನ್ನು ಅನುಭವಿಸಿದರೂ ಶಿಕ್ಷಣ ಪಡೆಯುವ ಇಚ್ಛೆಯಿಂದಲೇ ಓದಿದೆವು.

ಪ್ರಶ್ನೆ : ೩ ಚಿಕ್ಕಂದಿನಲ್ಲಿ ನಿಮ್ಮ ಮೇಲೆ ಪ್ರಭಾವ ಬೀರಿದ ಸಾಹಿತ್ಯಿಕ ಅಂಶಗಳಾವುವು ?

ಉತ್ತರ : ನಮ್ಮ ಮನೆಯಲ್ಲಿ ಅಜ್ಜಿ ಹೇಳುವ ಜನಪದ ಕಥೆ, ಹಾಡುಗಳು, ಚಿಕ್ಕಪ್ಪನಾಡುವ ಬಯಲಾಟಗಳು ಮತ್ತು ತಂದೆಯವರ ಹಳೆಗನ್ನಡ ಮತ್ತು ವಚನಕೃತಿಗಳು ಹೆಚ್ಚಾಗಿ ಪ್ರಭಾವ ಬೀರಿದವು. ಮುಂದೆ ಸಾಹಿತ್ಯ ವಿದ್ಯಾರ್ಥಿಯಾಗಿ ಓದಿದಂತೆ ಬೇಂದ್ರೆ, ಕಾರಂತ, ಕುವೆಂಪು, ಮಾರ್ಕ್ಸ, ಲೋಹಿಯಾ ಸಿದ್ಧಾಂತಗಳು ಆಕರ್ಷಿಸಿದವು.

ಪ್ರಶ್ನೆ : ೪ ಗ್ರಾಮೀಣ ಪ್ರದೇಶದಲ್ಲಿ ನೀವು ನೋಡಿದ ಕಲೆಗಳು ಇಂದು ಅಳಿದುಹೋಗುತ್ತಲಿವೆ ಅವುಗಳನ್ನು ಉಳಿಸುವ ಬಗೆ ತಿಳಿಸುವಿರಾ ?

ಉತ್ತರ : ಆಗ ಒಕ್ಕಲುತನಕ್ಕೆ ಬೇಕಾಗುವ ಎಲ್ಲಾ ಪರಿಕರಗಳನ್ನು ಊರಲ್ಲಿಯೇ ವೃತ್ತಿಗಾರರಾದ ಬಡಿಗ, ಕಮ್ಮಾರ, ಮಾದಿಗ ಮುಂತಾದವರು ರಂಟೆ, ಕುಂಟೆ, ಮಡಿಕೆ, ಚಪ್ಪಲಿ, ಚಾಪೆ, ಕೌದಿ, ಗೊಂಗಡಿ ಮುಂತಾದ ಕಸುಬುದಾರರು ತಯಾರಿಸಿ ಕೊಡುತ್ತಿದ್ದರು. ಇಂದು ನಗರದಲ್ಲಿ ಕೈಗಾರಿಕೆ ಬೆಳೆದು ಹಳ್ಳಿಗರು ಮಾಡುವ ಕರಕುಶಲ ಕಲೆಗಳಿಗೆ ಪೆಟ್ಟು ಬಿದ್ದಿದೆ. ಜನ ಕಾರ್ಖಾನೆಯಲ್ಲಿ ತಯಾರಾದ ವಸ್ತುಗಳು ದುಬಾರಿಯಾದರೂ ಖರೀದಿಸುವುದರಿಂದ ಕರ ಕುಶಲಗಾರರು ನಗರಕ್ಕೆ ವಲಸೆ ಹೋಗುವುದನ್ನು ಕಾಣುತ್ತಿದ್ದೇವೆ. ಹಳ್ಳಿಯ ಕರಕುಶಲಗಾರರಿಗೆ ಸರಕಾರ ಸೌಲಭ್ಯ ನೀಡಬೇಕು. ಅವರು ತಯಾರಿಸಿದ ವಸ್ತುಗಳನ್ನು ಜನರು ಉಪಯೋಗಿಸಿದರೆ ಉಳಿಯಲು ಸಾಧ್ಯ.

ಪ್ರಶ್ನೆ : ೫ ಹಳ್ಳಿ ಪರಿಸರದಲ್ಲಿ ಬೆಳೆದು ಎಂ.ಎ. ಪದವಿ ಪಡೆಯುವಾಗ ನಿಮಗೆ ಯಾವ ಆರ್ಥಿಕ ತೊಂದರೆಗಳು ಬರಲಿಲ್ಲವೇ ?

ಉತ್ತರ : ಆಗ ನಮ್ಮ ಮನೆತನಕ್ಕೆ ೮ ಎಕರೆ ಭೂಮಿ ಇದ್ದರೂ ಹೆಚ್ಚಾಗಿ ಮಳೆ ಅವಲಂಬಿತ ವ್ಯವಸಾಯ ಮಾಡುವುದರಿಂದ ಹೇಳಿಕೊಳ್ಳುವಂಥ ಆದಾಯವೇನು ಬರುತ್ತಿರಲಿಲ್ಲ. ಮಠಕ್ಕೂ ಹೆಚ್ಚಿನ ಸಂಪತ್ತು ಇರಲಿಲ್ಲ. ಆದರೂ ಒಕ್ಕಲುತನದಲ್ಲಿಯೇ ಮಠದ ಕಾರ್ಯಕಲಾಪಗಳನ್ನು ಯಥಾವತ್ತಾಗಿ ನಡೆಸಿಕೊಂಡು ಬಂದಿದ್ದೇವೆ. ನಮ್ಮ ತಂದೆಯವರು ಶಾಸ್ತ್ರ ಪುರಾಣ ಪಂಡಿತರು ಎಲ್ಲರೊಂದಿಗೆ ಬೆರೆತು ಅವರ ಕಷ್ಟ ಸುಖಕ್ಕೆ ನೆರವಾಗುತ್ತಿರುವದರಿಂದ ಜನ ಗೌರವದಿಂದ ಕಾಣುತ್ತಿದ್ದರು. ಹೀಗಾಗಿ ಬಡತನ ಮತ್ತು ಬರಗಾಲ ಬಂದರೂ ಓದುವ ಉತ್ಕಟ ಇಚ್ಛೆ ಇರುವುದರಿಂದ ನನಗೆ ಉನ್ನತ ಪದವಿ ಪಡೆಯಲು ಸಾಧ್ಯವಾಯಿತು.

ಪ್ರಶ್ನೆ : ೬ ಸುಸಂಸ್ಕೃತ ಮನೆತನದಲ್ಲಿ ಬೆಳೆದು ನೀವು ಬಂಡಾಯ ಚಳುವಳಿ ಪ್ರಮುಖ ಕಾರಣವೇನು?

ಉತ್ತರ : ಬರಗಾಲ ಮತ್ತು ಬಡತನಗಳು ಒಂದು ರೀತಿಯಲ್ಲಿ ಪರಿಸ್ಥಿತಿಯ ಶಿಕ್ಷಣ ನೀಡಿದರೂ ಎಂ.ಎ. ಓದಿದ ನಂತರ ಕರ್ನಾಟಕದ ರಾಜಕೀಯ, ಸಾಮಾಜಿಕ ರೈತ ಪರಿಸರ ಮತ್ತು ಸಮುದಾಯದ ಚಳುವಳಿಯ ಸಿದ್ಧಾಂತಗಳು ನನ್ನನ್ನು ಬಂಡಾಯಗಾರನಾಗಲು ಪ್ರೇರೆಪಿಸಿದವು. ಹೀಗಾಗಿ ರೈತರ ಶೋಷಣೆ ಸಾಮಾಜಿಕ ಅಸಮಾನತೆ ಸಂಪ್ರದಾಯದ ಮೌಢ್ಯತೆ ಅಳಿಸಲು ಬಂಡಾಯ ಸಾಹಿತ್ಯ ಸಂಘಟನೆ ರಾಜ್ಯ ರೈತ ಸಂಘ ಸಂಪೂರ್ಣ ಕ್ರಾಂತಿ ಮುಂತಾದವುಗಳಲ್ಲಿ ಸಕ್ರೀಯ ಸದಸ್ಯನಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಯಿತು.

ಪ್ರಶ್ನೆ : ೭ ಬಂಡಾಯ ಸಾಹಿತ್ಯ ಸಂಘಟನೆಯ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದವರು ನಿಮ್ಮ ಅನುಭವಗಳನ್ನು ತಿಳಿಸುವಿರಾ ?

ಉತ್ತರ : ನಮ್ಮ ಜಿಲ್ಲೆಯ ಆಳಂದ ತಾಲೂಕಿನ ಚಿಂಚನಸೂರದಲ್ಲಿ ಮಹಾಪೂರ ತಾಯಿಗೆ ಬೆತ್ತಲೆ ಸಲ್ಲಿಸುವ ಆಚರಣೆ ಇತ್ತು ಬಂಡಾಯ ಮತ್ತು ದಲಿತ ಸಂಘದ ಗೆಳೆಯರು ಸೇರಿ ಬೆತ್ತಲೆ ಸೇವೆ ಸಲ್ಲಿಸುವುದು ಮೌಢ್ಯತೆಯೆಂದು ಕರಪತ್ರ ಹಂಚಿ ಜಾತ್ರೆಯಲ್ಲಿ ಭಾಷಣ ಮಾಡಿ ತಿಳಿಸಿದೆವು. ಕೊನೆಗೆ ಪೋಲೀಸರಿಗೆ ದೂರು ನೀಡಿ ಬೆತ್ತಲೆ ಸೇವೆ ಸಲ್ಲಿಸದಂತೆ ಪ್ರತಿ ಬಂದಿಸಿದೆವು ಅಂದಿನಿಂದ ಜನರು ಇದು ಕೆಟ್ಟ ಆಚರಣೆ ಎಂದು ಅರಿತು ಆ ಸಂಪ್ರದಾಯವನ್ನು ಬಿಟ್ಟಿರುವರು ಇಂಥ ಜನಪರ ಕಾರ್ಯದಲ್ಲಿ ಭಾಗಿಯಾಗಿರುವೆ.

ಪ್ರಶ್ನೆ : ೮ ರೈತ ಚಳುವಳಿ ಸೇರಿದ ನೀವು ರೈತರ ಸಮಸ್ಯೆಗಳ ಕುರಿತು ಮಾಡಿದ ಕಾರ್ಯಗಳನ್ನು ಹೇಳುವಿರಾ ?

ಉತ್ತರ : ಗುಲಬರ್ಗಾ ಜಿಲ್ಲೆಯ ವಿದ್ಯಾರ್ಥಿ ರೈತ ಸಂಘದ ಸಂಚಾಲಕನಾಗಿ ರೈತರ ಮೇಲೆ ನಡೆಯುವ ಅನ್ಯಾಯದ ವಿರುದ್ಧ ಪ್ರತಿಭಟನೆ ಮಾಡಲಾಯಿತು ಸಮುದಾಯ ಸಂಘಟನೆ ಮುಖಾಂತರ ರೈತರ ಸಮಸ್ಯಗಳು ಕುರಿತು ಬೀದಿ ನಾಟಕಗಳನ್ನು ಪ್ರದರ್ಶಿಸಲಾಯಿತು. ಅಲ್ಲದೆ ಶಹಾಪುರ ತಾಲೂಕಿನಲ್ಲಿ ಸಹಕಾರಿ ಬ್ಯಾಂಕಿನವರು ಮಾಡುವ ರೈತರ ಹೊಲ ಮನಿ ಜಪ್ತಿ ಆದೇಶಕ್ಕೆ ಹೈಕೋರ್ಟನಿಂದ ತಡೆಯಾಜ್ಞೆ ತಂದು ರೈತರಿಗೆ ಆತ್ಮಹತ್ಯೆ ಮಾಡಿಕೊಳ್ಳದಂತೆ ಧೈರ್ಯ ನೀಡಲಾಯಿತು. ರೈತರ ಬೆಳೆಗೆ ಬೆಲೆ ಇನ್ನು ದೊರೆತಿಲ್ಲ.

ಪ್ರಶ್ನೆ : ೯ ಈಗೇಕೆ ಈ ಎಲ್ಲಾ ಸಂಘಟನೆಗಳು ಹಿಂದಿನಂತೆ ಚುರುಕಾಗಿ ಕಾಣುವುದಿಲ್ಲ ಸರ್, ಇದಕ್ಕೇನಾದರೂ ಕಾರಣಗಳಿವೆ ?

ಉತ್ತರ : ಯಾವುದೇ ಸಂಘಟನೆ ಸಮಸ್ಯೆಗಳ ಪರಿಹಾರಕ್ಕಾಗಿ ತೀವ್ರ ಪ್ರಯತ್ನ ಮಾಡುತ್ತದೆ. ಆ ಸಮಸ್ಯೆಗಳಿಗೆ ಸ್ವಲ್ಪ ಪರಿಹಾರ ಸಿಕ್ಕರೆ ಜನ ಸಂತುಷ್ಟರಾಗಿ ಬಿಡುವುದರಿಂದಲೂ ಮತ್ತು ಸಂಘಟನೆಯ ಧೋರಣೆಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ದುಡಿಯದೆ, ಅಧಿಕಾರಕ್ಕಾಗಿ ನಾಯಕರು ಪಲಾಯನವಾದಿಗಳಾಗಿರುವುದರಿಂದ ಸಂಘಟನೆಗಳು ತಮ್ಮ ಮೊದಲಿನ ಅಸ್ತಿತ್ವವನ್ನು ಕಳೆದುಕೊಂಡಿವೆ. ಆದರೆ ಸಮಸ್ಯೆಯ ಒತ್ತಡ ಹೆಚ್ಚಾದಾಗ ಮತ್ತೆ ಸಂಘಟಿತರಾಗಬಹುದು.

ಪ್ರಶ್ನೆ : ೧೦ ಇಂದು ಹಿಂದಿನಕ್ಕಿಂತಲೂ ಸಮಾಜ ಮತ್ತು ರೈತರ ಸಮಸ್ಯೆಗಳು ಹೆಚ್ಚಾಗಿವೆ ಇದಕ್ಕೆ ಸ್ಪಂದಿಸುವಲ್ಲಿ ಸಂಘಟನೆಗಳು ಏಕೆ ನಿಷ್ಕ್ರಿಯವಾಗಿವೆ?

ಉತ್ತರ : ಜನರಲ್ಲಿ ಹೋರಾಟದ ಅರಿವಿಲ್ಲ, ಸಂಘಟನೆಯ ನಾಯಕರಲ್ಲಿ ಸಮಸ್ಯೆಗಳ ಪರಿಹಾರಕ್ಕಿಂತಲೂ ವೈಯಕ್ತಿಕ ಪ್ರತಿಷ್ಟೆಯೇ ಮುಖ್ಯವಾಗಿ ತಮ್ಮದೇ ಒಂದು ಸಂಘಟನೆ ಮಾಡಿಕೊಳ್ಳುವುದರಿಂದ ಸಮಸ್ಯೆಗಳಿಗೆ ಪರಿಹಾರ ದೊರೆಯದಂತಾಗಿದೆ. ಜನ ಪ್ರಜ್ಞಾವಂತರಾದರೆ ಸಾಧ್ಯ.

ಪ್ರಶ್ನೆ : ೧೧ ಇಂದು ನಡೆಯುತ್ತಿರುವ ರೈತರ ಆತ್ಮ ಹತ್ಯೆಗಳಿಗೆ ಸರ್ಕಾರದಿಂದ ಪರಿಹಾರವಿಲ್ಲವೇ ?

ಉತ್ತರ : ಅಧಿಕಾರಕ್ಕೆ ಬರುವ ರಾಜಕಾರಣಿಗಳು ರೈತರ ಹೆಸರಿನಲ್ಲಿ ಕೇವಲ ಪ್ರಮಾಣ ವಚನ ತೆಗೆದುಕೊಂಡರೆ ಸಾಲದು. ನೇರವಾಗಿ ಅವರ ಸಮಸ್ಯೆಗಳಿಗೆ ಸ್ಪಂದಿಸಿ ಸಹಾಯ ಮಾಡುತ್ತಿಲ್ಲ. ಪ್ರಕೃತಿಯ ಕೊಡುಗೆಯಾದ ಮಳೆಯು ಸರಿಯಾಗಿ ಬರುತ್ತಿಲ್ಲ. ಬೆಲೆಯು ಸ್ಥಿರವಿಲ್ಲ. ಆದ್ದರಿಂದ ರೈತರ ಸಮಸ್ಯೆಗಳು ಹೆಚ್ಚಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ಆತ್ಮಹತ್ಯೆಯಿಂದ ಸಮಸ್ಯೆ ಪರಿಹಾರವಾಗುವದಿಲ್ಲ ಸಂಘಟಿತ ಹೋರಾಟ ಮಾಡಬೇಕು.

ಪ್ರಶ್ನೆ : ೧೨ ಹೈದ್ರಾಬಾದ ಕರ್ನಾಟಕ ಅಭಿವೃದ್ಧಿಯಾಗಲು ೩೭೧ನೇ ಕಲಮು ಜಾರಿಯಾಗಬೇಕೆನ್ನುವುದು ಸೂಕ್ತವೇ ?

ಉತ್ತರ : ಸೂಕ್ತವಾಗಿದೆ. ಏಕೆಂದರೆ ೩೭೧ ಕಲಮುನಿಂದ ಈ ಭಾಗದ ವಿದ್ಯಾವಂತರಿಗೆ ಉದ್ಯೋಗಳಲ್ಲಿ ಹೆಚ್ಚಿನ ಅವಕಾಶ ದೊರೆಯುತ್ತವೆ. ಯಾವುದೇ ಕಲಮು ಅಥವಾ ಯೋಜನೆಯು ಜನ ಸದುಪಯೋಗ ತೆಗೆದುಕೊಳ್ಳುವುದರ ಮೇಲೆ ಅವಲಂಬಿಸಿದೆ. ಇಲ್ಲವಾದರೆ ಅಭಿವೃದ್ಧಿಯ ಹೆಸರಿನಲ್ಲಿ ಅಧಿಕಾರಿಗಳು ರಾಜಕಾರಣಿಗಳಿಗೆ ಲಾಭವಾಗುತ್ತದೆ.

ಪ್ರಶ್ನೆ : ೧೩ ಇತ್ತೀಚೆಗೆ ಮತಾಂತರ ಕೂಗು ಎದ್ದಿದೆ ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಉತ್ತರ : ಯಾರಿಗೇ ಆಗಲಿ ಧರ್ಮ ವೈಯಕ್ತಿಕವಾದದ್ದು. ತಮ್ಮ ಸುಖ ಶಾಂತಿಗಾಗಿ ಜನ ಧರ್ಮವನ್ನು ಅನುಸರಿಸುತ್ತಾರೆ. ಆದರೆ ಯಾರೊಬ್ಬರನ್ನು ಒತ್ತಾಯ ಇಲ್ಲವೆ ಆಮಿಷ ಒಡ್ಡಿ ಮತಾಂತರ ಮಾಡುವುದು ಸರಿಯಲ್ಲ. ಒತ್ತಾಯ ಇಲ್ಲವೆ ಆಸೆಗೆ ಮತಾಂತರವಾದವರು ಸ್ಥಿರವಾಗಿ ನಿಲ್ಲಲಾರರು.

ಪ್ರಶ್ನೆ : ೧೪ ಈಗ ನಿವೃತ್ತರಾಗಿ ನೀವು ಮುಂದೆ ಯಾವ ಕಾರ್ಯಗಳಲ್ಲಿ ಭಾಗಿಯಾಗುವಿರಿ ?

ಉತ್ತರ : ನಾನು ಯಾವಾಗಲೂ ಪ್ರಗತಿಪರ ಚಿಂತನೆಯಿಂದ ಸಂಘಟನೆ ಚಳುವಳಿಯಲ್ಲಿ ಕಾರ್ಯ ಮಾಡಿರುವೆ. ಮುಂದೆಯೂ ಅದನ್ನು ಮುಂದುವರೆಸುವೆ, ಇಂದಿನ ಸಮಸ್ಯೆಗಳನ್ನು ಕುರಿತು ಬರೆಯಬೇಕಾದದ್ದು ಇನ್ನೂ ಇದೆ.

ಪ್ರಶ್ನೆ : ೧೫ ನೀವು ಕವನ, ಕಥೆ, ವ್ಯಾಕರಣ, ವಿಮರ್ಶೆ ಬರೆದಿರುವಿರಿ ಇನ್ನೂ ಮುಂದೆ ಕಾದಂಬರಿ ಬರೆಯುವಿರಾ ?

ಉತ್ತರ : ಮೊದಲಲ್ಲಿ ಎಲ್ಲಾ ಬರಹಗಾರರಂತೆ ನಾನು ಕವನಗಳೇ ಬರೆದಿರುವೆ. ನಂತರ ಅನೇಕ ಚಳುವಳಿಯಲ್ಲಿ ಭಾಗಿಯಾದ ಮೇಲೆ ಕಂಡ ಸಮಸ್ಯೆಗಳನ್ನು ಕುರಿತು ಕವನದಲ್ಲಿ ಸಾಧ್ಯವಿಲ್ಲವೆಂದು ಸಣ್ಣ ಕಥೆ ಬರೆದಿರುವೆ. ಕಥೆ ವಿಸ್ತೃತ ರೂಪವೇ ಕಾದಂಬರಿ, ಮುಂದೆ ಬರೆಯುವ ಆಲೋಚನೆ ಇದೆ.

ಅಧ್ಯಾಯ : ೫

ಸಮಾರೋಪ

ಅಧ್ಯಾಯ : ೫

ಸಮಾರೋಪ

ಕನ್ನಡ ಸಾಹಿತ್ಯಕ್ಕೆ ಸು. ೨೦೦೦ ವರ್ಷಗಳ ಪ್ರಾಚೀನ ಇತಿಹಾಸವಿದೆ. ಅಪಾರವಾದ ಶಾಸನಗಳು ಕಾವ್ಯಗಳಿಂದ ಕನ್ನಡ ಸಾಹಿತ್ಯ ಸಮೃದ್ಧವಾಗಿದೆ, ಶಾಸನ ಕೃತಿಗಳಿಗಿಂತಲೂ ಜನಪದ ಸಾಹಿತ್ಯ ಸಮೃದ್ಧವಾಗಿ ರಚನೆಯಾಗಿದೆ. ಶ್ರೇಷ್ಠ ಕನ್ನಡ ಕೃತಿಗಳು ರಚನೆಯಾಗಿವೆ. ಮೊದಲಿಗೆ ಪಂಪ, ರನ್ನರು ಮಹಾಕಾವ್ಯಗಳನ್ನು ಸೃಷ್ಟಿಸಿ ದೊಡ್ಡ ಪರಂಪರೆಯನ್ನೆ ಹಾಕಿದ್ದಾರೆ. ಜೈನರ ನಂತರ ಅಲ್ಲಮ ಪ್ರಭು ಬಸವಣ್ಣ ಅಕ್ಕಮಹದೇವಿ. ಚೆನ್ನ ಬಸವಣ್ಣ, ಸಿದ್ಧರಾಮ ಮುಂತಾದ ಶರಣ ಶರಣಿಯರು ವಚನ ಸಾಹಿತ್ಯವನ್ನು ಸಲ್ಲಿಸಿ ಸಾಹಿತ್ಯ ಮತ್ತು ಸಮಾಜಕ್ಕೆ ವಿಶಿಷ್ಟ ಕೊಡುಗೆಯನ್ನು ಕೊಟ್ಟಿರುವರು. ಶರಣರ ನಂತರ ಒಂದ ದಾಸರಲ್ಲಿ ಪುರಂದರ ದಾಸ, ಕನಕದಾಸ, ವಿಜಯದಾಸ ಮುಂತಾದವರು ದಾಸ ಸಾಹಿತ್ಯವನ್ನು ಮನೆಮನೆಗೆ ಹಾಡಿ ಹರಿಸಿದ್ದಾರೆ. ಇವರಲ್ಲದೆ ಸರ್ವಜ್ಞ ಸಂಚಿಯ ಹೊನ್ನಮ್ಮ, ಮುದ್ದಣ್ಣ ಕುಮಾರವ್ಯಾಸ ಚಾಮರಸರು ಮುಂತದವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವರು. ಆಧುನಿಕ ಸಾಹಿತ್ಯವನ್ನು ಕುವೆಂಪು, ಬೇಂದ್ರೆ, ಮಾಸ್ತಿ, ಕಾರಂತ, ಪುತಿನ ಹಾಗೂ ಸಿದ್ಧಯ್ಯ ಪುರಾಣಿಕ ಮುಂತಾದವರು ಸಮೃದ್ಧವಗಿ ಸಾಹಿತ್ಯ ರಚಿಸಿ ಉಪಕರಿಸಿದ್ದಾರೆ.

ಕರ್ನಾಟಕವು ಜನಪದ ಸಾಹಿತ್ಯದ ತವರಾಗಿದೆ. ಉತ್ಕೃಷ್ಟವಾದ ಜನಪದ ಮಹಕಾವ್ಯಗಳನ್ನು ಹಾಡುವವರು ಕತೆ ಹೇಳುವವರು ಬಯಲಾಟದವರು ಪ್ರದರ್ಶನ ಕಲೆಗಾರರು ಮುಂತಾದ ಸಮೃದ್ಧವಾದ ಜಾನಪದ ಸಾಹಿತ್ಯ ರಚಿಸಿದವರು ಕಲಾಗಾರರು ದೊರೆಯುತ್ತಾರೆ. ಜಾನಪದ ಸಹಿತ್ಯ ಸೌಂದರ್ಯಕ್ಕೆ ಮಾರು ಹೋಗಿ ಡಾ. ಬಿ.ಎಸ್. ಗದವಿಮಠ, ಡಾ. ಸಿಂಪಿ ಲಿಂಗಣ್ಣ, ಬೆಟಗೇರಿ ಕೃಷ್ಣ ಶರ್ಮ ಡಾ. ಈ.ಶ.ಪ ಮುಂತಾದವರು ತಮ್ಮ ಜೀವನವನ್ನು ಜಾನಪದ ಸಹಿತ್ಯ ಸಂಗ್ರಹಣೆ ಸಂಪಾದನೆ ಮತ್ತು ಪ್ರಕಟಣೆಗೆ ಸಮರ್ಪಿಸಿ ಸಮೃದ್ಧವಾದ ಜಾನಪದ ಸಾಹಿತ್ಯದ ಪ್ರಕಾರಗಳನ್ನು ವಿದ್ವತ್ಪೂರ್ಣ ಅದ್ಯಾಯನದ ಮೂಲಕ ಪ್ರಕಟಿಸಿ ಕನ್ನಡ ನಾಡಿನ ಸಂಸ್ಕೃತಿಯನ್ನು ಜನಪದ ಸಾಹಿತ್ಯದ ಹಿರಿಮೆ ಗರಿಮೆಯನ್ನು ಬೆಳೆಸಿದ್ದಾರೆ.

ಅಪಾರವಾದ ಜನಪದ ಸಾಹಿತ್ಯವನ್ನು ನಾಡಿನ ಆಸಕ್ತ ವಿದ್ವಾಂಸರು ಅಧ್ಯಯನ ಮಾಡಿದಂತೆ ಕರ್ನಾಟಕದ ವಿಶ್ವ ವಿದ್ಯಾಲಯಗಳು ಕನ್ನಡ ಸಾಹಿತ್ಯದ ಅಧ್ಯಯನದೊಂದಿಗೆ ಜಾನಪದ ಸಹಿತ್ಯದ ಅಧ್ಯಯನ ಮತ್ತು ಸಶೋಧನೆಗೆ ಪ್ರೋತ್ಸಾಹ ನೀಡಿ ಅನೇಕ ಹೊಸ ತಲೆಮಾರಿನ ಜಾನಪದ ವಿದ್ವಾಂಸರನ್ನು ಸಿದ್ಧಗೊಳಿಸಿವೆ, ಹೊಸ ತಲೆ ಮಾರಿನ ಜಾನಪದ ವಿದ್ವಾಂಸರು ಅಪಾರವಾದ ಜಾನಪದ ಸಾಹಿತ್ಯ ಸಂಸ್ಕೃತಿ, ಜನಾಂಗ, ಭಾಷೆ ಹಾಗೂ ಕಥೆ, ಹಾಡು,

ಗಾದೆ, ಒಗಟು, ಬಯಲಾಟ ಮುಂತಾದ ಪ್ರಕಾರಗಳನ್ನು ಕುರಿತು ಸಂಶೋಧನ ಪ್ರಬಂಧಗಳನ್ನು ಪ್ರಕಟಿಸಿರುವರು. ಅಲ್ಲದೆ ಅಕ್ಷರ ಲೋಕದಿಂದ ವಂಚಿತರಾದ ಅನೇಕ ಆದಿವಾಸಿ, ದುರ್ಬಲ ಜನಾಂಗಗಳ ಸಹಿತ್ಯ ಜೀವನ ಕುರಿತು ಅಧ್ಯಾಯನದ ಮೂಲಕ ಹೊಸ ಬೆಳಕು ಚೆಲ್ಲಿರುವರು, ಇಂಥ ಅಧಯ್ಯನ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಡಾ. ಚೆನ್ನಣ್ಣ ವಾಲಿಕರ, ಡಾ. ವೀರಣ್ಣ ದಂಡೆ, ಡಾ. ಬಸವರಾಜ ಮೋಲಿಸ ಪಾಟೀಲ, ಪ್ರೊ. ಸೂಗಯ್ಯ ಹಿರೇಮಠರು ಪ್ರಮುಖರಾಗಿರುವರು.

ಪ್ರೊ. ಸೂಗಯ್ಯ ಹಿರೇಮಠರು ಗುಲಬರ್ಗಾ ಜಿಲ್ಲೆಯ ಆಧುನಿಕ ಸಾಹಿತ್ಯ ಮತ್ತು ಜನಪದ ಸಾಹಿತ್ಯದ ಹೆಸರಾಂತ ಲೇಖಕರಾಗಿರುವರು. ಕವನ, ಕಥೆ, ವಿಮರ್ಶೆ, ವ್ಯಾಕರಣ ಅಲ್ಲದೆ ಜಾನಪದ ಸಾಹಿತ್ಯ ಕುರಿತು ಅನೇಕ ಮಹತ್ವದ ಕೃತಿಗಳನ್ನು ರಚಿಸಿದ ಪ್ರತಿಭಾನ್ವಿತರು. ಹೋರಾಟಗಾರರು, ಸಂಘಟನಾ ಚತುರರಾದ ಪ್ರೊ ಸೂಗಯ್ಯ ಹಿರೇಮಠರ ಜೀವನ ಮತ್ತು ಜನಪದ ಕೃತಿಗಳ ಅಧ್ಯಾಯನ ಮಾಡುವದು ಅಗತ್ಯವಾಗಿದೆ. ಈ ಪ್ರಬಂಧದ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯಲ್ಲಿ ಸಂಕ್ಷಿಪ್ತವಾಗಿ ವಿವರಿಸಿರುವ, ಪ್ರೊ. ಸೂಗಯ್ಯ ಹಿರೇಮಠರ ಮನೆತನ, ಬಾಲ್ಯ ಶಿಕ್ಷಣ, ಹೋರಾಟ ಜೀವನ, ಕುಟುಂಬ ಜೀವನ ವೃತ್ತಿ ಜೀವನ, ಕುರಿತು ಅಧ್ಯಾಯನದಲ್ಲಿ ವಿವರಿಸಲಾಗಿದೆ. "ಬೆಳೆಯ ಸಿರಿ ಮೊಳಕೆಯಲ್ಲಿ" ನೋಡು ಎನ್ನುವ ಗಾದೆಯಂತೆ ಹಿರೇಮಠರು ಬಾಲ್ಯದಿಂದಲೂ ಹೋರಾಟಗಾರರಾಗಿದ್ದಾರೆ.

ಆದರೆ ಜೀವನದ ಬೆಳವಣಿಗೆಯಲ್ಲಿ ವೈವಿದ್ಯಮಯ ಹೋರಾಟದ ಸಾರ್ಥಕ ಬದುಕನ್ನು ಕಾಣುತ್ತವೆ. ವಿವರ ಮನೆತನವು ಸುಸಂಸ್ಕೃತ ಮನೆತನವಾಗಿದೆ. ಸಾಹಿತ್ಯ, ಸಂಗೀತ ಮತ್ತು ಜನಪದದ ಸಂಗಮವಾಗಿದೆ. ಹೀಗಾಗಿ ಪ್ರೊ. ಹಿರೇಮಠರು ಜನಪದ ಸಾಹಿತ್ಯದ ಸಂಗ್ರಹಕಾರ ಹಾಗೂ ಸಂಪದಾಕನಾಗಿ ಬೆಳೆಯಲು ಸಹಕಾರಿಯಾಗಿದೆ. ಆದ್ದರಿಂದಲೇ ಇಂದು ರಾಜ್ಯಮಟ್ಟದಲ್ಲಿಯು ಜಾನಪದ ಲೋಕದಲ್ಲಿ ವಿದ್ವಾಂಸರಾಗಿ ಹೆಸರು ಗಳಿಸಿರುವರು.

ಪ್ರೊ. ಸೂಗಯ್ಯ ಹಿರೇಮಠರು ಕನ್ನಡ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿರುವರು ಸುಮಾರ ೩೦ಕ್ಕೂ ಹೆಚ್ಚು ಕೃತಿಗಳ ಪ್ರಕಟವಾಗಿವೆ. ಈ ಪ್ರಬಂಧದಲ್ಲಿ ಅವರ ಜೀವನ ಜನಪದ ಕೃತಿಗಳ ಕುರಿತು ಅಧ್ಯಯನ ಮಾಡಲಾಗಿದೆ. ಅಲ್ಲದೆ ಅವರು ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾದ ಗುಲಬರ್ಗಾದ ಅಂದಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಬಿ. ಹೆಂಡಿಯವರ ನೇತೃತ್ವದಲ್ಲಿ ಯು.ಜಿ.ಸಿ. ಧನ ಸಹಾಯ ಪಡೆದು ಉತ್ತರ ಕರ್ನಾಟಕದ ೭ ಜಿಲ್ಲೆಗಳ ಜನಪದ ಸಾಹಿತ್ಯ ಸಂಗ್ರಹ ಸಂಪಾದನೆ ಮತ್ತು ಪ್ರಕಟಣೆಯೋಜನೆಯಲ್ಲಿ ಸಹಾಯಕ ಸಂಶೋಧಕರಾಗಿ ಪ್ರತಿಯೊಂದು ಜಿಲ್ಲೆ ಸುತ್ತಾಡಿ ಆ ಗ್ರಾಮಗಳಲ್ಲಿಯ, ಜನಪದ ಹಾಡು

ಕಥೆ ಹೇಳುವ ವ್ಯಕ್ತಿಗಳನ್ನು ಹುಡುಕಿ ಅವರಿಂದ ಹಾಡಿಸಿ ಅಪಾರವಾದ ಜನಪದ ಸಾಹಿತ್ಯವನ್ನು ಸಂಗ್ರಹಿಸಿದ ಅನುಭವಿಗಳು.

ಅಲ್ಲದೆ ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರಿನಿಂದ ಯು.ಜಿ.ಸಿ. ನೆರವಿನೊಂದಿಗೆ ನಡೆದ ಜನಪದ ವೈದ್ಯಕೋಶದ ಗುಲಬರ್ಗಾ ಜಿಲ್ಲೆಯ ಮಾಹಿತಿ ಸಂಗ್ರಹಕಾರರಾಗಿ ಹಳ್ಳಿಗಳಲ್ಲಿ ಜನಪದ ವೈದ್ಯರು ಜನ ಮತ್ತು ದನಗಳ ವಿವಿಧ ರೋಗಗಳಿಗೆ ಕೊಡುವ ಮದ್ದು ಮತ್ತು ಚಿಕಿತ್ಸೆ ಮಾಡುವ ವಿಧಾನ, ಔಷಧ ಸಸ್ಯಗಳ ಕುರಿತು ಸವಿವರ ಮಾಹಿತಿಯನ್ನು ಜಿಲ್ಲೆಯ ಹಳ್ಳಿಗಳನ್ನು ಸುತ್ತಾಡಿ ಹೇರಳವಾದ ಮಾಹಿತಿಯನ್ನು ಸಂಗ್ರಹಿಸಿ ಕೊಟ್ಟಿರುವರು.

ಈ ಮೇಲಿನ ಸಂಗ್ರಹ ಕಾರ್ಯದಲ್ಲಿ ತೊಡಗಿಸಿಕೊಂಡ ಹಿರೇಮಠರು ಜನಪರ ಸಾಹಿತ್ಯ ಸಂಸ್ಕೃತಿ ಮೌಲ್ಯಗಳಲ್ಲದೆ ಅವರ ಬದುಕಿನ ರೀತಿನೀತಿಗಳು, ಜನಾಂಗಳ, ಆಚರಣೆಗಳ ಕುರಿತು ಅಪಾರವಾದ ಜ್ಞಾನವನ್ನು ಪಡೆದರು. ಆ ಅನುಭವದಿಂದಲೇ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಎಂಬ ಕೃತಿಯನ್ನು ಮೊದಲಿಗೆ ಬರೆದರು. ಈ ಜನಪದ ಸಾಹಿತ್ಯದ ಪ್ರಕಾರಗಳಾದ ಕಥೆ, ಹಾಡು ಹಾಗೂ ಆಚರಣೆಗಳನ್ನು ಗಮನಿಸಿ ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಮೌಲ್ಯಗಳನ್ನು ಗುರುತಿಸಿ ಉದಾಹರಣೆಗಳೊಂದಿಗೆ ವಿಶ್ಲೇಷಿಸಿರುವರು. ಕೃತಿ ಚಿಕ್ಕದಾಗಿದ್ದರೂ ಜನಪದ ಮೌಲ್ಯಗಳ ವಿವೇಚನೆ ಮತ್ತು ವಿಶ್ಲೇಷಣೆಯಲ್ಲಿ ಮಹತ್ವದ ಕೃತಿಯೆಂದು ಮೆಚ್ಚುಗೆ ಪಡೆದಿದೆ.

ಜನಪದ ವೈದ್ಯಕೋಶದ ಸಂಗ್ರಹಕಾರರಾಗಿ ಮಾಡಿದ ಕ್ಷೇತ್ರಕಾರ್ಯದ ಅನುಭವದಿಂದ ಜನಪದ ವೈದ್ಯ ಪದ್ಧತಿ ಮತ್ತು ಮನೆಮದ್ದು ಎಂಬ ಎರಡು ಗ್ರಂಥಗಳನ್ನು ರಚಿಸಿರುವರು. ಜನಪದ ವೈದ್ಯ ಪದ್ಧತಿಯು ಆಧುನಿಕ ವೈದ್ಯ ಪದ್ಧತಿಯು ಬೆಳೆಯುವುದಕ್ಕಿಂತಲೂ ಹಿಂದೆ ಜನ ಮತ್ತು ದನಗಳಿಗೆ ಜನಪದ ವೈದ್ಯರೇ ಆಯಾ ಕಾಲದ ಜನರ ಆರೋಗ್ಯವನ್ನು ರಕ್ಷಿಸುವ ಕಾರ್ಯವನ್ನು ಮಾಡಿದ ಪ್ರಮಾಣಿಕ ಜೀವಿಗಳು ಇಂಥ ಜನಪದ ವೈದ್ಯರನ್ನು ಗುರುತಿಸಿ ಅವರಲ್ಲಿಯ ಜ್ಞಾನವನ್ನು ಸಂಗ್ರಹಿಸುವದು ಅಷ್ಟೇ ಮಹತ್ವದ್ದಾಗಿದೆ. ಆದಿ ಮಾನವನು ತನ್ನ ಪರಿಸರದಲ್ಲಿ ಬೆಳೆದ ಸಸ್ಯಗಳ ಎಲೆ ಕಾಯಿ ಬೀಜಗಳಿಂದಲೇ ಮದ್ದನ್ನು ತಯಾರಿಸಿ ತಿಂದು ರೋಗ ಪರಿಹರಿಸಿಕೊಂಡು ಮುಂದೆ ಅದನ್ನು ಬರೆಯುವವರಿಗೆ ಕೊಟ್ಟು ಉಪಶಮನ ಮಾಡಿರುವದೇ ಮುಂದೆ ಜನಪದ ವೈದ್ಯ ಪದ್ಧತಿಯಾಗಿ ಬೆಳೆದು ಬಂತೆಂದು ವಿವರಿಸಿದ್ದಾರೆ. ಅಲ್ಲದೆ ವೈದ್ಯರ ಪ್ರಕಾರಗಳನ್ನು ಮತ್ತು ಪದಾರ್ಥಗಳು ರೋಗ ಮತ್ತು ಮದ್ದುಗಳನ್ನು ಕುರಿತು ಬರೆದ ಮಹತ್ವದ ಗ್ರಂಥವಾಗಿದೆ.

ಪ್ರೊ. ಹಿರೇಮಠರ ಜನಪದ ವೈದ್ಯಪದ್ಧತಿಯ ಅನುಭವವನ್ನು ಗುರುತಿಸಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಬೆಂಗಳೂರು ಅವರು ಇವರಿಂದ 'ಮನೆಮದ್ದು' ಎನ್ನುವ ಗ್ರಂಥ ಬರೆಸಿ ಪ್ರಕಟಿಸಿದ್ದಾರೆ. ಈ ಮನೆಮದ್ದು ಕೃತಿಯಲ್ಲಿ ಜನಸಾಮಾನ್ಯರಿಗೆ ದೈನಂದಿನ ಜೀವನದಲ್ಲಿ ಕಾಡುವ ನೆಗಡಿ, ಕೆಮ್ಮು ಮುಂತಾದ ಚಿಕ್ಕ ಕಾಯಿಲೆಗಳಿಗೆ ಆಸ್ಪತ್ರೆ ಅವಲಂಬಿಸದೆ ನಮ್ಮ ಪರಂಪರೆಯಲ್ಲಿ ಬಳಸುತ್ತ ಬಂದಿರುವ ಗೃಹ ಮತ್ತು ಪರಿಸರದಲ್ಲಿ ದೊರೆಯುವ ಸಸ್ಯ ಹಾಗೂ ಸಾಂಬಾರ ತಿನಿಸುಗಳಿಂದ ಪರಿಹರಿಸಲು ಸಾಧ್ಯವಿದೆಯೆಂದು ಸುಮಾರು ೬೯ ರೋಗಗಳಿಗೆ ಸುಲಭ ಸಾಧ್ಯವಾದ ಮದ್ದುಗಳ ವಿವರಣೆ ನೀಡಿದ್ದಾರೆ. ಆದ್ದರಿಂದ ಈ ಕೃತಿಯು ಸುಲಭ ಹಾಗೂ ಸರಳ ಮದ್ದಿನಿಂದ ಜನರ ಆರೋಗ್ಯವನ್ನು ಕಾಪಾಡುವಲ್ಲಿ ಉಪಯುಕ್ತ ಕೃತಿಯೆಂದು ಪ್ರಶಂಸೆ ಗಳಿಸಿದೆ.

ಬೀದರ ಜಿಲ್ಲೆಯ ನಾಗರಿಕರ ಆರೋಗ್ಯ ಕಾಪಾಡಲು ಪ್ರಕೃತಿಯ ವರದಾನವಾಗಿದ್ದ ಇಲ್ಲಿಯ ನೆಲ ಮತ್ತು ಜಲ ಸಂಪತ್ತನ್ನು ಸದುಪಯೋಗಪಡಿಸಲು ಬೀದರ ಜಿಲ್ಲೆಯ ಅರಣ್ಯ ಹಾಗೂ ಜಿಲ್ಲಾ ಪಂಚಾಯತ್ ಅಧಿಕಾರಿಗಳು ಸರಕಾರದ ಧನ ಸಹಾಯದೊಂದಿಗೆ ದೇವ ದೇವ ವನವನ್ನು ನಿರ್ಮಿಸಿದೆ. ದೇವ ದೇವ ವನದ ಔಷಧೀಯ ಸಸ್ಯಗಳ ಕುರಿತು ಗ್ರಂಥ ರಚಿಸಿಕೊಡಲು ಪ್ರೊ. ಹಿರೇಮಠರನ್ನು ಕೇಳಿಕೊಂಡಾಗ ಪ್ರೊ. ಹಿರೇಮಠರು ತಮ್ಮೊಂದಿಗೆ ಸಸ್ಯ ಶಾಸ್ತ್ರದ ಅಧ್ಯಾಪಕರಾದ ಪ್ರೊ. ಬಿ.ಎಸ್. ಸಜ್ಜನ ಅವರನ್ನು ಸೇರಿಸಿಕೊಂಡರು ದೇವ ದೇವ ವನಗಳ ಪೌರಾಣಿಕ ಹಿನ್ನಲೆ ಮತ್ತು ಔಷಧೀಯ ಸಸ್ಯಗಳ ಮಹತ್ವ ಕುರಿತು ಸಹ ಚಿತ್ರದೊಂದಿಗೆ ವಿವರಿಸಿರುವರು ಅಲ್ಲದೆ ಆ ವನದಲ್ಲಿ ಬೆಳೆಸಿದ ಸುಮಾರು ೭೬ ಔಷಧೀಯ ಸಸ್ಯಗಳ ವೈಜ್ಞಾನಿಕ ಹೆಸರು ಅವುಗಳ ಉಪಯೋಗ ಕುರಿತು ವಿವರಿಸಿದ್ದಾರೆ. ಇದು ಅಳಿದು ಹೋಗುತ್ತಿರುವ ಔಷಧೀಯ ಸಸ್ಯಗಳ ಮಾಹಿತಿ ನೀಡುವ ಆಕಾರ ಗ್ರಂಥವಾಗಿದೆ.

ಜಾನಪದ ಸಂಸ್ಕೃತಿ ಕೃತಿಯಲ್ಲಿ ೧೩ ಲೇಖನಗಳಿದ್ದು ಜನಪದ ಕಲೆ, ಸಾಹಿತ್ಯ ವೈದ್ಯ ಪದ್ಧತಿ ಆಚರಣೆ ಹಾಗೂ ಜನಪದ ಜಿದ್ದುಗಳು ಅಲ್ಲದೆ ಹೈದ್ರಾಬಾದ ಕರ್ನಾಟಕದ ವಿಮೋಚನೆಯ ಹಾಡುಗಳನ್ನು ಕುರಿತು ಸಂಶೋಧನಾತ್ಮಕವಾಗಿ ಬರೆದಿರುವದರಿಂದ ಈ ಕೃತಿಯಲ್ಲಿ ಜಾನಪದ ಸಂಸ್ಕೃತಿಯ ಸತ್ವ ಪೂರ್ಣ ಅಂಶಗಳನ್ನು ಇಂದಿನ ಜಾಗತೀಕರಣದಲ್ಲಿ ಮತ್ತೆ ಉಳಿಸಿಕೊಳ್ಳುವದರ ಕಡೆಗೆ ಗಮನ ಸೆಳೆಯುವ ಮಹತ್ವದ ಕೃತಿಯಾಗಿದೆ. ಇವುಗಳಲ್ಲದೆ ಇತರ ಜನಪದ ಬಿಡಿ ಲೇಖನಗಳು ಮತ್ತು ಅಮೃತ ಬಳ್ಳಿ ಸ್ಮರಣ ಸಂಚಿಕೆ ಪ್ರಕಟವಾಗಿದೆ.

ಪ್ರಸ್ತುತ ಪ್ರಬಂಧದಲ್ಲಿ ಮೇಲಿನ ಕೃತಿಗಳ ಸಮಗ್ರ ಅಧ್ಯಯನದೊಂದಿಗೆ ನನ್ನ ಜ್ಞಾನದ ಪರಿಮಿತಿಯಲ್ಲಿ ಪ್ರೊ. ಸೂಗಯ್ಯ ಹಿರೇಮಠರ ಜೀವನ ಮತ್ತು ಜನಪದ ಕೃತಿಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದೇನೆ.

ಅಧ್ಯಾಯ : ೬

ಅನುಬಂಧ

- ಪ್ರೊ. ಸೂಗಯ್ಯ ಹಿರೇಮಠರ ಕೃತಿಗಳ ಕುರಿತು ವಿದ್ವಾಂಸರ ಪ್ರತಿಕ್ರಿಯೆಗಳು
- ಭಾವಚಿತ್ರಗಳು
- ಗ್ರಂಥಋಣ

ಪ್ರೊ. ಸೂಗಯ್ಯ ಹಿರೇಮಠ ಅವರ ವೈಯಕ್ತಿಕ ವಿವರ

ಅಧ್ಯಾಯ : ೬

ಅನುಬಂಧ

- **ಪ್ರೊ. ಸೂಗಯ್ಯ ಹಿರೇಮಠರ ಕೃತಿಗಳ ಕುರಿತು ವಿದ್ವಾಂಸರ ಪ್ರತಿಕ್ರಿಯೆಗಳು :**

ಇದೊಂದು ಉಪನ್ಯಾಸ ಪ್ರಬಂಧದ ಕಿರುಹೊತ್ತಿಗೆ ಜನಪದ ಸಾಹಿತ್ಯದ ವಿಸ್ತಾರ ಅಪಾರ. ಆ ಜೀವನದ ವಿಶೇಷತಃ ಗ್ರಾಮೀಣ ಬದುಕಿನ ಸ್ತರದಲ್ಲಿ ಜಾನಪದ ಸಾಹಿತ್ಯವು ಒಳಗೊಳ್ಳದ, ಚಿಂತಿಸದ, ಅನುಭವ-ಅನುಭಾವಗೊಂಡಿದ್ದನ್ನು ನುಡಿದಿರದ ವಿಚಾರವಾಗಲೀ, ಸಂಗತಿಗಳಾಗಲೀ ಇಲ್ಲವೆಂಬಷ್ಟು ಅದು ಹಾದು ಬಂದಿದೆ. ಇದನ್ನು ಇತ್ತೀಚೆಗೆ ಅನೇಕ ವಿದ್ವಾಂಸರು ಶೋಧನೆ ನಡೆಸಿ ವಿಪುಲ ಸಂಖ್ಯೆಯಲ್ಲಿ ಗ್ರಂಥ ರೂಪದಲ್ಲಿ ದಾಖಲಿಸಿ ಉಪಕಾರ ಮಾಡಿದ್ದಾರೆ. ಅಲ್ಲಿ ತುಂಬಿಕೊಂಡಿರುವ ಜೀವನದ ದೃಷ್ಟಿ, ಭಾವನೆ, ನಂಬಿಕೆಗಳನ್ನು ಪರಿಚಯಿಸುವ ವಿಮರ್ಶಾ ಕೃತಿಗಳೂ ಮಹತ್ವಪೂರ್ಣವಾಗಿ ಬಂದಿವೆ. ಈ ಸಾಲಿಗೆ ಸೇರಿಕೊಳ್ಳಬಹುದಾದ ಮೌಲಿಕ ಅರ್ಥ ವಿವರಣೆ ಹೊಂದಿದ ಇದೊಂದು ಪುಟ್ಟ ಕೊಡುಗೆ.

ಈ ಕಿರುಹೊತ್ತಿಗೆಯಲ್ಲಿ ಲೇಖಕರು ಜಾನಪದ ಸಾಹಿತ್ಯದಲ್ಲಿ ವಿಶೆಷತಃ ಕಾವ್ಯಗಳಲ್ಲಿ ಒಳಮೂಡಿರುವ ಜೀವನ ಮೌಲ್ಯಗಳನ್ನು ಅರ್ಥವತ್ತಾಗಿ ಗುರುತಿಸಿದ್ದಾರೆ. ಹಾಗೆ ಗುರುತಿಸುವಾಗ ಸಾಧ್ಯವಿದ್ದಷ್ಟೂ ಪರಿಸರ ಧರ್ಮ, ಪರಂಪರೆಯ ನಂಬಿಗೆಯ ಅಂಶಗಳಲ್ಲಿಯ ಸರ್ವಕಾಲಿಕವಾದ ಸಮಗ್ರ ಬದುಕಿಗೆ ಪೂರಕವಾದಂಥ ಮೌಲ್ಯಗಳನ್ನು ಮಾತ್ರ ಗುರುತಿಸಿ ವಿಶ್ಲೇಷಿಸಿದ್ದಾರೆ.

ಗ್ರಾಮೀಣ ಪರಿಸರದಲ್ಲಿ ಆ ಬದುಕಿಗೆ ಹತ್ತಿರವಾದ ಮಳೆ, ಬೆಳೆ, ಬೇಸಾಯ, ಮಣ್ಣು ನೀರುಗಳ ಕುರಿತಾಗಿ ಜನಪದ ಕಾವ್ಯವು ಮೂಡಿಸಿಕೊಂಡಿರುವ ಮೌಲಿಕ ಭಾವನೆಗಳನ್ನೂ ಅಲ್ಲಿ ಕಾಣುವ ತವರಿನ ಪ್ರೀತಿ, ತಂದೆ-ತಯಿಯರ ಮೇಲಿನ ಭಾವುಕ ಸಂಬಂಧ, ಪತಿವ್ರತಾ ಧರ್ಮ, ಸತಿ-ಪತಿ ಸಂಬಂಧ, ಮಕ್ಕಳ ಮಮತೆ, ತಾಯ್ತನದ ಹಂಬಲ, ಕೌಟುಂಬಿಕ ಸಂಬಂಧ, ನಡೆ-ನುಡಿ, ನೆರೆ-ಹೊರೆ, ಬಂಧು-ಬಳಗ, ಸಮಾಜ ಮುಂತಾದವುಗಳ ಕುರಿತು ವ್ಯಕ್ತವಾಗಿರುವ ನೀತಿ-ರೀತಿ-ಮೌಲ್ಯಗಳನ್ನು ಉದಾಹರಣೆಗಳ ಮೂಲಕ ಸಾದರಪಡಿಸಿದ್ದಾರೆ. 'ಆಯಾ ಕಾಲದ ಸಾಮೂಹಿಕ ಜನಾಂಗದ ಅಭಿವೃದ್ಧಿ ಮತ್ತು ಹಿತಕ್ಕಾಗಿ ಇಲ್ಲಿಯ ಮೌಲ್ಯಗಳು ನಿರ್ಮಾಣವಾಗಿವೆ. ಕಾಲಮನದಲ್ಲಿ ಕೆಲವು ಸ್ಥಿತ್ಯಂತರವಾಗಿವೆ. ಕೆಲವು ಸ್ಥಗಿತಗೊಂಡಿವೆ ಎಂದು ಅಭಿಪ್ರಾಯ ಪಟ್ಟ ಲೇಖಕರು; ಅಂಥ ಕಾಳಜಿಯಿಂದಲೇ ಕೃತಿಯಲ್ಲಿ ಕೆಲವು ಮೌಲ್ಯಗಳನ್ನು ಗುರುತಿಸಿ ಪರಿಚಯಿಸಿದ್ದು, ಜಾನಪದ ಕಾವ್ಯದಲ್ಲಿಯ ನೈತಿಕ ಕಾಳಜಿ ಹಾಗೂ ಉದಾತ್ತತೆ ಪರಿಚಯಕ್ಕೆ ಸಹಾಯಕವಾಗಿದೆ.

ನಾ.ಸು. ಭರತನಹಳ್ಳಿ

ದಿ. ೧೩/೧೨/೧೯೯೨ ಸಂಯುಕ್ತ ಕರ್ನಾಟಕ, ಸಾಪ್ತಾಹಿಕ ಸೌರಭದಲ್ಲಿ ಪ್ರಕಟವಾದ ವಿಮರ್ಶೆ.

"ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು, ನಮ್ಮ ಭವ್ಯ ಸಂಸ್ಕೃತಿಗೆ ಜನಪದ ಸಾಹಿತ್ಯ ನೀಡಿರುವ ಕೊಡುಗೆಯನ್ನು ನಿಮ್ಮ ಹೊತ್ತಗೆ ಚೆನ್ನಾಗಿ ಧ್ವನಿಸುತ್ತದೆ."

ಸೆಪ್ಟೆಂಬರ ೧೫-೯೧ ಡಿ. ಲಿಂಗಯ್ಯ ಎಂ.ಎ., ಬೆಂಗಳೂರು

'ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ಎಂಬ ನಿಮ್ಮ ಆ ಪುಸ್ತಿಕೆಯನ್ನು ಆಸಕ್ತಿಯಿಂದ ಓದಿ ಸಂತೋಷಿಸಿದೆ. ಸಾಮಾನ್ಯ ಜನರಿಗೆ ಜಾನಪದವನ್ನೂ, ಜನಪದ ಸಾಹಿತ್ಯದ ತಿರುಳನ್ನು ಪರಿಚಯಿಸುವುದಕ್ಕೆ ಈ ಪುಸ್ತಿಕೆ ನೆರವಾಗುತ್ತದೆ. ಜಾನಪದ ದಿನದಿನಕ್ಕೂ ಬೆಳೆಯುತ್ತಿರುವ ವಿಜ್ಞಾನವಾಗಿದೆ. ಅದನ್ನೆಲ್ಲ ನೀವು ಮೈಗೂಡಿಸಿಕೊಳ್ಳಬೇಕು ಎಂಬುದೇ ನನ್ನ ಹಾರೈಕೆ. ಆಗಾಗ ಗುಲ್ಬರ್ಗಾ ನನ್ನ ನೆನಪಿಗೆ ನಿಮ್ಮಂಥ ಸನ್ಮಿತ್ರರ ಮೂಲಕ ಬರುತ್ತಿರುತ್ತದೆ ಅದೇ ನನ್ನ ಸಂತೋಷ.

ಆಗಸ್ಟ್ ೧೬, ೯೧ ಡಾ. ಹಾ.ಮಾ. ನಾಯಕ
ಮೈಸೂರು

ನೀವು ವಿಶ್ವಾಸದಿಂದ ಕಳುಹಿಸಿರುವ 'ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ಕೃತಿ ತಲುಪಿದೆ. ಪೀಠಿಕೆಯಿಂದ ಉಪಸಂಹರದವರೆಗೆ ನಡೆದಿರುವ ಮೌಲ್ಯ ವಿವೇಚನೆ ನೇರವಾಗಿ ಓದುಗನ ಹೃದಯವನ್ನು ಮುಟ್ಟುತ್ತದೆ. ನಿಮ್ಮ ವಿಶ್ಲೇಷಣೆಗೆ ಸೂಕ್ತ ಜನಪದ ಸೊಲ್ಲುಗಳನ್ನು ಆರಿಸಿಕೊಂಡಿದ್ದೀರಿ. ಈ ಅರ್ಥಪೂರ್ಣ ಕೃತಿಯನ್ನು ಪ್ರಕಟಿಸಿರುವ ಸ್ರೀ ಚನ್ನಬಸವೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಶ್ರೀ ಚನ್ನವೀರ ಶಿವಾಚಾರ್ಯರ ಚರಣಗಳಿಗೆ ಪ್ರಣಾಮ ಸಲ್ಲಿಸುತ್ತೇನೆ ಜನಪದ ಸಾಹಿತ್ಯದಲ್ಲಿ ಅಂತರ್ಗತವಾಗಿರುವ ಇತರ ಸೌಂದರ್ಯದ ಪರಿಚಯ ಮಾಡಿಕೊಡುವಲ್ಲೂ ನಿಮ್ಮಿಂದ ಸೇವೆ ನಡೆಯಲಿ ಎಂದು ಹಾರೈಸುತ್ತೇನೆ.

ದಿ. ೧೦/೧೨/೧೯೯೧ ಗೊ.ರು. ಚನ್ನಬಸಪ್ಪ, ಬೆಂಗಳೂರು

ನಿಮ್ಮ ಕೃತಿ 'ಜಾನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ನನಗೆ ನಿಜವಾಗಿಯೂ ಮೆಚ್ಚಿಗೆಯಾಯಿತು. ಮೌಲ್ಯ ವಿವೇಚನೆ ಮನನೀಯವಾಗಿದೆ. 'ಹಡಗ ಇಲ್ಲದ ಹೊಳಿಯ' ಅರ್ಥ ವಿವರಣೆ ತುಂಬಾ ಮನೋಜ್ಞವಾಗಿದೆ. ಸುಂದರ ಗದ್ಯ ಶೈಲಿಯ ಸಾಧಕರಾದ ನೀವು ಇನ್ನೂ ಇಂಥ ನೂರು ಕೃತಿಗಳನ್ನು ನೀಡಲೇಂದು ನನ್ನ ಹೃದಯದ ಹಾರೈಕೆ.

ದಿ. ೨೧/೧೧/೧೯೯೧ ಸಿದ್ಧಯ್ಯ ಪುರಾಣಿಕ, ಬೆಂಗಳೂರು

‘ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು’ ಕೃತಿ ಓದಿದೆ. ಒಂದು ಮಹಾ ಪ್ರಬಂಧಕ್ಕೆ ಕೈಪಿಡಿಯಾಗಿ ಮೂಡಿಬಂದಿದೆ. ತುಂಬ ಗಂಭೀರವಾಗಿ ಆಲೋಚಿಸಿದ್ದೀರಿ, ಬರೆದಿದ್ದೀರಿ. ನಿಮ್ಮ ಗದ್ಯ ಬರಹದಲ್ಲಿಯೂ ಪದ್ಯವಿರುತ್ತದೆ. ಓದಿ ಖುಷಿಗೊಂಡಿರುವೆ.

ದಿ. ೧೫/೧೦/೯೧

ಡಾ. ಚನ್ನಣ್ಣ ವಾಲೀಕಾರ
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

‘ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಗ್ರಂಥ ಓದಿದೆ. ವಿಷಯ ಬಹಳ ದೊಡ್ಡದು, ವ್ಯಾಪಕವಾದುದು. ಒಂದು ಭಾಷಣವಾದ ವ್ಯಾಪ್ತಿಯಲ್ಲಿ ಅದನ್ನು ಹೇಗೆ ಹೇಳಬಹುದೆಂಬುದನ್ನು ಬಹಳ ಚೆನ್ನಾಗಿ ಯೋಚಿಸಿಕೊಂಡಿದ್ದೀರಿ; ಮತ್ತು ಅದನ್ನು ತುಂಬಾ ಸಮರ್ಥವಾಗಿ ಕಾರ್ಯಗತಗೊಳಿಸಿದ್ದೀರಿ. ಪ್ರಾರಂಭದಲ್ಲಿಯೇ ಮೌಲ್ಯ ವಿವೇಚನೆಯನ್ನೂ, ಅನಂತರ ಜನಪದ ಸಾಹಿತ್ಯದಲ್ಲಿ ಆ ಮೌಲ್ಯಗಳು ಹೇಗೆ ಸಹಜವಾಗಿ ಅಭಿವ್ಯಕ್ತಗೊಂಡಿವೆಯೆಂಬುದನ್ನು ಪ್ರತಿಪಾದಿಸಿರುವ ರೀತಿ ಆಕರ್ಷಕವಾಗಿದೆ. ಒಳ್ಳೆಯ ಉದಾಹರಣೆಗಳನ್ನು ಆರಿಸಿಕೊಂಡು ಮನದಟ್ಟಾಗುವಂತೆ ನಿರೂಪಿಸಿದ್ದೀರಿ. ಜನಪದರ ಸಮಷ್ಟಿ ಮನಸ್ಸು ಹೇಗೆ ಮೌಲ್ಯಗಳನ್ನು ರೂಪಿಸಿಕೊಂಡಿದೆ ಮತ್ತು ಅವುಗಳನ್ನು ಜೀವನದಲ್ಲಿ ರೂಢಿಸಿಕೊಂಡಿದೆ ಎಂಬುದನ್ನು ಕಿರಿದಾದ ವ್ಯಾಪ್ತಿಯಲ್ಲಿ ಹಿರಿದಾಗಿ ಹೇಳುವ ನಿಮ್ಮ ಪ್ರಯತ್ನ ಸ್ತುತ್ಯವಾಗಿದೆ. ಕೃತಿ ಸ್ವಾಗತಾರ್ಹವಾಗಿದೆ. ಇನ್ನೂ ಹೆಚ್ಚಿನ ಕೃತಿಗಳು ನಿಮ್ಮಿಂದ ಬರಲಿ ಎಂದು ಹಾರೈಸುತ್ತೇನೆ.

ಪ್ರೊ. ಸೂಗಯ್ಯ ಹಿರೇಮಠರವರು ಕವಿ ಕಥೆಗಾರರು, ಜನಪದ ವೈದ್ಯಕೋಶಕ್ಕೆ ಗುಲಬರ್ಗಾ ಜಿಲ್ಲೆಯ ಸಂಗ್ರಹಕಾರರಾಗಿ ಮಾಹಿತಿ ನೀಡಿರುವರಲ್ಲದೆ ‘ಜನಪದ ವೈದ್ಯ ಪದ್ಧತಿ’ ಹಾಗೂ ಬೀದರ ಜಿಲ್ಲೆಯ ‘ದೇವ ದೇವ ವನ’ದಲ್ಲಿ ಔಷಧ ಸಸ್ಯಗಳ ಕುರಿತು ಮಹತ್ವದ ಗ್ರಂಥ ಬರೆದಿರುವರು.

ಇಂದಿನ ಕಲುಷಿತ ವಾತಾವರಣದಲ್ಲಿ ರೋಗಗಳು ಬರುವದು ಸಾಮಾನ್ಯ, ಆದರೆ ಅವುಗಳಿಗೆ ಔಷಧೋಪಚಾರ ತುಂಬಾ ದುಬಾರಿ ಮನೆಯಲ್ಲೇ ಸಿಗುವ ತಿನಸುಗಳಿಂದ ಸಾಮಾನ್ಯ ರೋಗಗಳಿಗೆ ಪಾರಂಪರಿಕ ಅನುಭವದಿಂದ ಔಷಧ ಸಿದ್ಧ ಪಡಿಸುವುದೇ ‘ಮನೆ ಮದ್ದು’ ಇಂಥ ಉಪಯುಕ್ತ ಕೃತಿ ಬರೆದ ಹಿರೇಮಠರು ಅಭಿನಂದನಾರ್ಹರು.

ದಿ. ೨೧/೦೫/೨೦೦೮

ಪ್ರೊ. ಎಚ್.ಬಿ. ಸತ್ಯ ಮೂರ್ತಿ
ಮ್ಯಾನೇಜ್‌ಮೆಂಟ ಅಧ್ಯಯನ ವಿಭಾಗ
ಸಿಟಿ ಕಾಲೇಜು, ಬೆಂಗಳೂರು.

ಜನಪದ ಸಂಸ್ಕೃತಿ ಕೃತಿಯಲ್ಲಿ ಹೈದ್ರಾಬಾದ ಕರ್ನಾಟಕ ವಿಮೋಚನೆಗಾಗಿ ನಡೆದಿರುವ ಹೋರಾಟವನ್ನು ಜನಪದ ಹಾಡಿನ ಮುಖಾಂತರ ಪರಿಚಯಿಸುವದರೊಂದಿಗೆ, ಈ ಭಾಗದ ಸಾಂಸ್ಕೃತಿಕ ಪರಿಸರ ಹಾಗೂ ಕಲೆ, ಸಹಿತ್ಯ, ವೈದ್ಯಕೀಯ, ಸಾಂಪ್ರದಯಿಕ ಆಚರಣೆ ಕುರಿತು ವಿವಿಧ ಲೇಖನಗಳನ್ನು ಬರೆದು ಕನ್ನಡ ಜನಪದ ಸಾಹಿತ್ಯಕ್ಕೆ ಮಹತ್ವದ ಕೃತಿ ನೀಡಿದ್ದಾರೆ.

ದಿ. ೧/೧೧/೨೦೦೬ ಡಾ. ಜಿ. ಕೃಷ್ಣಪ್ಪ

ಪ್ರೊ. ಸೂಗಯ್ಯ ಹಿರೇಮಠ ಅವರ ವೈಯಕ್ತಿಕ ವಿವರ

೧. ಪೂರ್ಣ ಹೆಸರು	:	ಸೂಗಯ್ಯ ಹಿರೇಮಠ
೨. ಜನ್ಮ ದಿನಾಂಕ	:	೦೯/೦೫/೧೯೫೦
೩. ಜನ್ಮ ಸ್ಥಳ, ತಾಲ್ಲೂಕು, ಜಿಲ್ಲಾ	:	ಸಿಂಗನಹಳ್ಳಿ, ಶಹಾಪೂರ, ಗುಲಬರ್ಗಾ ಜಿಲ್ಲೆ
೪. ತಂದೆ ತಾಯಿ ಹೆಸರು	:	ದಿ. ಶರಣಯ್ಯ, ಶಾಂತಮ್ಮ ಹಿರೇಮಠ ಸಿಂಗನಹಳ್ಳಿ ತಾ. ಶಹಾಪೂರ
೫. ಓದಿದ ಶಾಲೆ	:	ಸರಕಾರಿ ಪ್ರೌಢ ಶಾಲೆ, ಗೋಗಿ ತಾ. ಶಹಾಪೂರ ಜಿ. ಗುಲಬರ್ಗಾ
೬. ಓದಿದ ಕಾಲೇಜು ಬಿ.ಎ. ಪದವಿ	:	ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯ, ಗುಲಬರ್ಗಾ.
೭. ಎಂ.ಎ. ಪದವಿಗೆ ಓದಿದ ವಿಷಯ ಹಾಗೂ ಪದವಿ ಪಡೆದ ವರ್ಷ	:	ಕನ್ನಡ ಮತ್ತು ಜಾನಪದ, ಕರ್ನಾಟಕ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಗುಲಬರ್ಗಾ.
೮. ಸಹಾಯಕ ಸಂಶೋಧಕ	:	೧೯೭೬ರಿಂದ ೧೯೮೦ರವರೆಗೆ, ಕರ್ನಾಟಕ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ ಕನ್ನಡ ವಿಭಾಗ, ಗುಲಬರ್ಗಾ.
೯. ಹಿಂದೆ ಕೆಲಸ ಮಾಡುತ್ತಿದ್ದ ಸಂಸ್ಥೆಯ ವಿಳಾಸ, ಹುದ್ದೆ, ಸಂಸ್ಥೆ	:	ಪ್ರಭಾರಿ ಪ್ರಾಂಶುಪಾಲರು, ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಶ್ರೀಮತಿ ಚನ್ನಮ್ಮ ಬಸಪ್ಪಾ ಪಾಟೀಲ ಪದವಿ ಮಹಾವಿದ್ಯಾಲಯ, ಚಿಂಚೋಳಿ, ಜಿಲ್ಲಾ. ಗುಲಬರ್ಗಾ.
೧೦. ಸದ್ಯದ ಹುದ್ದೆ ಮತ್ತು ವಿಳಾಸ	:	ಕನ್ನಡ ಪ್ರಾಧ್ಯಾಪಕರು, ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಬಿ.ಬಿ. ಭೂಮರೆಡ್ಡಿ ಮಹಾವಿದ್ಯಾಲಯ, ಬೀದರ-೫೮೫೪೦೩.

ಕ್ರ.ಸಂ.	ಗ್ರಂಥದ ಹೆಸರು	ಪ್ರಕಾರ	ಪ್ರಕಟವಾದ ವರ್ಷ	ಪ್ರಕಾಶನ
೧.	ಉಂಡು ಮಲಗಿದವರು	ಕವನ ಸಂಕಲನ	೧೯೮೪	ಧ್ವನಿ ಪ್ರಕಾಶನ, ಚಿಂಚೋಳಿ
೨.	ನಿಜಗುಣಾರ್ಯ ವಿರಚಿತ ಪಂಚಾಂಗ	ಸಂಪಾದನೆ	೧೯೮೫	ಕಲ್ಯಾಣ ನಾಡಿನ ಶರಣ ಪರಿಷತ್, ಹುಮನಾಬಾದ
೩.	ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು	ವಿಮರ್ಶೆ	೧೯೯೨	ಶ್ರೀ ಚನ್ನವೀರ ಶಿವಾಚಾರ್ಯರ ಸಂಸ್ಥಾನ ಹಿರೇಮಠ, ಹಾರಕೂಡ
೪.	ಅಂತರ	ಕಥಾಸಂಕಲನ	೧೯೯೨	ಶ್ರೀ ಚನ್ನವೀರ ಶಿವಾಚಾರ್ಯರ ಸಂಸ್ಥಾನ ಹಿರೇಮಠ, ಹಾರಕೂಡ
೫.	ನೀರು ನೆಲೆ	ಕವನ ಸಂಕಲನ	೧೯೯೨	ನಟರಾಜ ಪ್ರಕಾಶನ, ಸಿಂಗನಹಳ್ಳಿ ತಾ. ಶಹಪೂರ ಜಿ. ಗುಲಬರ್ಗಾ
೬.	ಉರಿಲಿಂಗ ಪದ್ದಿ	ಜೀವನ ಚರಿತರೆ	೧೯೯೩	ಪ್ರಸಾರಾಂಗ, ಗು.ವಿ. ಗುಲಬರ್ಗಾ
೭.	ಸರಳ ಕನ್ನಡ ವ್ಯಾಕರಣ	ವ್ಯಾಕರಣ	೧೯೯೩	ಕುಮಾರ ಪ್ರಕಾಶನ, ಚಿಂಚೋಳಿ
೮.	ಹುಳಗಳು	ಕಥಾ ಸಂಕಲನ	೧೯೯೩	ಬೇವು ಬೆಲ್ಲ ಪ್ರಕಾಶನ, ಗುಲಬರ್ಗಾ
೯.	ಶಹಾಮೂರ ದರ್ಶನ	ಸಂಪಾದನೆ	೧೯೯೪	ದರ್ಶನ ಪ್ರಕಾಸನ, ಶಹಾಪೂರ
೧೦.	ರಾಮಪುರ ಬಕ್ಕಪ್ಪನ ಹಾಡುಗಳು	ಸಂಪಾದನೆ	೧೯೯೪	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
೧೧.	ವಡ್ಡಾರಾಧನೆ (ಆಯ್ದ ಕಥೆಗಳು) (ಬಿ.ಎ. ತೃತೀಯ ಐಚ್ಛಿಕ ಪಠ್ಯ ಮಸ್ತಕ ೯೬-೯೮)	ಸಂಪಾದನೆ	೧೯೯೬	ಪ್ರಸರಾಂಗ, ಗು.ವಿ. ಗುಲಬರ್ಗಾ
೧೨.	ರಂಜೇರುವಿನ ಸಿಂದರು	ಸಂಶೋಧನೆ	೧೯೯೯	ಪ್ರಸಾರಾಂಗ, ಬಿ.ವಿ.ಬಿ. ಮಹಾವಿದ್ಯಾಲಯ, ಬೀದರ ಹಾಗೂ ಯು.ಜಿ.ಸಿ. ದೆಹಲಿ
೧೩.	ಜನಪದ ವೈದ್ಯ ಪದ್ಧತಿ	ವೈದ್ಯಕೀಯ	೨೦೦೦	ಪ್ರಸರಾಂಗ, ಗು.ವಿ. ಗುಲಬರ್ಗಾ
೧೪.	ಕಿನ್ನರಿ ಬೊಮ್ಮಯ್ಯ	ಚರಿತ್ರೆ	೨೦೦೧	ಕಲ್ಯಾಣ ನಾಡಿನ ಶರಣ ಪರಿಷತ್ತು, ಹುಮನಾಬಾದ ಜಿ. ಬೀದರ
೧೫.	ರಂಜೇರಿನ ಸಿಂದರು	ಸಂಶೋಧನೆ	೨೦೦೩	ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ
೧೬.	ಮಳೆ ಬಂತು ಮಳೆ	ಶಿಶು ಪ್ರಾಸಗಳು	೨೦೦೩	ಜ್ಯೋತಿ ಪ್ರಕಾಶನ ಬೀದರ
೧೭.	ಬೇವು ಕಚ್ಚಿದ ಬಾಯಿ	ಕಥಾಸಂಕಲನ	೨೦೦೪	ಕ.ಸ.ಪಾ. ಬೆಂಗಳೂರು
೧೮.	ಹೇಮರೆಡ್ಡಿ ಮಲ್ಲಮ್ಮ	ಚರಿತ್ರೆ	೨೦೦೪	ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ
೧೯.	ದೇವ ದೇವ ವನ	ಔಷಧೀಯ ಸಸ್ಯಗಳು	೨೦೦೫	ಅರಣ್ಯ ಇಲಾಖೆ ಗುಲಬರ್ಗಾ
೨೦.	ಚಿಂತನ ಲೇಖನಗಳು	ಚಿಂತನ ಸಾಹಿತ್ಯ	೨೦೦೫	ಪ್ರಸಾರಾಂಗ ಗು.ವಿ.ಗು
೨೧.	ಎಡೆಯೂರ ಸಿದ್ಧಲಿಂಗೇಶ್ವರ	ಚರಿತ್ರೆ	೨೦೦೫	ಸಿದ್ಧಲಿಂಗೇಶ್ವರ ಪ್ರಕಾಶನ ಗುಲಬರ್ಗಾ

೨೨.	ಜನಪದ ಒಗಟಿನ ಕಥೆಗಳು	ಜನಪದ ಕಥೆಗಳು	೨೦೦೬	ಗು.ವಿ.ಗು
೨೩.	ಅಂಬಿಗರ ಚೌಡಯ್ಯ	ವಿಮರ್ಶೆ	೨೦೦೬	ಶರಣ ಪ್ರಕಾಶನ ಗುಲಬರ್ಗಾ
೨೪.	ತಿಂಥಣಿ	ಚರಿತ್ರೆ	೨೦೦೬	ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ
೨೫.	ಜಾನಪದ ಸಂಸ್ಕೃತಿ	ಜನಪದ ಸಾಹಿತ್ಯ	೨೦೦೬	ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ
೨೬.	ಅಂತರಂಗದ ಗುಡಿಯೊಳಗೆ	ಕಥಾ ಸಂಕಲನ	೨೦೦೭	ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ
೨೭.	ಮನೆಯ ಮದ್ದು	ವೈದ್ಯಕೀಯ	೨೦೦೮	ಕರ್ನಾಟಕ ರಾ.ವಿ.ಪ. ಬೆಂಗಳೂರು
೨೮.	ಸಾಹಿತ್ಯ ಸಂಪದ	ವಿಮರ್ಶೆ	೨೦೦೮	ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ

ಇತರರೊಂದಿಗೆ ಸಂಪಾದಿತ ಕೃತಿಗಳು :

ಕ್ರ.ಸಂ.	ಗ್ರಂಥದ ಹೆಸರು	ಪ್ರಕಾರ	ಪ್ರಕಟವಾದ ವರ್ಷ	ಪ್ರಕಾಶನ
೧.	ಕಲ್ಯಾಣ ಕನ್ನಡ	ಬೀದರ ಜಿಲ್ಲಾ ೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ	೧೯೯೬	ಕನ್ನಡ ಸಾಹಿತ್ಯ ಪರಿಷತ್ತು, ಬೀದರ
೨.	ಬೀದರ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು	ಜೀವನ ಚರಿತ್ರೆ	೧೯೯೯	ಬೀದರ ಜಿಲ್ಲಾ ಆಡಳಿತ, ಬೀದರ
೩.	ವಿಜ್ಞಾನ ಕಾರಂಜಿ	ಅಖಿಲ ಕರ್ನಾಟಕ ವಿಜ್ಞಾನ ಸಮಾವೇಶ ಸ್ಮರಣ ಸಂಚಿಕೆ	೨೦೦೦	ಬೀದರ ಜಿಲ್ಲಾ ವಿಜ್ಞಾನ ಶಿಕ್ಷಣ ಸಮಿತಿ ಬೀದರ
೪.	ಅಮೃತ ಬಳ್ಳಿ	ಬೀದರ ಜಿಲ್ಲಾ ಜಡಿಬೂಟಿ ಮೇಳ ಸ್ಮರಣ ಸಂಚಿಕೆ	೨೦೦೩	ಬೀದರ ಜಿಲ್ಲಾಡಳಿತ, ಜಿಲ್ಲಾ ಪಂಚಯತ್ ಹಾಗೂ ಸಾಮಾಜಿಕ ಅರಣ್ಯ ಇಲಾಖೆ, ಬೀದರ

ಲೇಖನಗಳ ಪ್ರಕಟಣೆ :

ಕ್ರ.ಸಂ.	ಲೇಖನದ ಹೆಸರು	ಪತ್ರಿಕೆ	ಪ್ರಕಟಿತ ವರ್ಷ
೧.	ಬದಲಿಸುವ ಸಮಾಜದಲ್ಲಿ ಶಿಕ್ಷಕರ ಪಾತ್ರ	ಜೀವನ ವಿಕಾಸ, ಗುಲಬರ್ಗಾ	೧೯೭೭

೨.	ಸಮಾಜದ ಪರಿವರ್ತನೆ ಮತ್ತು ಶಿಕ್ಷಣ	ಜೀವನ ವಿಕಾಸ, ಗುಲಬರ್ಗಾ	೧೯೭೭
೩.	ಸ್ವತಂತ್ರ ಸಿದ್ಧಲಿಂಗೇಶ್ವರರ ಸಾಮಾಜಿಕ ವಿಚಾರಗಳು	ಸಾವಧಾನ, ಹುಬ್ಬಳ್ಳಿ	೧೯೭೭
೪.	ಜನಪದ ಕವಿ ಕಂಡ ಶಿಕ್ಷಣ	ಜೀವನ ವಿಕಾಸ, ಗುಲಬರ್ಗಾ	೧೯೭೮
೫.	ಜನಪದ ಜಿದ್ದುಗಳು	ಕಲಬುರ್ಗಿ ಮುನ್ನಡೆ	೧೯೭೮
೬.	ಆನಪದ ಹಾಡಿನಲ್ಲಿ ಬರಗಾಲ	ಸಜ್ಜಲ ಶ್ರೀ ಸಂಭಾವನಾ ಗ್ರಂಥ	೧೯೭೯
೭.	ಬರಗಾಲದ ಎರಡು ಚಿತ್ರಣ	ಆನಪದ ಜಗತ್ತು, ಬೆಂಗಳೂರು	೧೯೮೦
೮.	ಸಾಮಾಜಿಕ ಕ್ರಾಂತಿ ಮತ್ತು ಶರಣರು	ಬಗಲಿ ಸಂಭಾವನ ಗ್ರಂಥ	೧೯೮೧
೯.	ಕಲಬುರ್ಗಿ ಜಿಲ್ಲೆಯ ಜನಪದ ಕಲೆಗಳು	ಗೆಜ್ಜೆ ನುಡಿದಾವ ಗಿಲಿಗಿಲಿ ಗ್ರಂಥ	೧೯೮೯
೧೦.	ಶರಣರ ವಚನಗಳಲಿ ನೃತ್ಯ	ಕಾಯಕ ಪರಿಣಾಮಿ ಭಾಲ್ಕಿ ಪಟ್ಟದ್ದೇವರ ಸಂಭಾವನ ಗ್ರಂಥ	೧೯೯೧
೧೧.	ಶಹಪೂರ ತಾಲೂಕಿನ ಜನಪದ ಕಲಾವಿದರು	ಶಹಾಪೂರ ದರ್ಶನ	೧೯೯೪
೧೨.	ಶಹಾಪೂರ ತಾಲೂಕಿನ ಜನಪದ ವೈದ್ಯರು	ಶಹಾಪೂರ ದರ್ಶನ	೧೯೯೪
೧೩.	ಶಹಾಪೂರ ತಾಲೂಕಿನ ಭಾಷಾ ವೈಶಿಷ್ಟ್ಯ ಮತ್ತು ಗಾದೆ ಮಾತುಗಳು	ಶಹಾಪೂರ ದರ್ಶನ	೧೯೯೪
೧೪.	ಶಹಾಪೂರ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರು	ಶಹಾಪೂರ ದರ್ಶನ	೧೯೯೪
೧೫.	ಶಹಾಪೂರ ತಾಲೂಕಿನ ಸ್ಥಳನಾಮಗಳು	ಶಹಾಪೂರ ದರ್ಶನ	೧೯೯೪
೧೬.	ಜನಪದದಲ್ಲಿ ಪೋತರಾಜ	ಕಲ್ಯಾಣ ಕನ್ನಡ ಸ್ಮರಣ ಸಂಚಿಕೆ ಬೀದರ	೧೯೯೬
೧೭.	ಬುಲಾಯಿ ಹಾಡುಗಳಾಗಿ ಹರಿದ ವಿಮೋಚನಾ ಹೋರಾಟ	ಬೀದರ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು, ಕನ್ನಡ ಪ್ರಭ ದಿನಪತ್ರಿಕೆ	೧೯೯೯
೧೮.	ಬೀದರ ಜಿಲ್ಲೆಯ ಶಾಸನೋಕ್ತ ಗ್ರಾಮಗಳು	ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವಿಶೇಷಾಂಕ, ಬೀದರ	೧೯೯೯
೧೯.	ಶಾಸನಗಳಲ್ಲಿ ಅಟ್ಟಳೆ ನಾಡಿನ ವರ್ಣನೆ	ವಚನಕ್ರಾಂತಿ ಪತ್ರಿಕೆ ವಿಶೇಷಾಂಕ, ಬೀದರ	೧೯೯೯
೨೦.	ಶ್ರೀ ರೇವಪ್ಪಯ್ಯನವರ ಮನಬೋಧೆ ಮತ್ತು ಶಿವಯೋಗ	'ಬಯಲ ಕಾರಣಿಕ' ಮುಕ್ತಿ ಮಂದಿರ ಸ್ವಮಿಗಳ ಸಂಭಾವನಾ ಗ್ರಂಥ, ಬೀದರ	೨೦೦೦
೨೧.	ಟೆಂಪೋದೊಳಗಿನ ರಂಪೊ ಪ್ರಬಂಧ	ಕರ್ನಾಟಕ ಸಾಹಿತ್ಯ ಅಕಾಡೆಮಿ,	೨೦೦೦

		ಬೆಂಗಳೂರು	
೨೨.	ಪ್ಲಾಸ್ಟಿಕ್ ಚೀಲ ಬಂತಮ್ಮ (ಕವನ)	ಪ್ರಜಾವಾಣಿ ದೀಪಾವಳಿ ವಿಶೇಷಾಂಕ, ಬೆಂಗಳೂರು	೨೦೦೦
೨೩.	ಬಳಪದ ಕಲ್ಲಿನಲ್ಲಿ ಕೆತ್ತಿದ ಕರಕುಶಲ ಕಲೆ	ಜಾನಪದ ಕರಕುಶಲ ಕಲೆ ಕೋಶ ಕನ್ನಡ ವಿಶ್ವವಿದ್ಯಾಲಯ, ಹಂಪಿ	೨೦೦೧
೨೩.	ಸಿಂಪಿ ಲಿಂಗಣ್ಣ	ಸಾಲುದೀಪಗಳು ಲೇಖನ ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು	೨೦೦೧
೨೪.	ಬಸವಣ್ಣನ ನಿದ್ದೆ ಪುರಾಣ ಪ್ರಬಂಧ	ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು	೨೦೦೨
೨೫.	ಬಸಣ್ಣನ ನಿದ್ದೆ ಪುರಾಣ ಪ್ರಬಂಧ	ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು	೨೦೦೨
೨೬.	ಹೈದ್ರಾಬಾದ ಕರ್ನಾಟಕದ ಕನ್ನಡ ಭಾಷೆಯ ಮೇಲೆ ಮರಾಠಿ ಪ್ರಭಾವ	ಜನದನಿ ಪತ್ರಿಕೆ, ಬೀದರ	೨೦೦೨
೨೭.	ಹೈದ್ರಾಬಾದ ಕರ್ನಾಟಕ ಮತ್ತು ಅಚ್ಚಗನ್ನಡ	ಅಚ್ಚಗನ್ನಡ ಪತ್ರಿಕೆ, ಆಂಡಯ್ಯ ಕನ್ನಡ ಬಳಗ, ಮೈಸೂರು	೨೦೦೨
೨೮.	ಚೈತ್ರ ಮತ್ತು ಮಳೆ (ಕವನ)	'ಅಕ್ಷಯ' ಮಾಸ ಪತ್ರಿಕೆ ಬಿಲ್ಲವರ ಎಸೋಶಿಯೇಶನ್, ಮುಂಬೈ	೨೦೦೨
೨೯.	ಗುಜರಾತ ಭೂಕಂಪ (ಕವನ)	ಅಕ್ಷಯ ಮಾಸ ಪತ್ರಿಕೆ ಬಿಲ್ಲವರ ಎಸೋಶಿಯೇಶನ್, ಮುಂಬೈ	೨೦೦೨
೩೦.	ಕನ್ನಡ ಸಾಹಿತ್ಯದ ಮುಂದಿನ ಹೆಜ್ಜೆಗಳು ಪ್ರಬಂಧ	೬೯ನೇ ಕನ್ನಡ ಸಾಹಿತ್ಯ ಸಮ್ಮೇಳನ, ತುಮಕೂರು	೨೦೦೨
೩೧.	ಶ್ರೀ ಷಣ್ಮುಖ ಶಿವಯೋಗಿಗಳ ಜೀವನ ಮತ್ತು ಸಾಹಿತ್ಯ	ಜನದನಿ ಪತ್ರಿಕೆ, ಬೀದರ	೨೦೦೨
೩೨.	ಸಿದ್ಧಾಂತ ಶಿಖಾಮಣಿಯಲ್ಲಿ ಸಾಮಾಜಿಕ ವಿಚಾರಗಳು	ಜನದನಿ ಪತ್ರಿಕೆ, ಬೀದರ	೨೦೦೨
೩೩.	ಬಸಣ್ಣನ ನಿದ್ದೆ ಪುರಾಣ ಪ್ರಬಂಧ	ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು	೨೦೦೨
೩೪.	ಅಹಾ ಏನು ಮಜಾ ಚಹಾ ಪ್ರಬಂಧ	ಹ್ಯಾಂಗ ಇದ್ದಾಂಗ ವಾರ ಪತ್ರಿಕೆ, ಬೀದರ	೨೦೦೨
೩೫.	ನೈಜ ಸಂಶೋದನ ಕೃತಿ ಉಳಿವೆಯ ಹೆಬ್ಬಾಗಿಲು ಮುರಗೋಡ	'ಭಾಷಾ ಸಂಗಮ' ಡಾ. ಸಂಗಮೇಶ ಸವದತ್ತಿಮಠರ ಅಭಿನಂದನಾ ಗ್ರಂಥ	೨೦೦೩
೩೬.	ಜನಪದ ವೈದ್ಯ ಪದ್ಧತಿ	'ಅಮೃತ ಬಳ್ಳಿ' ಸ್ಮರಣ ಸಂಚಿಕೆ ಜಿಲ್ಲಾ ಜಡಿ–ಬೂಟ ಮೇಳ,	೨೦೦೩

		ಬೀದರ	
೩೭.	ಭಾಷೆ ಸಂಸ್ಕೃತಿ ಮತ್ತು ಸಾಮಾಜಿಕತೆ	ಜನದನಿ ಪತ್ರಿಕೆ, ಬೀದರ	೨೦೦೩
೩೮.	ಚಿತ್ರ ಭಾನು (ಕವನ)	'ಅಕ್ಷಯ' ಮಾಸ ಪತ್ರಿಕೆ, ಮುಂಬೈ	೨೦೦೩
೩೯.	ಬೇಸಿಗೆ ಬಿಸಿಲು (ಕವನ)	'ಗುಬ್ಬಚ್ಚಿ ಗೂಡು' ಮಕ್ಕಳ ಮಾಸಿಕ, ಧಾರವಾಡ	೨೦೦೩
೪೦.	ಶರಣ ಕಾಯಕ ಪ್ರಜ್ಞೆ	ಚೇತನ ತರಂಗ ಬಸವ ಮುಕ್ತಿ ಮಂದಿರ	೨೦೦೫
೪೧.	ಬೀದರ ಜಿಲ್ಲೆಯ ಶಾಸನಗಳು	ಶಿಕ್ಷಣ ಸ್ಮರಣ ಸಂಚಿಕೆ ಪ್ರ. ಜಿಲ್ಲಾ ಶಿಕ್ಷಕರ ಸಂಘ ಬೀದರ	೨೦೦೬
೪೨.	ಬೀದರ ಜಿಲ್ಲೆಯ ರಾಜಕೀಯ ಚರಿತ್ರೆ	ಬಸವ ಪ್ರಭೆ ೭೨ನೇ ಅಖಿಲ ಭಾರತ ಕಸಾಸ ಸ್ಮರಣ ಸಂಚಿಕೆ	೨೦೦೬
೪೩.	ಚೆನ್ನಬಸವಣ್ಣನ ಕೃತಿ ಸಮೀಕ್ಷೆ	ವೀರೇಂದ್ರ ಸಿಂಪಿ ಅಭಿನಂದನಾ ಗ್ರಂಥ ಬೀದರ	೨೦೦೭
೪೪.	ಡಾ. ಎಂ.ಎಸ್. ಲಠ್ಠೆಯವರ ಇತರ ಸಂಪಾದಿತ ಕೃತಿಗಳು	ಸಾಹಿತ್ಯ ಸಂಪಾದ ಕೃತಿ	೨೦೦೭
೪೫.	ಬೀದರ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ	ಸ್ಮರಣ ಸಂಚಿಕೆ ಬೀದರ ಉತ್ಸವ	೨೦೦೮
೪೬.	ಜಾನಪದ ಪ್ರದರ್ಶನ ಕಲೆಗಳು	ಜಾನಪದ ಗಂಗೋತ್ರಿ, ಜಾನಪದ ಅಕಾಡೆಮಿ ಬೆಂಗಳೂರು	೨೦೦೯
೪೭.	ಜಾನಪದ ಕೌದಿ ಕಲೆ	ಜಾನಪದ ಗಂಗೋತ್ರಿ, ಜಾನಪದ ಅಕಾಡೆಮಿ ಬೆಂಗಳೂರು	೨೦೦೯

ಸಮ್ಮೇಳನ/ವಿಚಾರ ಸಂಕಿರಣ ಇತ್ಯಾದಿಗಳಲ್ಲಿ ಭಾಗವಹಿಸಿದ್ದು :

ಕ್ರ.ಸಂ.	ಸಮ್ಮೇಳನ	ವಿಚಾರ ಸಂಕಿರಣ ಮತ್ತು ಮಂಡಿಸಿದ ಪ್ರಬಂಧ	ಸಂಸ್ಥೆ
೧.	ಕಲ್ಯಾಣ ನಾಡಿನ ಶರಣ ಸಮ್ಮೇಳನ	ಶರಣರು ಮತ್ತು ಬಂಡಾಯ	ಕಲ್ಯಾಣ ನಾಡಿನ ಶರಣ ಸಮ್ಮೇಳನ
೨.	ಕಲ್ಯಾಣ ನಾಡಿನ ಶರಣ ಸಮ್ಮೇಳನ	ಕವಿ ಸಮ್ಮೇಳನದಲ್ಲಿ ಕಾವ್ಯ ವಾಚನ	ಕಲ್ಯಾಣ ನಾಡಿನ ಶರಣ ಸಮ್ಮೇಳನ ತಾಂಡೂರ. (ಆಂಧ್ರ) – ೧೯೭೮
೩.	ಕವಿಗೋಷ್ಠಿ	ಕವನ ವಾಚನ	ಆಲ್ಲಾ ಕನ್ನಡ ಸಂ ಹಾಗೂ ದೂರದರ್ಶನ ಕೇಂದ್ರ, ಹೈದ್ರಾಬಾದ– ೧೯೮೦
೪.	ಜೇವರಗಿ ತಾಲೂಕ ಮಟ್ಟದ ಕಲಾ ಮೇಳ	ಕಲಬುರ್ಗಿ ಜಿಲ್ಲೆಯ ಜನಪದ ಕಲೆಗಳು	ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು–೧೯೮೯
೫.	ದೇವರ ದಾಸಿಮಯ್ಯನ ಜಯಂತಿ	ದಾಸಿಮಯ್ಯನ ವಚನಗಳಲ್ಲಿ ಬಸವಣ್ಣನ ಧ್ವನಿ	ದಾಸಿಮಯ್ಯನ ಜಯಂತಿ ಉತ್ಸವ, ಮುದನೂರ ಹಾಗೂ ಸುರಪೂರ–

			೧೯೮೯
೬.	ಚಿಂಚೋಳಿ ತಾಲ್ಲೂಕಾ ಪ್ರಥಮ ಸಾಹಿತ್ಯ ಸಮ್ಮೇಳನ	'ಚಿಂಚೋಳಿಯ ಶಿಲ್ಪ ಕಲೆ' ಪ್ರಬಂಧ	ಚಿಂಚೋಳಿ ತಾಲೂಕಾ ಪ್ರಥಂ ಕನ್ನಡ ಸಾಹಿತ್ಯ ಸಮ್ಮೇಳನ–೧೯೯೨
೭.	ಶಿವಾನುಭವ ಗೋಷ್ಠಿ	ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು	ಶಿವಾನುಭವ ಗೋಷ್ಠಿ, ಸಂಸ್ಥಾನ ಹಿರೇಮಠ, ಹಾರಕೂಡ–೧೯೯೨
೮.	ಕಾವ್ಯ ಕಮ್ಮಟ	ಕವಿ ಮತ್ತು ಕಾವ್ಯ ವಾಚನ	ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕಾಸರಗೋಡು ಕನ್ನಡ ಬಳಗ, ಕೇರಳ–೧೯೯೩
೯.	ದಸರಾ ಕವಿ ಗೋಷ್ಠಿ	ಕಾವ್ಯ ವಾಚನ ಹಾಗೂ ಸನ್ಮಾನ	ದಸರಾ–೧೯೯೪ ಕವಿ ಗೋಷ್ಠಿ ಮೈಸೂರು ಕೇಂದ್ರ ಸಹಿತ್ಯ ಅಕಾಡೆಮಿ, ದೆಹಲಿ
೧೦.	ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ	ಕಾವ್ಯ ವಾಚನ	ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಮತ್ತು ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ–೧೯೯೪
೧೧.	ಹುಮನಾಬಾದ ತಾಲೂಕ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ	ಕವಿ ಗೋಷ್ಠಿ ಅಧ್ಯಕ್ಷತೆ ಕವನ ವಾಚನ	ಹುಮನಾಬಾದ ತಾಲೂಕ ಕ.ಸಾ.ಪ. ಬೀದರ–೧೯೯೭
೧೨.	ಗಮಕ ಕಾವೇರಿ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ಡಿಸೆಂಬರ	ಗಮಕ ಕಲೆ ಮತ್ತು ಸಾಹಿತ್ಯ	ಕರ್ನಾಟಕ ಗಮಕ ಕಲ ಪರಿಷತ್ತು ಬೆಂಗಳೂರು, ಜಿಲ್ಲಾ ಕ.ಸಾ.ಪ. ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೀದರ–೧೯೯೭
೧೩.	ಬೀದರ ಜಿಲ್ಲೆಯ ಕಲೆಗಳು ವಿಚರ ಸಂಕಿರಣ	ಜನಪದ ಮತ್ತು ಅಭಿಜಾತ ಕಲೆ	ಕ.ಸಾ.ಪ. ಹುಮನಾಬಾದ ಜಿ. ಬೀದರ–೧೯೯೮
೧೪.	ವಿಶೇಷ ಉಪನ್ಯಾಸ, ಭಾಲ್ಕಿ	ಅಟ್ಟಳೆ ನಾಡಿನ ಇತಿಹಾಸ	ತಾಲ್ಲೂಕಾ ಕ.ಸಾ.ಪ. ಭಾಲ್ಕಿ. ಜಿ. ಬೀದರ–೧೯೯೮
೧೫.	ಬೀದರ ಜಿಲ್ಲಾ ೫ನೇ ಕನ್ನಡ ಸಾಹಿತ್ಯ ಸಮ್ಮೇಳನ	ಬೀದರ ಜಿಲ್ಲಾ ಸಾಂಸ್ಕೃತಿಕ ಪರಂಪರೆ ಗೋಷ್ಠಿಯ ಅಧ್ಯಕ್ಷತೆ	ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ–೧೯೯೮
೧೬.	ವಿಶೇಷ ಉಪನ್ಯಾಸ	ಆನಪದ ಜೀವನ ಮತ್ತು ಸಹಿತ್ಯ	ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯ, ಬೀದರ–೧೯೯೮
೧೭.	ಅಖಿಲ ಭಾರತ ೬೭ನೇ ಕನ್ನಡ ಸಾಹಿತ್ಯ ಸಮ್ಮೇಳನ, ಕನಕಪುರ	ಪ್ರಬಂಧ ಮಂಡನೆ ಸಾಹಿತ್ಯ ಮತ್ತು ವೈಚಾರಿಕತೆ ಗೋಷ್ಠಿ	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಮತ್ತು ಕನಕಪುರ–೧೯೯೯
೧೮.	೬ನೇ ಕನ್ನಡ ಸಾಹಿತ್ಯ ಸಮ್ಮೇಳನ, ಬೀದರ	ಸಿಂಪಿ ಲಿಂಗಣ್ಣನವರ ಜೀವನ ಮತ್ತು ಸಾಹಿತ್ಯ	ಜಿ.ಸಾ.ಪ. ಬೀದರ–೨೦೦೦
೧೯.	ಕಾರ್ಗಿಲ್ ಕವಿ ಗೋಷ್ಠಿ	ಕವನ ವಾಚನ	ಜ್ಲಿ ಕ.ಸಾ.ಪ. ಬೀದರ ಹಾಗೂ ಧರಿನಾಡು ಕನ್ನಡ ಸಮಘ, ಬೀದರ
೨೦.	ಅಂಬೇಡ್ಕರ ವಿಶೇಷ ಉಪನ್ಯಾಸ ಹಾಗೂ ಕವಿ ಗೋಷ್ಠ ಅದ್ಯಕ್ಷತೆ	ಅಧ್ಯಕ್ಷೀಯ ಭಾಷಣ	ಸರಕಾರಿ ಪದವಿ ಪೂರ್ವ ಕಾಲೇಜು, ಬೀದರ ಜಿಲ್ಲಾ ಕ.ಸಾ.ಪ. ಹಾಗೂ

			ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ–೨೦೦೨
೨೧.	೭ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಹಾರಕೂಡ	ದ.ರಾ.ಬೇಂದ್ರೆ ಮೇಲೆ ವಚನ ಸಾಹಿತ್ಯದ ಪ್ರಭಾವ	ಜಿಲ್ಲಾ ಕ.ಸಾ.ಪ. ಬೀದರ – ೨೦೦೩ಸ
೨೨.	ಬಹು ಭಾಷಾ ಕವಿ ಗೋಷ್ಠಿ	ಕವನ ವಾಚನ	ಜಿಲ್ಲಾ ಕ.ಸಾ.ಪ. ಮತ್ತು ದಕ್ಷಿಣ ಕರಾವಳಿ ಕನ್ನಡ ಸಂಘ, ಬೀದರ–೨೦೦೩
೨೩.	ಮಹಾದೇವಪ್ಪಾ ರಾಂಪುರೆ ದಿನಾಚರಣೆ	ದಿನಾಚರಣೆ ಸಂಸ್ಥೆ ಬಿ.ವಿ.ಬಿ	ಬಿ.ವ್ಹಿ.ಬಿ. ಮಹಾವಿದ್ಯಾಲಯ ಬೀದರ ೨೦೦೪
೨೪.	ರಾಷ್ಟ್ರೀಯ ಸೇವಾ ಯೋಜನೆ ಶಿಬಿರ	ವಿಶೇಷ ಶಿಬಿರ ಆಣದೂರ	ಬಿ,ವ್ಹಿ.ಬಿ. ಮಹಾವಿದ್ಯಾಲಯ ಮತ್ತು ಆಣದೂರ ೨೦೦೪
೨೫.	ಕ.ಸಾ.ಪ. ಬೀದರ	ಆಧುನಿಕ ನಾಟಕಗಳ ವಿಚಾರ ಸಂಕೀರಣ	ಕ.ಸಾ. ಕಾರ್ಯಲಯ ಬೀದರ ೨೦೦೫
೨೬.	ಶೈಕ್ಷಣಿಕ ಅಭಿವೃದ್ಧಿ	ವಿಚಾರಣ ಸಂಕೀರಣ ಭಾಲ್ಕಿ	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ–೨೦೦೬
೨೭.	ವಲಯ ಕಸಾಪ ಸಮ್ಮೇಳನ ಚಿಟಗುಪ್ಪಾ	ಹನಪದ ಸಾಹಿತ್ಯ ಜೀವನ ಮೌಲ್ಯಗಳ ಪ್ರಬಂಧ	ವಲಯ ಕಸಾಪ ಚಿಟಗುಪ್ಪಾ – ೨೦೦೭
೨೮.	ವಿಜ್ಞಾನ ಲೇಖಕರ ತರಬೇತಿ ಶಿಬಿರ	ಜಾಹೀರಾತು ದೆವ್ವದೊಂದಿಗೆ ಮಾತುಕತೆ	ಕರಾವಿಪ ಬೆಂಗಳೂರು ೨೦೦೮
೨೯.	ರಾಷ್ಟ್ರೀಯ ಪರಿಸರ ಮತ್ತು ಜಾಗೃತಿ ಆಂದೋಲನ	ವಾಯುಗುಣ ಬದಲಾವಣೆ	ಪರಿಸರ ಮತ್ತು ಅರಣ್ಯ ಸಚಿವಾಲಯ ಭಾರತ ಸರ್ಕಾರ ಮತ್ತು ಕರ್ನಾಟಕ ರಾಜ್ಯ ವಿಜ್ಞನ ಪರಿಷತ್ತು ಬೆಂಗಳೂರು – ೨೦೦೮
೩೦.	ಡಾ. ಸರೋಜಿನಿ ನಾಯ್ಡು ಕಾಲೇಜು ಹುಮನಾಬಾದ	ಸ್ವಾಮಿ ವಿವೇಕಾನಂದರ ಬದುಕು–ಬರಹ	ಸ್ವಾಮಿ ವಿವೇಕಾನಂದ ಪ್ರಸಾರ ಕೇಂದ್ರ ಬೆಂಗಳೂರು, ಧರಿನಾಡು ಕನ್ನಡ ಸಂಘ ಹುಮನಾಬಾದ – ೨೦೦೯
೩೧.	ರಾಜ್ಯಮಟ್ಟದ ಶಿಕ್ಷಣ ಶಾಸ್ತ್ರ ಉಪನ್ಯಾಸಕರ ೬ನೇ ಶೈಕ್ಷಣಿಕ ಸಮ್ಮೇಳನ	ಜಾಗತೀಕರಣ ಮತ್ತು ಶೈಕ್ಷಣಿಕ ಸವಾಲು	ಕರಾಶಿ ಉಪನ್ಯಾಸಕರ ಸಂಘ ಬೆಂಗಳೂರು ಮತ್ತು ಜಿಲ್ಲಾ ಶಿಕ್ಷಣ ಉಪನ್ಯಾಸಕರ ಸಂಘ ಬೀದರ – ೨೦೦೯

ಪ್ರಶಸ್ತಿ ಮತ್ತು ಸನ್ಮಾನಗಳು	**ವರ್ಷ**	**ಸನ್ಮಾನ**
೧. ಪೂಜ್ಯ ಶ್ರೀ ಚನ್ನವೀರ ಶಿವಾಚಾರ್ಯ ಹಿರೇಮಠ ಸಂಸ್ಥಾನ ಹಾರಕೂಡ	ಸೆಪ್ಟೆಂಬರ ೧೯೯೨	ಸಾಹಿತ್ಯ ಸೇವೆಗಾಗಿ

೨. ಭಾರತ ರತ್ನ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಶತಮಾನೋತ್ಸವ ಸಮಿತಿ, ಸುರಪೂರ ಗುಲಬರ್ಗಾ ಜಿಲ್ಲೆ	ಸೆಪ್ಟೆಂಬರ ೧೯೯೩	ಶರಣ ಉರಿಲಿಂಗ ಪೆದ್ದಿ ಗ್ರಂಥ ರಚನೆಗಾಗಿ
೩. ಕೇಂದ್ರ ಸಾಹಿತ್ಯ ಅಕಾಡೆಮಿ ದೆಹಲಿ ಮತ್ತು ದಸರಾ ಮಹೋತ್ಸವ, ಮೈಸೂರು	ಅಕ್ಟೋಬರ–೧೯೯೪	ಕವಿಗೋಷ್ಠಿಯಲ್ಲಿ ಕಾವ್ಯ ವಾಚನ ಸನ್ಮಾನ
೪. ಕರ್ನಾಟಕ ರಾಜ್ಯೋತ್ಸವ ಸಮಿತಿ, ಶಹಾಪೂರ	ನವೆಂಬರ–೧೯೯೬	ರಾಜ್ಯೋತ್ಸವ ಸನ್ಮಾನ
೫. ಬೀದರ ಜಿಲ್ಲಾ ೫ನೇ ಕನ್ನಡ ಸಹಿತ್ಯ ಸಮ್ಮೇಳನ	ಏಪ್ರಿಲ್–೧೯೯೮	ಸಾಹಿತ್ಯ ಸೇವೆಗಾಗಿ ಸನ್ಮಾನ
೬. ಬೀದರ ಜಿಲ್ಲಾ ರಾಜ್ಯೋತ್ಸವ ಸಮಿತಿ, ಬೀದರ	ನವೆಂಬರ–೧೯೯೮	ಸಾಹಿತ್ಯ ಸೇವೆಗಾಗಿ ಸನ್ಮಾನ
೭. ಪೂಜ್ಯ ಶ್ರೀ ಮ.ಘ.ಚ. ಡಾ. ಚನ್ನಬಸವ ಪಟ್ಟದ್ದೇವರು ಹಿರೇಮಠ ಸಂಸ್ಥಾನ, ಭಾಲ್ಕಿ ಬೀದರ	ಜನವರಿ–೧೯೯೯	ಸಾಹಿತ್ಯ ಸೇವೆಗಾಗಿ ಸನ್ಮಾನ
೮. ಸಂಕ್ರಮಣ ಸಾಹಿತ್ಯ ಪ್ರಶಸ್ತಿ	೧೯೯೮	ಚುಟುಕು ಸಾಹಿತ್ಯ
೯. ಪ್ರಜಾವಾಣಿ ಶಿಶು ಕಾವ್ಯ ಪ್ರಶಸ್ತಿ (ದೀಪಾವಳಿ ಸಂಚಿಕೆ)	೨೦೦೦	ಪ್ಲಾಸ್ಟಿಕ್ ಚೀಲ ಬಂತಮ್ಮ (ಕವನ)
೧೦. ಕೆಗ್ಗರೆ ಸಾಹಿತ್ಯ ಪ್ರಶಸ್ತಿ	೨೦೦೨	ಚುಟುಕು ಸಾಹಿತ್ಯ

ಇತರ ಸಂಘ–ಸಂಸ್ಥೆಗಳಿಗೆ ಪದಾಧಿಕಾರಿ :

೧.	ಹಾರಕೂಡ ಸಂಸ್ಥಾನ ಹಿರೇಮಠ	ಸಲಹಾ ಸಮಿತಿ ಸದಸ್ಯರು
೨.	ಬೀದರ ಜಿಲ್ಲಾ ಕನ್ನಡ ಪ್ರಗತಿ ಸಂಘ, ಬೀದರ	ಗೌರವಾಧ್ಯಕ್ಷರು
೩.	ಬೀದರ ಜಿಲ್ಲಾ ಮಕ್ಕಳ ಸಾಹಿತ್ಯ ವೇದಿಕೆ, ಬೀದರ	ಉಪಾಧ್ಯಕ್ಷರು
೪.	ಭಾರತ ಜ್ಞಾನ ವಿಜ್ಞಾನ ಸಮಿತಿ, ಬೀದರ ಜಿಲ್ಲೆ	ಉಪಾಧ್ಯಕ್ಷರು
೫.	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು	ಅಜೀವ ಸದಸ್ಯರು
೬.	ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು	ಅಜೀವ ಸದಸ್ಯರು
೭.	ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು	ಅಜೀವ ಸದಸ್ಯರು

೮. ರಾಜ್ಯ ಸಂಪನ್ಮೂಲ ವ್ಯಕ್ತಿ — ನಿರಂತರ ಶಿಕ್ಷಣ ಯೋಜನೆ, ಬೀದರ

೯. ಗು.ವಿ. ಗುಲಬರ್ಗಾ ಖಾಸಗಿ ಕಾಲೇಜುಗಳ ಶಿಕ್ಷಕರ ಸಂಘ ಬೀದರ ಘಟಕ — ಉಪಾಧ್ಯಕ್ಷರು

ಆಕಾಶವಾಣಿ – ದೂರದರ್ಶನ ಪ್ರಸಾರ :

ಸಣ್ಣ ಕಥೆ ಹಾಗೂ ಚಿಂತನ, ಸ್ವ-ರಚಿತ ಕವನಗಳು — ಆಕಾಶವಾಣಿ ಕೇಂದ್ರ ಗುಲಬರ್ಗಾ ಹಾಗೂ ದೂರದರ್ಶನ ಕೇಂದ್ರ ಗುಲಬರ್ಗಾದಿಂದ ಪ್ರಸಾರ

ಪ್ರೊ. ಸೂಗಯ್ಯ ಹಿರೇಮಠರ ಕುರಿತು ಬಂದ ಕೃತಿಗಳು

ಕ್ರ.ಸಂ.	ಬರೆದವರ ಹೆಸರು	ಕೃತಿ	ಪ್ರಕಾಶನ	ವರ್ಷ
೧.	ಡಾ. ಗವಿಸಿದ್ಧಪ್ಪ ಪಾಟೀಲ	ಪ್ರೊ. ಸೂಗಯ್ಯ ಹಿರೇಮಠ ಸಾಹಿತ್ಯ ಅವಲೋಕನ	ಸಿದ್ಧಲಿಂಗೇಶ್ವರ ಪ್ರಕಾಶನ ಗುಲಬರ್ಗಾ	



ಜಾನಪದ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಕ್ಕಾಗಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು ದಿ. ೨೭/೦೩/೨೦೦೮ರಂದು ಬೆಳ್ಳಿ ಹಬ್ಬದ ಪ್ರಯುಕ್ತ ಮಾಡಿದ ಸನ್ಮಾನ



ಸಾಹಿತಿಗಳಾದ ಪ್ರೊ. ಸೂಗಯ್ಯ ಹಿರೇಮಠರೊಂದಿಗೆ ಅವರ ಧರ್ಮಪತ್ನಿ ಶಾಂತ ಹಿರೇಮಠ







ವಾರದ ಸ್ಫೋಟ ಪತ್ರಿಕೆ ನೀಡಿದ ಸುವರ್ಣ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ-೨೦೦೬ ಮಾಜಿ ಮುಖ್ಯ ಮಂತ್ರಿ ಧರ್ಮಸಿಂಗ್ ಪ್ರೊ. ಸೂಗಯ್ಯ ಹಿರೇಮಠರವರಿಗೆ ಸನ್ಮಾನಿಸುತ್ತಿರುವುದು



ಪ್ರೊ. ಸೂಗಯ್ಯ ಹಿರೇಮಠರ ಸಾಹಿತ್ಯ ಕುರಿತು ದಿ. ೧೭/೧೦/೨೦೦೬ರಂದು ನಡೆದ ವಿಚಾರ ಸಂಕಿರಣ







ಸಾಹಿತಿಗಳಾದ ಪ್ರೊ. ಸೂಗಯ್ಯ ಹಿರೇಮಠ ಅವರನ್ನು ಸಂಶೋಧಕರಾದ
ಶಿವಶಂಕರ ನೀಲಕಂಠರಾವ ಹಲಬುರ್ಗೆ ಸಂದರ್ಶಿಸುತ್ತಿರುವುದು



ಗ್ರಂಥಋಣ

ಕ್ರ.ಸಂ.	ಲೇಖಕರು	ಪುಸ್ತಕದ ಹೆಸರು	ಪ್ರಕಾಶನ	ವರ್ಷ
೧.	ಎಂ. ಚಿದಾನಂದ ಮೂರ್ತಿ	ಕನ್ನಡ ಶಾಸನಗಳ ಸಂಸ್ಕೃತ ಅಧ್ಯಯನ	ಸಪ್ನ ಬುಕ್ ಹೌಸ್ ಬೆಂಗಳೂರು	೧೯೬೬
೨	ಸುಧಾಕರ್	ನಮ್ಮ ಪರಿಷತ್ತಿನ ಗಾದೆಗಳು	ಕನ್ನಡ ಅಧ್ಯಯನ ಸಂಸ್ಥೆ ಮೈಸೂರು	೧೯೭೩
೩.	ಚಂದ್ರಶೇಖರ ಕಂಬಾರ	ಮಾತಾಡು ಲಿಂಗವೆ	ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು	೧೯೭೩
೪.	ದೇವಿರಪ್ಪ	ಶಿವಶರಣ ಸಂಪುಟ	ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು	೧೯೭೩
೫	ಡಾ.ಎಸ್.ಎಂ. ರುಶಬೇಂದ್ರ ಸ್ವಾಮಿ	ಜಾನಪದ ಸಾಹಿತ್ಯ ದರ್ಶನ	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ	೧೯೮೭
೬	ಪ್ರೊ. ಸೂಗಯ್ಯ ಹಿರೇಮಠ	ಆನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು	ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಾರಕುಡ	೧೯೯೧
೭	ಡಾ. ದೇವನೂರ ಪಾಂಡುರಂಗ	ಭೈರವ ಸಂಸ್ಕೃತಿ	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು	೧೯೯೩
೮	ಪ್ರೊ. ಸೂಗಯ್ಯ ಹಿರೇಮಠ	ಶಾಪುರ ದರ್ಶನ	ದರ್ಶನ ಪ್ರಕಾಶನ ಶಾಪುರ	೧೯೯೪
೯	ಹಿ.ಚಿ. ಬೋರಲಿಂಗಯ್ಯ	ಕರ್ನಾಟಕ ಜನಪದ ಕಲೆಗಳ ಕೋಶ	ಕನ್ನಡ ವಿಶ್ವವಿದ್ಯಾಲಯ ಹಂಪಿ	೧೯೯೬
೧೦	ಡಾ. ಮಾಗಡಿ ಆರ್. ಗುರುದೇವ	ಕರ್ನಾಟಕ ಔಷಧಿಯ ಸಸ್ಯಗಳು	ದಿವ್ಯಚಂದ್ರ ಪ್ರಕಾಶನ ಬೆಂಗಳೂರು	೧೯೯೮
೧೧	ಎಂ. ಚಿದಾನಂದ ಮೂರ್ತಿ	ಹೊಸತು ಹೊಸತು	ಕನ್ನಡ ಪುಸ್ತಕ ಪ್ರಾಧಿಕಾರ	೧೯೯೮
೧೨.	ಪ್ರೊ. ಸೂಗಯ್ಯ ಹಿರೇಮಠ	ಜನಪದ ವೈದ್ಯ ಪದ್ಧತಿ	ಪ್ರಸಾರಾಂಗ ಗು.ವಿ.ಗು.	೧೯೯೯
೧೩	ಎಮ್.ಜಿ. ನಾಗರಾಜ ಮತ್ತು ಎಚ್.ಎಸ್. ಸಿದ್ದಗಂಗಪ್ಪ	ಶರಣ ತತ್ವ ಚಿಂತನೆ	ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು	೨೦೦೦
೧೪	ಶ್ರೀ ರಾಘವೇಂದ್ರ ಸ್ವಾಮಿಜಿ	ಸ್ವಯಂ ವೈದ್ಯ	ಅನಾಥ ಸೇವಾಶ್ರಮ ವಿಸ್ವಥ ಸಮಿತಿ ಮಲ್ಲಾಡಿ ಹಳ್ಳಿ	೨೦೦೦

೧೫	ಡಾ. ಬಸವರಾಜ ಪೋಲೀಸ ಪಾಟೀಲ	ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ	ಅಮರ ಪ್ರಕಾಶನ ಗುಲಬರ್ಗಾ	೨೦೦೧
೧೬	ಡಾ. ಬಸವರಾಜ ಪೋಲಿಸ ಪಾಟೀಲ	ಭಾಷಾ ಸಂಗಮ	ಅಭಿನಂದನಾ ಸಮಿತಿ ಗುಲಬರ್ಗಾ	೨೦೦೩
೧೭.	ಡಾ. ವೀರಣ್ಣ ದಂಡೆ	ಜನಪದ ಕಾವ್ಯ ಮೀಮಾಂಸೆ ಹಾಗೂ ವಿಮರ್ಶೆ ಪ್ರಸ್ತಾನಗಳು	ಕವಿಮಾರ್ಗ ಪ್ರಕಾಶನ ಕಲಬುರ್ಗಿ	೨೦೦೪
೧೮	ಡಿ.ಬಿ. ನಾಯಕ	ಜಾನಪದ ಲೇಖನಗಳು	ಪ್ರಸಾರಾಂಗ ಗು.ವಿ.ಗು.	೨೦೦೫
೧೯	ಪ್ರೊ. ಸೂಗಯ್ಯ ಹಿರೇಮಠ	ದೇವ ದೇವ ವನ	ಅರಣ್ಯ ಸಂರಕ್ಷಣಾ ಅಧಿಕಾರಿಗಳು ಗುಲಬರ್ಗಾ	೨೦೦೫
೨೦	ಸ್ವಾಮಿರಾವ ಕುಲಕರ್ಣಿ	ಕವಿಕಾವ್ಯ ಪರಂಪರೆ	ಜಿಲ್ಲಾ ಕ.ಸಾ.ಪ. ಗುಲಬರ್ಗಾ	೨೦೦೬
೨೧	ಪ್ರೊ. ಸೂಗಯ್ಯ ಹಿರೇಮಠ	ಜನಪದ ಸಂಸ್ಕೃತಿ	ಸಿದ್ಧಲಿಂಗೇಶ್ವರ ಪ್ರಕಾಶನ ಗುಲಬರ್ಗಾ	೨೦೦೬
೨೨	ಡಾ. ಗವಿಸಿದ್ಧ ಪಾಟೀಲ	ಸೂಗಯ್ಯ ಹಿರೇಮಠರ ಸಾಹಿತ್ಯ ಅವಲೋಕನ	ಸಿದ್ಧಲಿಂಗೇಶ್ವರ ಪ್ರಕಾಶನ ಗುಲಬರ್ಗಾ	೨೦೦೭
೨೩	ಪ್ರೊ. ಸೂಗಯ್ಯ ಹಿರೇಮಠ	ಮನೆ ಮದ್ದು	ಕನ್ನಡ ರಾಜ್ಯ ವಿಜ್ಞಾನ ಪರಿಷತ್ತು ಬೆಂಗಳೂರು	೨೦೦೮
೨೪	ಪ್ರೊ. ಸೂಗಯ್ಯ ಹಿರೇಮಠ	ಸಾಹಿತ್ಯ ಸಂಪದ	ಸಿದ್ಧಲಿಂಗೇಶ್ವರ ಪ್ರಕಾಶನ ಗುಲಬರ್ಗಾ	೨೦೦೮